# ನಾಲ್ಕನೇ ಆಯಾಮ

ಸಂಪುಟ-2

ಪದ್ಮರಾಜ ದಂಡಾವತಿ



ಸಪ್ನ

# ನಾಲ್ಕನೇ ಆಯಾಮ

ಸಂಪುಟ – 2

# ನಾಲ್ಕನೇ ಆಯಾಮ

## ಸಂಪುಟ - 2

**ಪದ್ಮರಾಜ ದಂಡಾವತಿ**

ಸಪ್ನ ಬುಕ್ ಹೌಸ್®

3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009
ದೂರವಾಣಿ : 40114455

**NALKANE AAYAMA Vol. 2 - Collection of Articles :** by **Padmaraj Dandavati,** published by **Sapna Book House (P) Ltd.,** R.O. # 11, 3rd Main Road, Gandhinagar, Bangalore - 9, Tel. : 40114455.

[K.B. 1661]

ISBN : 978-81-280-1385-0

ಹಕ್ಕುಗಳು : ಪ್ರಜಾವಾಣಿ
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಸಂಸ್ಥೆಯ ಅನುಮತಿ
ಮೇರೆಗೆ ಈ ಪುಸ್ತಕದ ಲೇಖನಗಳನ್ನು ಬಳಸಿಕೊಳ್ಳಲಾಗಿದೆ

ಪ್ರಥಮ ಮುದ್ರಣ : 2011

| | |
|---|---|
| ಪುಟಗಳು : xii + 168 = 180 | ಪ್ರತಿಗಳ ಸಂಖ್ಯೆ : 1000 |
| ಬೆಲೆ : ₹ 100/- | Paper Used : 18.6 Kg (70 gsm) N.S. Maplitho<br>Book Size : 1/8th Demy |

ಹಂಚಿಕೆದಾರರು : **ಬುಕ್ಸ್ ಇಂಟರ್‌ನ್ಯಾಷನಲ್**
ನಂ. 13, ಕೆ. ಪಿ. ಈಸ್ಟ್, ಹೈಗ್ರೌಂಡ್ಸ್
ಬೆಂಗಳೂರು–560 001

ಅಕ್ಷರ ಜೋಡಣೆ : ದಿವ್ಯ ಪ್ರಿಂಟ್ರಾನಿಕ್ಸ್, ಬೆಂಗಳೂರು
ಮತ್ತು ವಿನ್ಯಾಸ ಈಶ್ವರ್, ಬೆಂಗಳೂರು

ಮುಖಪುಟ ವಿನ್ಯಾಸ : ಎಸ್. ವಿಷ್ಣುಕುಮಾರ್, ಬೆಂಗಳೂರು

ಮುದ್ರಣ : ರವಿ ಗ್ರಾಫಿಕ್ಸ್, ಬೆಂಗಳೂರು

# ಅರ್ಪಣೆ

ಪತ್ನಿ ಲಲಿತಾ, ಮಕ್ಕಳಾದ
ಅಶ್ವಿನ್‌ಕುಮಾರ್ ಮತ್ತು
ವರ್ಷಾ ತೋರುವ ದಿವ್ಯ
ಪ್ರೀತೆಗೆ

# ಯಾರ್ಯಾರ ನೆನೆಯಲಿ...?

'ನಾಲ್ಕನೇ ಆಯಾಮ' ಅಂಕಣ ಬರಹಗಳ ಮೊದಲ ಎರಡು ಸಂಪುಟಗಳು ಹೊರಬರುತ್ತಿರುವ ಈ ಸಂದರ್ಭದಲ್ಲಿ ನನ್ನ ಹೃದಯ ಕೃತಜ್ಞತೆಯಿಂದ ಭರ್ತಿಯಾಗಿದೆ. ನನಗೆ ಈ ಅಂಕಣ ಬರೆಯಲು ಹೇಳಿದವರು ನನ್ನ ಸಂಪಾದಕರಾದ ಶ್ರೀ.ಕೆ.ಎನ್.ಶಾಂತಕುಮಾರ್ ಅವರು. ಅವರು ಬರೆಯಲು ಹೇಳಿದಾಗ ಇಷ್ಟು ದೀರ್ಘ ಅವಧಿಗೆ ಈ ಅಂಕಣ ಮುಂದುವರಿಯುತ್ತದೆ ಎಂಬ ಭರವಸೆ ನನಗೆ ಇರಲಿಲ್ಲ. ಪ್ರತಿವಾರ ಹೊಸ ಹೊಸ ವಿಷಯ ಆಯ್ದುಕೊಂಡು ಅಂಕಣ ಬರೆಯುವುದು, ಅದು ಓದುಗರಿಗೆ ಇಷ್ಟವಾಗುವುದು ಬಹು ಕಷ್ಟದ ಕೆಲಸ. ಅಂಕಣ ಬರೆಯುವುದು ಸಾವಿನ ಜತೆಗಿನ ಸೆಣಸಾಟ ಎಂದವರು ಉಂಟು. ಇದು ಹುಲಿ ಸವಾರಿ ಎಂದವರೂ ಉಂಟು. ಎರಡೂ ಅರ್ಥ ಒಂದೇ. ಈ ಸಂಕಟವನ್ನು ನಾನೂ ಅನುಭವಿಸಿದ್ದೇನೆ. ಪ್ರತಿ ಸೋಮವಾರ ಬಂದ ಕೂಡಲೇ ಈ ವಾರ ಏನು ಬರೆಯಬೇಕು ಎಂದು ಚಿಂತಿಸಲು ತೊಡಗಬೇಕಾಗುತ್ತದೆ. ಆ ವಾರದ ಅಂಕಣ ಬರೆದು ಮುಗಿದ ಕೂಡಲೇ ಪೂರ್ತಿ ಡ್ರೇನ್ ಔಟ್ ಆದ ಹಾಗೆ ಆಗುತ್ತದೆ. ಮತ್ತೆ ಇನ್ನೊಂದು ಹೆರಿಗೆಗೆ ಸಿದ್ಧವಾಗಬೇಕಾಗುತ್ತದೆ. ಈ ಹೆರಿಗೆಯ ನೋವು ಎನ್ನುವುದು ಇದೆಯಲ್ಲ ಅದು ಅನುಭವಿಸಿದವರಿಗೇ ಗೊತ್ತು. ನನ್ನ ವಿದ್ಯಾಗುರುಗಳಾದ ಡಾ.ಎಂ.ಎಂ.ಕಲಬುರ್ಗಿಯವರು, 'ಒಂದು ಲೇಖನ ಬರೆದ ಮೇಲೆ ಸುಸ್ತು ಅನಿಸಬೇಕು. ಇನ್ನು ಬರೆಯಲಾರೆ ಅನಿಸಬೇಕು' ಎಂದು ಹೇಳುತ್ತಿದ್ದರು. ನನಗೆ ಹೆಚ್ಚೂ ಕಡಿಮೆ ಪ್ರತಿಸಾರಿ ಅಂಕಣ ಬರೆದಾಗಲೂ ಆ ಅನುಭವ ಆಗಿದೆ. ಅಡಕವಾಗಿ ನನಗೆ ಬರೆಯಲು ಕಲಿಸಿದವರೂ ಅವರೇ.

ಪತ್ರಿಕೋದ್ಯಮವೇ ನೆಗೆಟಿವ್ ಆದುದು. ಮನುಷ್ಯ, ನಾಯಿಗೆ ಕಚ್ಚಿದರೆ ಮಾತ್ರ ಸುದ್ದಿ ಎಂದು ನಂಬಿಕೊಂಡು ಬಂದವರು ನಾವು. ಬರೀ ತಪ್ಪುಗಳನ್ನೇ ಹುಡುಕಿ ಜನರನ್ನು ರಂಜಿಸಬೇಕು ಎಂದು ಅಂದುಕೊಂಡವರು. ಇಲ್ಲಿನ ಕೆಲವು ಅಂಕಣಗಳಲ್ಲಿ ನಾನು ಕೂಡ ನೆಗೆಟಿವ್ ಆದ ಅಂಶಗಳನ್ನೇ ತೆಗೆದುಕೊಂಡು ಬರೆದಿರಬಹುದು. ಆದರೆ, ನನ್ನ ಉದ್ದೇಶ, ಗುರಿ ಇರುವುದು

ಪಾಜಿಟಿವ್ ಆದ ಒಂದು ರಾಜಕೀಯ, ಸಾಮಾಜಿಕ, ಸಾಹಿತ್ಯಕ, ಶೈಕ್ಷಣಿಕ ವ್ಯವಸ್ಥೆ ಬರಬೇಕು ಎಂಬುದು. ನನ್ನ ಎಲ್ಲ ಬರವಣಿಗೆಯಲ್ಲಿ ಆ ಸ್ರೋತವೇ ಇದೆ ಎಂಬುದು ಸೂಕ್ಷ್ಮವಾಗಿ ಗಮನಿಸಿದರೆ ತಮಗೆ ಗೊತ್ತಾಗುತ್ತದೆ ಎಂದು ಭಾವಿಸುವೆ.

ಪತ್ರಿಕೆಯ ಬರವಣಿಗೆಗೆ ಆಯುಷ್ಯ ಕಡಿಮೆ. ಈ ದಿನದ ಸುದ್ದಿ ಮರುದಿನದ ರದ್ದಿ. 'ಅವಲೋಕನ' ಎಂಬ ನನ್ನ ಪುಸ್ತಕಕ್ಕೆ ಲೇಖನಗಳನ್ನು ಆಯ್ಕೆ ಮಾಡುವಾಗಲೂ ನಾನು ಈ ಸಮಸ್ಯೆಯನ್ನು ಎದುರಿಸಿದ್ದೆ. ಒಂದು ಸುದ್ದಿಯನ್ನು, ಲೇಖನವನ್ನು ಎಡಿಟ್ ಮಾಡಿದ ಹಾಗೆಯೇ ನಮ್ಮ ಒಟ್ಟು ಬರವಣಿಗೆಯನ್ನು ಎಡಿಟ್ ಮಾಡುತ್ತ ಹೋದರೆ ಸಾರ್ವಕಾಲಿಕ ಮಹತ್ವದ ಆಧಾರದ ಮೇಲೆ ಉಳಿಯುವ ಬರವಣಿಗೆ ಕಡಿಮೆ. ಪತ್ರಕರ್ತನ ಬರವಣಿಗೆ ಆಯಾ ಕಾಲಕ್ಕೆ ಮಾತ್ರ ಪ್ರಸ್ತುತವಾಗಿರುತ್ತದೆ. ಆದಾಗ್ಯೂ 'ನಾಲ್ಕನೇ ಆಯಾಮ'ದ ಅಂಕಣಗಳನ್ನು ಪುಸ್ತಕ ರೂಪದಲ್ಲಿ ತರಬೇಕು ಎಂದು ನನಗೆ ಬಂದ ಒತ್ತಾಸೆ ಅಪರೂಪದ್ದು. ಈ ಲೇಖನಗಳು ಈ ಕಾಲದ ರಾಜಕೀಯ ಇತಿಹಾಸಕ್ಕೆ ದೊಡ್ಡ ಆಕರ ಎಂದು ಅವರೆಲ್ಲ ಹೇಳಿದರು. ವಿಶೇಷ ಒತ್ತು ಕೊಟ್ಟು ಹೇಳಿದವರು ಲೇಖಕ ಗೆಳೆಯ ಶ್ರೀಧರ ಬಳಗಾರ. ರಾಜಕೀಯ ಲೇಖನ ಬರೆಯುವಾಗ ಈ ಆಕರದ ಕೊರತೆ ನನಗೆ ತುಂಬ ಕಾಡಿದೆ. ಈ ದೃಷ್ಟಿಯಿಂದ ರಾಜಕೀಯ ಇತಿಹಾಸಕಾರರಿಗೆ, ಮಾಧ್ಯಮದ ವಿದ್ಯಾರ್ಥಿಗಳಿಗೆ ಈ ಪುಸ್ತಕಗಳು ಉಪಯುಕ್ತವಾದಾವು ಎಂದು ಭಾವಿಸಿದ್ದೇನೆ.

ಅಂಕಣ ಬರಹಕ್ಕೆ ಇಷ್ಟೊಂದು ಪ್ರತಿಕ್ರಿಯೆ ಇರುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ಪ್ರತಿ ಭಾನುವಾರ ರಾಜ್ಯದ ಮೂಲೆ ಮೂಲೆಗಳಿಂದ ಪರಿಚಯದವರು, ಅಪರಿಚಿತರು ಮಾಡುವ ಎಸ್.ಎಂ.ಎಸ್ ಮತ್ತು ದೂರವಾಣಿ ಕರೆಗಳಿಗೆ ಉತ್ತರ ಕೊಡುವಾಗ ಅರ್ಧ ದಿನವೇ ಕಳೆದು ಹೋಗುತ್ತದೆ. ಕೆಲವು ಅಂಕಣಗಳಿಗೆ ಎರಡು ದಿನದ ವರೆಗೂ ಪ್ರತಿಕ್ರಿಯೆ ಬಂದಿದೆ. ಇದನ್ನು ಅತ್ಯಂತ ವಿನಯದಿಂದ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಈ ಸಂಪುಟಗಳು ಹೊರಬರುತ್ತಿರುವ ಸಂದರ್ಭದಲ್ಲಿ ನಮ್ಮ ಸಂಸ್ಥೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕೆ.ಎನ್.ತಿಲಕ್ ಕುಮಾರ್ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಪ್ರತಿ ಭಾನುವಾರ ನನ್ನ ಜತೆಗೆ ಮಾತನಾಡುವ ಎಲ್ಲರ ಹೆಸರು ಇಲ್ಲಿ ಬರೆಯುವುದು ಕಷ್ಟ. ಆದರೆ, 'ಐ ಆ್ಯಮ್ ಪ್ರೌಡ್ ಆಫ್ ಯು' ಎಂದು ಮತ್ತೆ ಮತ್ತೆ ಹೇಳಿ ಹುರಿದುಂಬಿಸುವ ಡಾ.ಚಂದ್ರಶೇಖರ ಕಂಬಾರ, ಈ ಲೇಖನಗಳ ಪುಸ್ತಕ ಬರಬೇಕು ಎಂದು ಒತ್ತಾಯಿಸಿದ ಹಂಪನಾ ಮತ್ತು ಕಮಲಾ ಹಂಪನಾ, ಕೆಲವು ಸಾರಿ ನಾನು ಏಳುವುದಕ್ಕಿಂತ ಮುಂಚೆಯೇ ಎಸ್.ಎಂ.ಎಸ್ ಕಳುಹಿಸುವ ಸುರೇಶಕುಮಾರ್, ಗುರುಪ್ರಸಾದ್, ಪರಶುರಾಮ್ ಕಲಾಲ್, ಪ್ರತಿವಾರ ತಪ್ಪದೇ ಅಂಕಣ ಕುರಿತು ಮಾತನಾಡುವ, ಚರ್ಚಿಸುವ ಎಂ.ರಾಮಯ್ಯ, ಟಿ.ಪ್ರಭಾಕರ್, ಮಾಜಿ ಮೇಯರ್ ಕೆ.ಚಂದ್ರಶೇಖರ್, 'ಪ್ರತಿ ಭಾನುವಾರ ನನ್ನ ಊರಿನಿಂದ ಏಳು ಕಿ.ಮೀ ದೂರ ಬಂದು ನಿಮ್ಮ ಅಂಕಣ ಓದುವುದಕ್ಕಾಗಿ ಪತ್ರಿಕೆ ಖರೀದಿಸುವೆ' ಎಂದು ಪತ್ರ ಬರೆದ ಕಡೂರು ಬಳಿಯ ತೇಜಮೂರ್ತಿ, 'ಎನ್ ಬರಿತಿಯೋ ತಮ್ಮಾ' ಎಂದು ಉದ್ಗರಿಸುವ ನನ್ನ ಹೈಸ್ಕೂಲ್ ಗುರುಗಳಾದ ಎಸ್.ಬಿ.ಕನ್ನೂರ್, ಗೆಳೆಯರಾದ ಬಿ.ಆರ್.ಹಿರೇಮಠ್, ಎಸ್.ಎ.ಮಾನ್ವಿ, ಗಂಗಾಧರ ಬೆಳಗಲಿ, ನನ್ನ ಅಂಕಣಕ್ಕೆ 'ನಾಲ್ಕನೇ ಆಯಾಮ' ಎಂಬ ಹೆಸರು ನೀಡಿದ ಹಿರಿಯ ಸಹೋದ್ಯೋಗಿ ಡಿ.ವಿ.ರಾಜಶೇಖರ್, ಹಿರಿಯರಾದ ಆರ್.ಪಿ.ಜಗದೀಶ್, ಪ್ರೊ. ಅ.ಶ್ರೀಧರ್, ಪ್ರೊ.ಬಿ.ಕೆ.ಚಂದ್ರಶೇಖರ್, ಕ್ಯಾಪ್ಟನ್

ಜಿ.ಆರ್.ಗೋಪಿನಾಥ್, ಡಾ. ಗುರುರಾಜ ಕರಜಗಿ, ಡಾ. ಎಚ್.ಎನ್.ಕೃಷ್ಣ, ಚೆನ್ನೈ ಕಾನ್ಸುಲೇಟ್‌ನ ಭರತ್‌ಕುಮಾರ್...

ಪ್ರತಿ ಭಾನುವಾರ ಅತ್ತ ನನ್ನ ಅಂಕಣ ಬರಹವುಳ್ಳ ಪುಟ ಸಿದ್ಧವಾಗುತ್ತಿದ್ದಂತೆಯೇ ಅದನ್ನು ಹೆಚ್ಚೂ ಕಡಿಮೆ ಕಸಿದುಕೊಂಡು ಹೋಗಿ ಓದುವ ಜೀವದ ಗೆಳೆಯ ಎಂ.ಎ.ಪೊನ್ನಪ್ಪ, ಅಷ್ಟೇ ಆತ್ಮೀಯರಾದ ಗೋಪಾಲಕೃಷ್ಣ ಹೆಗಡೆ, ಗಂಗಾಧರ ಮೊದಲಿಯಾರ್, ಎಂ.ಕೆ.ಭಾಸ್ಕರ ರಾವ್, ಆಶಾ ಕೃಷ್ಣಸ್ವಾಮಿ, ಎಚ್.ವಿ.ಪ್ರೇಮಕುಮಾರ್, ಆಗಾಗ ತಮ್ಮ ಎಸ್.ಎಂ.ಎಸ್ ಮೂಲಕ ಮೆಚ್ಚುಗೆ ಸೂಚಿಸುವ ಬರಗೂರು ರಾಮಚಂದ್ರಪ್ಪ, ಸಹೋದ್ಯೋಗಿಗಳಾದ ಬಿ.ಎಂ.ಹನೀಫ್, ರವೀಂದ್ರ ಭಟ್, ಎನ್.ಉದಯಕುಮಾರ್, ಬಿ.ವಿ.ಮಹೇಶ್ಚಂದ್ರ, ಬಿ.ಅರವಿಂದ್ ಆನಂದತೀರ್ಥ ಪ್ಯಾಟಿ, ಗಾಣಧಾಳು ಶ್ರೀಕಂಠ, ಎನ್.ಎ.ಎಂ.ಇಸ್ಮಾಯಿಲ್, 'ನಿಮ್ಮ ಲೇಖನಾ ಭಾಳ ಚೊಲೊ ಇತ್ತು' ಎನ್ನುವ ಎಸ್.ರಶ್ಮಿ, ರೋಹಿಣಿ ಮುಂಡಾಜೆ, ಪ್ರೀತಿಯಿಂದ ಬೆನ್ನುಡಿ ಬರೆದುಕೊಟ್ಟ ಚ.ಹ.ರಘುನಾಥ...

ಇಲ್ಲಿನ ಲೇಖನಗಳನ್ನು ಪುಸ್ತಕ ರೂಪದಲ್ಲಿ ತರಬೇಕು ಎಂಬ ಒತ್ತಡಕ್ಕೆ ಒಂದು ರೂಪ ಕೊಟ್ಟವರು ನನ್ನ ಅಣ್ಣನ ಸಮಾನರಾದ ಶ್ರೀ ಮನು ಬಳಿಗಾರ್. ಅವರೇ ಪ್ರಕಾಶಕರ ಜತೆಗೆ ಮಾತನಾಡಿ ಈ ಪುಸ್ತಕಗಳು ಬರುವಂತೆ ಮಾಡಿದ್ದಾರೆ. ಕಳೆದ 15 ವರ್ಷಗಳಿಗೂ ಹೆಚ್ಚು ಅವಧಿಯಿಂದ ಅವರು ನನ್ನ ಬಗ್ಗೆ ತೋರಿಸಿಕೊಂಡು ಬಂದಿರುವ ಪ್ರೀತಿ, ಆದರಕ್ಕೆ ನಾನು ಎಷ್ಟು ಅರ್ಹನೋ ತಿಳಿಯದು. ಆದರೆ, ಅವರು ಅದೇ ನಿಷ್ಕಲ್ಮಶ ಅಭಿಮಾನ ತೋರಿಸಿಕೊಂಡು ಬಂದಿದ್ದಾರೆ. ಅಕ್ಷರಗಳಲ್ಲಿ ಅವರಿಗೆ ಕೃತಜ್ಞತೆ ಹೇಳುವುದು ಕಷ್ಟ. ಅಂಥದೇ ಪ್ರೀತಿ ತೋರಿಸುತ್ತಿರುವ ಎಂ.ರಾಮಯ್ಯ, ಎಚ್.ಬಿ.ದಿನೇಶ್ ಅವರಿಗೂ ನನ್ನ ನೆನಕೆಗಳು. ಪುಸ್ತಕ ಪ್ರಕಟಿಸಲು ತುಂಬು ಸಂತೋಷದಿಂದ ಒಪ್ಪಿದ ಸಪ್ನಾ ಬುಕ್ ಹೌಸ್‌ನ ಮಾಲೀಕರಾದ ನಿತಿನ್ ಷಾ, ದೊಡ್ಡೇಗೌಡ, ಅಕ್ಷರ ಜೋಡಿಸಿದ ರಾಮಕೃಷ್ಣ, ಪುಟ ವಿನ್ಯಾಸ ಮಾಡಲು ಪ್ರೀತಿಯಿಂದ ಮುಂದೆ ಬಂದ ಗೆಳೆಯ ಈಶ್ವರ ಬಡಿಗೇರ, ಅಂದವಾದ ಮುಖಪುಟ ರಚಿಸಿದ ಕಲಾವಿದ ಎಸ್.ವಿಷ್ಣುಕುಮಾರ್ ಅವರಿಗೆಲ್ಲ ನನ್ನ ಕೃತಜ್ಞತೆಗಳು.

ಮೊದಲ ಸಂಪುಟವನ್ನು ನನ್ನ ಸಂಪಾದಕರಾದ ಶ್ರೀ.ಕೆ.ಎನ್.ಶಾಂತಕುಮಾರ್ ಅವರಿಗೆ ಅರ್ಪಿಸಿದ್ದೇನೆ. ಅವರು ನನ್ನ ಬಗ್ಗೆ ಹೊಂದಿರುವ ಪ್ರೀತಿ ಅನ್ಯಾದೃಶವಾದುದು. ನನ್ನ ಜತೆಗೆ ಎಂದೂ ಅವರು ಒಬ್ಬ ಮಾಲೀಕರಂತೆ ನಡೆದುಕೊಂಡಿಲ್ಲ. ಈ ಎರಡೂ ಪುಸ್ತಕಗಳಿಗೆ ಅಂಕಣ ಬರಹಗಳನ್ನು ಬಳಸಿಕೊಳ್ಳಲೂ ಅವರು ಅನುಮತಿ ಕೊಟ್ಟರು. ಅತ್ಯಂತ ಕಷ್ಟದಲ್ಲಿ ಇದ್ದಾಗ ನನಗೆ 'ಪ್ರಜಾವಾಣಿ'ಯಲ್ಲಿ ನೌಕರಿ ಸಿಕ್ಕಿತು. ಕಳೆದ 29 ವರ್ಷಗಳ ನನ್ನ ನೌಕರಿಯ ಅವಧಿಯಲ್ಲಿ ಈ ಸಂಸ್ಥೆ ನನಗೆ ಎಲ್ಲವನ್ನೂ ಕೊಟ್ಟಿದೆ. ಆ ಕೃತಜ್ಞತೆಯ ದ್ಯೋತಕವಾಗಿ ಈ ಅರ್ಪಣೆ.

ಎರಡನೇ ಸಂಪುಟವನ್ನು ನನ್ನ ಪತ್ನಿ ಲಲಿತಾ, ಮಗ ಅಶ್ವಿನ್ ಕುಮಾರ್ ಮತ್ತು ಮಗಳು ವರ್ಷಾ ಅವರಿಗೆ ಅರ್ಪಿಸಿದ್ದೇನೆ. ಅವರು ತೋರುವ ಪ್ರೀತಿಗೆ ಇದು ಕೃತಜ್ಞತೆ.

ನನ್ನ ಅಕ್ಕಂದಿರು, ಅಣ್ಣ ನೇಮಿಚಂದ್ರ, ಭಾವಂದಿರು, ಅತ್ತಿಗೆಯರು, 'ಮಕ್ಕಳು', ನನ್ನ ಬಗ್ಗೆ ಅಪಾರ ಪ್ರೀತಿ, ಅಭಿಮಾನ ಹೊಂದಿರುವ ಎಲ್ಲ ಬಂಧು ಬಳಗವನ್ನು ಈ ಸಂದರ್ಭದಲ್ಲಿ ಪ್ರೀತಿ ಮತ್ತು ಕೃತಜ್ಞತೆಯಿಂದ ನೆನೆಯುವೆ.

-ಪದ್ಮರಾಜ ದಂಡಾವತಿ

# ಪರಿವಿಡಿ


| | |
|---|---|
| ಗೋಡೆಗೆ ತಳ್ಳಿಸಿಕೊಂಡ ಮನುಷ್ಯ ಮತ್ತು ಆತನ ತೀರ್ಪು | 01 |
| 'ರಂಗಶಂಕರ'ದಲ್ಲಿ ನಿತ್ಯ ಮಿನುಗುವ ನಕ್ಷತ್ರ 'ಅರುಂಧತಿ' | 06 |
| ಕಮಲದ ಸುತ್ತಮುತ್ತ ಮುಳ್ಳು ಕಂಟಿಗಳು | 10 |
| ಬೆಂಗಳೂರು ಎಂಬ ಸ್ವರ್ಗವನ್ನು ನರಕ ಮಾಡಿದವರು... | 14 |
| ಅನಂತಮೂರ್ತಿ ಹೇಳಿದ್ದರಲ್ಲಿ ಏನು ತಪ್ಪಿದೆ? | 19 |
| ಸಾವಿರ ಕಂಬಗಳ ಬಸದಿಯೂರಿನ 'ಮಾನಸ್ತಂಭ' | 23 |
| ಶಮನವೇ... ಬೂದಿ ಮುಚ್ಚಿದ ಕೆಂಡವೇ...? | 27 |
| ನೈಸ್ ರಸ್ತೆಯಲ್ಲಿ ಜಾರಿ ಬಿದ್ದವರು ಯಾರು ಯಾರು? | 31 |
| ಯಂತ್ರಗಳನ್ನು ಕಳಚಿ... 'ಚರಕ'ಗಳನ್ನು ಹಿಡಿದು... | 36 |
| ಈಶ್ವರಪ್ಪ ಆಯ್ಕೆ: ವರವೇ ಅಥವಾ ಕೈ ತಪ್ಪಿದ ಅವಕಾಶವೇ? | 40 |
| ಹಾಳಾಗಿ ಹೋದ ರಸ್ತೆಗಳೂ... 'ಉದಾಸೀ'ನ ಸಚಿವರೂ... | 44 |
| ಸತ್ತ ಹುಲಿಯನ್ನು ಬಡಿದೆಬ್ಬಿಸುತ್ತೀರೇಕೆ? | 48 |
| ಮರೆತೆವೆ ನಾವು ಮುಳುಗಡೆಯಾದವರ? | 52 |
| ಗದಗ ಸಮ್ಮೇಳನ ಮತ್ತು ಕೆಟ್ಟ ಸಂಪ್ರದಾಯದ ಆರಂಭ | 56 |
| ಯಾರ ಮುಖಕ್ಕೆ ಮಸಿ ಬಳಿಯಿತು ಕಲ್ಲಿದ್ದಲು? | 61 |
| ಕಾನ್ಸಿ ಎಂಬ ಜೀವನ ಪರ್ಯಂತದ 'ಪ್ರತಿಭಟನೆ' | 66 |

ಬೆಂಗಳೂರನ್ನು ಮತ್ತೆ ಸ್ವರ್ಗ ಮಾಡುವ ಕನಸಿನಲ್ಲಿ... 70
ಇಷ್ಟು ಯುನಿವರ್ಸಿಟಿಗಳು ಬೇಕೇ ಆಂಬಾವಳಿಯವರೇ? 75
ಶಿಕ್ಷಣ ಸುಧಾರಣೆ ಎಂಬ ಗೋಡೆ ತೊಳೆಯುವ ಕೆಲಸ! 80
ಕಾಂಗ್ರೆಸ್ ಕಾಯಕಲ್ಪಕ್ಕೆ ಇನ್ನೂ ಎಷ್ಟು ಸೋಲುಗಳು ಬೇಕು? 84
'ಸ್ಫೂರ್ತಿಧಾಮ'ದ ಸುತ್ತ ಕನಸುಗಳ ಕಟ್ಟುತ್ತ... 89
ಯಾರು ಹಿತವರು ಈ ಮೂವರೊಳಗೆ... 93
ಪಂಚಾಯ್ತಿ ಚುನಾವಣೆಯೂ... ಗ್ರಾಮ ಸುಧಾರಣೆಯೂ... 97
ಜನಪ್ರತಿನಿಧಿಗಳ ಗದ್ದಲ ಮತ್ತು ಮತದಾರನ ಮೌನ 101
ಅಲ್ಲಿರುವುದು ನಮ್ಮನೆ, ರಾಜ್ಯಸಭೆಯಲ್ಲಿ ಸುಮ್ಮನೆ... 105
ಯಡಿಯೂರಪ್ಪ ಸರ್ಕಾರ ಜಸ್ಟ್ ಪಾಸ್! 110
ಸಾವಿನಲ್ಲೂ ವ್ಯತ್ಯಾಸ; ಇಲ್ಲ ಎನ್ನುವುದು ಹೇಗೆ? 115
ಆತ್ಮಹತ್ಯೆಗೆ ಯತ್ನಿಸಲು ಕಾಂಗ್ರೆಸ್ಸಿಗೆ ಹೊತ್ತು ಗೊತ್ತು ಬೇಡವೇ! 119
ಆತ್ಮಸಾಕ್ಷಿಯ ಕತ್ತಲೆಗೆ ಕನ್ನಡಿ ಹಿಡಿದ ಚಿತ್ರಗಳು... ಪಾತ್ರಗಳು... 123
ಹೆಗ್ಡೆ ರಾಜೀನಾಮೆ ಸರಿಯೇ? ತಪ್ಪೇ?
ಉತ್ತರ ಕೊಡೋರು ಯಾರು? 126
ಉದಾರಿ ಹಳ್ಳಿಗ ಆಸೆಬುರುಕ ಏಕಾದ? 131
ಮುಳ್ಳು ಬೇಲಿಗಳ ನಡುವೆ ಹೂವು ಅರಳುವುದು ಹೀಗೆ... 135
'ಒಂಟಿ' ರೆಡ್ಡಿಗಳಿಗೆ ಬಳ್ಳಾರಿಯಲ್ಲೇ ಕಾಂಗ್ರೆಸ್ ಸಡ್ಡು 139
ಬೆಂಗಳೂರಿಗೆ ಅಂಟಿದ ಶಾಪಕ್ಕೆ ವಿಮೋಚನೆಯೇ ಇಲ್ಲವೇ? 143
ಪಾದಯಾತ್ರೆ, ಸಾಧನಾ ಸಮಾವೇಶದ ನಡುವೆ
ಸಂತ್ರಸ್ತನ ನೆನೆಯುತ್ತ.... 147
ಭಾವೀ ಪತ್ರಕರ್ತರಿಗೆ ಪ್ರೀತಿಯಿಂದ... 152
ರಾಜಕಾರಣಿಗಳು ಇಲ್ಲೂ ಅಷ್ಟೇ ಅಲ್ಲೂ ಅಷ್ಟೇ! 156
ಉಪ ಚುನಾವಣೆ ಕಣದಲ್ಲಿ ಏನೇನು ಲೆಕ್ಕ? 160
ಉಪ ಚುನಾವಣೆ ಕಲಿಸಿದ ಸೋಲಿನ ಪಾಠವೇ ದೊಡ್ಡದು 164

# ಗೋಡೆಗೆ ತಳ್ಳಿಸಿಕೊಂಡ ಮನುಷ್ಯ ಮತ್ತು ಆತನ ತೀರ್ಪು

ಗೋಡೆಗೆ ತಳ್ಳಿಸಿಕೊಂಡ ಮನುಷ್ಯ ಏನು ಮಾಡುತ್ತಾನೆ? ಹಿಂದೆ ಹೋಗಲು ಸಾಧ್ಯವೇ ಇಲ್ಲ. ಮುಂದೆ ಬರಲೂ ಆಗದು. ಭಾರತದ ರೈತ ಈಗ ಇಂಥ ಸ್ಥಿತಿಯಲ್ಲಿ ಇದ್ದಾನೆ.

ಮೊನ್ನೆ ಚಾಮರಾಜನಗರದಲ್ಲಿ ಆದ ಘಟನೆ ನಿಮಗೆ ನೆನಪಿರಬೇಕು. ಮತ್ತೆ ಮತ್ತೆ ಮುಂದೆ ಬರಲು ರೈತ ಮಾಡುತ್ತಿರುವ ಪ್ರಯತ್ನಕ್ಕೆ ಅದು ಸಂಕೇತ. ಆದರೆ, ದೊಣ್ಣೆ ಹಿಡಿದ ಪೊಲೀಸರು, ಜಿಲ್ಲಾಧಿಕಾರಿಗಳು 'ಮುಂದೆ ಹೆಜ್ಜೆ ಇಟ್ಟರೆ ಎಚ್ಚರ' ಎಂದು ತಾಕೀತು ಮಾಡುತ್ತಿದ್ದಾರೆ. ಇದಕ್ಕಿಂತ ಸ್ವಲ್ಪ ಹಿಂದೆ ಹಾವೇರಿಯಲ್ಲಿ ನಡೆದ ಘಟನೆಯೂ ನಿಮಗೆ ನೆನಪಿರಬಹುದು. ಪೊಲೀಸರ ಎಚ್ಚರ ಮುರಿದು ಮುಂದೆ ಹೆಜ್ಜೆ ಇಟ್ಟ ರೈತರ ಗತಿ ಏನಾಯಿತು?

ವಿಪರ್ಯಾಸ ಎಂದರೆ ದೇಶದಲ್ಲಿ ಹಸಿರು ಕ್ರಾಂತಿ ಮಾಡಿ ಹೆಮ್ಮೆಪಟ್ಟ ಗಳಿಗೆಯಲ್ಲಿಯೇ ರೈತರ ಆತ್ಮಹತ್ಯೆಯೂ ಆರಂಭವಾಯಿತು. ಇದಾಗಿ ನಾಲ್ಕು ದಶಕಗಳೇ ಕಳೆದು ಹೋಗಿವೆ. ಆಗಲೇ ಗೋಡೆಗೆ ತಳ್ಳಿಸಿಕೊಂಡ ಮನುಷ್ಯನಾಗಿದ್ದ ರೈತ ಶಕ್ತಿ ಕೂಡಿಸಿಕೊಂಡು ಮುಂದೆ ಬರಲು ಪ್ರಯತ್ನ

ಮಾಡುತ್ತಲೇ ಇದ್ದಾನೆ. ಆತನಿಗೆ ಇದೊಂದು ರಥಮುಸಲದಂಥ ಸಂದರ್ಭ. ರಥದ ಹೊರಗೆ ಎಲ್ಲೆಂದರಲ್ಲಿ ಖಡ್ಗ ಚಾಚಿಕೊಂಡಿವೆ. ಖಡ್ಗ ಹಿಡಿದ ಮನುಷ್ಯ ಯಾರು, ಎಲ್ಲಿದ್ದಾನೆ ಎಂದು ರಣರಂಗದ ಯೋಧನಿಗೆ ತಿಳಿಯುತ್ತಿಲ್ಲ. ತಿಳಿದರೂ ಎದುರಿಸುವ ಶಕ್ತಿ ಇಲ್ಲ. ಚಕ್ರವ್ಯೂಹದಲ್ಲಿ ಸಿಲುಕಿದ ಅಭಿಮನ್ಯುವಿಗೆ ಆದ ಹಾಗೆ ರೈತನ ಒಂದೊಂದೇ ಕೈ, ಕಾಲುಗಳನ್ನು ಕಾಣದ ಕೈಗಳು ಕತ್ತರಿಸಿ ಹಾಕುತ್ತಿವೆ.

ಹಸಿರು ಕ್ರಾಂತಿಗಿಂತ ಮುಂಚೆ ರೈತ ಸ್ವಾವಲಂಬಿಯಾಗಿದ್ದ. ತನ್ನ ಬಿತ್ತನೆ ಬೀಜಗಳನ್ನು ತಾನೇ ಬೆಳೆಯುತ್ತಿದ್ದ. ಬೇಕಾದ ಗೊಬ್ಬರ ಕೊಟ್ಟಿಗೆಯಲ್ಲಿಯೇ ಸಿದ್ಧವಾಗುತ್ತಿತ್ತು. ಹೊಲದಲ್ಲಿ ಬೆಳೆದ ಕಾಳಿಗೆ ಕೀಟಗಳ ಕಾಟ ಇರಲಿಲ್ಲ. ವರ್ಷಕ್ಕೆ ಒಂದು ಬೆಳೆ ತೆಗೆದು ಶಕ್ತಿಯುತ ಆಹಾರ ಸೇವಿಸಿ ತಾನೂ ಗಟ್ಟಿಯಾಗಿದ್ದ, ತನ್ನ ಪೀಕಿನ ಮೇಲೆ ಅವಲಂಬಿಸಿದ ಸುತ್ತಲಿನ ಸಮಾಜವನ್ನೂ ಆರೋಗ್ಯ ಪೂರ್ಣವಾಗಿ ಇರಿಸಿದ್ದ. ಈಗ ಆತನ ಸ್ವಾವಲಂಬನೆ ಹೊರಟು ಹೋಗಿದೆ. ರೈತ ನಂಬಿದ್ದ ಮಣ್ಣು ಈಗ ಬರಡಾಗಿದೆ. ಎದೆಯುದ್ದ ಬಿರುಸಾಗಿ ಬೆಳೆದು ನಿಲ್ಲುತ್ತಿದ್ದ ಜೋಳದ ಪೈರು ಈಗ ಎಲ್ಲಿ ಇವೆ? ಹತ್ತು ಮಕ್ಕಳನ್ನು ಹಡೆದ ಹೆಣ್ಣಿನ ಹಾಗೆ ಭೂಮಿ ವರ್ಷಕ್ಕೆ ಮೂರು ಬೆಳೆ ಬೆಳೆದು ಪೀಚಾಗಿ ಹೋಗಿದೆ. ಬೀಜಕ್ಕಾಗಿ, ಗೊಬ್ಬರಕ್ಕಾಗಿ, ಬೆಳೆದ ಬೆಳೆಗೆ ಒಳ್ಳೆಯ ಬೆಲೆಗಾಗಿ ರೈತ ನಿತ್ಯ ಹೋರಾಡಬೇಕಾಗಿದೆ. ದೇಶದ ಅತ್ಯಂತ ಫಲವತ್ತಾದ ಭೂಮಿ ಹೊಂದಿದ್ದ ಪಂಜಾಬಿನಲ್ಲಿ ಹಸಿರು ಕ್ರಾಂತಿ ವೇಳೆಯಲ್ಲಿಯೇ ರೈತರ ಆತ್ಮಹತ್ಯೆಯ ಪ್ರಮಾಣ ನಾಲ್ಕರಷ್ಟು ಹೆಚ್ಚಿತು. ಈಗ ರೈತರು ಎಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ? ಅದು ಬಿಟ್ಟು ಆತನಿಗೆ ಪರ್ಯಾಯ ಏನು ಇದೆ?

ಇದು ದುರಂತ. ಇದಕ್ಕೆ ಉತ್ತರ ಕಂಡುಕೊಳ್ಳಲು ರೈತರು ಕರ್ನಾಟಕದಲ್ಲಿ ಒಟ್ಟುಗೂಡಿದ್ದು 80ರ ದಶಕದ ಆಸುಪಾಸಿನಲ್ಲಿ. ಲಕ್ಷಗಟ್ಟಲೆ ರೈತರು ಬೆಂಗಳೂರಿಗೆ ಬಂದು ಕಬ್ಬನ್‌ಪಾರ್ಕಿನಲ್ಲಿ ಪ್ರತಿಭಟನೆ ಮಾಡಿದರೆ ಸರ್ಕಾರ ನಡುಗಿ ಹೋಗುತ್ತಿತ್ತು. ಅನೇಕ ಸಾರಿ ಸಚಿವರೇ ಈ ರ‍್ಯಾಲಿಯ ಕೊನೆಯಲ್ಲಿ ಭಾಗವಹಿಸಿ ರೈತರಿಗೆ ಸಮಾಧಾನ ಮಾಡಿದ ಸಂದರ್ಭಗಳು ನಮ್ಮ ನೆನಪಿನಿಂದ ಮಾಸಿ ಹೋಗಿಲ್ಲ. ಆದರೆ, ರೈತ ಸಂಘ ಛಿದ್ರಛಿದ್ರವಾಗಿ ಒಡೆದು ಹೋದ ನಂತರ ಈಗ ರೈತರ ಬಳಿ ಉಳಿದುದು ಬರೀ ಹಸಿರು ಶಾಲು ಮಾತ್ರ.

ಕಾಲದ ತುಳಿತಕ್ಕೆ ಸಿಲುಕಿ ಮಾಸಿ ಹೋಗಿರುವ ಶಾಲಿನಲ್ಲಿ ಪ್ರತಿಭಟನೆಯ ಕಾವು ಒಂದು ಚೂರೂ ಉಳಿದಿಲ್ಲ. ರೈತ ಸಂಘಟನೆ ಮತ್ತೆ 80ರ ದಶಕಕ್ಕೆ ಹೋಗಲು ಸಾಧ್ಯವಿಲ್ಲ ಎನಿಸುತ್ತದೆ. ಪ್ರತಿಭಟನೆಯಿಂದ ಅಥವಾ ಆತ್ಮಹತ್ಯೆಯಿಂದ ತನ್ನ ಸಮಸ್ಯೆಗಳಿಗೆ ಈಗ ಆತ ಉತ್ತರ ಕಂಡುಕೊಳ್ಳಲೂ ಸಾಧ್ಯವಿಲ್ಲ.

ಹಾಗಾದರೆ ಏನು ಮಾಡಬೇಕು? ಇದು ಉತ್ತರವಿಲ್ಲದ ಪ್ರಶ್ನೆ. ಮಿಶ್ರತಳಿ ಬೀಜ, ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನೆಲ್ಲ ಬಿಟ್ಟು ಈಗ ಕೃಷಿ ಮಾಡಲು ಸಾಧ್ಯವಿದೆಯೇ? ಬಹುತೇಕ ಸಾಧ್ಯವಿಲ್ಲ ಎನ್ನುವಂಥ ಒಂದು ಸಂದರ್ಭವನ್ನು ಬಹುರಾಷ್ಟ್ರೀಯ ಕಂಪೆನಿಗಳು ನಿರ್ಮಾಣ ಮಾಡಿವೆ. ಇಂಥ ಒಂದು ಸಂದರ್ಭವನ್ನು ಎದುರಿಸಲು ಕೃಷಿ ಸಂಶೋಧನೆಯೂ ಆತನ ನೆರವಿಗೆ ಬರುತ್ತಿಲ್ಲ. ಹಾಗೆ ನೋಡಿದರೆ

ಪ್ರಯೋಗಾಲಯದ ಸಂಶೋಧನೆಗೂ, ಹೊಲದ ವಾಸ್ತವಕ್ಕೂ ಅರ್ಥಾತ್ ಸಂಬಂಧವೇ ಉಳಿದಿಲ್ಲ. ಇನ್ನೂ ಅಪಾಯ ಎಂದರೆ ಕೃಷಿ ಸಂಶೋಧನೆ ಎಂಬುದು ಸಾರ್ವಜನಿಕ ಒಳಿತಿಗಿಂತ ಕಾರ್ಪೋರೇಟ್ ಒಳಿತಿನ ಕಡೆಗೆ ಹೆಚ್ಚು ಗಮನ ಕೊಡುತ್ತಿರುವುದು. ಇದು ಜಾಗತೀಕರಣದ ನಂತರದ ಬೆಳವಣಿಗೆ. ಅದರ ಫಲವೆನ್ನುವಂತೆ ಕುಲಾಂತರಿ ತಳಿಗಳು, ಜೈವಿಕ ಇಂಧನ, ಗುತ್ತಿಗೆ ಆಧಾರದ ತೋಟಗಾರಿಕೆ, ಸಂಕರ ತಳಿಗಳ ವಿಜೃಂಭಣೆ ಮತ್ತು ಅದಕ್ಕೆ ಪೂರಕವಾಗಿ ನಿರ್ಮಾಣವಾಗುತ್ತಿರುವ ಶೋಷಕ ಮಾರುಕಟ್ಟೆ. ಸಣ್ಣ, ಮಧ್ಯಮ ಮತ್ತು ಅಂಚಿನ ರೈತನಿಗೆ ಉಳಿಗಾಲವೇ ಇಲ್ಲ ಎನ್ನುವಂಥ ಸ್ಥಿತಿಯನ್ನು ಈಗಿನ ಮಾರುಕಟ್ಟೆಕೇಂದ್ರಿತ ಕೃಷಿ ವ್ಯವಸ್ಥೆ ನಿರ್ಮಿಸಿ ಬಿಟ್ಟಿದೆ. ಹೀಗಾಗಿ ಕೃಷಿ ಸಂಶೋಧನೆಯನ್ನು ಪ್ರಜಾಸತ್ತಾತ್ಮಕಗೊಳಿಸಲು ಮೊನ್ನೆ ಬೆಂಗಳೂರಿನಲ್ಲಿ ಒಂದು ಪ್ರಯೋಗ ನಡೆಯಿತು. ಇದು ಇಡೀ ಜಗತ್ತಿನಲ್ಲಿಯೇ ನಡೆದ ಅಂಥ ಮೊದಲ ಪ್ರಯೋಗ. ಅದಕ್ಕೆ 'ರೈತ ತೀರ್ಪು' ಎಂದು ಹೆಸರು ಇಡಲಾಗಿತ್ತು. ಕನಕಪುರ ರಸ್ತೆಯ 'ಫೈರ್‌ಪ್ಲೈಸ್'ನಲ್ಲಿ ಈ ತಿಂಗಳ ಮೊದಲ ವಾರ 'ರೈತ ತೀರ್ಪು' ಹೊರಬಿತ್ತು.

ಹೈದರಾಬಾದಿನ ಡೆಕ್ಕನ್ ಡೆವಲೆಪ್‌ಮೆಂಟ್ ಸೊಸೈಟಿ, ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರೀಸರ್ಚ್ ಅಂಡ್ ಯಾಕ್ಷನ್ (ಇಕ್ರಾ) ಮತ್ತು ಹಿತ್ತಲ ಗಿಡ, ಧಾರವಾಡದ ಸೆಂಟರ್ ಫಾರ್ ಅಗ್ರಿಕಲ್ಚರಲ್ ಮೀಡಿಯಾ ಹಾಗೂ ಶಿರಸಿಯ 'ಅಪ್ಪಿಕೊ' ಸಂಘಟನೆಗಳು ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದುವು. ಒಂದು ವರ್ಷದ ಹಿಂದೆ ಯೋಚಿಸಿದ್ದ 'ರೈತ ತೀರ್ಪು' ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ಸಿಕ್ಕಿದ್ದು ಕಳೆದ ಆರು ತಿಂಗಳಲ್ಲಿ. ರಾಜ್ಯದ ಎಲ್ಲ ಕಡೆಗಳಿಂದ ಮೂವತ್ತು ಮಂದಿ ರೈತರನ್ನು ಜ್ಯೂರಿ ಸದಸ್ಯರು ಎಂದು ಆಯ್ಕೆ ಮಾಡಲಾಗಿತ್ತು. ಇವರೆಲ್ಲ ಸಣ್ಣ, ಅತಿ ಸಣ್ಣ ಪ್ರಯೋಗಶೀಲ ರೈತರಾಗಿದ್ದರು. ಅವರಲ್ಲಿ 15 ಮಂದಿ ಮಹಿಳೆಯರು ಇದ್ದರು. ಈ ಮೂವತ್ತು ಮಂದಿಯಲ್ಲಿ ದಲಿತ, ಬುಡಕಟ್ಟು, ಆದಿವಾಸಿಯಂಥ ವರ್ಗಗಳನ್ನು ಪ್ರತಿನಿಧಿಸುವ ರೈತರೂ ಇದ್ದರು. ಕರ್ನಾಟಕದ ಒಟ್ಟು ರೈತ ಸಮುದಾಯವನ್ನು ಪ್ರತಿನಿಧಿಸುವ ಈ ಮೂವತ್ತು ಮಂದಿಯನ್ನು ಆಯ್ಕೆ ಮಾಡಲು 18–20 ಮಂದಿಯ ತಜ್ಞರ ಒಂದು ಸಮಿತಿ ರಚಿಸಲಾಗಿತ್ತು. ಒಟ್ಟು ಕಾರ್ಯಕ್ರಮದ ಸಲಹೆಗಾರ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ಇಂಗ್ಲೆಂಡಿನ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಎನ್‌ವಿರಾನ್‌ಮೆಂಟ್ (ಐ.ಐ.ಇ.ಡಿ) ನಿರ್ದೇಶಕ ಡಾ. ಮೈಕೆಲ್ ಪಿಂಬರ್ಟ್ ಕಾರ್ಯ ನಿರ್ವಹಿಸಿದರು.

'ರೈತ ತೀರ್ಪಿನ' ವಿಶೇಷ ಏನು ಎಂದರೆ ರೈತರು ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತುದು. ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ನಡೆಸುವವರು ಅವರ ಮುಂದೆ ವಾದಿಗಳ ಹಾಗೆ ನಿಂತು ತಾವು ಮಾಡಿದ ಸಂಶೋಧನೆಯ ಉಪಯುಕ್ತತೆಯ ಬಗ್ಗೆ ಸಾಬೀತು ಮಾಡಲು ಯತ್ನಿಸಿದ್ದು. ಈ ವಾದ ಸರಿಯಾಗಿ ನಡೆದು ತೀರ್ಪು 'ನ್ಯಾಯಬದ್ಧ'ವಾಗಿ ಹೊರಬೀಳುತ್ತದೆಯೇ ಎಂಬುದರ 'ಮೇಲುಸ್ತುವಾರಿ' ಮಾಡಲು ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ನೇತೃತ್ವದಲ್ಲಿ ಡಾ.ಸುದರ್ಶನ್, ಡಾ. ದ್ವಾರಕೀನಾಥ್, ಹೇಮಲತಾ ಮಹಿಷಿ, ಡಾ. ಗೋಪಾಲ ಕಡೆಕೋಡಿ, ಬಿ.ಟಿ.ಲಲಿತಾ

ನಾಯಕ್, ಡಾ.ಎಲ್.ಹನುಮಂತಯ್ಯ ಅವರಂಥ ವಿವಿಧ ರಂಗಗಳ ಘಟಾನುಘಟಿಗಳ ಸಮಿತಿಯನ್ನೂ ರಚಿಸಲಾಗಿತ್ತು.

ಆತ್ಮವಿಶ್ವಾಸವೇ ಇಲ್ಲದ, ವಿಲಾಯತಿ ದಿರಿಸು, ಇಂಗ್ಲಿಷ್ ಭಾಷೆಯ ಎದುರು ಕೀಳರಿಮೆ ಅನುಭವಿಸುವ ರೈತರು ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತು ಕೃಷಿ ಸಂಶೋಧಕರಿಗೆ ಪ್ರಶ್ನೆ ಕೇಳುವುದು ಸುಲಭ ಎಂದು ಸಂಘಟಕರೂ ಅಂದು ಕೊಂಡಿರಲಿಲ್ಲ. ಮೊದಲ ದಿನ ಅದೇ ಆಯಿತು. ಆದರೆ ಮುಂದಿನ ಎರಡು ದಿನಗಳ ಕಾಲ ರೈತರು ತಮ್ಮ ಅನುಭವದಲ್ಲಿ ಕಂಡುಂಡ ಕೋಟಲೆಗಳನ್ನೆಲ್ಲ ಸಂಶೋಧಕರ ಮುಂದೆ ಎಸೆದು 'ನೀವು ಏನು ಮಾಡಿದ್ದೀರಿ ಹೇಳಿ' ಎಂದು ತರಾಟೆಗೆ ತೆಗೆದು ಕೊಂಡರು. ಸಂಶೋಧಕರೂ ತಮ್ಮ ವರಸೆ ಬಿಡಲಿಲ್ಲ. ತಾವು ಏನೆಲ್ಲ ಮಾಡಿದ್ದೇವೆ ಎಂದು ಅವರೂ ಕೊಚ್ಚಿಕೊಂಡರು. ಅಂತಿಮವಾಗಿ 22 ಶಿಫಾರಸುಗಳನ್ನು ರೈತ ಜ್ಯೂರಿ ಸದಸ್ಯರು ಮಾಡಿದರು: 'ಸಾಂಪ್ರದಾಯಿಕ ಒಕ್ಕಲುತನಕ್ಕೆ ಹೊರಳಲಾಗದ, ಆಧುನಿಕ ಕೃಷಿಯನ್ನು ಮಾಡಲಾಗದ ರೈತನಿಗೆ ಅನುಕೂಲವಾಗುವ ಸಂಶೋಧನೆ ಗಳು ಬೇಕು, ರೈತ ತಾನೇ ತನ್ನ ಹೊಲದಲ್ಲಿ ಮಾಡುವ ಪ್ರಯೋಗಗಳಿಗೂ ಸರ್ಕಾರದ ಮನ್ನಣೆ, ಸಂಭಾವನೆ ಸಿಗಬೇಕು, ಮಿಶ್ರತಳಿ ಬೀಜಗಳಿಗೆ ಬದಲಾಗಿ ರೈತನೇ ಉತ್ಪಾದಿಸಬಹುದಾದ, ಬರ ನಿರೋಧಕ, ಪರಿಸರಕ್ಕೆ ಹೊಂದಿಕೊಳ್ಳುವ ರುಚಿಕರವಾದ ಮತ್ತು ಮೇವು ಕೊಡುವ ಜವಾರಿ ತಳಿಗಳ ಸಂಶೋಧನೆ ಆಗಬೇಕು ಇತ್ಯಾದಿ... ಇತ್ಯಾದಿ...' ಸೋಜಿಗ ಎಂದರೆ, 'ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರಗಳು ಬೇಕು' ಎಂಬ ಶಿಫಾರಸು ಕೂಡ ಇದರಲ್ಲಿ ಸೇರಿತ್ತು. ಕೃಷಿ ಇಲಾಖೆಯಲ್ಲಿ ದಶಕಗಳಿಂದ ಒಂದು ಭಾಗವೇ ಆಗಿರುವ ಮಣ್ಣು ಪರೀಕ್ಷಾ ಕೇಂದ್ರಗಳು ಬೇಕು ಎಂದು 'ರೈತ ತೀರ್ಪು' ಶಿಫಾರಸು ಮಾಡಿದ್ದು ಒಟ್ಟು ಕೃಷಿ ಸಂಶೋಧನೆಯ, ತಂತ್ರಜ್ಞಾನ ವರ್ಗಾವಣೆಯ ವೈಫಲ್ಯದ ಸಂಕೇತದಂತೆ ಇತ್ತು.

ಪಿ. ವಿ. ಸತೀಶ್, ಪಾಂಡುರಂಗ ಹೆಗಡೆ, ಸಂತೋಷ್ ಕೌಲಗಿ, ಪ್ರಕಾಶ್ ಭಟ್, ಅನಿತಾ ಪೈಲೂರು, ಡಾ.ಪಿ.ಬಾಬು ಅವರಂಥ ನೈಜ ಕಾಳಜಿಯುಳ್ಳ ಜನ ಸಂಘಟಿಸಿದ್ದ 'ರೈತ ತೀರ್ಪಿನ' ದೊಡ್ಡ ಕೊರತೆ ಎಂದರೆ ನೀತಿ ನಿರೂಪಕರು ಆ ಸಭೆಯಲ್ಲಿ ಇಲ್ಲದೇ ಇದ್ದುದು. ಈ ಕಾರ್ಯಕ್ರಮ ನಡೆದ ಮೂರು ದಿನಗಳ ಕಾಲವೂ ರೈತರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡ ಮುಖ್ಯಮಂತ್ರಿ ಯಡಿಯೂರಪ್ಪ ಅಥವಾ / ಹಾಗೂ ಕೃಷಿ ಸಚಿವರು ಭಾಗವಹಿಸಲು ಸಾಧ್ಯವಾಗಿದ್ದರೆ ತಮ್ಮ ಇಲಾಖೆ ಎಡವಿದ್ದು ಎಲ್ಲಿ ಎಂದು ಅವರಿಗೆ ತಿಳಿಯುತ್ತಿತ್ತೋ ಏನೋ?

ಹೆಡ್ಲಿ-ರಾಣಾ, ನಜೀರ್, ಯಡಿಯೂರಪ್ಪ, ರೆಡ್ಡಿಗಳ ಮಧ್ಯೆ ಎಲ್ಲಿಯೋ ಕಳೆದು ಹೋಗಿರುವ ಮಾಧ್ಯಮ 'ರೈತ ತೀರ್ಪಿಗೆ' ಕೊಡಬೇಕಾಗಿದ್ದ ಗಮನವನ್ನು ಕೊಡಲಿಲ್ಲ ಎಂಬುದು ಎರಡನೇ ಕೊರತೆ. ಚಾಮರಾಜನಗರ ರೈತರ ಮೇಲೆ ಲಾಠಿ ಬೀಸಿದ್ದು ಮಾತ್ರ ಒಂದನೇ ಪುಟದ ಸುದ್ದಿಯಾಗುವ ಕಾಲ ಇದು. ನಕಾರಾತ್ಮಕ, ರೋಚಕ ಸುದ್ದಿಗಳ ಬೆನ್ನು ಹತ್ತಿರುವ ಮಾಧ್ಯಮಗಳಲ್ಲಿ 'ರೈತ ತೀರ್ಪು' ಸುದ್ದಿಗೆ ಚೂರೇ ಚೂರು ಜಾಗ ಸಿಕ್ಕಿತು.

ರೈತನಿಗಿದು ಕಷ್ಟ ಕಾಲ. ದೇಶದಲ್ಲಿ ಕೈಗಾರಿಕಾ ಬೆಳವಣಿಗೆ ನಿರೀಕ್ಷೆಗಿಂತ ಹೆಚ್ಚು ಆಗಿದ್ದರೂ ಕೃಷಿ ಬೆಳವಣಿಗೆ ನಕಾರಾತ್ಮಕವಾಗಿಯೇ ಇದೆ. ರೈತ ಮುಳುಗಿದರೆ ದೇಶ ಮುಳುಗುತ್ತದೆ. 'ರೈತ ತೀರ್ಪಿನ' ಶಿಫಾರಸುಗಳನ್ನು ಮುಂದೆ ಇಟ್ಟುಕೊಂಡು ಸಂಘಟಕರು ಸರ್ಕಾರಗಳ ಮೇಲೆ ಹೇಗೆ ಒತ್ತಡ ತರುತ್ತಾರೆ ಎಂಬುದು ದೊಡ್ಡ ಪ್ರಶ್ನೆ. ಜಗತ್ತಿನಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ ನಡೆದ ಈ ಪ್ರಯೋಗ ಯಶ ಕಂಡು ಸರ್ಕಾರ ಮತ್ತೆ ರೈತಪರ ನಿಲುವು ತೆಗೆದುಕೊಳ್ಳುವುದು ಸಾಧ್ಯವಾದರೆ ಅದಕ್ಕಿಂತ ದೊಡ್ಡ ಯಶಸ್ಸು ಬೇರೆ ಏನೂ ಇಲ್ಲ. ಇದು ಬರೀ ಸಂಘಟಕರು ನಿರ್ಮಿಸುವ 'ಒತ್ತಡ ಗುಂಪಿನ' (pressure group) ಮೇಲೆ ಮಾತ್ರ ನಿಂತಿಲ್ಲ. ಗೋಡೆಗೆ ತಳ್ಳಿಸಿ ಕೊಂಡಿರುವ ರೈತನ ಜತೆಗೆ ಮಾಧ್ಯಮಗಳೂ ನಿಲ್ಲಬೇಕಿದೆ. ನಿಂತಾವೇ ಎಂಬುದೇ ಪ್ರಶ್ನೆ.

■

# ‘ರಂಗಶಂಕರ’ದಲ್ಲಿ ನಿತ್ಯ ಮಿನುಗುವ ನಕ್ಷತ್ರ ‘ಅರುಂಧತಿ’

ಅವರು ಆಗ ಉಪ ಮುಖ್ಯಮಂತ್ರಿ. ಸಾಹಿತ್ಯ, ನಾಟಕದಲ್ಲಿ ತುಂಬು ಆಸಕ್ತಿ ಇದ್ದ ರಾಜಕಾರಣಿ. ಬೆಂಗಳೂರಿನ ಜೆ. ಪಿ. ನಗರದ ‘ರಂಗಶಂಕರ’ಕ್ಕೆ ನಾಟಕ ನೋಡಲೆಂದು ಸಂಜೆ 7.32ಕ್ಕೆ ಬಂದರು. ಬಾಗಿಲು ಹಾಕಿತ್ತು. ಧಾವಿಸಿ ಬಂದ ರಾಜಕಾರಣಿಗೆ ಗೇಟಿನಲ್ಲಿ ನಿಂತವರು ‘ಸಾರಿ, ಒಳಗೆ ಬಿಡಲು ಆಗದು’ ಎಂದರು. ಇದು ಬರೀ ಆ ಉಪಮುಖ್ಯಮಂತ್ರಿಗೆ ಮಾತ್ರವಲ್ಲ, ರಂಗಶಂಕರವನ್ನು ಕಟ್ಟಿ ನಿಲ್ಲಿಸಿದ ಅರುಂಧತಿ ನಾಗ್ ಅವರಿಗೂ ಅನೇಕ ಸಾರಿ ಸಿಕ್ಕ ಉತ್ತರ!

7.30ಕ್ಕೆ ನಾಟಕ ಆರಂಭ ಎಂದರೆ ಆರಂಭ ಆಗಲೇಬೇಕು. ಸೂರ್ಯನ ಚಲನೆಯಲ್ಲಿ ಕೊಂಚ ಹೆಚ್ಚೂ ಕಡಿಮೆ ಆದೀತು. ಆದರೆ, ‘ರಂಗಶಂಕರ’ದಲ್ಲಿ ನಾಟಕ ಆರಂಭ ಆಗುವ, ಬಾಗಿಲು ಹಾಕುವ ವೇಳೆಯಲ್ಲಿ ಮಾತ್ರ ಸೆಕೆಂಡಿನಷ್ಟೂ ವ್ಯತ್ಯಾಸ ಆಗುವುದಿಲ್ಲ. ಕಳೆದ ಐದು ವರ್ಷಗಳ ಕಾಲ ಇದು ನಿತ್ಯ ನಿರಂತರವಾಗಿ ನಡೆದುಕೊಂಡು ಬಂದಿದೆ. ನಾಟಕ ಆರಂಭ ಆಗುವುದಕ್ಕಿಂತ ಮುಂಚೆ ಹಿನ್ನೆಲೆಯಲ್ಲಿ ಗಿರೀಶ್ ಕಾರ್ನಾಡರ ಧ್ವನಿ ಕೇಳಿ ಬರುತ್ತದೆ: ‘ನಾಟಕದ ರಸಾಸ್ವಾದನೆಗೆ ನಿಮ್ಮ ಮೊಬೈಲ್‌ನಿಂದ ಭಂಗ ಬರುವುದು ಬೇಡ, ಸ್ವಿಚ್ ಆಫ್

ಮಾಡಿ' ಎಂದು. ನೀವು ಸ್ವಿಚ್ ಆಫ್ ಮಾಡಲೇಬೇಕು.

ಇದು ಸಣ್ಣ ಸಂಗತಿ ಇರಬಹುದು. ಆದರೆ, ಕಠೋರ ಎನ್ನುವಂಥ ಒಂದು ಶಿಸ್ತು. ಈ ಶಿಸ್ತಿನ, ಕಟ್ಟುನಿಟ್ಟಿನ ಫಲವಾಗಿ 'ರಂಗಶಂಕರ' ಬೆಳೆದು ನಿಂತಿದೆ. 'ರಂಗಶಂಕರ'ದಲ್ಲಿ ಸೋಮವಾರ ಬಿಟ್ಟು ಎಲ್ಲ ದಿನ ನಾಟಕ ನಡೆದಿವೆ. 'ರಂಗಭೂಮಿ ಸತ್ತೇ ಹೋಯಿತು', 'ಇನ್ನೆಲ್ಲಿ ನಾಟಕ?' ಎಂಬ ಪ್ರಶ್ನೆ ಕೇಳಿ ಬಂದ ಕಾಲದಲ್ಲಿಯೇ ಇದು ಸಾಧ್ಯವಾಗಿದೆ. ಬೆಂಗಳೂರಿನ ಹೃದಯ ಭಾಗದ ರವೀಂದ್ರ ಕಲಾಕ್ಷೇತ್ರದಿಂದ ಸಾಕಷ್ಟು ದೂರದಲ್ಲಿ ಒಂದು ಬಡಾವಣೆಯ ಭಾಗವಾಗಿ ಹುಟ್ಟಿಕೊಂಡ 'ರಂಗಶಂಕರ' ಕಳೆದ ಐದು ವರ್ಷಗಳಲ್ಲಿ ಹಾಕಿದ ಹೆಜ್ಜೆಗಳನ್ನು ಹಿಂದಿರುಗಿ ನೋಡಿದಾಗ ದಿಗ್ಭ್ರಮೆ ಆಗುತ್ತದೆ. ಇದು ಸಾಧ್ಯವೇ ಅನಿಸುತ್ತದೆ. ಅಲ್ಲಿ ಬರೀ ಕನ್ನಡ ನಾಟಕ ಮಾತ್ರವಲ್ಲ. ನಿನ್ನೆ ಮೊನ್ನೆ ನಡೆದ ತುಳು ನಾಟಕ ಸೇರಿಸಿದರೆ ಬರೀ ಭಾರತ ಮಾತ್ರವಲ್ಲ. ದೇಶ ವಿದೇಶಿಗಳ 20 ಭಾಷೆಗಳ 2,000 ನಾಟಕಗಳು ಪ್ರದರ್ಶನ ಕಂಡಿವೆ. ಮೂರು ಲಕ್ಷ ಜನ ನಾಟಕ ನೋಡಿದ್ದಾರೆ. ಅವರಲ್ಲಿ 25,000 ಮಕ್ಕಳೂ ಸೇರಿವೆ.

ಇಂಥ ಒಂದು ಥಿಯೇಟರ್ ಕಟ್ಟಬೇಕು ಎಂಬುದು ಶಂಕರ್‌ನಾಗ್ ಮತ್ತು ಅರುಂಧತಿ ನಾಗ್ ಕೂಡಿ ಕಂಡ ಕನಸು. ಇಬ್ಬರೂ ಮುಂಬೈಯಲ್ಲಿ ಕೂಡಿ ನಾಟಕ ಆಡಿದವರು. ಅರುಂಧತಿಯಂತೂ ಮರಾಠಿ ರಂಗಭೂಮಿಯಲ್ಲಿ ಹಾಸು ಹೊಕ್ಕಾಗಿದ್ದವರು. ಜೆನ್ನಿಫರ್ ಕಪೂರ್ ಕಟ್ಟಿದ ಪೃಥ್ವಿ ಥಿಯೇಟರ್, ಅರುಂಧತಿಯವರನ್ನು ನಿತ್ಯ ಕಾಡುತ್ತಿತ್ತು. ಈ ಕನಸು ಹೊತ್ತಿಕೊಂಡೇ ಇಬ್ಬರೂ 70ರ ದಶಕದ ಕೊನೆಯಲ್ಲಿ ಬೆಂಗಳೂರಿಗೆ ಬಂದರು. ಆಗ ಇದ್ದುದು ರವೀಂದ್ರ ಕಲಾಕ್ಷೇತ್ರ ಮಾತ್ರ. ಕಲಾಕ್ಷೇತ್ರದಲ್ಲಿ ನಾಟಕ ಆಡುವುದು ಎಂದರೇ ದೊಡ್ಡ ಭಾಗ್ಯ. ಮೂರು ತಿಂಗಳು ಕಾದರೆ ಒಂದು ದಿನ ನಾಟಕ ಆಡಲು ಅವಕಾಶ ಸಿಗುತ್ತಿತ್ತು. ನಿತ್ಯ ನಾಟಕ ಆಡಬೇಕು ಎಂಬ ಹುಚ್ಚಿರುವವರಿಗೆ ಕಲಾಕ್ಷೇತ್ರ ಸಾಕಾಗಲಿಲ್ಲ. ಎಚ್. ಎನ್. ಕಲಾಕ್ಷೇತ್ರ, ಗೋಖಲೆ ಸಂಸ್ಥೆ, ಚಿತ್ರಕಲಾ ಪರಿಷತ್... ಆವರಣ ಹೀಗೆಲ್ಲ ನಾಟಕ ಆಡಲು ಜಾಗ ಹುಡುಕಿ ಕೊಂಡು ಹೊರಟ ನಾಗ್ ದಂಪತಿಗೆ ಎಲ್ಲಿಯೂ ಸರಿ ಹೋಗಲಿಲ್ಲ. ವಿಚಿತ್ರ ಎಂದರೆ ಇಬ್ಬರಿಗೂ ಮನೆ ಬಾಡಿಗೆ ಕೊಡಲು ದುಡ್ಡು ಇರಲಿಲ್ಲ. ಚಿಲ್ಲರೆ ಡಬ್ಬಿಯಲ್ಲಿ ಕೂಡಿಟ್ಟ ಹಣವನ್ನೇ ಸೇರಿಸಿ ತಿಂಗಳ ಕೊನೆಯಲ್ಲಿ ಹಾಗೂ ಹೀಗೂ ಬಾಡಿಗೆ ಕೊಡುತ್ತಿದ್ದರು. ಅದರ ಮಧ್ಯೆ ಒಂದು ಥಿಯೇಟರ್ ಕಟ್ಟಬೇಕು ಎಂಬ ಕನಸು ಮನಸ್ಸಿನಲ್ಲಿ ಆಲದ ಮರದ ಹಾಗೆ ಬೆಳೆಯುತ್ತ ಬಿಳಿಲು ಬಿಡುತ್ತಲೇ ಇತ್ತು.

ಈ ಕನಸು ಬೆಳೆಯುತ್ತಲೇ ಇದ್ದಾಗ ಶಂಕರ್ ನಾಗ್ ಅಪಘಾತದಲ್ಲಿ ಇನ್ನಿಲ್ಲವಾದರು (1990). ತೀವ್ರವಾಗಿ ಗಾಯಗೊಂಡಿದ್ದ ಅರುಂಧತಿ ಏಳೆಂಟು ತಿಂಗಳು ಆಸ್ಪತ್ರೆಯಲ್ಲಿಯೇ ಇದ್ದು ಹೊರಗೆ ಬಂದ ನಂತರವೂ ಆ ಗುಂಗಿನಿಂದ ಹೊರಗೆ ಬಂದಿರಲಿಲ್ಲ. ಶಂಕರ್ ನಾಗ್ ಸಾವಿಗೆ ಒಂದು ವರ್ಷ ತುಂಬಿದಾಗ 'ಹುಲಿಯೂರು ಹುಲಿಯವ್ವ', 'ರಾಜಬೇಟೆ', 'ತಲೆದಂಡ' ಎಂಬ ಮೂರು ನಾಟಕಗಳನ್ನು ಕಲಾಕ್ಷೇತ್ರದಲ್ಲಿ ಆಡಿ ಭಿನ್ನ ಬಗೆಯ 'ಶ್ರಾದ್ಧ' ಆಚರಿಸಿದರು.

ಅಂಬರೀಷ್ ಮನೆಯಲ್ಲಿ ಒಂದು ದಿನ ಅರುಂಧತಿ ಕುಳಿತಿದ್ದಾಗ ಯಾರೋ

ಒಬ್ಬರು ಪೇಪರ್ ಹಿಡಿದುಕೊಂಡು ಜೆ.ಪಿ. ನಗರದಲ್ಲಿ ರಂಗಮಂದಿರ ಕಟ್ಟಲು ಸಿ.ಎ ಸೈಟು ಕಾದಿರಿಸಿದ್ದಾರೆ ಎಂಬ ಸುದ್ದಿಯನ್ನು ಓದಿದರು. ಆ ಪೇಪರ್ ಕಿತ್ತುಕೊಂಡ ಅರುಂಧತಿ ಸರ್ಕಾರದ ಬಾಗಿಲು ತಟ್ಟಿದ್ದಕ್ಕೆ, ಕಂಬ, ಕಂಬ ಸುತ್ತಿದ್ದಕ್ಕೆ ಲೆಕ್ಕವಿಲ್ಲ. ರಂಗಮಂದಿರ ಕಟ್ಟಲು ಒಂದು ಟ್ರಸ್ಟ್ ಮಾಡಬೇಕು ಎಂದಾಗ ಅರುಂಧತಿ, ಗಿರೀಶ್ ಕಾರ್ನಾಡ್, ರಮೇಶ್ ಭಟ್, ಸುರೇಂದ್ರನಾಥ್, ನಿವೃತ್ತ ಅರಣ್ಯ ಅಧಿಕಾರಿ ಪರಮೇಶ್ವರಪ್ಪ ಅವರನ್ನು ಒಳಗೊಂಡು ಒಂದು ಟ್ರಸ್ಟ್ ಅನ್ನೂ ರಚಿಸಲಾಯಿತು. ಆದರೆ, 'ನಮ್ಮ ವೇಗಕ್ಕೆ ಸರ್ಕಾರದಲ್ಲಿ ಯಾವಾಗಲೂ ಕೆಲಸ ಆಗುವುದಿಲ್ಲ. ಕಡತಗಳು ಚಲಿಸುವುದೇ ಇಲ್ಲ' ಎಂದು ಅರುಂಧತಿಗೆ ಅನಿಸತೊಡಗಿತು. ಸೈಟ್ ಮಾತ್ರ ವಶಕ್ಕೆ ಬಂದಿತ್ತು (2000).

ಅದು ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಕಾಲ. ಒಂದು ದಿನ, ಅಂಡಲೆದು ಬೇಸತ್ತಿದ್ದ, ಅರುಂಧತಿ ಮುಖ್ಯಮಂತ್ರಿ ಮನೆಗೆ ಫೋನ್ ಮಾಡಿ ಅವರ ಕಾರ್ಯದರ್ಶಿಗೆ, 'ನಾನು ಅರುಂಧತಿ, ಮುಖ್ಯಮಂತ್ರಿಯವರ ಜತೆಗೆ ಮಾತನಾಡ ಬೇಕು' ಎಂದರು. 15 ನಿಮಿಷಗಳ ನಂತರ 'ಮುಖ್ಯಮಂತ್ರಿ ಬಿಡುವಾಗಿದ್ದಾರೆ ನೀವು ಬರಬೇಕು' ಎಂಬ ಕರೆ ಬಂತು. ಹೊಸೂರು ರಸ್ತೆಯಲ್ಲಿ ಎಲ್ಲಿಯೋ ಇದ್ದ ಅರುಂಧತಿ ಕಡತಗಳನ್ನೆಲ್ಲ ಹಿಡಿದುಕೊಂಡು ಎದ್ದೆನೋ ಬಿದ್ದೆನೋ ಎಂದುಕೊಂಡು 'ಕೃಷ್ಣಾ'ಕ್ಕೆ ಓಡಿ ಬಂದರು. ಕೃಷ್ಣ ಅವರ ಮುಂದೆ ಎಲ್ಲ ಕಡತ ಇಟ್ಟು ತಾವು ಪಟ್ಟ ಪಡಿಪಾಟಲನ್ನೆಲ್ಲ ತೋಡಿಕೊಂಡರು. ಕೃಷ್ಣ ತಕ್ಷಣ 20 ಲಕ್ಷ ರೂಪಾಯಿ ಮಂಜೂರು ಮಾಡಿ ಕೆಲಸ ಆರಂಭ ಮಾಡಿ ಎಂದರು. ಆದರೆ, ನಿವೇಶನವನ್ನು ಈಗಿನ ಜಾಗಕ್ಕೆ ಬದಲಿಸಿಕೊಳ್ಳುವುದು ಆಗಿರಲಿಲ್ಲ. ಕೃಷ್ಣ ಅವರ ಜತೆಗೆ ಭೇಟಿಯಾದ ಒಂದು ವರ್ಷದ ನಂತರವೂ ಪ್ರಗತಿ ಆಗಲೇ ಇಲ್ಲ. ಮತ್ತೆ ಕೃಷ್ಣ ಅವರ ಭೇಟಿ ಕೇಳಿದ ಅರುಂಧತಿ, ಸರ್ಕಾರ ಮೊದಲು ಕೊಟ್ಟಿದ್ದ 20 ಲಕ್ಷ ರೂಪಾಯಿ ಮತ್ತು ಅದಕ್ಕೆ ಬ್ಯಾಂಕಿನಲ್ಲಿ ಬಂದಿದ್ದ ಬಡ್ಡಿ ಮೊತ್ತವನ್ನು ಅವರ ಮುಂದೆ ಇಟ್ಟು, 'ಇನ್ನು ನನ್ನ ಕೈಲಿ ಆಗದು, ಈ ಹಣ ವಾಪಸು ತೆಗೆದುಕೊಂಡು ಬಿಡಿ' ಎಂದರು. ಕೃಷ್ಣ ಮುಗುಳು ನಗುತ್ತ, 'ಎದೆಗುಂದಬೇಡಿ, ಇನ್ನೂ 30 ಲಕ್ಷ ರೂಪಾಯಿ ಕೊಡಿಸುವೆ ಕೆಲಸ ಆರಂಭಿಸಿ' ಎಂದು ಧೈರ್ಯ ತುಂಬಿದರು. 'ಈಗ 'ರಂಗಶಂಕರ' ಎದ್ದು ನಿಂತಿದ್ದರೆ ಅದಕ್ಕೆ ಮುಖ್ಯ ಕಾರಣ ಎಸ್. ಎಂ. ಕೃಷ್ಣ. ನೀವು ನಂಬುತ್ತೀರಾ ಐದು ವರ್ಷ ಗಳಾದರೂ ಒಂದು ಸಾರಿಯೂ ಬಂದು ಅವರು ನಾಟಕ ನೋಡಿಲ್ಲ. ಅವರ ಜತೆಗೆ ನನ್ನ ಜಗಳ ನಿಂತಿಲ್ಲ' ಎಂದು ಅರುಂಧತಿ ಅದೇ ಮುಗುಳು ನಗೆಯಲ್ಲಿ ಅರ್ಧ ಸಂಭ್ರಮ, ಅರ್ಧ ವಿಷಾದದಲ್ಲಿ ಹೇಳುತ್ತಾರೆ.

ಈಗಿನ 'ರಂಗಶಂಕರ'ಕ್ಕೆ ಆಗಿರುವ ಖರ್ಚು ಮೂರೂವರೆ ಕೋಟಿ ರೂಪಾಯಿ. ಮನೆ ಬಾಡಿಗೆ ಕೊಡಲು ಹಣವಿಲ್ಲದವರು ಕಟ್ಟಿದ ರಂಗಭೂಮಿ ಇದು. ಸರ್ಕಾರ 50 ಲಕ್ಷ ರೂಪಾಯಿ ಕೊಟ್ಟಿದ್ದು ಬಿಟ್ಟರೆ ಬಾಕಿ ಮೊತ್ತವನ್ನು ಹಣ, ವಸ್ತುವಿನ ರೂಪದಲ್ಲಿ ಸಾರ್ವಜನಿಕರು ಕೊಟ್ಟರು. ಅವರು ಕೊಟ್ಟ ಮೊತ್ತ ಕನಿಷ್ಠ ಐದು ರೂಪಾಯಿಯಿಂದ ಗರಿಷ್ಠ 60 ಲಕ್ಷ ರೂಪಾಯಿ ವರೆಗೆ. ಯಾರೋ ಒಬ್ಬರು ವಿದ್ಯುತ್ ದೀಪ ಒದಗಿಸಿದರೆ,

ಇನ್ನೊಬ್ಬರು ಹವಾನಿಯಂತ್ರಣ ವ್ಯವಸ್ಥೆ ಮಾಡಿದರು. ಮತ್ತೊಬ್ಬರು ಬಣ್ಣ ಬಳಿಸಿದರು. ಇನ್ನೊಬ್ಬರು ಆಸನ ಹಾಕಿಸಿಕೊಟ್ಟರು. 'ಸರ್ಕಾರ ಮತ್ತು ಸಾರ್ವಜನಿಕ ಸಹಯೋಗದಲ್ಲಿ ಕಟ್ಟಿದ ವಿಶ್ವದ ಮೊದಲ ರಂಗಭೂಮಿ ಇದು. ಇದು ಜನರ ಆಸ್ತಿ, ಅದಕ್ಕೇ ಈ ರಂಗಮಂದಿರಕ್ಕೆ ಬಾಗಿಲೇ ಇಲ್ಲ. ಜರ್ಮನಿಗೆ ನಾನು ಹೋಗಿದ್ದಾಗ, ಬಾಗಿಲು ಇಲ್ಲದ ರಂಗಭೂಮಿ ಕಟ್ಟಿದ ಮಹಿಳೆ ಈಕೆ ಎಂದು ನನ್ನನ್ನು ಪರಿಚಯಿಸಿದರು' ಎಂದು ಅರುಂಧತಿ ಬೀಗುತ್ತಾರೆ.

ಧ್ವನಿವರ್ಧಕಗಳೇ ಇಲ್ಲದ, ಯಾರಿಗೂ ಪ್ರತ್ಯೇಕ ಆಸನ ಇಲ್ಲದ ಈ ರಂಗ ಮಂದಿರವನ್ನು ಎಂ.ಎಸ್.ಸತ್ಯು ಮಾರ್ಗದರ್ಶನದಲ್ಲಿ ನಿರ್ಮಿಸಿದವರು ಶಾರುಖ್ ಮಿಸ್ತ್ರಿ. 2000ನೇ ಇಸವಿಯಲ್ಲಿ ರಂಗಮಂದಿರ ಸಿದ್ಧವಾದಾಗ 45 ದಿನಗಳ ಭರ್ಜರಿ ನಾಟಕೋತ್ಸವ ನಡೆಯಿತು. ಆಗಿನಿಂದ ಈ ರಂಗಭೂಮಿಯ ಮೇಲೆ ತೆರೆ ಬಿದ್ದುದೇ ಇಲ್ಲ. ಇದೇ 5 ರಿಂದ 15ರ ವರೆಗೆ 'ಕಾಮೆಡಿ ಜಾತ್ರೆ' ನಡೆಯುತ್ತಿದೆ. 'ರಂಗಶಂಕರ'ದ ಆವರಣದಲ್ಲಿ ಸುರೇಂದ್ರ, ಸಾರಿಕಾ, ಮಲ್ನಾಡ್, ಅನೇಕ ಹುಡುಗ, ಹುಡುಗಿಯರು ಏನೋ ಭಾರಿ ಕೆಲಸ ಮಾಡುತ್ತೇವೆ ಎನ್ನುವ ಹಾಗೆ ಸಂಭ್ರಮದಿಂದ ಕೈಯಲ್ಲಿ ಫಲಕಗಳನ್ನು ಹಿಡಿದು ಗೋಡೆಗೆ ಅಂಟಿಸುವ, ಚಿತ್ರಗಳನ್ನು ಬಿಡಿಸುವ ತರದೂದನ್ನು ಬಂದೇ ನೋಡಬೇಕು. ಅದೇ 'ರಂಗಶಂಕರ'ದ ವಿಶೇಷ. ಇಲ್ಲಿ ಅರುಂಧತಿ ಸೇರಿದಂತೆ ಎಲ್ಲರೂ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಾರೆ. 'ರಂಗಶಂಕರ'ಕ್ಕೆ ಬರುವ ದುಡ್ಡು ಯಾರ ಜೇಬಿಗೂ ಹೋಗುವುದಿಲ್ಲ. ಮ್ಯಾನೇಜರ್ ಜಗದೀಶ್ ಮಲ್ನಾಡ್ ತಮ್ಮ ಮನೆಯಲ್ಲಿಯೇ ಫಿನಾಯಿಲ್ ಮಾಡಿಕೊಂಡು ತಂದು ಸ್ವಚ್ಛ ಮಾಡಲು ಕೊಡುತ್ತಾರೆ! 'ರಂಗಶಂಕರ'ದಲ್ಲಿ ನಾಟಕ ಆಡುವ ತಂಡ 2,500 ರೂಪಾಯಿ ಶುಲ್ಕ ಕೊಡಬೇಕು. ಆ ದುಡ್ಡು ನೇರವಾಗಿ ವಿದ್ಯುತ್ ಬಿಲ್‌ಗೆ ಹೋಗುತ್ತದೆ. ಏಳು ಜನ ಸಿಬ್ಬಂದಿ ಇದ್ದಾರೆ. ಅವರಿಗೆ ಸಂಬಳ ಪ್ರಾಯೋಜಕರಿಂದ. ಇದುವರೆಗೆ ಇದ್ದ ಪ್ರಾಯೋಜಕರು 'ಆಗದು' ಎಂದು ಕೈ ಎತ್ತಿದ್ದಾರೆ. ಈಗ ಬಯೋಕಾನ್, ಇನ್ಫೋಸಿಸ್ ಪ್ರತಿಷ್ಠಾನ, ಟೈಟನ್ ತನಿಷ್ಕ ಮುಂದೆ ಬಂದಿವೆ.

'ರಂಗಶಂಕರ ನಿರ್ಮಾಣವಾದಾಗ ಪ್ರತಿನಿತ್ಯ ನಾಟಕ ನಡೆಯಬೇಕು ಎಂದು ಕೊಂಡಿದ್ದವು. ನಾಟಕ ಇಲ್ಲದಿದ್ದರೆ ನಾನೇ ರಂಗದ ಮೇಲೆ ನಿಂತು ಮಾತನಾಡುವೆ ಎಂದು ಹೆದರಿಸಿದ್ದೆ. ಆ ಕಷ್ಟವೇನೂ ಬರಲಿಲ್ಲ! ನಾಟಕದ ಜತೆಗೆ 'ರಂಗಶಂಕರ'ದಲ್ಲಿ, ಆವರಣದಲ್ಲಿ ದೊಡ್ಡ, ದೊಡ್ಡ ಚರ್ಚೆ ನಡೆಯಬೇಕು ಎಂಬ ಆಸೆ ಇದೆ. ಮುಂದೆ ಅದೂ ಸಾಧ್ಯವಾದೀತು. ಮಗುವಿನ ಹಾಗೆ 'ರಂಗಶಂಕರ'ವನ್ನು ಪಾಲಿಸಿದ್ದೇನೆ. ಪೋಷಿಸಿದ್ದೇನೆ. ಈಗ ನಾನು ಇಲ್ಲದಿದ್ದರೂ ಇಲ್ಲಿ ನಾಟಕ ನಡೆಯುತ್ತದೆ. ಅದಕ್ಕಿಂತ ಹೆಚ್ಚಿಗೆ ಏನು ಬೇಕು' ಎನ್ನುತ್ತಾರೆ ಅರುಂಧತಿ.

'ರಂಗಶಂಕರ'ದಲ್ಲಿ ಸಾಧ್ಯವಾದುದು ರವೀಂದ್ರ ಕಲಾಕ್ಷೇತ್ರದಲ್ಲಿ ಏಕೆ ಸಾಧ್ಯವಿಲ್ಲ? ಯಾರಾದರೂ ತಲೆ ಕೆಡಿಸಿಕೊಳ್ಳುತ್ತಾರೆಯೇ?

■

# ಕಮಲದ ಸುತ್ತಮುತ್ತ ಮುಳ್ಳು ಕಂಟಿಗಳು

ಒಂದು ಕಾಲ ಹೇಗಿತ್ತು ಎಂದರೆ ಇಂದಿರಾ ಹೆಸರು ಹೇಳಿಕೊಂಡು ಕತ್ತೆ, ಕುದುರೆಗಳು ಚುನಾವಣೆಗೆ ನಿಂತರೂ ಕರ್ನಾಟಕದಲ್ಲಿ ಗೆದ್ದು ಬಿಡುತ್ತವೆ ಎಂಬ ಭಾವನೆ ಇತ್ತು. ಇಂದಿರಾ ಬೆನ್ನ ಹಿಂದೆ ಕರ್ನಾಟಕ ಹಾಗೆ ಭದ್ರವಾಗಿ ನಿಂತು ಕೊಂಡಿತ್ತು. ಒಟ್ಟು 27, 28 ಲೋಕಸಭಾ ಸೀಟುಗಳಲ್ಲಿ ಒಂದು ಸೀಟು ವಿರೋಧ ಪಕ್ಷಗಳಿಗೆ ಸಿಕ್ಕರೆ ಅದೇ ದೊಡ್ಡ ಸಂಭ್ರಮ ಎನ್ನುವಂತೆ ಆಗುತ್ತಿತ್ತು. ಕಾಲ ಬದಲಾಗಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ಸಿಗೆ ನೆಲೆ ಕುಸಿದಿದೆ. ಬಿಜೆಪಿ ಭದ್ರವಾಗಿ ಬೇರು ಬಿಡುತ್ತಿದೆ. ವಿಚಿತ್ರ ನೋಡಿ, ಉತ್ತರದಲ್ಲಿ ಸೋನಿಯಾ, ರಾಹುಲ್ ಮಾಡಿದ ಮೋಡಿ ಕರ್ನಾಟಕದಲ್ಲಿ ಕೆಲಸ ಮಾಡುತ್ತಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಇದು ಸಾಬೀತಾಗಿದೆ. ಆ ಚುನಾವಣೆಯಲ್ಲಿ ತೃತೀಯ ರಂಗಕ್ಕೇ ಜಯ ಎಂದುಕೊಂಡಿದ್ದ ದೇವೇಗೌಡರ 'ಭ್ರಮೆ'ಯೂ ಕಳಚಿದೆ. ಹೀಗೆ 'ನೆಲೆ' ಕಳೆದುಕೊಂಡ ಪಕ್ಷಗಳು ತಪ್ಪು ತಿದ್ದಿಕೊಂಡು ಒಂದಾಗುವುದು, ಮೈತ್ರಿ ಮಾಡಿಕೊಳ್ಳುವುದು ಈ ಕಾಲದಲ್ಲಿ ಅಪರೂಪ. ಅದು ವಿಧಾನ ಪರಿಷತ್ತಿನ ಚುನಾವಣೆ ನೆಪದಲ್ಲಿ ಸಾಧ್ಯವಾಗಿದೆ. ಬಿಜೆಪಿಗೆ ಪರ್ಯಾಯ

ಕಂಡುಕೊಳ್ಳಲು ಕಾಂಗ್ರೆಸ್, ಜೆ.ಡಿ (ಎಸ್) ಚುನಾವಣೆ ಮೈತ್ರಿ ಮಾಡಿಕೊಂಡಿವೆ. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಈ ಎರಡೂ ಪಕ್ಷಗಳ ನಡುವೆ ಚುನಾವಣೆ ಪೂರ್ವ ಮೈತ್ರಿಯಾಗಿದ್ದು ಇದೇ ಮೊದಲು.

ದೊಡ್ಡ ನಿರ್ಧಾರಗಳನ್ನು ಅಷ್ಟು ಸುಲಭವಾಗಿ ತೆಗೆದುಕೊಳ್ಳಲು ಆಗುವುದಿಲ್ಲ. ಕಾಂಗ್ರೆಸ್ ಮತ್ತು ಜೆ.ಡಿ (ಎಸ್) ಎರಡರ ವಿಚಾರದಲ್ಲಿಯೂ ಇದು ಅಷ್ಟು ಸುಲಭದ ನಿರ್ಧಾರವಾಗಿರಲಿಲ್ಲ. ಒಂದು ಅರ್ಥದಲ್ಲಿ ಕಾಂಗ್ರೆಸ್ ಹಾಗೂ ಜೆ.ಡಿ (ಎಸ್) ಪಕ್ಷಗಳೆರಡರ ಮತ ಪಾಯ ಒಂದೇ. ಎರಡೂ ಪಕ್ಷಗಳು ಇಂದಿರಾ ಕಾಲದಿಂದ ಆಜನ್ಮ ಶತ್ರುಗಳು. ಹಾಗೆಂದು ವ್ರತಭಂಗ ಆಗಿರಲಿಲ್ಲ ಎಂದೇನೂ ಅಲ್ಲ. ದೇವೇಗೌಡರು ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಸಮಾನ ದೂರ ಕಾಯ್ದುಕೊಳ್ಳುವ ಪಣವನ್ನು ಬೇಕಷ್ಟು ಸಲ ತೊಟ್ಟರೂ ಒಂದು ಸಾರಿ ಧರ್ಮಸಿಂಗ್ ಜತೆಗೆ ಸರ್ಕಾರ ಮಾಡಿದಾಗ ಅವರೇ ಆ ಪಣ ಮುರಿದರೆ ಇನ್ನೊಂದು ಸಾರಿ ಅವರಿಗೆ ಗೊತ್ತಾಗ ದಂತೆ(?) ಅವರ ಮಗ ಕುಮಾರಸ್ವಾಮಿ ಈ ವ್ರತ ಮುರಿದು ಬಿಜೆಪಿ ಜತೆ ಸರ್ಕಾರ ಮಾಡಿದ್ದರು. ಈಗ ರಾಜ್ಯದಲ್ಲಿ ಬಿಜೆಪಿ ಏಕಾಂಗಿಯಾಗಿ ಅಧಿಕಾರಕ್ಕೆ ಬಂದ ನಂತರ ಈ ಎರಡೂ 'ಜಾತ್ಯತೀತ' ಪಕ್ಷಗಳು ಕಳೆದ ಹಲವು ಚುನಾವಣೆಗಳಲ್ಲಿ, ಅವು ದೊಡ್ಡದು ಅಥವಾ ಚಿಕ್ಕದು ಎಂಬುದು ಅಮುಖ್ಯ, ಕಲಿತ ಪಾಠ ಎಂದರೆ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಕೂಡಿಯೇ ಹೋಗಬೇಕು, ಇಲ್ಲವಾದರೆ ಅದು ಬಿಜೆಪಿಗೇ ಅನುಕೂಲ ಎಂಬುದು.

ಇನ್ನೂ ವಿಚಿತ್ರ ನೋಡಿ 2008ರ ವಿಧಾನಸಭೆ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಪಡೆದುದು ಶೇ. 33.86 ಮತ. ಕಾಂಗ್ರೆಸ್ಸಿಗೆ ಬಂದ ಮತ ಪ್ರಮಾಣ ಶೇ 34.59! ಜೆ.ಡಿ (ಎಸ್)ಗೆ ಬಿದ್ದ ಮತಗಳು ಶೇ 19.13. 2004ರ ವಿಧಾನಸಭೆ ಚುನಾವಣೆಯಲ್ಲಿ ಕ್ರಮವಾಗಿ ಈ ಮತ ಪ್ರಮಾಣ ಶೇ 28.49, ಶೇ 35.28 ಮತ್ತು ಶೇ 20.59. 2009ರ ಲೋಕಸಭಾ ಚುನಾವಣೆಯಲ್ಲಿ ಇದು ಸ್ವಲ್ಪ ವ್ಯತ್ಯಾಸವಾಗಿ ಬಿಜೆಪಿಗೆ ಭಾರಿ ಮೇಲುಗೈ ತಂದುಕೊಟ್ಟಿತು. ಆ ಚುನಾವಣೆಯಲ್ಲಿನ ಮತ ಪ್ರಮಾಣ: ಕ್ರಮವಾಗಿ ಶೇ 41, ಶೇ 38 ಮತ್ತು ಶೇ 14. ಕಾಂಗ್ರೆಸ್ಸಿನ ಮತಪಾಯ ಹೆಚ್ಚಾದರೂ ಸೀಟುಗಳಲ್ಲಿ ಅದು ಫಲಿತವಾಗಲಿಲ್ಲ. ಏಕಾಂಗಿಯಾಗಿ ಅಧಿಕಾರ ಹಿಡಿಯುವುದು ಕಷ್ಟ ಎಂದು ಕಾಂಗ್ರೆಸ್ಸಿಗೆ ಅನಿಸಿದ್ದೇ ಆಗ. ಜೆ.ಡಿ (ಎಸ್) ಇದ್ದುದರಲ್ಲಿ ಮರ್ಯಾದೆ ಉಳಿಸಿಕೊಂಡಿದೆ. 'ಅದು ಮರ್ಯಾದೆ ಉಳಿಸಿಕೊಳ್ಳುತ್ತಿರುವುದು ತನ್ನ ಕಾರಣದಿಂದ (ಮತಗಳಿಂದ). ಒಂದೋ ಆ ಪಕ್ಷವನ್ನು ಮುಗಿಸಬೇಕು ಇಲ್ಲವೇ ಅದರ ಜತೆಗೆ ಮೈತ್ರಿ ಮಾಡಿಕೊಳ್ಳಬೇಕು' ಎಂಬ ಎರಡು ಆಯ್ಕೆಗಳಲ್ಲಿ ಕಾಂಗ್ರೆಸ್ ನಾಯಕರು ಎರಡನೆಯದನ್ನು ಆಯ್ಕೆ ಮಾಡಿಕೊಂಡಿದ್ದಾರೆ!

ಉಪಚುನಾವಣೆಗಳಲ್ಲಿನ ಮುಖಭಂಗದ ಬಗ್ಗೆ ರಾಜ್ಯದ ಕಾಂಗ್ರೆಸ್ ನಾಯಕರಿಗಿಂತ ಕೇಂದ್ರ ನಾಯಕರೇ ಹೆಚ್ಚು ತಲೆ ಕೆಡಿಸಿಕೊಂಡಂತೆ ಕಾಣುತ್ತದೆ. ಇಲ್ಲವಾದರೆ ರಾಜ್ಯದ ನಾಯಕರನ್ನೆಲ್ಲ ಬದಿಗೆ ತಳ್ಳಿ ಕೇಂದ್ರ ನಾಯಕತ್ವ ಈಗಿನ ಮೈತ್ರಿ ನಿರ್ಧಾರ ತೆಗೆದುಕೊಳ್ಳುತ್ತಿರಲಿಲ್ಲ. ಈಗಿನ ಮೈತ್ರಿಯ ಸೂತ್ರಧಾರ ಆಸ್ಕರ್ ಫರ್ನಾಂಡಿಸ್ ಎಂಬ ಮಾತು ಇದೆ. ಸೋನಿಯಾ ಅವರ ಬಳಿ ಆಸ್ಕರ್ ಮಾತೇ ಹೆಚ್ಚು ನಡೆಯುವುದೂ

ಇದಕ್ಕೆ ಕಾರಣ ಇರಬೇಕು. ಕಾಂಗ್ರೆಸ್ ಪಕ್ಷದಲ್ಲಿ ವಿಚಿತ್ರ ಸ್ಥಿತಿ ಇದೆ. ರಾಜ್ಯ ಮಟ್ಟದಲ್ಲಿ ಪಕ್ಷದ ಸೂತ್ರವೆಲ್ಲ ವಲಸೆ ಬಂದ ನಾಯಕರ ಬಳಿ ಇದೆ. ಮೂಲ ಪಕ್ಷದ ನಾಯಕರೆಲ್ಲ ಕೇಂದ್ರ ಮಟ್ಟಕ್ಕೆ ಹೋಗಿದ್ದಾರೆ. ಕೇಂದ್ರ ಮಟ್ಟದಲ್ಲಿನ ಕೃಷ್ಣ, ಖರ್ಗೆ, ಧರ್ಮಸಿಂಗ್, ಆಸ್ಕರ್, ಮೊಯಿಲಿ, ಹರಿಪ್ರಸಾದ್ ಮುಂತಾದ ನಾಯಕರಿಗೆ ಪಕ್ಷದ ಆಗುಹೋಗುಗಳ ಬಗ್ಗೆ ಇರುವ ಕಾಳಜಿ ರಾಜ್ಯ ಮಟ್ಟದ ನಾಯಕರಲ್ಲಿ ಇಲ್ಲ ಎಂಬ ಅಭಿಪ್ರಾಯ ಹೈಕಮಾಂಡ್ ಕಿವಿ ಮುಟ್ಟಿದ್ದರಿಂದಲೇ ವಲಸೆ ಬಂದ ನಾಯಕರನ್ನು ಹೊರಗಿಟ್ಟು ಈ ಒಪ್ಪಂದ ಮಾಡಿಕೊಳ್ಳಲಾಯಿತು ಎಂಬ ಮಾತೂ ದೆಹಲಿ ಮಟ್ಟದಲ್ಲಿ ಜನಜನಿತವಾಗಿದೆ. ಜೆ.ಡಿ (ಎಸ್) ಜತೆಗೆ ಒಪ್ಪಂದ ಮಾಡಿಕೊಂಡರೆ 50:50 ಸೇರಿ 100 ಆಗುತ್ತೇವೆ. ಇಲ್ಲವಾದರೆ 50 ಮಾತ್ರ ಆಗಿ ಉಳಿಯುತ್ತೇವೆ ಎಂಬ ಭೀತಿ ಈ ಒಪ್ಪಂದದ ಹಿಂದೆ ಕೆಲಸ ಮಾಡಿದೆ. ದಕ್ಷಿಣ ಭಾರತದಲ್ಲಿ ಬಿಜೆಪಿ ಇಷ್ಟು ಪ್ರಬಲವಾಗಿ ತಲೆ ಎತ್ತುವುದು, ಅದೂ ಒಂದು ಕಾಲದ ತನ್ನ ಭದ್ರ ಕೋಟೆಯಲ್ಲಿ, ಕಾಂಗ್ರೆಸ್ಸಿಗೆ ಒಲ್ಲದ ವಿಚಾರ.

ಜೆ.ಡಿ (ಎಸ್) ನಾಯಕರು ಒಪ್ಪಲಿ ಬಿಡಲಿ ಅದು ಕಳೆದ ಹಲವು ಚುನಾವಣೆ ಗಳಲ್ಲಿ ರಾಜ್ಯದ ಒಂದು ಭಾಗದ ಅಥವಾ ಸಮುದಾಯದ ಪಕ್ಷ ಎನ್ನುವಂತೆ ಆಗಿದೆ. ಬಿಚ್ಚಿ ಹೇಳಬೇಕು ಎಂದರೆ ಒಕ್ಕಲಿಗರು ಹೆಚ್ಚು ಇರುವ ಭಾಗದ ಪಕ್ಷ ಎನ್ನುವಂತೆ ಆಗಿದೆ. ಈಗ ವಿಧಾನಸಭೆಯಲ್ಲಿ ಇಡೀ ಉತ್ತರ ಕರ್ನಾಟಕದಿಂದ ಜೆ.ಡಿ.(ಎಸ್) ಪ್ರತಿನಿಧಿಸುವ ಕೇವಲ ಆರು ಮಂದಿ ಶಾಸಕರು ಮಾತ್ರ ಇದ್ದಾರೆ. ಅಧಿಕಾರದ ಚುಕ್ಕಾಣಿಯ ಕೀಲಿ ಕೈ ಆಗಿರುವ ಉತ್ತರ ಕರ್ನಾಟಕದಲ್ಲಿ ಅದು ತನ್ನ ನೆಲೆ ಕಂಡು ಕೊಳ್ಳಬೇಕಾದರೆ ಮತ ವಿಭಜನೆ ಆಗದ ಇನ್ನೊಂದು 'ಜಾತ್ಯತೀತ' ಪಕ್ಷದ ಜತೆ ಮೈತ್ರಿ ಅನಿವಾರ್ಯ. ದಕ್ಷಿಣದ ಕರಾವಳಿ ಪ್ರದೇಶದಲ್ಲಿಯೂ ಇದೇ ಸ್ಥಿತಿ. ಬರೀ ಮಂಡ್ಯ, ಹಾಸನ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ನೆಚ್ಚಿಕೊಂಡು ರಾಜ್ಯ ರಾಜಕಾರಣ ಮಾಡಲು ಆಗದು.

ಅಧಿಕಾರಕ್ಕೆ ಬಂದು ಒಂದೂವರೆ ವರ್ಷದಲ್ಲೇ ಭಿನ್ನಮತದ ಬಾಣಲೆಯಲ್ಲಿ ಬೇಯುತ್ತಿರುವ ಬಿಜೆಪಿ ಸರ್ಕಾರ ಬೀಳುವಂತೆ ಮಾಡುವ ಹುನ್ನಾರವೂ ಈ ಮೈತ್ರಿಯ ಹಿಂದೆ ಇದೆ. ಯಡಿಯೂರಪ್ಪ ತಿಳಿದೋ ತಿಳಿಯದೆಯೋ ಪ್ರಬಲ ಲಿಂಗಾಯತ ಸಮುದಾಯವನ್ನು ಮಾತ್ರ ನೆಚ್ಚಿಕೊಂಡು ರಾಜಕಾರಣ ಮಾಡುತ್ತಿರು ವುದು ಉಳಿದ ಎಲ್ಲ ಸಮುದಾಯಗಳ ಮತ ಧ್ರುವೀಕರಣಕ್ಕೆ ಚಾಲನೆ ನೀಡಿದೆ. ಇತರ ಸಮುದಾಯಗಳಲ್ಲಿನ, ಅಧಿಕಾರ ಕಳೆದುಕೊಂಡ, ತಬ್ಬಲಿತನವನ್ನು ನಗದು ಮಾಡಿ ಕೊಂಡು ಮುಂದಿನ ಚುನಾವಣೆಯಲ್ಲಿ ಬಿಜೆಪಿಯನ್ನು ಹಣಿಯುವುದು ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಯೋಜನೆ. ದೇವರಾಜ ಅರಸು ಕಾಲದಲ್ಲಿ ಮಾತ್ರ ಇದೇ ರೀತಿ ಲಿಂಗಾಯತೇತರ ರಾಜಕೀಯ ಧ್ರುವೀಕರಣ ಆಗಿತ್ತು. ಈಗ ಅಂಥದೇ ರಾಜಕಾರಣಕ್ಕೆ ವೇದಿಕೆ ಸಜ್ಜಾಗಿದೆ.

ವಿಧಾನ ಪರಿಷತ್ತಿನ ಚುನಾವಣೆ ಒಂದು ಅನೇರ ಚುನಾವಣೆ. ಇಲ್ಲಿ ಪಕ್ಷ ನಿಷ್ಠೆಗಿಂತ ದುಡ್ಡು ಮತ್ತು ವೈಯಕ್ತಿಕ ಸಂಪರ್ಕ ಮಾತ್ರ ಕೆಲಸ ಮಾಡುತ್ತದೆ. ಈ ಚುನಾವಣೆಯ

ಫಲಿತಾಂಶದಿಂದ ಸರ್ಕಾರದ ಅಸ್ತಿತ್ವದ ಮೇಲೇನೂ ಪರಿಣಾಮ ಆಗುವುದಿಲ್ಲ. ಆದರೆ, ಹಾಲಿ ವಿಧಾನ ಪರಿಷತ್ತಿನಲ್ಲಿ ಸ್ಥಳೀಯ ಸಂಸ್ಥೆ ಕ್ಷೇತ್ರದಿಂದ ಒಂದು ಸ್ಥಾನ ಮಾತ್ರ ಹೊಂದಿದ್ದ ಜೆ.ಡಿ (ಎಸ್)ಗೆ ಆರು ಸೀಟುಗಳು ಸಿಕ್ಕಿವೆ. ಎಷ್ಟು ಸೀಟುಗಳಲ್ಲಿ ಗೆದ್ದರೂ ಆ ಪಕ್ಷಕ್ಕೆ ಲಾಭವೇ. 19 ಸೀಟು ಹೊಂದಿದ್ದ ಕಾಂಗ್ರೆಸ್‌ಗೆ ಬಲ ಕುಸಿಯುವ ಭಯ ಇತ್ತು. ಈಗಲೂ ಅದು ತಾನು ಸ್ಪರ್ಧಿಸಿದ ಎಲ್ಲ ಸೀಟುಗಳಲ್ಲಿ ಗೆಲ್ಲುವ ಭರವಸೆಯಿಲ್ಲ. ಇಂಥ ಚುನಾವಣೆಗಳಲ್ಲಿ ಆಡಳಿತ ಪಕ್ಷದ 'ಸಂಪನ್ಮೂಲ'ದ ಜತೆಗೆ ಪೈಪೋಟಿ ಯಾರಿಗೂ ಸಾಧ್ಯವಾಗುವುದಿಲ್ಲ. ಗಂಟು ಬಿಚ್ಚದ ಕಾಂಗ್ರೆಸ್ ಜಾಯಮಾನಕ್ಕೆ ಅದು ಇನ್ನೂ ಕಷ್ಟ. ಆದರೆ, ಈಚಿನ ಉಪ ಚುನಾವಣೆಗಳಲ್ಲಿ ಸೊನ್ನೆ ಸುತ್ತಿ ಮಾತ್ರ ಗೊತ್ತಿರುವ ಕಾಂಗ್ರೆಸ್ಸಿಗೆ ಇದು ಪ್ರತಿಷ್ಠೆಯ ಪ್ರಶ್ನೆ. ಎಷ್ಟು ಸೀಟುಗಳಲ್ಲಿ ಅದು ಗೆಲ್ಲುತ್ತದೆ ಎಂಬುದು ನಿಜಕ್ಕೂ ಕುತೂಹಲಕಾರಿ.

ಯಡಿಯೂರಪ್ಪ ನಗಲು ಕಲಿಯುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. ಎಲ್ಲರನ್ನೂ ಕೂಡಿಸಿಕೊಂಡು ಹೋಗುವುದನ್ನು ಅವರು ಕಲಿಯದಿದ್ದರೆ ಅವರ ಸರ್ಕಾರಕ್ಕೆ ಇನ್ನು ಖಂಡಿತ ಕಷ್ಟದ ಕಾಲ. ನಿನ್ನೆ ಮೊನ್ನೆಯಷ್ಟೆ ತಮ್ಮನ್ನು ಕಂಸ, ಧುರ್ಯೋಧನ ಎಂದೆಲ್ಲ ಕರೆದ ರೆಡ್ಡಿ ಸೋದರರನ್ನು, ಬಗಲಲ್ಲಿ ಇಟ್ಟುಕೊಂಡು ಯಡಿಯೂರಪ್ಪ ಹೇಗೆ ಆಡಳಿತ ಮಾಡುತ್ತಾರೋ ತಿಳಿಯದು. ರೆಡ್ಡಿ ಸೋದರರೇನೋ ಬಹಿರಂಗವಾಗಿಯೇ ಸೆಡ್ಡು ಹೊಡೆದು ನಿಂತವರು. ಆದರೆ, ಈ ಸರ್ಕಾರದಲ್ಲಿ ಬ್ರೂಟಸ್‌ಗಳೇನೂ ಕಡಿಮೆ ಇಲ್ಲ. ಅವರು ಯಾವಾಗ ಕತ್ತಿಯನ್ನು ಒರೆಯಿಂದ ತೆಗೆದು ಯಡಿಯೂರಪ್ಪ ಅವರ ಬೆನ್ನಿಗೆ ಇರಿಯುತ್ತಾರೋ, ಹೊಟ್ಟೆಗೇ ಇರಿಯುತ್ತಾರೋ ಹೇಳುವುದು ಕಷ್ಟ. ಯಡಿಯೂರಪ್ಪ ಅವರಿಗೆ ಇಂಥ ಸರ್ಕಾರ ವನ್ನು ಸಂಭಾಳಿಸಿಕೊಂಡು ಹೋಗುವುದು ಒಂದು ಸವಾಲಾದರೆ, ಇನ್ನೊಂದು ಸವಾಲು ಎಲ್ಲ ಸಮುದಾಯಗಳ ಜನರನ್ನು ಪ್ರತಿನಿಧಿಸುವ ಸರ್ಕಾರ ಇದು ಎಂದು ಕ್ರಿಯೆಗಳ ಮೂಲಕ ತಿಳಿಸಿಕೊಡುವುದು. ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಹೊಸ್ತಿಲಲ್ಲಿಯೇ ಇದೆ. ಆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ (ಎಸ್) ಕೂಡಿಯೇ ಕಣಕ್ಕೆ ಇಳಿಯುವ ಸಾಧ್ಯತೆ ಇದೆ. ಒಕ್ಕಲಿಗರು ಪ್ರಬಲವಾಗಿರುವ ಬೆಂಗಳೂರಿನಲ್ಲಿ ಫಲಿತಾಂಶ ಏನಾಗುತ್ತದೆ ಎಂದು ಊಹಿಸುವುದು ಕಷ್ಟವೇನೂ ಅಲ್ಲ. ಗೋವಿಂದರಾಜನಗರದಲ್ಲಿ ಅದರ ಕಹಿಯನ್ನು ಬಿಜೆಪಿ ಅನುಭವಿಸಿದೆ. ಬೆಂಗಳೂರು ಪಾಲಿಕೆ ಚುನಾವಣೆ ನಂತರವೇ ರಾಜ್ಯ ರಾಜಕೀಯಕ್ಕೆ ರಂಗು ಏರಲಿದೆ. ರೆಡ್ಡಿ ಸಹೋದರರು ಯಡಿಯೂರಪ್ಪ ಅವರಿಗೆ 'ಕೊಟ್ಟ' ಮೂರು ತಿಂಗಳ ಗಡುವು ಮುಗಿಯುತ್ತದೆ. ಅವರೇ ಸರ್ಕಾರವನ್ನು ಕೆಡುವುತ್ತಾರೋ ಅಥವಾ ಕಾಣದ 'ಕೈ'ಗಳು ಸರ್ಕಾರ ತಾನೇ ತಾನಾಗಿ ಬೀಳುವಂತೆ ಮಾಡುತ್ತಾವೋ?... ತಮ್ಮದೇ ಮಾತಿನಲ್ಲಿ ಈ ಎಲ್ಲ 'ಷಡ್ಯಂತ್ರ'ವನ್ನು ಮೀರಿಯೂ ಯಡಿಯೂರಪ್ಪ ಅಧಿಕಾರವನ್ನು ಉಳಿಸಿ ಕೊಳ್ಳುತ್ತಾರೋ?... ಕಾಲಗರ್ಭದಲ್ಲಿ ಸಾಕಷ್ಟು ಕುತೂಹಲ ಇದೆ.

■

# ಬೆಂಗಳೂರು ಎಂಬ ಸ್ವರ್ಗವನ್ನು ನರಕ ಮಾಡಿದವರು...

ಬೆಂಗಳೂರು ಪಾಲಿಕೆಗೆ ಈಗಲಾದರೂ ಚುನಾವಣೆ ಆಗುತ್ತದೆಯೇ?... 'ಯಡಿಯೂರಪ್ಪನವರ ಮನೆ ದೇವರು ಯಡಿಯೂರು ಸಿದ್ಧಲಿಂಗೇಶ್ವರನ ಆಣೆ; ಚುನಾವಣೆ ಆಗುವುದಿಲ್ಲ' ಎಂದು ಬಿಜೆಪಿಯಿವರೇ ಶಪಥ ಮಾಡುತ್ತಿದ್ದಾರೆ! ರಾಜ್ಯ ಚುನಾವಣಾ ಆಯೋಗ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸಿದೆ. ತನ್ನ ಮುಂದೆ ವಿಚಾರಣೆ ನಡೆಯುತ್ತಿದ್ದಾಗಲೂ ವೇಳಾಪಟ್ಟಿ ಪ್ರಕಟಿಸಿದ್ದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳದ ಹೈಕೋರ್ಟ್ ಚುನಾವಣೆಗೆ ತಾನು ಅಡ್ಡ ಬರುವುದಿಲ್ಲ ಎಂದಿದೆ. ಅದಕ್ಕಿಂತ ಹೆಚ್ಚಾಗಿ ಚುನಾವಣೆ ತಡವಾಗುತ್ತಿರುವುದಕ್ಕೆ ಹತ್ತು ಹಲವು ಬಾರಿ ರಾಜ್ಯ ಸರ್ಕಾರಕ್ಕೆ ಛೀಮಾರಿ ಹಾಕಿದೆ. ಆದರೂ 'ಹೆಸರು ಹೇಳಲು ಬಯಸದ' ಸಚಿವರು ನಾವು ಸುಪ್ರೀಂ ಕೋರ್ಟಿಗೆ ಹೋಗುತ್ತೇವೆ ಎಂದು ಧಮಕಿ ಹಾಕುತ್ತಿದ್ದಾರೆ. ಬಿಜೆಪಿಯವರು ಚುನಾವಣೆ ಆಗುವುದಿಲ್ಲ ಎಂದು ಶಪಥ ಮಾಡುತ್ತಿರುವುದಕ್ಕೆ ಬೆಂಗಳೂರಿನ 'ಹೆಸರು ಹೇಳಲು ಬಯಸದ' ಸಚಿವರ ಹಟವೇ ಕಾರಣ ಎಂಬುದು ಈಗ ರಹಸ್ಯವಾಗಿಯೇನೂ ಉಳಿದಿಲ್ಲ.

ದೇವರಾಜ ಅರಸು, ಗುಂಡೂರಾಯರು ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರು ಪಾಲಿಕೆಗೆ 12 ವರ್ಷ ಚುನಾವಣೆ ನಡೆದಿರಲಿಲ್ಲ. ಅದು ದಾಖಲೆ. ಆ ಕ್ರಮವನ್ನು ಮುರಿದುದು ಯಡಿಯೂರಪ್ಪ ಸರ್ಕಾರ. ಕಳೆದ ಮೂರು ವರ್ಷಗಳಿಂದ ಚುನಾವಣೆ ನಡೆದಿಲ್ಲ. ವಿಪರ್ಯಾಸ ಎಂದರೆ ಅದು ಕಾಂಗ್ರೆಸ್ ಸರ್ಕಾರ, ಇದು ಬಿಜೆಪಿ ಸರ್ಕಾರ. ಅರಸು, ಗುಂಡೂರಾಯರು ಚುನಾವಣೆ ನಡೆಸದೇ ಇದ್ದುದಕ್ಕೆ ಕಾರಣ ಬೆಂಗಳೂರಿನ ಜನ ತಮಗೆ ಮತ ಕೊಡುವುದಿಲ್ಲ ಎಂಬ ಅಳುಕು. ಯಡಿಯೂರಪ್ಪ ಅವರಿಗೆ ಆ ಭಯ ಇರಬೇಕಾಗಿಲ್ಲ. ಆದರೆ, ಅವರ ಸಂಪುಟದ ಇಬ್ಬರು ಸಚಿವರು ಮತ್ತು ಸಭ್ಯ ಮುಖವಾಡದ ಕೆಲವರು ಶಾಸಕರಿಗೆ ಇರುವ 'ಅನ್ಯ ಕಾರಣಗಳು' ಚುನಾವಣೆಗೆ ಅಡ್ಡಿ ಮಾಡುತ್ತಿವೆ. ಅದನ್ನು ಬಿಜೆಪಿ ಮುಖಂಡರೇನೂ ಅಲ್ಲಗಳೆಯುವುದಿಲ್ಲ. ಅದೇ ಕಾರಣಕ್ಕಾಗಿ ಚುನಾವಣೆ ನಡೆಯಲಿಕ್ಕಿಲ್ಲ ಎಂದು ಶಪಥ ಮಾಡುತ್ತಾರೆ!

ಗುಂಡೂರಾಯರ ಸರ್ಕಾರ ಅಧಿಕಾರ ಕಳೆದುಕೊಂಡು ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾದ ತಕ್ಷಣ ಬೆಂಗಳೂರು ಪಾಲಿಕೆಗೆ ಚುನಾವಣೆ ನಡೆದಿತ್ತು. ಹೆಗಡೆಯವರು ನಗರ ಪ್ರದಕ್ಷಿಣೆ ಮಾಡಿದರು. ಆಗ ತಾನೇ ವೃತ್ತಿಗೆ ಸೇರಿದ್ದ ನಾನು ವರದಿ ಮಾಡಲು ಹೋಗಿದ್ದೆ. ಪ್ರದಕ್ಷಿಣೆ ನಂತರ ಹೆಗಡೆಯವರು ಪಾಲಿಕೆ, ಜಲ ಮಂಡಳಿ, ದೂರಸಂಪರ್ಕ ಇಲಾಖೆ, ಬಿ.ಡಿ.ಎ ನಡುವೆ ಒಂದು ಸಮನ್ವಯ ಸಮಿತಿ ರಚನೆ ಮಾಡಿ ಎಂದು ಆಗಿನ ಆಯುಕ್ತರಿಗೆ ಸಲಹೆ ಮಾಡಿದರು. ಅದಾಗಿ 26, 27 ವರ್ಷಗಳೇ ಕಳೆದು ಹೋಗಿವೆ. ಭರತ್‌ಲಾಲ್ ಮೀನಾ ಮೊನ್ನೆ ಮೊನ್ನೆ ಆಯುಕ್ತರಾದ ನಂತರ ಸಿಕ್ಕಿದ್ದರು. ಹೆಗಡೆ ಮಾತು ನೆನಪಿಸಿ ಅಂಥ ಒಂದು ಸಮನ್ವಯ ಸಮಿತಿ ಇದೆಯೇ ಎಂದು ಕೇಳಿದೆ. 'ಇಲ್ಲ' ಎಂದರು. ಇದ್ದಿದ್ದರೆ ಪಾಲಿಕೆಯವರು ರಸ್ತೆ ಮಾಡಿದ ಮರುದಿನವೇ ಜಲಮಂಡಳಿಯವರು ಒಂದು ರಸ್ತೆ ಅಗೆದು ಕೊಳವೆ ಹಾಕುತ್ತಿರಲಿಲ್ಲ ಎನಿಸಿತು.

ದೇಶದ ಯಾವುದೇ ನಗರಕ್ಕೆ ನೀವು ಹೋಗಿ, 'ಬೆಂಗಳೂರು ಒಂದು ಸರ್ಗ' ಎಂದು ಹೇಳುವ ಜನ ಇದ್ದಾರೆ. ಬೆಂಗಳೂರಿನ ಜನರಲ್ಲಿ ಈ ಅಭಿಪ್ರಾಯ ಉಳಿದಿಲ್ಲ. ಒಂದು ಕಡೆ ಊರು ಅಡ್ಡಾದಿಡ್ಡಿಯಾಗಿ ಬೆಳೆಯುತ್ತಿದೆ, ಇನ್ನೊಂದು ಕಡೆ ಮೂಲ ಸೌಕರ್ಯಗಳು ಕಡಿಮೆ ಆಗುತ್ತಿವೆ. ಶನಿವಾರ, ಭಾನುವಾರ ಸಂಜೆ ಕಳೆಯಲು ಎಂ.ಜಿ.ರಸ್ತೆಗೆ ದಂಡು ದಂಡಾಗಿ, ಕಳೆ ಕಳೆಯಾಗಿ ಬರುತ್ತಿದ್ದ ಹುಡುಗಿಯರು ಈಗ ಈ ಕಡೆಗೆ ತಲೆ ಹಾಕುವುದೇ ಇಲ್ಲ. ಮೆಟ್ರೋ ರೈಲಿನ ಕಾಮಗಾರಿ ಇಡೀ ರಸ್ತೆಯನ್ನು ಒಂದು ರಣರಂಗದಂತೆ ಹಾಳು ಮಾಡಿದೆ. ಆರ್.ವಿ.ರಸ್ತೆ ಒಂದು ಕಾಲದಲ್ಲಿ ವಾಯು ವಿಹಾರಕ್ಕೆ ಹೋಗುವವರ ಸ್ವರ್ಗದಂತೆ ಇತ್ತು. ಲಕ್ಷ್ಮಣರಾಯರು ರಸ್ತೆಯ ಎರಡೂ ಬದಿ ಬೆಳೆಸಿದ್ದ ದೊಡ್ಡ ದೊಡ್ಡ ಮರಗಳು ರಸ್ತೆಗೆ ಮಾತ್ರವಲ್ಲ, ಪಾರ್ಕಿನ ಉದ್ದಗಲಕ್ಕೂ ಚಾಚಿಕೊಂಡು ಜನರಿಗೆ ನೆರಳು, ಪಕ್ಷಿಗಳಿಗೆ ಆಸರೆ ನೀಡಿದ್ದುವು. ಮತ್ತೆ ಮೆಟ್ರೋದವರು ಅಲ್ಲಿ ಕಾಲು ಇಟ್ಟರು. ಒಂದು ನಿಲ್ದಾಣ ಮಾಡುವ ಬದಲು ಮೂರು ನಿಲ್ದಾಣ ಮಾಡುತ್ತೇವೆ ಎಂದು ಹಟ ಹಿಡಿದು ಉದ್ಯಾನವನ್ನೂ ಬಗೆದುಬಿಟ್ಟರು.

ಲಾಲ್‌ಬಾಗ್‌ನ ಒಂದು ಬದಿ ಕೂಡ ಅವರ ವಿಕೃತಿಯನ್ನು ತಣಿಸಲಿಲ್ಲ. ಈಗ ಈ ರಸ್ತೆ ಅಫ್ಘಾನಿಸ್ತಾನದ ಯುದ್ಧ ಭೂಮಿಯಂತೆ ಕಾಣುತ್ತಿದೆ.

ಅಭಿವೃದ್ಧಿ ಆಗಬೇಕಾದರೆ ಇದೆಲ್ಲ ಆಗುವುದು ಸಹಜ ಎಂದು ವಾದಿಸ ಬಹುದು. ಒಪ್ಪೋಣ. ಕೃಷ್ಣ ಮಾಡಲು ಹೊರಟಿದ್ದ ಮೆಟ್ರೋಕ್ಕೆ ದೇವೇಗೌಡ ಅಡ್ಡಗಾಲು ಹಾಕಿದರು. ನಂತರ ಅವರ ಮಗ ಕುಮಾರಸ್ವಾಮಿಯೇ ಮೆಟ್ರೋಕ್ಕೆ ಚಾಲನೆ ನೀಡಿದರು. 2007ರಲ್ಲಿ ಮುಗಿಯಬೇಕಿದ್ದ ಮೆಟ್ರೊ ಕಾಮಗಾರಿ ಈಗ 2012ರಲ್ಲಿಯೂ ಮುಗಿಯುವ ಹಾಗೆ ಕಾಣದು. ಬೆಂಗಳೂರಿನ ಜನ ಇದನ್ನೆಲ್ಲ ಪ್ರತಿಭಟಿಸುವ ಹಾಗೂ ಕಾಣುವುದಿಲ್ಲ. ಇದು ನಮಗೆ ಸಂಬಂಧಿಸಿದ್ದಲ್ಲ ಎಂದೋ ಅಥವಾ ಇದು ನಮ್ಮ ಹಣೆಬರಹ ಎಂದೋ ಅವರು ಸುಮ್ಮನಿದ್ದಾರೆ. ಆದರೆ, ನಗರ ಯೋಜಕರು ಎಲ್ಲಿ ಇದ್ದಾರೆ? ಅವರು ಏನು ಮಾಡುತ್ತಿದ್ದಾರೆ? ಮುಖ್ಯಮಂತ್ರಿಗಳ ಆಗಿನ ಪ್ರಧಾನ ಕಾರ್ಯದರ್ಶಿ ವಿ. ಪಿ. ಬಳಿಗಾರ್ ಚೀನಾಕ್ಕೆ ಹೋಗಿ ಬಂದ ನಂತರ ಹೇಳುತ್ತಿದ್ದರು. ಅಲ್ಲಿಯದೆಲ್ಲ ಯೋಜಿತ ಬೆಳವಣಿಗೆ ಎಂದು. ಇಲ್ಲಿ ಏಕಿಲ್ಲ ಎಂದರೆ ಪಾಲಿಕೆಗೆ, ಬಿಡಿಎಗೆ, ಜಲಮಂಡಳಿಗೆ ಬರುವ ಅಧಿಕಾರಿಗಳು ತಮ್ಮ ಮನಸೋ ಇಚ್ಛೆ ಯೋಜನೆ ಹಾಕುತ್ತಾರೆ ಎಂದು ಅವರೇ ಉತ್ತರವನ್ನೂ ಕೊಟ್ಟರು. ಅವರ ಮಾತು ನಿಜ. ಸುಬ್ರಹ್ಮಣ್ಯ ಪಾಲಿಕೆಯ ಆಯುಕ್ತರಾಗಿದ್ದಾಗ ರಸ್ತೆಗಳನ್ನು ಅಗೆದು ಎಲಿಮೆಂಟ್ ಹಾಕುವ ಪ್ರಯೋಗ ಮಾಡಿದರು. ಜರೋಂ ಬಿಡಿಎ ಆಯುಕ್ತರಾಗಿದ್ದಾಗ ಫ್ಲೈ ಓವರ್ ಕಟ್ಟೋಣ ಎಂದರು. ಅವರ ನಂತರ ಬಂದ ಶಂಕರಲಿಂಗೇಗೌಡರು, ಫ್ಲೈ ಓವರ್ ಉತ್ತರವಲ್ಲ ಅಂಡರ್ ಪಾಸ್ ಉತ್ತರ ಎಂದರು. ಜೈರಾಜ್ ತಮಗೆ ತೋಚಿದ್ದನ್ನು ಮಾಡಿದರು. ಈಗ ಮೀನಾ ಕೂಡ ಅದನ್ನೇ ಮಾಡುತ್ತಿದ್ದಾರೆ. ಎಲ್ಲರೂ ಬೆಂಗಳೂರನ್ನು ಒಂದು 'ಪ್ರಯೋಗ ಪಶು' ಎಂದುಕೊಂಡಿದ್ದಾರೆ. ಕಾಲೇಜಿನಲ್ಲಿ ವಿದ್ಯಾರ್ಥಿಗಳು ಕಪ್ಪೆಯನ್ನು ನಿರ್ದಾಕ್ಷಿಣ್ಯವಾಗಿ ಕುಯ್ದ ಹಾಗೆ ಬೆಂಗಳೂರನ್ನು ಎಲ್ಲ ಅಧಿಕಾರಿಗಳು ತಮ್ಮ ಮನಸ್ಸಿಗೆ ತೋಚಿದಂತೆ ಕುಯ್ಯುತ್ತಿದ್ದಾರೆ. ಸುಬ್ರಹ್ಮಣ್ಯ ಆಯುಕ್ತರಾಗಿದ್ದಾಗ ಜೆ.ಪಿ.ನಗರದ ಜೋಡಿ ರಸ್ತೆಯಲ್ಲಿ ಅಂಡರ್‌ಪಾಸ್ ಕಾಮಗಾರಿ ಶುರು ಮಾಡಿದರು. ಅದಕ್ಕಿಂತ ಮುಂಚೆ ಅದೇ ರಸ್ತೆಯಲ್ಲಿ ಪದ್ಮನಾಭನಗರಕ್ಕೆ ಹೋಗುವ ರಸ್ತೆಯಲ್ಲಿ ಇಂಥದೇ ಕಾಮಗಾರಿ ಆರಂಭವಾಗಿ ಇನ್ನೂ ಮುಗಿದಿಲ್ಲ ಎಂಬುದನ್ನು ಅವರು ಗಮನಿಸಲಿಲ್ಲ. ಜೆ.ಪಿ.ನಗರದ ಅಂಡರ್‌ಪಾಸ್ ಕಾಮಗಾರಿ ಮುಗಿದಿಲ್ಲ ಎಂದು ಗೊತ್ತಿದ್ದೂ ಮೀನಾ ಬಸವನಗುಡಿ ಬಳಿ ಕೆ.ಆರ್.ರಸ್ತೆಯನ್ನು ಅಗೆಯಲು ಆರಂಭಿಸಿದರು.

'ಊರು ಅಭಿವೃದ್ಧಿಯಾಗಬೇಕು, ರಸ್ತೆಗಳು ತಡೆರಹಿತವಾಗಬೇಕು ಎನ್ನುವುದಾದರೆ ಇದನ್ನೆಲ್ಲ ಸಹಿಸಬೇಕು'. ಸಹಿಸೋಣ. ಪಾದಚಾರಿ ರಸ್ತೆಯಲ್ಲಿ ಹಾಕಿದ್ದ ಚಪ್ಪಡಿ ಕಲ್ಲು ತೆಗೆದು, ಸಿಮೆಂಟ್ ಬ್ಲಾಕ್ ಹಾಕುವುದು ಏಕೆ? ಹಾಕುವುದೇ ಆದರೆ, ಆ ಚಪ್ಪಡಿ ಕಲ್ಲು ಎಲಿ ಹೋಗುತ್ತವೆ? ರಸ್ತೆ ಮಧ್ಯದಲ್ಲಿ ಹಾಕಿದ್ದ ಚಿಕ್ಕ ಮೀಡಿಯನ್‌ಗಳನ್ನು ತೆಗೆದು ಎತ್ತರದ ಮೀಡಿಯನ್ ಹಾಕುವುದು ಏಕೆ? ಚಿಕ್ಕ ಮೀಡಿಯನ್‌ಗಳು ಎಲ್ಲಿ ಹೋಗುತ್ತವೆ? ಮೊದಲೇ ಎತ್ತರದ ಮೀಡಿಯನ್ ಹಾಕಬಹುದಿತ್ತಲ್ಲ? ಮೋರಿ

ರಿಪೇರಿ ಕೆಲಸ ಎಷ್ಟು ಸಾರಿ ಮಾಡುತ್ತೀರಿ? ಮೋರಿಗಳಿಂದ ತೆಗೆದ ರಾಡಿ ಮಣ್ಣು ರಸ್ತೆ ಬದಿಯಲ್ಲಿಯೇ ಏಕೆ ಬಿಟ್ಟು ಹೋಗುತ್ತೀರಿ? ಮತ್ತೆ ಅದು ಮೋರಿ ತುಂಬಿಕೊಳ್ಳಲಿ ಎಂದೇ? ರಸ್ತೆ ಅಗಲ ಮಾಡುವಾಗ ಎಷ್ಟೊಂದು ಮರ ಕತ್ತರಿಸಿ ಹಾಕಿದಿರಿ. ಪಾಲಿಕೆ ವತಿಯಿಂದ ಎಂದಾದರೂ ಗಿಡ ನೆಡುವ ಕಾರ್ಯಕ್ರಮ ಹಾಕಿಕೊಂಡಿದ್ದೀರಾ? ಬೆಂಗಳೂರು ಉದ್ಯಾನನಗರಿ ನಿಜ. ಲಾಲ್‌ಬಾಗ್, ಕಬ್ಬನ್‌ಪಾರ್ಕ್ ಜತೆಗೆ ಒಬ್ಬ ಮೇಯರ್‌ರಿಂದಾಗಿ ಹಲವು ಕಡೆ ಒಳ್ಳೆಯ ಉದ್ಯಾನಗಳೂ ತಲೆ ಎತ್ತಿವೆ. ಆದರೆ ರಸ್ತೆಗಳ ಆಜೂಬಾಜು ಇದ್ದ ಗಿಡಗಳು ಮಾಯ ವಾದುವಲ್ಲ? ಬೆಂಗಳೂರು ಫೆಬ್ರುವರಿ ತಿಂಗಳಲ್ಲೇ ಚೆನ್ನೈ ಹಾಗೆ ಏಕೆ ಹೊತ್ತಿ ಉರಿಯುತ್ತದೆ?

ಬಿಜೆಪಿಯವರನ್ನೇ ಕೇಳಿದರೆ ಬೆಂಗಳೂರಿಗೆ ಈ ಸರ್ಕಾರ ಕೊಟ್ಟಷ್ಟು ದುಡ್ಡನ್ನು ಬೇರೆ ಯಾವ ಸರ್ಕಾರವೂ ಕೊಟ್ಟಿಲ್ಲ ಎನ್ನುತ್ತಾರೆ. ಆ ದುಡ್ಡು ಎಲ್ಲಿ ಹೋಯಿತು? ರಸ್ತೆಗಳೇನೂ ಹೇಮಾಮಾಲಿನಿ ಕೆನ್ನೆಯ ಹಾಗೆ ಇಲ್ಲವಲ್ಲ? ಮಳೆ ಬಂದಾಗ ಊರು ಮುಳುಗುವುದೂ ನಿಂತಿಲ್ಲವಲ್ಲ? ಪಾಲಿಕೆಗೆ ಚುನಾವಣೆ ನಡೆಯಲಿಕ್ಕಿಲ್ಲ ಎಂಬ ಬಿಜೆಪಿಯವರ ಅನುಮಾನಕ್ಕೆ, ಸರ್ಕಾರ ಕೊಟ್ಟ ದುಡ್ಡು 'ಸಚಿವರ ಜೇಬಿಗೆ ಹೋಗಲಿ' ಎಂಬ ಕಾರಣವೇ ಇದ್ದಂತಿದೆ. ಹಾಗೆ ಇಲ್ಲದಿದ್ದರೆ ಬೆಂಗಳೂರಿನ ಪಾಲಿಕೆಯಲ್ಲಿ ಒಬ್ಬ ಕಾರ್ಪೊರೇಟರ್ ಆಗಿ ರಾಜಕಾರಣ ಆರಂಭಿಸಿದ, ಬೆಂಗಳೂರಿನ ಬಗ್ಗೆ ನಿಜ ವಾಗಿಯೂ ಕಾಳಜಿಯುಳ್ಳ ಸಚಿವ ಸುರೇಶ್‌ಕುಮಾರ್ ಅವರನ್ನು ಪಾಲಿಕೆ ವಾರ್ಡ್ ಮೀಸಲಾತಿ / ಸಮಿತಿಯಿಂದ ಸರ್ಕಾರ ಹೊರಗೆ ಇಡುತ್ತಿರಲಿಲ್ಲ. ಅಬೈಡ್ (ಅಜೆಂಡಾ ಫಾರ್ ಬೆಂಗಳೂರು ಇನ್‌ಫ್ರಾಸ್ಟ್ರಕ್ಚರ್ ಅಂಡ್ ಡೆವಲಪ್‌ಮೆಂಟ್ ಟಾಸ್ಕ್ ಫೋರ್ಸ್)ಗೆ ಅವರನ್ನು ನೇಮಕ ಮಾಡಲು ಮರೆಯುತ್ತಿರಲಿಲ್ಲ. ಅಕ್ರಮ-ಸಕ್ರಮ ಸಂಪುಟ ಸಮಿತಿಯಿಂದ ಅವರನ್ನು ಕೈ ಬಿಡುತ್ತಿರಲಿಲ್ಲ!

ಪಾಲಿಕೆಗೆ ಚುನಾವಣೆ ಆದರೆ ಕಾರ್ಪೊರೇಟರ್‌ಗಳ ಅಧಿಕಾರ ಬರುತ್ತದೆ. ಅವರು ತಮ್ಮ ಮಾತು ಕೇಳುವುದಿಲ್ಲ ಎಂಬ ಚಿಂತೆ ಬೆಂಗಳೂರು ನಗರವನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿರುವ ಸಚಿವ ಸಾಮ್ರಾಟರನ್ನು ಕಾಡುತ್ತಿದೆ. ಅದಕ್ಕೇ ಅವರು ಚುನಾವಣೆ ಹೇಗೆ ಆಗುತ್ತದೆ ನೋಡಿಯೇ ಬಿಡುತ್ತೇವೆ ಎಂದು ಹಟ ಹಿಡಿದಿದ್ದಾರೆ. ಚುನಾವಣೆಗೆ ಒಂದಾದ ಮೇಲೆ ಒಂದರಂತೆ ಅಡ್ಡ ಪೇಚುಗಳನ್ನು ಹಾಕುತ್ತಿದ್ದಾರೆ. ಕಾರ್ಪೊರೇಟರ್‌ಗಳ ಅಧಿಕಾರಕ್ಕೆ ಕಡಿವಾಣ ಹಾಕಲು ವಾರ್ಡು ಗಳನ್ನು ಎಷ್ಟು ಚಿಕ್ಕದು ಮಾಡಬೇಕೋ ಅಷ್ಟು ಚಿಕ್ಕದು ಮಾಡಿದ್ದಾರೆ. ಇಷ್ಟಾಗಿಯೂ ಚುನಾವಣೆ ನಡೆದೇ ಬಿಡುತ್ತದೆ ಎಂದುಕೊಳ್ಳೋಣ. ಕಣಕ್ಕೆ ಇಳಿಯಲು ತೆರೆಯ ಹಿಂದೆ ನಿಂತವರಿಗೇನೂ ಬೆಂಗಳೂರು ಅಭಿವೃದ್ಧಿ ಬೇಕಾದಂತೆ ಕಾಣುವುದಿಲ್ಲ. ಅವರೆಲ್ಲ ಈಗಾಗಲೇ ಗುದ್ದಲಿ, ಹಾರೆ ಹಿಡಿದುಕೊಂಡು ಫೋಟೊ ತೆಗೆಸಿ ಪತ್ರಿಕೆಗಳಿಗೆ ಕಳುಹಿಸುತ್ತಿರುವುದನ್ನು ನೋಡಿದರೇ ಗೊತ್ತಾಗುತ್ತದೆ. ಬಹುತೇಕ ಅಭ್ಯರ್ಥಿಗಳು ಭೂ ಒಡೆಯರು (ಕಳ್ಳರು!), ರೌಡಿಗಳು, ಶಾಸಕರ ಬಾಲ ಬಡುಕರೇ ಆಗಿರುತ್ತಾರೆ ಎಂಬುದರಲ್ಲಿ ಅನುಮಾನವೇ ಇಲ್ಲ. ಅವರೇ ಆರಿಸಿ ಬರುವ ಭಯವೂ ಇದೆ.

ಏಕೆಂದರೆ ಬೆಂಗಳೂರಿನ ಶೇ 60ರಷ್ಟು ಜನರು ಮತಗಟ್ಟೆಗೆ ಹೋಗುವುದೇ ಇಲ್ಲ. ಉದ್ಯಾನಗಳಲ್ಲಿ ಕುಳಿತೇ ಉದ್ಯಾನಗರಿಯ ಕಲ್ಯಾಣದ ಹರಿಕಥಾ ಕಲಾಕ್ಷೇಪ ಮಾಡುತ್ತಾರೆ.

ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಬೆಂಗಳೂರು ಎಂಬ ಒಂದು ರಾಜಧಾನಿ ಇದೆ ಎಂದು ತಿಳಿದಂತೆ ಕಾಣುವುದಿಲ್ಲ. ನಿಸರ್ಗ ಕೊಳ್ಳೆ ಹೊಡೆಯುವವರ ಕಾಟ ತಪ್ಪಿಸಿಕೊಳ್ಳುವುದು ಅಥವಾ ಅವರ ರಕ್ಷಣೆ ಮಾಡುವುದು ಎರಡೇ ಅವರ ಅಜೆಂಡಾ ಆದಂತೆ ಕಾಣುತ್ತದೆ. ಕಳೆದ ಹತ್ತು ವರ್ಷಗಳಿಂದ ಬೆಂಗಳೂರಿಗೆ ಒಬ್ಬ ಸಚಿವ ಇಲ್ಲ ಎಂಬುದೂ ಪಟೇಲರ ನಂತರ ಎಲ್ಲ ಮುಖ್ಯಮಂತ್ರಿಗಳಿಗೆ ಮರೆತು ಹೋಗಿದೆ. ಹಾಗಾದರೆ ಬೆಂಗಳೂರು ಜವಾಬ್ದಾರಿಯನ್ನು ಯಾರಿಗೆ ಹೊರಿಸುವುದು?

ರಾಮ ಮನೋಹರ ಲೋಹಿಯಾ, 'ಡೆಲ್ಲಿ ಎಂದೂ ಕರೆಯುವ ದಿಲ್ಲಿ' ಎಂಬ ಲೇಖನದಲ್ಲಿ 'ಪ್ರಪಂಚದ ರಾಜಧಾನಿಗಳಲ್ಲೆಲ್ಲ ಅತ್ಯಂತ ಮೋಹಕಳೂ ಅತ್ಯಂತ ಭ್ರಷ್ಟಳೂ ಆದ ನಾಯಕ ಸಾನಿ ಡೆಲ್ಲಿ. ಯಾವುದೇ ಒಬ್ಬ ಪ್ರಾಮಾಣಿಕ ಪ್ರೇಮಿಗೆ ಈ ತನಕವೂ ಆಕೆ ತನ್ನನ್ನು ಒಪ್ಪಿಸಿಕೊಂಡಿದ್ದಿಲ್ಲ. ಹೆಚ್ಚೂ ಕಡಿಮೆ ಸತತವಾಗಿ ಅನಾಗರಿಕ ಕ್ರೂರಿಗಳಿಂದ ಆಕೆ ದಮನಕ್ಕೆ ಒಳಗಾಗಿದ್ದಾಳೆ' ಎಂದು ವಿಷಾದಿಸುತ್ತಾರೆ. ದೇಶದ ರಾಜಧಾನಿಗಳಲ್ಲೆಲ್ಲ ಅತ್ಯಂತ ಮೋಹಕಳಾದ ಬೆಂಗಳೂರಿಗೆ ಆಗಿರುವ ಗತಿಯೂ ಇದೆ ತಾನೇ?.... ಈ ಸುಕೋಮಲ ನಗರದ ಮೇಲೆ ಅನಾಗರಿಕ ಕ್ರೂರಿಗಳಿಂದ ಆಗುತ್ತಿರುವ ನಿರಂತರ ದೌರ್ಜನ್ಯ ತಡೆಯಲು ಈ ಊರಿನ ಜನ ಏನು ಮಾಡಿದ್ದಾರೆ?

■

# ಅನಂತಮೂರ್ತಿ ಹೇಳಿದ್ದರಲ್ಲಿ ಏನು ತಪ್ಪಿದೆ?

ಅನಂತಮೂರ್ತಿ ಸಜ್ಜನರು. 'ಬೆಂಗಳೂರಿನ ಕನ್ನಡ ವಿಭಾಗ ಅಧೋಗತಿಗೆ ಇಳಿದಿದೆ' ಎಂದು ತಮ್ಮ 77ನೇ ಹುಟ್ಟು ಹಬ್ಬದ ಸಮಾರಂಭದಲ್ಲಿ ಹೇಳಿದ್ದು 'ಮಾತಿನ ಭರದಲ್ಲಿ ಮಾಡಿದ ಟೀಕೆ' ಎಂದು ತಿದ್ದಿಕೊಂಡಿದ್ದಾರೆ. ಬೆಂಗಳೂರು ವಿಶ್ವ ವಿದ್ಯಾಲಯದ ಕುಲಪತಿ ಡಾ. ಪ್ರಭುದೇವ ಕೂಡ ಸೆನ್ಸಿಟಿವ್ ಆಗಿಯೇ ಪ್ರತಿಕ್ರಿಯಿಸಿ ದ್ದಾರೆ. ಅನಂತಮೂರ್ತಿ ಟೀಕೆ ಮಾಡುವುದಕ್ಕಿಂತ ಮುಂಚೆಯೇ ತಾನು ಕನ್ನಡ ವಿಭಾಗವನ್ನು ಸುಧಾರಿಸಲು ಯಾರ್‍ಯಾರಿಗೆ ಮನವಿ ಮಾಡಿಕೊಂಡಿದ್ದೆ ಎಂಬ ಪಟ್ಟಿಯನ್ನೇ ಕೊಟ್ಟಿದ್ದಾರೆ. ಮೂರ್ತಿಯವರ ಟೀಕೆ ಮತ್ತು ಪ್ರಭು ಅವರ ಪ್ರತಿಕ್ರಿಯೆಯ ಸಾಲುಗಳ ನಡುವೆ ಓದಿದಾಗ ಬೆಂಗಳೂರು ಕನ್ನಡ ವಿಭಾಗ ಅಧೋಗತಿಗೆ ಇಳಿದಿದೆ ಎಂಬ ಸತ್ಯ ಢಾಳಾಗಿ ಕಣ್ಣಿಗೆ ಹೊಡೆಯುತ್ತದೆ. ಬರೀ ಬೆಂಗಳೂರು ಕನ್ನಡ ವಿಭಾಗ ಮಾತ್ರ ಅಧೋಗತಿಗೆ ಹೋಗಿಲ್ಲ. ಮೈಸೂರು, ಧಾರವಾಡ, ಮಂಗಳೂರು, ಗುಲ್ಬರ್ಗ, ಶಿವಮೊಗ್ಗ, ಹಂಪಿಯ ಯಾವ ಕನ್ನಡ ವಿಭಾಗವೂ ಈಗ ಊರ್ಧ್ವಮುಖವಾಗಿ ಚಲಿಸುತ್ತಿಲ್ಲ.

ಅನಂತಮೂರ್ತಿ ತಾವು ವಿದ್ಯಾರ್ಥಿಯಾಗಿದ್ದಾಗ

ಮೈಸೂರು ವಿಶ್ವವಿದ್ಯಾಲಯ ಎಂಥ ಧೀಮಂತ, ಧೀರ ವಿಚಾರಗಳನ್ನು ಬೆಳೆಸುವ ಸ್ಥಳವಾಗಿತ್ತು ಎಂದು ನೆನಪಿಸಿಕೊಂಡಿದ್ದಾರೆ. ನಿಜ. ಕನ್ನಡದ ಎಲ್ಲ ಶ್ರೇಷ್ಠ ವಿದ್ವಾಂಸರು, ಧೀಮಂತರು ಮೈಸೂರು ವಿಶ್ವವಿದ್ಯಾಲಯದಲ್ಲಿಯೇ ಇದ್ದರು. ಬಿ.ಎಂ.ಶ್ರೀ, ಟಿ.ಎಸ್. ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ಡಿ.ಎಲ್.ಎನ್. ತಿ.ನಂ.ಶ್ರೀ, ಕುವೆಂಪು ಒಬ್ಬರೇ, ಇಬ್ಬರೇ? ಎಲ್ಲರೂ ಕನ್ನಡದ ಪ್ರಾತಃಸ್ಮರಣೀಯರು. ಈ ಭಾಗ್ಯ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಇರಲಿಲ್ಲ. ಅಲ್ಲಿಯೂ ಒಬ್ಬರು, ಇಬ್ಬರು ಇದ್ದರು, ಮೈಸೂರಿನಲ್ಲಿ ಇದ್ದ ಹಾಗೆ 'ಸಾಲು ದೀಪಗಳು' ಇರಲಿಲ್ಲ. ಅದೇ ಆಗ ಬಂದ ಸ್ವಾತಂತ್ರ್ಯ ಮತ್ತು ನಂತರ ಆದ ಕರ್ನಾಟಕ ಏಕೀಕರಣದ ಆಶಯಗಳು, ಕನ್ನಡಿಗರ ಆಶೋತ್ತರಗಳನ್ನೆಲ್ಲ ಕನ್ನಡ ವಿಭಾಗಗಳು ಪ್ರತಿನಿಧಿಸುತ್ತಿದ್ದವು. ಕನ್ನಡದ ಸಂಸ್ಕೃತಿ, ಜನ ಕಲ್ಯಾಣಕ್ಕೆ ಆಗಬೇಕಾದ ಕೆಲಸಗಳಿಗೆಲ್ಲ ಕನ್ನಡ ವಿಭಾಗದಿಂದಲೇ ಒತ್ತಾಸೆ, ಎಚ್ಚರಿಕೆ ಸಿಗುತ್ತಿತ್ತು. ಅನಂತಮೂರ್ತಿಯವರು ಕನ್ನಡ ವಿಭಾಗ ಏಕೆ ಚೆನ್ನಾಗಿ ಇರಬೇಕು ಎಂದು ಹೇಳುತ್ತಾರೆ ಎಂಬುದಕ್ಕೆ ಈ ಎಲ್ಲ ಹಿನ್ನೆಲೆ ಇದೆ. ಇದು ಈಗಿನ ಕಾಲಘಟ್ಟದಲ್ಲಿ ಅರ್ಥವಾಗುವುದು ಕಷ್ಟ.

ಮೈಸೂರು ಕನ್ನಡ ವಿಭಾಗದಲ್ಲಿ ಅನೇಕ ಘನ ವಿದ್ವಾಂಸರು ಕೆಲಸ ಮಾಡಿದರೂ ಆ ವಿಭಾಗದ ಸರ್ವತೋಮುಖ ಬೆಳವಣಿಗೆಗೆ ಕಾರಣರಾದವರು ಡಾ.ದೇಜಗೌ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಈ ಕೆಲಸ ಆದುದು ಆರ್.ಸಿ.ಹಿರೇಮಠರ ಕಾಲದಲ್ಲಿ. ಸ್ವಲ್ಪ ತಡವಾಗಿ ಹುಟ್ಟಿಕೊಂಡ ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ಕನ್ನಡವನ್ನು ಕಟ್ಟುವ ಕೆಲಸ ಮಾಡಿದವರು ಡಾ.ಜಿ.ಎಸ್.ಶಿವರುದ್ರಪ್ಪ. ಆದರೆ, ಜವರೇಗೌಡರ ಕಾಲದಲ್ಲಿಯೇ ಮೈಸೂರು ವಿಶ್ವ ವಿದ್ಯಾಲಯ ಒಕ್ಕಲಿಗರ ಹಿಡಿತಕ್ಕೆ ಹೋದರೆ, ಕರ್ನಾಟಕ ವಿಶ್ವವಿದ್ಯಾಲಯ ಆರಂಭದಿಂದಲೂ ಲಿಂಗಾಯತರ ಮುಷ್ಟಿಯಲ್ಲಿ ಉಳಿಯಿತು. ಬೆಂಗಳೂರಿನ ಕನ್ನಡ ವಿಭಾಗ ಮಾತ್ರ ಯಾವುದೇ ಒಂದು ಜಾತಿಗೆ ಸೀಮಿತವಾಗಲಿಲ್ಲ. ದೇಜಗೌ ಕನ್ನಡ ಅಧ್ಯಯನ ಸಂಸ್ಥೆಯ ಸ್ಥಾಪನೆ ಜತೆಗೆ ಕನ್ನಡ ವಿಶ್ವಕೋಶ, ಕನ್ನಡ ಸಾಹಿತ್ಯ ಚರಿತ್ರೆ, ಎಪಿಗ್ರಾಫಿಕಾ ಕರ್ನಾಟಿಕಾದಂಥ ಬಹುಕಾಲ ಉಳಿಯುವ ಆಕರ ಗ್ರಂಥಗಳ ಸಂಪಾದನೆ ಮತ್ತು ಜಾನಪದ ಅಧ್ಯಯನಕ್ಕೆ ಒತ್ತು ಕೊಟ್ಟರು. ಆದರೆ, ಒಂದು ವಿಭಾಗವಾಗಿ ಅದು ಕುವೆಂಪು ನಂತರದ ಸಾಹಿತ್ಯದ ಕಡೆಗೆ ತನ್ನ ಗಮನ ಹರಿಸಲಿಲ್ಲ.

ಕರ್ನಾಟಕ ವಿಶ್ವವಿದ್ಯಾಲಯ 12ನೇ ಶತಮಾನದ ಗುಂಗಿನಿಂದ ಹೊರಗೆ ಬರಲೇ ಇಲ್ಲ. 60-70ರ ದಶಕದಲ್ಲಿ ಕರ್ನಾಟಕ ಸಾಹಿತ್ಯಕವಾಗಿ ಹೊಸ ವಿದ್ಯಮಾನ ಗಳಿಗೆ ತೆರೆದುಕೊಳ್ಳುತ್ತಿತ್ತು. ನವ್ಯ ಸಾಹಿತ್ಯ ಉಜ್ವಲವಾಗಿದ್ದ ಕಾಲ ಅದು. ದುರಂತ ಎಂದರೆ ಕನ್ನಡ ಯುವ ಪೀಳಿಗೆಯ ಮನಸ್ಸು ಗೆದ್ದಿದ್ದ ಈ ಸಾಹಿತ್ಯ ಪ್ರಕಾರಕ್ಕೆ ಕರ್ನಾಟಕ ಮತ್ತು ಮೈಸೂರು ವಿಶ್ವ ವಿದ್ಯಾಲಯಗಳೆರಡೂ ಪಂಚೇಂದ್ರಿಯಗಳನ್ನು ಮುಚ್ಚಿಕೊಂಡಿದ್ದುವು. ಒಂದು ಆಧುನಿಕ ಸಾಹಿತ್ಯ ಪ್ರಕಾರವನ್ನು ಅಲಕ್ಷಿಸಬಾರದು ಎಂದು ಮೊದಲು ತಿಳಿದವರು ಜಿ.ಎಸ್.ಎಸ್. ಅವರು ಕನ್ನಡ ವಿಭಾಗಕ್ಕೆ ನೇಮಿಸಿ ಕೊಂಡ ಅಧ್ಯಾಪಕರೇ ಹಾಗಿದ್ದರು. ಆಧುನಿಕ ಕಾಲದ ಕನ್ನಡ ಶ್ರೇಷ್ಠ ಲೇಖಕರು, ವಿಮರ್ಶಕರು, ವಿದ್ವಾಂಸರು

ಆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಕಲಿತರೆ ಬೆಂಗಳೂರು ವಿಶ್ವ ವಿದ್ಯಾಲಯದ ಕನ್ನಡ ವಿಭಾಗದಲ್ಲಿಯೇ ಕಲಿಯಬೇಕು ಎಂಬುದು ನನ್ನ ಸಮಕಾಲೀನರ ಕನಸಾಗಿತ್ತು.

ಜಿ.ಎಸ್.ಎಸ್‌ಗೆ ಭಿನ್ನಮತದ, ವೈಚಾರಿಕತೆಯ ಮಹತ್ವ ಗೊತ್ತಿತ್ತು. ಅವರ ಅದೃಷ್ಟಕ್ಕೆ ಎಚ್.ನರಸಿಂಹಯ್ಯ ಕುಲಪತಿಯಾಗಿದ್ದರು. ಕನ್ನಡ ವಿಭಾಗದ ಅಧ್ಯಾಪಕರು ಸೇರಿಕೊಂಡು ತಂದ ಆಧುನಿಕ ಕನ್ನಡ ಸಾಹಿತ್ಯದ ಸಂಪುಟಗಳು, ನಡೆಸಿದ ವಿಚಾರ ಸಂಕಿರಣಗಳು, ಚಳವಳಿಗಳು ಯುವ ಪೀಳಿಗೆಯ ಮನೆ ಮಾತು ಆದುವು. 79 ರಲ್ಲಿ ಬಂಡಾಯ ಚಳವಳಿ ಹುಟ್ಟಿಕೊಂಡುದು ಅದಕ್ಕಿಂತ ಮುಂಚೆ ಸಿದ್ದಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ಕೇಳಿಸಿದ್ದು ಕೂಡ ಇದೇ ಕನ್ನಡ ವಿಭಾಗದಲ್ಲಿ. ಬಂಡಾಯ ಚಳವಳಿಯ ಆಶಯಗಳು ಮೊಳೆಯುವಂತೆ, ಬೇರು ಬಿಡುವಂತೆ ನೋಡಿಕೊಂಡವರು ಜಿ.ಎಸ್.ಎಸ್. ಸೋಜಿಗ ಎಂದರೆ ಅವರು ನವ್ಯ ಅಥವಾ ಬಂಡಾಯದ ಪ್ರಕಾರಕ್ಕೆ ಸೇರಿರದ ಲೇಖಕ!

ಕನ್ನಡ ವಿಭಾಗಕ್ಕೆ ಭದ್ರ ಬುನಾದಿ ಹಾಕಿದ ಮೈಸೂರು ವಿಶ್ವವಿದ್ಯಾಲಯ ದಲ್ಲಿಯೇ ಮೊದಲು ಕನ್ನಡ ವಿಭಾಗ ಹಳಿತಪ್ಪಿತು. ಸಮಗ್ರ ಕನ್ನಡ ಎಂ.ಎ ಮಾಡದ ಒಬ್ಬರನ್ನು ವಿಭಾಗದ ಮುಖ್ಯಸ್ಥರನ್ನಾಗಿ ಮಾಡಲು ವಿಭಾಗದ ಸಂರಚನೆಯನ್ನೇ ಬದಲು ಮಾಡಲಾಯಿತು. ಇದು ತಪ್ಪು ಮಾದರಿಯಾಗಿದ್ದರೂ ಕರ್ನಾಟಕ ವಿಶ್ವ ವಿದ್ಯಾಲಯ ಅದನ್ನು ಅನುಸರಿಸಿತು. ಭಾಷಾಶಾಸ್ತ್ರ ಮತ್ತು ಜಾನಪದದಂಥ ಶಾಖೆಗಳಲ್ಲಿ ಎಂ.ಎ ಮಾಡಿದವರು 'ಸಮಗ್ರ ಕನ್ನಡ' ವಿಭಾಗದ ಉಸ್ತುವಾರಿ ವಹಿಸಿಕೊಂಡ ನಂತರ ಒಟ್ಟು 'ಕನ್ನಡ'ದ ಅಭಿವೃದ್ಧಿಗೆ ಧಕ್ಕೆಯಾಯಿತು. ಭಾಷಾಶಾಸ್ತ್ರ, ಜಾನಪದದಲ್ಲಿ ಎಂ.ಎ ಮಾಡಿದ ಬಹುತೇಕರಿಗೆ (ಖಂಡಿತ ಎಲ್ಲರಿಗೆ ಅಲ್ಲ) ಪಂಪ, ರನ್ನ, ಕುಮಾರವ್ಯಾಸರು ಖಂಡಗಳಲ್ಲಿ ಮಾತ್ರ ಪರಿಚಯವಿದ್ದರು. ಕೇಶಿರಾಜನನ್ನು ಪಾಠ ಮಾಡುವುದು ಅವರಿಗೆ ಕಬ್ಬಿಣದ ಕಡಲೆಯಾಯಿತು. ಆಧುನಿಕ ಸಾಹಿತ್ಯ ವನ್ನಂತೂ ಅವರು ಪರಿಗಣಿಸುತ್ತಲೇ ಇರಲಿಲ್ಲ. ಕನ್ನಡ ವಿಭಾಗಗಳಲ್ಲಿ ವಿದ್ವತ್ತು, ಪ್ರತಿಭೆ, ಪಾಂಡಿತ್ಯವೆಲ್ಲ ಮಾಯವಾಯಿತು. ಕ್ಲಾಸಿನಲ್ಲಿ ಬೋರ್ಡ್‌ಗಳ ಮೇಲೆ ಬರೆದ ಅಕ್ಷರಗಳಲ್ಲಿ ಕಾಗುಣಿತದ ತಪ್ಪಾಗಿ ಶಿಕ್ಷಕರು ನಗೆಪಾಟಲಿಗೆ ಈಡಾದ ಘಟನೆ ಮೂವತ್ತು ವರ್ಷಗಳ ಹಿಂದೆಯೇ ನಡೆಯಿತು.

'ಸಮಗ್ರ ಕನ್ನಡ' ಎಂ.ಎ ಮಾಡಿದವರಿಗೆ ಮಾತ್ರ ಕಾಲೇಜುಗಳಲ್ಲಿ ಕನ್ನಡ ಉಪನ್ಯಾಸಕ ಹುದ್ದೆ ಎಂಬ ನಿಯಮವೂ ಮುರಿದುಬಿದ್ದು ಜಾನಪದ, ಭಾಷಾಶಾಸ್ತ್ರ ದಲ್ಲಿ ಎಂ.ಎ ಮಾಡಿದವರಿಗೂ ಈ ಹುದ್ದೆ ಸಿಕ್ಕಿತು. ಜಾನಪದ ಅಥವಾ ಭಾಷಾಶಾಸ್ತ್ರ ದಲ್ಲಿ ಎಂ.ಎ ಮಾಡಿದವರಿಗೆ ಹೆಚ್ಚು ಅಂಕ ಬರುತ್ತಿದ್ದುವು ಅಥವಾ ಅವರು ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳಾದುದರಿಂದ ಅವರಿಗೆ ಹೆಚ್ಚು ಅಂಕಗಳನ್ನು ಕೊಡುತ್ತಿದ್ದರು. 'ಸಮಗ್ರ ಕನ್ನಡ' ಎಂ.ಎ ವಿದ್ಯಾರ್ಥಿಗಳಿಗೆ, ರೆಗ್ಯುಲರ್ ಮತ್ತು ಎಕ್ಸ್‌ಟರ್ನಲ್ ಎಂಬ ಎರಡು ಶಾಖೆಗಳೂ ಸೇರಿ ಸಾವಿರಾರು ಉತ್ತರ ಪತ್ರಿಕೆಗಳಿಗೆ, ಸಿಗುತ್ತಿದ್ದ ಅಂಕ ಶೇ 60 ದಾಟಲು ತಿಣುಕಾಡುತ್ತಿತ್ತು. ಹೆಚ್ಚು ಅಂಕ ಗಳಿಸಿದವರು ಸಹಜವಾಗಿಯೇ ನೌಕರಿ ಪಡೆದರು. 'ಸಮಗ್ರ ಕನ್ನಡ'ದ ವಿದ್ಯಾರ್ಥಿಗಳು ಪರದೇಸಿಗಳಾಗಿ ಆ ಇಲಾಖೆ, ಈ ಇಲಾಖೆ ಎಂದು ಕಾರಕೂನಿಕೆ ಆರಂಭಿಸಿದರು. ಕನ್ನಡ ವಿಭಾಗದ ಮಹತ್ವವೇ

ಹೊರಟು ಹೋಗಿ ದೈನೇಸಿ ಸ್ಥಿತಿ ತಲುಪಿತು. ಈಗ ಯಾವ ವಿಶ್ವವಿದ್ಯಾಲಯದಲ್ಲಿ ಯಾರು ಕನ್ನಡ ವಿಭಾಗದ ಮುಖ್ಯಸ್ಥರು ಎಂದು ತಿಳಿಯಲು ಈ ವಿಭಾಗಗಳಲ್ಲಿ ಕೆಲಸ ಮಾಡಿದವರೇ ತಲೆ ಕೆರೆದುಕೊಳ್ಳುತ್ತಾರೆ. ಕುಬ್ಜರು ಬಂದು ಅಲ್ಲಿ ಕುಳಿತು ಕೊಂಡಿದ್ದಾರೆ. ಅಲ್ಲಿ, ಇಲ್ಲಿ ಅಪವಾದಗಳೂ ಇದ್ದಾವು. ಕನ್ನಡ ಭಾಷೆಗಾಗಿಯೇ ಹುಟ್ಟಿಕೊಂಡ ಹಂಪಿ ವಿಶ್ವವಿದ್ಯಾಲಯ ಕೂಡ ಆರಂಭ ಕಾಲದ ತನ್ನ ಗೊತ್ತು ಗುರಿಗಳನ್ನು ಕಳೆದುಕೊಂಡಿದೆ.

ಇದರ ನೇರ ಪರಿಣಾಮ ಎಂಬಂತೆ ಪಠ್ಯಗಳು ಜೀವಂತಿಕೆ ಕಳೆದುಕೊಂಡವು. ಕಲಿಸುವವರೇ ಖಂಡಗಳಲ್ಲಿ ಓದಿದ ಪಂಪ, ವಿದ್ಯಾರ್ಥಿಗಳ ಸಂವೇದನೆಯಿಂದ ಹೊರತಾದ. ಕೇಶಿರಾಜನ ತಲೆ ಬುಡ ಅರ್ಥವಾಗಲಿಲ್ಲ. ಕಾವ್ಯ ಎಂದರೆ ಅಲರ್ಜಿ ಎನ್ನುವಂತೆ ಆಯಿತು. ಕನ್ನಡ ಎಂ.ಎ ಮಾಡಿದವರಿಗೇ ಈಗ ಒಬ್ಬ ಬೇಂದ್ರೆ, ಒಬ್ಬ ಕಾರಂತ ಸಮಗ್ರವಾಗಿ ಗೊತ್ತಿಲ್ಲ. ಅನಂತಮೂರ್ತಿ ದೂರವೇ ಉಳಿಯಿತು. ಕನ್ನಡ ವಿಭಾಗದ ಮತ್ತೊಂದು ದೊಡ್ಡ ದೌರ್ಬಲ್ಯ ಇಂಗ್ಲಿಷ್ ಎಂಬ ಭೂತ, ಬೆರಗು. ಕನ್ನಡ ವಿಭಾಗಕ್ಕೆ ಸೇರುತ್ತಾನೆ ಎಂದರೆ ಆತನಿಗೆ ಒಂದು ಅಕ್ಷರವೂ ಇಂಗ್ಲಿಷ್ ಮಾತನಾಡಲು ಬಾರದು ಎಂಬುದು ಶತಃಸಿದ್ಧ! ಇಂಗ್ಲಿಷ್ ಮೇಷ್ಟ್ರಾಗಿ ಕನ್ನಡದಲ್ಲಿ ಬರೆದವರು ಅಖಿಲ ಭಾರತ ಮಟ್ಟದಲ್ಲಿ, ಜಾಗತಿಕ ಮಟ್ಟದಲ್ಲಿ ಹೆಸರು ಮಾಡಲು ಸಾಧ್ಯವಾದುದಕ್ಕೆ ಕನ್ನಡ ಮೇಷ್ಟರ ದೌರ್ಬಲ್ಯವೇ ಕಾರಣವಾಯಿತು. ಅವರಿಗೂ ಇಂಗ್ಲಿಷ್ ಅಷ್ಟಕಷ್ಟೆ!

ಯಡಿಯೂರಪ್ಪನವರು ಮಠ ಮಾನ್ಯಗಳಿಗೆ ಕೋಟಿ ಗಟ್ಟಲೆ ಹಣ ಕೊಟ್ಟು ಟೀಕೆಗೆ ಒಳಗಾದರು. ಅವರೇ ಪ್ರತಿ ಕನ್ನಡ ವಿಭಾಗಕ್ಕೂ ಒಂದೊಂದು ಕೋಟಿ ಕೊಟ್ಟು ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಕ್ಕ ಹಿನ್ನೆಲೆಯಲ್ಲಿ ಯೋಜನೆ ಗಳನ್ನು ಹಾಕಿಕೊಳ್ಳಿ ಎಂದರು. ಹನ್ನೊಂದು ವಿಭಾಗಗಳ ಪೈಕಿ ಒಂದು ವಿಭಾಗವೂ ಇದುವರೆಗೆ ಈ ಹಣವನ್ನು ಸಂಪೂರ್ಣವಾಗಿ ಬಳಸಿ ಉಳಿಯುವ ಕೆಲಸವನ್ನು ಮಾಡಿ ತೋರಿಸಿಲ್ಲ. ಡಿ.ಎಲ್.ಎನ್, ತೀ.ನಂ.ಶ್ರೀ ಕಾಲ ಹೋಗಲಿ, ಕಲ್ಬುರ್ಗಿ, ಕಂಬಾರರ ಕಾಲದಲ್ಲಿಯೂ ಅಧ್ಯಾಪಕರಿಗೆ ಹೆಚ್ಚು ಸಂಬಳ ಇರಲಿಲ್ಲ. ಈಗ ಎಲ್ಲರೂ ಯು.ಜಿ.ಸಿ ಸಂಬಳ ಎಣಿಸುತ್ತಿದ್ದಾರೆ. ಕೆಲವರು ಎಣಿಸಲು ಆಗದು ಎಂದೂ ಅನ್ನುತ್ತಿದ್ದಾರೆ!

ನನಗೆ ಕಲಿಸಿದ ಡಾ.ಎಂ.ಎಂ.ಕಲ್ಬುರ್ಗಿ ಅವರಿಗೆ, 'ಕನ್ನಡ ವಿಭಾಗಗಳ ಸುಧಾರಣೆ ಹೇಗೆ ಸರ್' ಎಂದು ಕೇಳಿದೆ. 'ಅದರ ಸುದ್ದಿ ಬಿಟ್ಟ ಬ್ಯಾರೆ ಏನರ ಇದ್ದರ ಮಾತಾಡು' ಎಂದರು. ಹೌದೇ? ಕನ್ನಡ ವಿಭಾಗಗಳು ಅಷ್ಟು ಹಾಳಾಗಿ ಹೋಗಿವೆಯೇ? ಹಾಗಾದರೆ ಅನಂತಮೂರ್ತಿ ಅವರು ಹೇಳಿದ್ದರಲ್ಲಿ ಏನು ತಪ್ಪಿದೆ? ಅನಂತಮೂರ್ತಿ ಮತ್ತು ಜಿ.ಎಸ್.ಎಸ್ ರಾಜ್ಯಪಾಲರ ಬಳಿ ಹೋಗಿ ದೂರು ಕೊಟ್ಟರೆ ಸಮಸ್ಯೆ ಪರಿಹಾರ ಆದೀತೇ? ಕಷ್ಟ.

■

# ಸಾವಿರ ಕಂಬಗಳ ಬಸದಿಯೂರಿನ 'ಮಾನಸ್ತಂಭ'

ಡಾ. ಮೋಹನ ಆಳ್ವ ನನಗೆ ಒಂದು ವಿಸ್ಮಯ. ಮೂಡುಬಿದರೆಯಲ್ಲಿ 2003 ರಲ್ಲಿ ನಡೆದ 71ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮುಖ್ಯ ವೇದಿಕೆ ನೋಡಿಯೇ ನಾನು ಬೆರಗುಪಟ್ಟಿದ್ದೆ. ಇಡೀ ಸಮ್ಮೇಳನದ ಉದ್ದಕ್ಕೂ ಈ ಮನುಷ್ಯನ ಛಾಪು ಎದ್ದು ಕಂಡಿತ್ತು. ಎಲ್ಲೆಲ್ಲೂ ಶಿಸ್ತು, ಅಚ್ಚುಕಟ್ಟುತನ ವಿಜೃಂಭಿಸಿತ್ತು. ಕಳೆದ ಆರು ವರ್ಷಗಳಲ್ಲಿ ನಾನು ಮತ್ತೆ ಅವರನ್ನು ಕಂಡದ್ದು ಇಲ್ಲ. ಮಾತನಾಡಿಸಿದ್ದೂ ಇಲ್ಲ. ಮೊನ್ನೆ ಮೂಡುಬಿದರೆಯಲ್ಲಿ ಮತ್ತೆ ಅವರನ್ನು ಕಂಡೆ. ನೇತ್ರಾವತಿಯಲ್ಲಿ ನಿಜಕ್ಕೂ ಬಹಳ ನೀರು ಹರಿದು ಹೋಗಿದೆ ಅನಿಸಿತು. ಒಬ್ಬ ಮನುಷ್ಯ ಏನೆಲ್ಲ ಮಾಡಬಹುದು ಎಂದು ಮತ್ತೆ ವಿಸ್ಮಯವಾಯಿತು.

ಮೋಹನ ಆಳ್ವ (1952) ಮೂಡುಬಿದರೆ ಬಳಿಯ ಮಿಜಾರುಗುತ್ತು ಕುಟುಂಬದ ಕೊನೆಯ ಮಗ. ಉಡುಪಿಯಲ್ಲಿ ಓದಿದ್ದು ಆಯುರ್ವೇದ ಪದವಿ. ಓದಿನಲ್ಲಿ ಅವರು ಎಂದೂ ಪ್ರಥಮ ಸ್ಥಾನ ಗಳಿಸಿದ್ದಿಲ್ಲ. ಪಠ್ಯೇತರ ಚಟುವಟಿಕೆಯ ಕಡೆಗೇ ಅವರಿಗೆ ಹೆಚ್ಚು ಗಮನ, ಲಕ್ಷ್ಯ. ಆಟ, ನಾಟಕ ಎಂದರೆ ಹುಚ್ಚು. ಅಪ್ಪ ಆನಂದ ಆಳ್ವ, 'ಮಗ ದಾರಿ ತಪ್ಪಿದ' ಎಂದೇ

ಅಂದುಕೊಂಡಿದ್ದರು. ಹಾಸ್ಟೆಲ್‌ನಲ್ಲಿ ಯಾದರೂ ಇದ್ದರೆ ಸರಿಯಾಗಿ ಓದಿಯಾನು ಎಂದು ಆರನೇ ತರಗತಿಗೇ ಮನೆ ಬಿಟ್ಟು ಹೊರಗೆ ಹಾಕಿದರು. ಅದೃಷ್ಟ. ಆಳ್ವ ಬದುಕು ರೂಪುಗೊಂಡುದು ಹಾಸ್ಟೆಲಿ ನಲ್ಲಿಯೇ. ಒಳ್ಳೆಯದು, ಕೆಟ್ಟುದರ ನಡುವಿನ ವ್ಯತ್ಯಾಸ ತಿಳಿಯಿತು. ಹೆಸರು ಹಾಳು ಮಾಡುವ ಕೆಲಸ, ಹವ್ಯಾಸ ಯಾವುದು ಎಂದೂ ಗೊತ್ತಾಯಿತು. ಅಭಿರುಚಿಗಳು ಬೆಳೆಯುತ್ತ ಹೋದುವು.

ಆಳ್ವ ಪದವಿ ಮುಗಿಸಿ ಹೊರಗೆ ಬಂದಾಗ (1981) 28 ಹಳ್ಳಿಗಳಿಂದ ಸುತ್ತುವರಿದ ಮೂಡುಬಿದರೆಯಲ್ಲಿ ಒಂದು ಒಳ್ಳೆಯ ಖಾಸಗಿ ಕ್ಲಿನಿಕ್ ಕೂಡ ಇರಲಿಲ್ಲ. ಕನ್ಸಲ್ಟೆಂಟ್, ಎಕ್ಸ್‌ರೇ, ಆಂಬುಲೆನ್ಸ್ ದೂರವೇ ಉಳಿಯಿತು. ಸಣ್ಣ ಕ್ಲಿನಿಕ್ ತೆರೆದ ಆಳ್ವರಿಗೆ ಊರಿಗೆ ಏನಾದರೂ ಮಾಡಬೇಕು ಅನಿಸಿತು. ಕ್ಲಿನಿಕ್ ಆರಂಭಿಸಿದ ಮೂರು ವರ್ಷಗಳಲ್ಲಿ ನೂರು ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ತಲೆ ಎತ್ತಿತು. ಊರಿಗೆ ಆಸ್ಪತ್ರೆ ಬಂತು. ಆದರೆ, ದೊಡ್ಡ ವಿದ್ಯಾಕೇಂದ್ರಗಳು ಇರಲಿಲ್ಲ. 1995ರಲ್ಲಿ 50 ಮಕ್ಕಳಿಗಾಗಿ ಚಿಕ್ಕ ಕಟ್ಟಡದಲ್ಲಿ ಒಂದು ಶಾಲೆ ತೆರೆದರು. ಕಳೆದ 14 ವರ್ಷಗಳಲ್ಲಿ 50 ಮಕ್ಕಳ ಸಂಖ್ಯೆ 9,500 ಕ್ಕೆ ಏರಿದೆ. ಅವರಿಗಾಗಿ ವಿಧ ವಿಧ ಶಿಕ್ಷಣ ಸಂಸ್ಥೆಗಳ ದೊಡ್ಡ ಸಮುಚ್ಚಯ ನಿರ್ಮಾಣಗೊಂಡಿದೆ. ಪಿ.ಯು ಒಂದರಲ್ಲಿಯೇ ರಾಜ್ಯದ 29 ಜಿಲ್ಲೆಗಳ 901 ಹೈಸ್ಕೂಲುಗಳ 3,700 ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದಾರೆ. ಪಿ.ಯು ಶಿಕ್ಷಣಕ್ಕಾಗಿ ತಮ್ಮ ಊರನ್ನು ಬಿಟ್ಟು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಬೇರೆ ಊರಿಗೆ ಹೋಗಿ ಮಕ್ಕಳು ಕಲಿಯುತ್ತಿದ್ದರೆ ಅದು ಮೂಡುಬಿದರೆಯಲ್ಲಿ ಮಾತ್ರ. 9,500 ವಿದ್ಯಾರ್ಥಿಗಳ ಪೈಕಿ ಏಳು ಸಾವಿರ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳೂ ತಲೆ ಎತ್ತಿವೆ. ಶರಾವತಿ, ನೇತ್ರಾವತಿ, ಭಾಗೀರಥಿ, ಹೇಮಾವತಿ ಎಂಬ ನಾಲ್ಕು ಹಾಸ್ಟೆಲ್‌ಗಳಲ್ಲಿ 3,500 ವಿದ್ಯಾರ್ಥಿನಿಯರೇ ಇದ್ದಾರೆ. ಉಳಿದ 14 ಹಾಸ್ಟೆಲ್‌ಗಳಲ್ಲಿ ಆಯುರ್ವೇದ, ಎಂಜಿನಿಯರಿಂಗ್ ಇತ್ಯಾದಿ ಏನೆಲ್ಲ ಪದವಿ ಓದುವ ವಿದ್ಯಾರ್ಥಿಗಳಿದ್ದಾರೆ.

ಎಲ್ಲ ಬಿಟ್ಟು ಬೀದರಿನ ಹುಡುಗರು, ಹುಡುಗಿಯರು ಪಿ.ಯು ಓದಲು ಮೂಡುಬಿದರೆಗೆ ಏಕೆ ಬರುತ್ತಾರೆ? ಸವದತ್ತಿ ತಾಲ್ಲೂಕಿನ ಇಂಚಲದ, ಮುದ್ದೇಬಿಹಾಳ ತಾಲ್ಲೂಕಿನ ತಾಳಿಕೋಟೆಯ ಹುಡುಗಿ ಏಕೆ ಬರುತ್ತಾಳೆ? ಬೆಳಿಗ್ಗೆ ಏಳು ಗಂಟೆ ಯಾದರೂ ಮನೆಯಲ್ಲಿ ಹೊದಿಕೆಯೊಳಗೆ ಅಡಗಿ ಮಲಗುವ ಮಕ್ಕಳು ಇಲ್ಲಿ ನಸುಕಿನ 4.45ಕ್ಕೇ ಎದ್ದು ಏಕೆ ಓದುತ್ತಾರೆ? ರಾತ್ರಿ 10.30ರ ವರೆಗೆ ಹಾಸ್ಟೆಲ್ ಆವರಣದ ಲೈಬ್ರರಿಯಲ್ಲಿ ಪುಸ್ತಕಗಳ ಮಧ್ಯೆ ಹೇಗೆ ತಲ್ಲೀನರಾಗುತ್ತಾರೆ? ಪ್ರಶ್ನೆಗಳಲ್ಲಿ ಉತ್ತರವೂ ಇದೆ. ಕಠಿಣ ಶಿಸ್ತು, ರಾಜಿಯಾಗದ ನಿಯಮಗಳೇ ಮೂಡುಬಿದರೆಯ ಪಿ.ಯು ಕಾಲೇಜಿನ ಕಡೆಗೆ ರಾಜ್ಯದ ಮಕ್ಕಳೆಲ್ಲ ಮುಖ ಮಾಡುವಂತೆ ಮಾಡಿವೆ. ಕೇವಲ ಒಂದು ದಶಕದಲ್ಲಿ ಮೂಡುಬಿದರೆಯ ಚಿತ್ರ ಬದಲಾಗಿ ಹೋಗಿದೆ. ಇಲ್ಲಿನ ಮಕ್ಕಳು ಬರೀ ಪುಸ್ತಕದ ಕೂಚಂಭಟ್ಟರಾಗದೆ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಗಳಲ್ಲಿ ಪದಕಗಳನ್ನು ಕೊಳ್ಳೆ ಹೊಡೆದು ತಂದಿದ್ದಾರೆ. ಪಿ.ಯು ಪದವಿಗೆ ಅಂಕ, ಕ್ರೀಡೆ ಅಥವಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಾಧನೆ ಮತ್ತು ಅಂಗವಿಕಲರು ಎಂಬ ನಾಲ್ಕು ಕೆಟಗರಿಗಳಲ್ಲಿ ಪ್ರವೇಶ ಸಿಗುತ್ತದೆ. 3,700 ವಿದ್ಯಾರ್ಥಿಗಳ ಪೈಕಿ 1,000 ವಿದ್ಯಾರ್ಥಿಗಳನ್ನು ಸಂಸ್ಥೆ ದತ್ತು

ತೆಗೆದುಕೊಳ್ಳುತ್ತದೆ. ಅವರ ಶುಲ್ಕ, ಊಟ, ವಸತಿ, ಪುಸ್ತಕ, ತರಬೇತಿ ಎಲ್ಲದರ ಖರ್ಚನ್ನು ಅದೇ ಭರಿಸುತ್ತದೆ. ಆಳ್ವ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಏಳು ಮಹಡಿಯ ಡಾ.ನಾಗಪ್ಪ ಆಳ್ವ ಕ್ಲಿನಿಕಲ್ ಆಯುರ್ವೇದ ಆಸ್ಪತ್ರೆ ತಲೆ ಎತ್ತಿದೆ. ಮಿಜಾರು ರಸ್ತೆಯಲ್ಲಿ ಎರಡು ವರ್ಷಗಳ ಹಿಂದೆ ಒಂದು ಸುಸಜ್ಜಿತ ಎಂಜಿನಿಯರಿಂಗ್ ಕಾಲೇಜು ಆರಂಭವಾಗಿದೆ.

ಆಳ್ವ ಭಾರಿ ಶ್ರೀಮಂತರೇನೂ ಅಲ್ಲ. ಬಡವರೂ ಅಲ್ಲ. ಇದೆಲ್ಲ ಹೇಗೆ ಸಾಧ್ಯವಾಯಿತು ಎಂದರೆ 'ನನಗೆ ಶೂನ್ಯದಿಂದ ಸೃಷ್ಟಿ ಮಾಡುವುದು ಖುಷಿ. ಹತ್ತು ರೂಪಾಯಿ ಇದ್ದರೆ ಅದಕ್ಕೆ 90 ರೂಪಾಯಿ ಸಾಲ ಸೇರಿಸಿ ನೂರು ರೂಪಾಯಿ ಮಾಡುತ್ತೇನೆ. ಈಗ ನನ್ನ ಮೇಲೆ 40 ಕೋಟಿ ರೂಪಾಯಿ ಸಾಲ ಇದೆ. ಆದರೆ, 250 ಕೋಟಿ ರೂಪಾಯಿಯ ಶಿಕ್ಷಣ ಸಂಸ್ಥೆಗಳು ನನ್ನ ಬೆನ್ನ ಹಿಂದೆ ಇವೆ' ಎಂದು ದಣಿವೇ ಇಲ್ಲದ ಆಳ್ವ ನಗುತ್ತಾರೆ.

ಆಳ್ವ ಅವರಿಗೆ ಮಕ್ಕಳೇ ಕುಟುಂಬ. ಅವರ ಪತ್ನಿ ಶೋಭಾ ಮಡಿದು ವರ್ಷಗಳೇ ಕಳೆದುಹೋಗಿವೆ. ಇಬ್ಬರು ಮಕ್ಕಳು ಹೊರಗಡೆ ಓದುತ್ತಿದ್ದಾರೆ. ದಿನದ 24 ಗಂಟೆಯೂ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸುತ್ತುತ್ತ ಇರುತ್ತಾರೆ. ಊರಿನಲ್ಲಿ ಇದ್ದ ದಿನ ರಾತ್ರಿ 10.30ಕ್ಕೆ ಬಂದು ಮಕ್ಕಳು ಲೈಬ್ರರಿಯಲ್ಲಿ ಓದುತ್ತಿದ್ದಾರೆಯೇ, ಮಲಗಿದ್ದಾರೆಯೇ ಎಂದು ಗಸ್ತು ತಿರುಗುತ್ತಾರೆ. ಹಾಜರಿ ಪುಸ್ತಕದಲ್ಲಿ ರುಜು ಹಾಕುತ್ತಾರೆ. ತಮ್ಮನ್ನು ನೋಡುತ್ತಲೇ ಸ್ವಂತ ತಂದೆಯನ್ನು, ಅಣ್ಣನನ್ನು ಕಂಡಂತೆ ಓಡಿ ಬಂದು ಮುತ್ತುವ ಹುಡುಗಿಯರ ಸಮಸ್ಯೆಗಳನ್ನು ಸಮಾಧಾನದಿಂದ ಕೇಳುತ್ತಾರೆ. ಪರಿಹಾರ ಹೇಳುತ್ತಾರೆ. ದಿನದ 24 ಗಂಟೆ ಇದಕ್ಕೇ ಸಾಲದ ಈ ಮನುಷ್ಯ ಮೂಡುಬಿದರೆ ಸಾಹಿತ್ಯ ಸಮ್ಮೇಳನ ನಡೆದ ಮರು ವರ್ಷದಿಂದಲೇ 'ನುಡಿ ಸಿರಿ' ಎಂಬ ನುಡಿ ಹಬ್ಬವನ್ನು ಪ್ರತಿ ವರ್ಷ ಹಮ್ಮಿಕೊಳ್ಳುತ್ತಿದ್ದಾರೆ. ಅಲ್ಲಿನ, ಶಿಸ್ತು, ಅಚ್ಚುಕಟ್ಟುತನ, ಚರ್ಚೆಯ ಗುಣಮಟ್ಟವನ್ನೆಲ್ಲ ನೋಡಿ ಸಾಹಿತ್ಯ ಸಮ್ಮೇಳನಕ್ಕಿಂತ 'ನುಡಿ ಸಿರಿ'ಗೇ ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯಾಸಕ್ತರು ಬರುತ್ತಿದ್ದಾರೆ. 2004ರ 'ನುಡಿ ಸಿರಿ'ಗೆ 10 ಲಕ್ಷ ರೂಪಾಯಿ ಖರ್ಚಾದರೆ 2008ರ ಸಮ್ಮೇಳನಕ್ಕೆ 40 ಲಕ್ಷ ಖರ್ಚಾಯಿತು. ಸರ್ಕಾರದಿಂದ ಆಳ್ವ ಬಿಡಿಗಾಸನ್ನೂ ಕೇಳಲಿಲ್ಲ.

'ನುಡಿ ಸಿರಿ'ಗಿಂತ ಮೊದಲೇ ಅವರು ಆರಂಭಿಸಿದ್ದು 'ವಿರಾಸತ್'. ಪ್ರತಿ ವರ್ಷದ ಜನವರಿ ತಿಂಗಳಲ್ಲಿ ಮೂರು ದಿನಗಳ ಕಾಲ ನಡೆಯುವ ಸಂಗೀತ, ನೃತ್ಯ, ಪಕ್ಕವಾದ್ಯ ಉತ್ಸವವದು. ದೇಶದ ಪ್ರತಿಷ್ಠಿತ ಸಂಗೀತಗಾರರು, ನೃತ್ಯಪಟುಗಳು, ಪಕ್ಕವಾದ್ಯದವರು ಭಾಗವಹಿಸುವ 'ವಿರಾಸತ್'ಗೆ ಪ್ರತಿದಿನ 12,000 ಜನ ಬರುತ್ತಾರೆ. ಪ್ರವೇಶ ಉಚಿತ. ಮಿರಾಜು ಗುತ್ತಿನ ಶೋಭಾವನದ ಪಕ್ಕದ ವಿಶಾಲ ಮೈದಾನವನ್ನು ಜೆ.ಸಿ.ಬಿ ಯಂತ್ರಗಳು ಈ ಉತ್ಸವಕ್ಕೆ ಅಣಿ ಮಾಡುತ್ತಿದ್ದುದನ್ನು ಆಳ್ವ ನನಗೆ ತೋರಿಸಿದಾಗ ರಾತ್ರಿ 10 ಗಂಟೆ ಮೀರಿತ್ತು. ಹಗಲು–ರಾತ್ರಿಯೆನ್ನದೆ ಕೆಲಸ ನಡೆದಿತ್ತು. ಮೂಡುಬಿದರೆಯ ಸಾವಿರ ಕಂಬದ ಬಸದಿಯಲ್ಲಿ ಆರಂಭದ ನಾಲ್ಕು ವರ್ಷ ನಡೆದ 'ವಿರಾಸತ್' ಉತ್ಸವಕ್ಕೆ ಈಗ ಪ್ರತಿ ವರ್ಷ ಏನಿಲ್ಲವೆಂದರೂ 50 ಲಕ್ಷ ರೂಪಾಯಿ ಖರ್ಚು ಬರುತ್ತದೆ. ಇದಕ್ಕೂ ಆಳ್ವ ಅವರು ಸರ್ಕಾರದಿಂದ ಬಿಡಿಗಾಸು ಕೇಳಿಲ್ಲ.

ಮೂಡುಬಿದರೆ ಸಮ್ಮೇಳನಕ್ಕೆ ಹೋಗಿದ್ದಾಗಲೇ 'ಶೋಭಾವನ'ಕ್ಕೆ ಹೋಗಿದ್ದೆ. 12 ವರ್ಷಗಳ ಹಿಂದೆ 15 ಎಕರೆ ಪ್ರದೇಶದಲ್ಲಿ ನಿರ್ಮಾಣವಾದ ಸಸ್ಯಲೋಕವದು. ಅಲ್ಲಿ ಎರಡು ಸಾವಿರ ಮಾದರಿಯ ಸಸ್ಯಗಳು ಇವೆ. ದೇಶದಲ್ಲಿ ಇಂಥ ಒಂದು ಉದ್ಯಾನದಲ್ಲಿ ಇರುವ ಸಸ್ಯ ಮಾದರಿಗಳ ಸಂಖ್ಯೆ ಹೆಚ್ಚು ಎಂದರೆ ಇನ್ನೂರು ಅಥವಾ ಮುನ್ನೂರು ಇದ್ದೀತು. ಆಯುರ್ವೇದ, ಸಸ್ಯ ವಿಜ್ಞಾನ ಓದುವ ಮಕ್ಕಳಿಗೆ ಈ ವನ ಒಂದು ಜೀವಂತ ಪ್ರಯೋಗಶಾಲೆ. ರಾತ್ರಿ 11 ಗಂಟೆಯಾದರೂ ಆಳ್ವ ಅವರಿಗೆ ಬೇಸರ ಆದಂತೆ ಕಾಣಲಿಲ್ಲ. ಛತ್ತೀಸಗಡದಿಂದ ಬಂದಿದ್ದ ಬುಡಕಟ್ಟು ಕಲಾವಿದರ ಶಿಬಿರಕ್ಕೆ ಕರೆದುಕೊಂಡು ಹೋದರು. ಅದು 'ಶಿಲ್ಪ ವಿರಾಸತ್'. ಎಂಟು ಹತ್ತು ದಿನ ನಡೆದ ಶಿಬಿರದಲ್ಲಿ ಸಿದ್ಧಗೊಂಡಿದ್ದ ಲೋಹದ, ಮಣ್ಣಿನ ಶಿಲ್ಪಗಳು ಕಳೆದು ಹೋಗುವ ಒಂದು ಕಲೆಗೆ, ಒಂದು ಮೌಲ್ಯಕ್ಕೆ ಮತ್ತೆ ಜೀವ ತುಂಬಿದಂತೆ ನಿಂತಿದ್ದುವು.

ಇದು ಅತಿಶಯೋಕ್ತಿಯಲ್ಲ. ಡಾ.ಮೋಹನ ಆಳ್ವ, ಕಳೆದು ಹೋಗುತ್ತಿರುವ ಮೌಲ್ಯಗಳ ಒಂದು ಸಂಕೇತದಂತೆ ನಮ್ಮ ನಡುವೆ ಇದ್ದಾರೆ. ಶಿಕ್ಷಣ ಸಂಸ್ಥೆಗಳ ಬಗ್ಗೆ ರಾಜ್ಯದಲ್ಲಿ ಯಾರಿಗೂ ಒಳ್ಳೆಯ ಅಭಿಪ್ರಾಯವಿಲ್ಲ. ಅವು ಶಿಕ್ಷಣ ಸಂಸ್ಥೆಗಳಲ್ಲ. ಬರೀ ವಾಣಿಜ್ಯ ಮಳಿಗೆಗಳು ಎಂದೇ ಎಲ್ಲರ ವಾದ. ಅಪವಾದ ಎಂಬಂತೆ ಒಬ್ಬ ಆಳ್ವ ಇದ್ದಾರೆ. ಕೆರೆಯ ನೀರನ್ನು ಸ್ವಲ್ಪವಾದರೂ ಕೆರೆಗೆ ಚೆಲ್ಲುತ್ತಿದ್ದಾರೆ. ಆಳ್ವ ಸಂತತಿ ಸಾವಿರವಾಗಲಿ.

■

# ಶಮನವೇ... ಬೂದಿ ಮುಚ್ಚಿದ ಕೆಂಡವೇ...?

ಹೇಳುವುದು ಕಷ್ಟ. ಯಡಿಯೂರಪ್ಪ ಯಾವ ಗಳಿಗೆಯಲ್ಲಿ ಅಧಿಕಾರ ವಹಿಸಿ ಕೊಂಡರೋ ಏನೋ? ಕಷ್ಟ ಪಟ್ಟು ಪಕ್ಷವನ್ನು ಅಧಿಕಾರಕ್ಕೆ ತಂದ ಆ ಮನುಷ್ಯನಿಗೆ ನೆಮ್ಮದಿಯಿಲ್ಲ. ಅದಕ್ಕೆ ಅವರೇ ಕಾರಣವೇ? ಕೇಡರ್ ಪಕ್ಷದಲ್ಲಿ ಹುಟ್ಟಿರುವ ಹೊಸ 'ಆಕಾಂಕ್ಷೆ'ಗಳು, 'ದಾಹಗಳು' ಕಾರಣವೇ? ಅಧಿಕಾರ ಎಲ್ಲರನ್ನು ಹಾಳು ಮಾಡುತ್ತದೆ ಎಂಬ ಮಾತು ಕಾರಣವೇ? ಹೇಳುವುದು ಕಷ್ಟ. ಮೊನ್ನೆ ಬೆಂಗಳೂರು ಹೊರ ವಲಯದ ಗೋಲ್ಡನ್ ಪಾಮ್ ರೆಸಾರ್ಟ್‌ನಲ್ಲಿ ನಡೆದ ಸಭೆಯಲ್ಲಿ ಮಂದಹಾಸಗಳು ಹೊರಹೊಮ್ಮಿವೆ. ಕೊನೆಯ ಪಕ್ಷ ಯಡಿಯೂರಪ್ಪ ಮತ್ತು ಅನಂತಕುಮಾರ್ ಛಾಯಾ ಗ್ರಾಹಕರ ಕಡೆಗೆ ಮುಖಮಾಡಿ ಕಷ್ಟಪಟ್ಟು ನಕ್ಕಿದ್ದಾರೆ. ಅದೃಷ್ಟಕ್ಕೆ ವಿಧಾನಸಭೆಯಲ್ಲಿ ಆದ ಹಾಗೆ ರೆಸಾರ್ಟ್‌ನಲ್ಲಿ ಮಾರಾಮಾರಿಯಾಗಿಲ್ಲ. ಆದರೆ, ಸಭೆ ಸುಖಾಂತವಾಗಿ ಮುಗಿದರೂ ಯಡಿಯೂರಪ್ಪ ಅವರಿಗೆ ಕಷ್ಟಗಳ ಸರಮಾಲೆಯನ್ನೇ ಶಾಸಕರು ಹಾಕಿ ಹೊರಗೆ ಕಳುಹಿಸಿದ್ದಾರೆ. ಯಡಿಯೂರಪ್ಪ ಅವರ ನೆಮ್ಮದಿ ಏನಿದ್ದರೂ ಬಜೆಟ್ ಮಂಡಿಸುವವರೆಗೆ ಎಂಬ ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ.

ಶಾಸಕರು ಈಗ ಹಾಕಿರುವ ಷರತ್ತುಗಳನ್ನು ಯಾವ ಮುಖ್ಯಮಂತ್ರಿಯಾದರೂ ಈಡೇರಿಸಲು ಸಾಧ್ಯವೇ? ಎಲ್ಲ ಸಚಿವರ ರಾಜೀನಾಮೆ ಪಡೆಯಲು ಸಾಧ್ಯವೇ? ರಾಜೀನಾಮೆ ಪಡೆದು ಕೆಲವರನ್ನು ಬಿಟ್ಟರೆ ಅಧಿಕಾರದ ರುಚಿ ಕಂಡವರು ಸುಮ್ಮನೆ ಇರುತ್ತಾರೆಯೇ?

ನಿಗಮ–ಮಂಡಳಿಗಳ ಅಧ್ಯಕ್ಷರ ರಾಜೀನಾಮೆ ಕಥೆಯೂ ಅಷ್ಟೆ ಅಲ್ಲವೇ? 'ಅಧಿಕಾರ ಉಳಿಸಿಕೊಳ್ಳಲು ನಾನು ತಪ್ಪು ಮಾಡಿದೆ' ಎಂದು ಯಡಿಯೂರಪ್ಪ ಏಕೆ ಹೇಳಿದ್ದಾರೆ ಎಂಬುದು ಅರ್ಥವಾಯಿತೇ? ಹಾಗಾದರೆ ಸಮಸ್ಯೆಯ ಮೂಲ ಎಲ್ಲಿ ಇದೆ? ಈ ಸರ್ಕಾರದ ರಚನೆಯಲ್ಲಿಯೇ ಆ ಸಮಸ್ಯೆ ಇದೆ. ಕನಿಷ್ಠ ಹತ್ತಿಪ್ಪತ್ತು ಶಾಸಕರು ಸದಾ ಅತೃಪ್ತರಾಗಿರುತ್ತಾರೆ. ಅವರು ಅಧಿಕಾರದಲ್ಲಿ ಇದ್ದರೂ ಅಷ್ಟೇ ಇಲ್ಲದಿದ್ದರೂ ಅಷ್ಟೇ. ಒಂದು ಸಾರಿ ರೆಡ್ಡಿ ಬಣದವರು ಯಡಿಯೂರಪ್ಪನವರ ಬೆವರು ಇಳಿಸಿದರೆ ಇನ್ನೊಂದು ಸಾರಿ ಮತ್ತೊಂದು ಬಣ ಅದೇ ಕೆಲಸ ಮಾಡುತ್ತದೆ. ಅವರ ಒತ್ತಡಕ್ಕೆ ಒಂದು ಸಾರಿ ಮಠಾಧೀಶರು ತಾಳ ತಟ್ಟಿದರೆ ಇನ್ನೊಂದು ಸಾರಿ ಸಂಘದವರು ಆ ಕೆಲಸ ಮಾಡುತ್ತಾರೆ. ಮಗದೊಂದು ಸಾರಿ ಮಠಾಧೀಶರು ಮತ್ತು ಸಂಘದವರು ಸೇರಿಕೊಂಡು ಯಡಿಯೂರಪ್ಪನವರ ಮೇಲೆ ಒತ್ತಡ ಹಾಕುತ್ತಾರೆ. ಅಧಿಕಾರ ಉಳಿಸಿಕೊಳ್ಳಲು ಯಡಿಯೂರಪ್ಪನವರು ಮತ್ತೆ ಮತ್ತೆ ಎಡವುತ್ತಾರೆ. ರೇಣುಕಾಚಾರ್ಯ ಮಂತ್ರಿಯಾದುದು ಇಂಥ ಒತ್ತಡದಿಂದ. ನಾಯಕನಾದವನು ಒತ್ತಡಕ್ಕೆ ಮಣಿಯುತ್ತಾನೆ ಎಂದು ಒಂದು ಸಾರಿ ಗೊತ್ತಾದರೆ ಸಾಕು, ಅಧಿಕಾರದ ಆಕಾಂಕ್ಷಿಗಳು ಒತ್ತಡದ ಮೂಲಗಳನ್ನು ಹುಡುಕಿಕೊಂಡು ಹೋಗುತ್ತಾರೆ.

ಮಾರ್ಚ್ ನಂತರ ಯಡಿಯೂರಪ್ಪ ಸಂಪುಟ ಪುನರ್‌ರಚನೆಗೆ ಕೈ ಹಾಕಿದರೆ ಏನಾದೀತು ಎಂದು ಭವಿಷ್ಯ ಹೇಳಲು ಕೋಡಿಮಠದ ಸ್ವಾಮಿಗಳೂ ಬೇಕಾಗಿಲ್ಲ. ಸೋಮಯಾಜಿಗಳೂ ಬೇಕಾಗಿಲ್ಲ. ರಾಜಕೀಯದ ಅಲ್ಪ ಅನುಭವ ಇರುವವರಿಗೂ ಅದು ಗೊತ್ತಾಗುತ್ತದೆ. ಯಡಿಯೂರಪ್ಪನವರಿಗೆ ಇದು ಗೊತ್ತಿಲ್ಲ ಎಂದಲ್ಲ. ಆದರೆ, ಆ ಕಷ್ಟದಿಂದ ತಪ್ಪಿಸಿಕೊಳ್ಳಲು ಏನು ಮಾಡಬೇಕು ಎಂಬುದು ಗೊತ್ತಿಲ್ಲ. ಒಂದು ದಿನ ತಳ್ಳಿದರೆ ಸಾಕು, ಅದೇ ನೆಮ್ಮದಿ ಎಂದುಕೊಂಡಿದ್ದಾರೆ ಅವರು. ಮುಖ್ಯಮಂತ್ರಿ ನೆಮ್ಮದಿಯ ದಿನಗಳನ್ನು ಎಣಿಸುವಾಗ ಆಡಳಿತ ಗತಿ ಏನಾಗುತ್ತದೆ ನೋಡಿ. ಯಡಿಯೂರಪ್ಪ ಸಾವಿರಾರು ಜನರ ಎದುರು ಹಸಿರು ಶಾಲು ಹೊದ್ದು ರೈತನ ಹೆಸರಿನಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ತೆಗೆದುಕೊಂಡಿದ್ದಾರೆ ಎಂಬ 'ಸಂದೇಶ', 'ಸಂಕೇತ' ಅಧಿಕಾರಿಗಳಿಗೆ ಮರೆತು ಹೋಗುತ್ತದೆ. ಚಾಮರಾಜನಗರದಲ್ಲಿ ಜಿಲ್ಲಾಧಿಕಾರಿಯೇ ದಂಡ ಹಿಡಿದು ರೈತರನ್ನು ಹೊಡೆಯಲು ಹೋಗುತ್ತಾರೆ. ಧಾರವಾಡದಲ್ಲಿ ಪೊಲೀಸರು ರೈತರ ಕೈಗಳಿಗೆ ಕೋಳ ತೊಡಿಸುತ್ತಾರೆ. ಯಡಿಯೂರಪ್ಪ ಮತ್ತೆ ಆ ತಪ್ಪು ತಿದ್ದಲು ಬಿಡದಿವರೆಗೆ ನಡೆದುಕೊಂಡು ಹೋಗ ಬೇಕಾಗುತ್ತದೆ. ಆಡಳಿತದಲ್ಲಿ ಶಿಥಿಲತೆ ಹೇಗೆ ಬರುತ್ತದೆ. ಏಕೆ ಬರುತ್ತದೆ ಎಂಬುದಕ್ಕೆ ಇದು ಒಂದು ನಿದರ್ಶನ ಅಷ್ಟೇ.

ಯಡಿಯೂರಪ್ಪ ವಿಧಾನಸೌಧದಲ್ಲಿ ಗಟ್ಟಿಯಾಗಿ ಕುಳಿತುಕೊಂಡು ಎಷ್ಟು ದಿನ

ಆಡಳಿತ ನಡೆಸಿದ್ದಾರೆ? ಅವರು ಗಟ್ಟಿಯಾಗಿ ಕುಳಿತುಕೊಳ್ಳಲು ಅವರ ಪಕ್ಷದವರೇ ಬಿಡುವುದಿಲ್ಲ. ಹಾಗೆ ನೋಡಿದರೆ ವಿರೋಧ ಪಕ್ಷಗಳು ಮಾಡಬೇಕಾದ ಕೆಲಸವನ್ನು ಬಿಜೆಪಿ ಶಾಸಕರೇ ಅತ್ಯಂತ ಸಮರ್ಥವಾಗಿ ಮಾಡುತ್ತಿದ್ದಾರೆ. ಕಾಂಗ್ರೆಸ್‌ನ ಕೆಲ ಮುಖಂಡರು ಯಡಿಯೂರಪ್ಪನವರ 'ಪೆರೋಲ್'ನಲ್ಲಿ ಇದ್ದಾರೆ ಎಂದು ಕುಮಾರ ಸ್ವಾಮಿ ಸ್ಫೋಟಕ ಆರೋಪ ಮಾಡಿದ್ದಾರೆ. ವಿರೋಧ ಪಕ್ಷಗಳ ಟೀಕೆ ಮೊನಚು ಕಳೆದುಕೊಂಡಿರುವುದನ್ನು ನೋಡಿದರೆ ಅವರ ಮಾತು ನಿಜ ಇರಬೇಕು ಎಂದೂ ಅನಿಸುತ್ತದೆ. ಕುಮಾರಸ್ವಾಮಿ ಬಳಿ, ಈ ಆರೋಪಕ್ಕೆ ದಾಖಲೆಗಳೂ ಇರುವಂತಿವೆ!

ಇತ್ತ ಜನ ತಮ್ಮನ್ನು ಏಕೆ ಅಧಿಕಾರಕ್ಕೆ ತಂದರು ಎಂಬುದು ಬಿಜೆಪಿ ಮಂದಿಗೆ ಮರೆತು ಹೋಗಿದೆ. ಅಥವಾ ಮತ್ತೆ ತಾವು ಅಧಿಕಾರಕ್ಕೆ ಬರುವುದು ಸಾಧ್ಯವಿಲ್ಲ ಎಂಬುದು ಇಷ್ಟು ಬೇಗ ಮನವರಿಕೆಯಾಗಿದೆ. ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎಂದು ಗೊತ್ತಿದ್ದವರು ಅಧಿಕಾರದಲ್ಲಿ ಇದ್ದಾಗ ಏನು ಮಾಡಬೇಕೋ ಅದನ್ನೇ ಎಲ್ಲರೂ ಮಾಡುತ್ತಿದ್ದಾರೆ. ಇದಕ್ಕೆ, ಪಕ್ಷಕ್ಕೆ ಹೊರಗಿನಿಂದ ಬಂದವರು, ಸಂಘದ ಘನ ಆದರ್ಶಗಳಿಂದ ಬಂದವರು ಎಂಬ ವ್ಯತ್ಯಾಸವೇನೂ ಇಲ್ಲ. ಅಪವಾದಗಳು ಇದ್ದರೆ ಒಂದು ಕೈ ಬೆರಳಿನ ಎಣಿಕೆಯಷ್ಟು ಮಾತ್ರ!

ಯಡಿಯೂರಪ್ಪ ಸರ್ಕಾರಕ್ಕೆ, ಬರುವ ತಿಂಗಳು ನಡೆಯುವ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಒಂದು ದೊಡ್ಡ ಅಗ್ನಿಪರೀಕ್ಷೆ. ಜನ ಈ ಸರ್ಕಾರದ ಬಗ್ಗೆ ಏನು ಅಂದುಕೊಂಡಿದ್ದಾರೆ ಎಂಬುದಕ್ಕೆ ಈ ಚುನಾವಣೆ ಫಲಿತಾಂಶ ಉತ್ತರ ಕೊಡುತ್ತದೆ. ಬಿಜೆಪಿ ನಗರ ಕೇಂದ್ರಿತ ಪಕ್ಷ. ಗ್ರಾಮಾಂತರದಲ್ಲಿ ಇನ್ನೂ ಆಳವಾದ ಬೇರುಗಳು ಇಲ್ಲ. ಬೆಂಗಳೂರು ನಗರದಲ್ಲಿ 2008ರ ವಿಧಾನಸಭೆ ಚುನಾವಣೆಯಲ್ಲಿ 17 ಮಂದಿ ಬಿಜೆಪಿ ಶಾಸಕರು ಗೆದ್ದು ಬಂದಿದ್ದರು. 2009ರ ಲೋಕಸಭೆ ಚುನಾವಣೆ ಯಲ್ಲಿ ಬೆಂಗಳೂರು ನಗರದ ಬಹುತೇಕ ಶೇ 90ರಷ್ಟು ಪ್ರದೇಶವನ್ನು ಪ್ರತಿನಿಧಿಸುವ ಮೂರು ಲೋಕಸಭಾ ಕ್ಷೇತ್ರಗಳಲ್ಲಿಯೂ ಬಿಜೆಪಿ ಅಭ್ಯರ್ಥಿಗಳೇ ಗೆದ್ದಿದ್ದರು. ವಿಧಾನಸಭೆಗೆ ಅಷ್ಟು ದೊಡ್ಡ ಸಂಖ್ಯೆಯಲ್ಲಿ ಬಿಜೆಪಿ ಶಾಸಕರು ಆಯ್ಕೆಯಾದುದು 'ವಚನಭ್ರಷ್ಟತೆ'ಯ ವಿರುದ್ಧದ ಜನಾದೇಶವಾಗಿತ್ತು. ಕಳೆದ ಒಂದೂಮುಕ್ಕಾಲು ವರ್ಷದ ಬಿಜೆಪಿ ಆಡಳಿತದ ಬಗ್ಗೆ ಬೆಂಗಳೂರು ಜನರ ಅಭಿಪ್ರಾಯ ಈಗ ಬೇರೆಯೇ ಇದ್ದಂತೆ ಇದೆ. ರಾಜ್ಯ ಸರ್ಕಾರದ ಆಡಳಿತ ವೈಖರಿಯಿಂದ ಅವರು ಬೇಸತ್ತು ಹೋಗಿರಲು ಸಾಕು. ಅದು ಮತದಾನದಲ್ಲಿ ವ್ಯಕ್ತವಾಗಿ ಪಾಲಿಕೆಯ ಚುಕ್ಕಾಣಿ ಹಿಡಿಯಲು ಬಿಜೆಪಿಗೆ ಸಾಧ್ಯವಾಗದಿದ್ದರೆ ಮತ್ತೆ ವಿಧಾನಸಭೆಗೆ ಚುನಾವಣೆ ನಡೆಯಲು 2013ರ ವರೆಗೆ ಕಾಯಬೇಕಾದ ಅಗತ್ಯ ಕಾಣುವುದಿಲ್ಲ. 'ಹೇಗಿದ್ದರೂ 2013ರ ವರೆಗೆ ನಾವು ಕಾಯುವುದೇ ಇಲ್ಲ. ಚುನಾವಣೆ ಯಾವಾಗ ಬೇಕಾದರೂ ನಡೆಯಬಹುದು' ಎಂದು ಬಿಜೆಪಿಯವರೇ ಈಗ ಹೇಳುತ್ತಿದ್ದಾರೆ!

ಯಡಿಯೂರಪ್ಪನವರ ನಿದ್ದೆಗೆಡಿಸಲು ಕಾಂಗ್ರೆಸ್ ಮತ್ತು ಜೆ.ಡಿ (ಎಸ್) ಈಗಾಗಲೇ ಮೇಲ್ಮನೆ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಂಡಿವೆ. ಪಾಲಿಕೆ ಚುನಾವಣೆ ಯಲ್ಲಿಯೂ ಈ ಮೈತ್ರಿ ಸಾಧ್ಯವಾದರೆ ಬಿಜೆಪಿಗೆ ಗೆಲುವು ಮತ್ತಷ್ಟು ಕಷ್ಟವಾಗುತ್ತದೆ. ಬೆಂಗಳೂರಿನಲ್ಲಿ

ಜೆ.ಡಿ(ಎಸ್)ಗೆ ಹೇಳಿಕೊಳ್ಳುವಂಥ ನೆಲೆಯಿಲ್ಲ. ದೇವೇಗೌಡರಿಗೆ ಕೊಳೆಗೇರಿ ನಿವಾಸಿಗಳ ಮೇಲೆ ಈಗ ಇದ್ದಕಿದ್ದಂತೆ ಪ್ರೀತಿ ಉಕ್ಕುತ್ತಿರುವುದಕ್ಕೆ ಪಾಲಿಕೆ ಚುನಾವಣೆಯೇ ಕಾರಣ. ಕಾಂಗ್ರೆಸ್ ಜತೆಗೆ ಮೈತ್ರಿ ಸಾಧ್ಯವಾದರೆ ಅದರಿಂದ ಜೆ.ಡಿ (ಎಸ್) ಬಲ ವೃದ್ಧಿಯಾಗುತ್ತದೆ. ಪ್ರತಿಯಾಗಿ ದೊಡ್ಡ ಸಂಖ್ಯೆಯಲ್ಲಿ ಇರುವ ಒಕ್ಕಲಿಗ ಮತಗಳು ಕಾಂಗ್ರೆಸ್‌ಗೂ ದೊರಕಬಹುದು. ಗೋವಿಂದರಾಜನಗರ ಉಪ ಚುನಾವಣೆ ಯಲ್ಲಿ ಇದು ಸಾಬೀತಾಗಿದೆ.

ಜೆ.ಡಿ (ಎಸ್) ಜತೆಗೆ ಮೈತ್ರಿ ಮಾಡಿಕೊಳ್ಳಲು ಸ್ಥಳೀಯ ಕಾಂಗ್ರೆಸ್ ನಾಯಕರಿ ಗಿಂತ ಕೇಂದ್ರದ ಆಸ್ಕರ್ ಫರ್ನಾಂಡಿಸ್ ಮತ್ತು ಬಿ.ಕೆ.ಹರಿಪ್ರಸಾದ್ ಉತ್ಸುಕರಾಗಿ ದ್ದಾರೆ. ಅವರಿಗೆ ಬರುವ ಜುಲೈ ತಿಂಗಳಲ್ಲಿ ಮತ್ತೆ ರಾಜ್ಯಸಭೆ ಪ್ರವೇಶಿಸಬೇಕಿದೆ. ಈಗ ವಿಧಾನಸಭೆಯಲ್ಲಿ ಇರುವ 74 ಕಾಂಗ್ರೆಸ್ ಶಾಸಕರ ಬಲದ ಮೇಲೆ ಇಬ್ಬರೂ ರಾಜ್ಯಸಭೆ ಪ್ರವೇಶಿಸಲು ಆಗುವುದಿಲ್ಲ. ಜೆ.ಡಿ (ಎಸ್) ಬೆಂಬಲವೂ ಸೇರಿ ಒಟ್ಟು 92 ಮತಗಳು ಬೇಕೇ ಬೇಕು. ಆ ಬೆಂಬಲ ಪಡೆಯುವ ಸಲುವಾಗಿಯೇ ಆಸ್ಕರ್ ಮತ್ತು ಹರಿಪ್ರಸಾದ್ ಇಬ್ಬರೂ ಕುಮಾರಸ್ವಾಮಿ ಹೆಗಲ ಮೇಲೆ ಕೈ ಹಾಕಿದ್ದಾರೆ. ಇದಕ್ಕೆ ಪ್ರತಿಯಾಗಿ ಜೂನ್ ತಿಂಗಳಲ್ಲಿ ವಿಧಾನಸಭೆಯಿಂದ ಮೇಲ್ಮನೆಗೆ ನಡೆಯುವ ನಾಲ್ಕು ಸ್ಥಾನಗಳ ಚುನಾವಣೆಯಲ್ಲಿ ಎರಡು ಸ್ಥಾನಗಳನ್ನು ಗೆಲ್ಲುವ ಸಂಖ್ಯಾಬಲವಿದ್ದರೂ ಕಾಂಗ್ರೆಸ್ ಒಂದೇ ಸ್ಥಾನಕ್ಕೆ ಸ್ಪರ್ಧಿಸಿ ಇನ್ನೊಂದು ಸ್ಥಾನವನ್ನು ಜೆ.ಡಿ (ಎಸ್)ಗೆ ಬಿಟ್ಟು ಕೊಡುವ ಸಾಧ್ಯತೆಯೂ ಇದೆ. ಉಳಿದ ಎರಡು ಸೀಟುಗಳು ಬಿಜೆಪಿಗೆ ಹೋಗಲಿವೆ.

ಕಾಂಗ್ರೆಸ್-ಜೆ.ಡಿ (ಎಸ್) ಮೈತ್ರಿ ಮಾಡಿಕೊಂಡು ಬಹಿರಂಗ ಸಮರ ಸಾರುವ ಜತೆಗೆ ಬಿಜೆಪಿ ಅತೃಪ್ತರ ಜತೆಗೆ ನಿತ್ಯ ಹೊಕ್ಕುಬಳಕೆ ಮಾಡುತ್ತಿರುವುದು ಯಡಿಯೂರಪ್ಪ ಸರ್ಕಾರಕ್ಕೆ ಇನ್ನೊಂದು ಬೆದರಿಕೆ. ವಿಧಾನಸಭಾಧ್ಯಕ್ಷರ ಚುನಾವಣೆ ಯನ್ನು ತರಾತುರಿಯಲ್ಲಿ ಮುಗಿಸಿದ್ದಕ್ಕೆ ಈ ಬೆದರಿಕೆಯೇ ಕಾರಣ. ಈ ಚುನಾವಣೆ ಒಂದು ದಿನ ಮುಂದೆ ಹೋಗಿದ್ದರೂ ಕೆಲವರು ಬಿಜೆಪಿ ಶಾಸಕರು ಕೈ ಕೊಟ್ಟು ಆಡಳಿತ ಪಕ್ಷಕ್ಕೆ ಮುಖಭಂಗ ಮಾಡಲು ಸಿದ್ಧರಾಗಿದ್ದರು. ಅದನ್ನು ತಿಳಿದೇ ವಿರೋಧ ಪಕ್ಷದವರು ಚುನಾವಣೆ ತಡೆಯಲು ಅಷ್ಟೊಂದು ಕೋಲಾಹಲ ಮಾಡಿದ್ದು. ಅಂತೂ ಯಡಿಯೂರಪ್ಪನವರು ಹೀಗೆ ಕೂದಲೆಳೆಯ ಅಂತರದಲ್ಲಿ ಅಪಾಯದಿಂದ ಮತ್ತೆ ಮತ್ತೆ ಪಾರಾಗುತ್ತಿದ್ದಾರೆ. ಬಜೆಟ್ ಮಂಡನೆ ನಂತರ ಅವರು ಅಪಾಯವನ್ನು ಮತ್ತೆ ಮೈಮೇಲೆ ಎಳೆದು ಕೊಳ್ಳುತ್ತಾರೆಯೇ? ಅಥವಾ ಅದೇ ಅವರ ಮೈಮೇಲೆ ಏರಿ ಬರುತ್ತದೆಯೇ? ಹೇಳುವುದು ಕಷ್ಟ.

■

# ನೈಸ್ ರಸ್ತೆಯಲ್ಲಿ ಜಾರಿ ಬಿದ್ದವರು ಯಾರು ಯಾರು?

ಅಕ್ರಮ ಸಂತಾನವೇ ಹಾಗೆ. ಅದನ್ನು ಒಪ್ಪಿಕೊಳ್ಳಲು ಮುಂದಾಗುವ ತಂದೆ ತಾಯಿ ಬಹಳ ಕಡಿಮೆ. ಇಲ್ಲವೇ ಇಲ್ಲ ಎಂದರೂ ನಡೆದೀತು. ಬೆಂಗಳೂರು-ಮೈಸೂರು ನಡುವೆ ಎಕ್ಸ್‌ಪ್ರೆಸ್ ಕಾರಿಡಾರ್ ಹೆದ್ದಾರಿ ನಿರ್ಮಿಸಲು 1995ರಲ್ಲಿ ಆದ ಒಪ್ಪಂದ ಈಗ ಒಂದು 'ಅಕ್ರಮ ಸಂತಾನ'. ಒಪ್ಪಂದ ಆದ ಸಮಯದಲ್ಲಿ ಅಸ್ತಿತ್ವದಲ್ಲೇ ಇರದಿದ್ದ 'ನೈಸ್' ಸಂಸ್ಥೆ ಈಗ ಎಕ್ಸ್‌ಪ್ರೆಸ್ ಹೆದ್ದಾರಿ ಯೋಜನೆ ಜಾರಿಗೊಳಿಸುತ್ತಿದ್ದು ಅದನ್ನು ತಮ್ಮ ಶಿಶು ಎಂದು ಒಪ್ಪಿಕೊಳ್ಳಲು ಯಾರೂ ಸಿದ್ಧರಿಲ್ಲ. 'ದೇವೇಗೌಡರೇ ಸಂಸ್ಥೆಯ ಜತೆಗೆ ಒಪ್ಪಂದ ಮಾಡಿಕೊಂಡವರು ಅವರೇ ಅದಕ್ಕೆ ಜವಾಬ್ದಾರರು' ಎಂದು 95ರ ನಂತರ ಬಂದ ಬಹುತೇಕ ಸರ್ಕಾರಗಳೆಲ್ಲ ತಮ್ಮ ಹೊಣೆ ಹಾರಿಸಿಕೊಂಡಿವೆ. ಈಗ ದೇವೇಗೌಡರು, ಅದು ತಮ್ಮ ಶಿಶು ಹೌದು ಎಂದು ಮೊದಲ ಬಾರಿಗೆ ಒಪ್ಪಿಕೊಂಡ್ಡಿದಾರೆ. ಆದರೆ, 'ಅದು ದಾರಿ ತಪ್ಪಿದ ಶಿಶು, ಕಳೆದ 15 ವರ್ಷಗಳಲ್ಲಿ ಆ ಶಿಶುವನ್ನು ಯಾರು ಯಾರು ಎತ್ತಿಕೊಂಡರು, ಅದನ್ನು ಹೇಗೆ ದಾರಿ ತಪ್ಪಿಸಿದರು' ಎಂಬ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಆಗ್ರಹಿಸ್ದಿದಾರೆ.

ಮೂಲ ಒಪ್ಪಂದ ಆದಾಗ ಕೇವಲ 2,000 ಕೋಟಿ ರೂಪಾಯಿ ಮೊತ್ತದಾಗಿದ್ದ ಈ ಯೋಜನೆ ಈಗ, 30,000 ಕೋಟಿ ರೂಪಾಯಿಗಳ ಯೋಜನೆ ಎನಿಸಿದೆ. ಕಳೆದ ಎಂಟು ಹತ್ತು ವರ್ಷಗಳಲ್ಲಿ ಸ್ಥಿರಾಸ್ತಿ (ರಿಯಲ್ ಎಸ್ಟೇಟ್) ವಲಯದಲ್ಲಿ ಆದ ಬೂಮ್ ಮಾತ್ರ ಇದಕ್ಕೆ ಕಾರಣವಲ್ಲ, ನೈಸ್ ಯೋಜನೆಯ ಮೂಲ ಸ್ವರೂಪದಲ್ಲಿಯೂ ಭಾರಿ ಬದಲಾವಣೆ ಆಗಿದೆ. ಆದರೆ, ಬದಲಾವಣೆ ಸರಿಯಾದ ದಾರಿಯಲ್ಲಿ ಆಗಿದೆಯೇ? ಅಥವಾ 95ರ ನಂತರ ಬಂದ ಸರ್ಕಾರಗಳು ಎಡವಿದವೇ? ಸಾರ್ವಜನಿಕ ಹಿತಾಸಕ್ತಿ ಮರೆತು ಬಿಟ್ಟವೇ? ಅಥವಾ ದೇವೇಗೌಡರೇ ರಾಜಕೀಯ ಇಲ್ಲವೇ ವೈಯಕ್ತಿಕ ಕಾರಣಗಳಿಗಾಗಿ ಯೋಜನೆಯನ್ನು ವಿರೋಧಿಸುತ್ತಿದ್ದಾರೆಯೇ ಎಂಬುದು ಈಗ ಕಾಡುತ್ತಿರುವ ಪ್ರಶ್ನೆ.

1995ರಲ್ಲಿ ಬಾಬಾ ಕಲ್ಯಾಣಿ, ಮೆಸಾಚುಸೆಟ್ಸ್‌ನ ರಾಜ್ಯಪಾಲ ಹಾಗೂ ಸರ್ಕಾರದ ನಡುವೆ ಬೆಂಗಳೂರು–ಮೈಸೂರು ರಸ್ತೆ ಹೆದ್ದಾರಿ ನಿರ್ಮಾಣಕ್ಕೆ ರುಜು ಆಗಿದ್ದಾಗ ಸರ್ಕಾರ ಹಾಕಿದ್ದ ಷರತ್ತುಗಳು ಇವು : 'ಬೆಂಗಳೂರು–ಮೈಸೂರು ನಡುವೆ 110 ಕಿ.ಮೀ ಹೆದ್ದಾರಿ ನಿರ್ಮಿಸುವ್ಯದಲ್ಲದೇ ಈ ರಸ್ತೆಗೆ ರಾಷ್ಟ್ರೀಯ ಹ್ದೆದಾರಿ ಎನ್.ಎಚ್ 4 ಹಾಗೂ 12ರ ಜತೆಗೆ ಸಂಪರ್ಕ ಕಲ್ಪಿಸುವ 41 ಕಿ.ಮೀ ರಸ್ತೆಯನ್ನೂ ನಿರ್ಮಿಸಬೇಕು. ಇದಕ್ಕಾಗಿ ಚತುಷ್ಪಥ ರಸ್ತೆ ನಿರ್ಮಿಸಬೇಕು. ಅದು ಕಾಂಕ್ರೀಟ್ ರಸ್ತೆ ಆಗಿರಬೇಕು. ಮುಂದೆ ಇದನ್ನು ಷಟ್ಪಥ ರಸ್ತೆಯಾಗಿ ರೂಪಿಸಲು ಅವಕಾಶ ಇರಬೇಕು. ರಸ್ತೆ ನಿರ್ಮಾಣಕ್ಕೆ ಬೇಕಾದ ಸರ್ಕಾರಿ ಮತ್ತು ಖಾಸಗಿ ಜಮೀನನ್ನು ಮಾರುಕಟ್ಟೆ ದರದಲ್ಲಿ ಖರೀದಿಸಬೇಕು. ಸಂಸ್ಥೆ ಖರೀದಿಸಿದ ರೈತರ ಜಮೀನಿಗೆ ಪರ್ಯಾಯವಾಗಿ ಬೇರೆ ಕಡೆ ಜಮೀನು ಕೊಡಬೇಕು. ಈ ರೈತರ ಕುಟುಂಬದ ಸದಸ್ಯರೊಬ್ಬರಿಗೆ ನೌಕರಿ ಕೊಡಬೇಕು. ಮನೆ ಕಳೆದು ಕೊಂಡವರಿಗೆ ಮನೆ ಕಟ್ಟಿಸಿಕೊಡಬೇಕು. ಈ ಯೋಜನೆಯಿಂದ ಸರ್ಕಾರದ ಮೇಲೆ ಯಾವುದೇ ಹೊರೆ ಬೀಳಬಾರದು. ಜಮೀನನ್ನು ಪರಭಾರೆ ಮಾಡಬಾರದು, ಯೋಜನೆ ಪೂರ್ಣಗೊಂಡ ನಂತರ 30 ವರ್ಷಗಳ ಕಾಲ ಸಂಸ್ಥೆಯು ಟೋಲ್ ಸಂಗ್ರಹಿಸಿ ರಸ್ತೆಯನ್ನು ಸರ್ಕಾರಕ್ಕೆ ಬಿಟ್ಟುಕೊಡಬೇಕು. ರಸ್ತೆ ನಿರ್ಮಾಣ ಮಾಡುವ ಸಂಸ್ಥೆ ಹೂಡಿದ ಬಂಡವಾಳಕ್ಕೆ ಕನಿಷ್ಠ ಶೇ 18 ರಿಂದ 20ರಷ್ಟು ಲಾಭ ಬರಬೇಕು ಎಂಬ ದೃಷ್ಟಿಯಿಂದ ಬಿಡದಿ, ರಾಮನಗರ, ಚನ್ನಪಟ್ಟಣ, ಮಂಡ್ಯ ಮತ್ತು ಶ್ರೀರಂಗಪಟ್ಟಣದ ಬಳಿ ಟೌನ್‌ಶಿಪ್ ನಿರ್ಮಿಸಬಹುದು. 30 ವರ್ಷಗಳ ನಂತರ ಇದರಲ್ಲಿ ಶೇ 60ರಷ್ಟು ಪ್ರದೇಶವನ್ನು ಸರ್ಕಾರಕ್ಕೆ ಬಿಟ್ಟುಕೊಡಬೇಕು. ಶೇ 40ರಷ್ಟು ಪ್ರದೇಶದಲ್ಲಿ ನಿವೇಶನ / ಮನೆ ನಿರ್ಮಿಸಿ ಮಾರಬಹುದು'. ಆಗ ಈ ಯೋಜನೆಯಡಿ ರಸ್ತೆ ನಿರ್ಮಾಣಕ್ಕಾಗಿ 5,800 ಎಕರೆ ಮತ್ತು ಟೌನ್‌ಶಿಪ್ ನಿರ್ಮಾಣಕ್ಕೆ 13,000 ಎಕರೆ ಜಮೀನು ಬೇಕು ಎಂದು ಅಂದಾಜು ಮಾಡಲಾಗಿತ್ತು. ಇದಾದ ನಂತರ ಗೌಡರು ಪ್ರಧಾನಿಯಾಗಿ ದೆಹಲಿಗೆ ತೆರಳಿದರು.

ಜೆ.ಎಚ್.ಪಟೇಲರು ಮುಖ್ಯಮಂತ್ರಿಯಾಗಿದ್ದ ಅವಧಿಯ್ಲಲಿ ನೈಸ್ ಸಂಸ್ಥೆ ಅಸ್ತಿತ್ವಕ್ಕೆ ಬಂದು ಈ ಯೋಜನೆಯನ್ನು ನಿರ್ವಹಿಸಲು ಮುಂದೆ ಬಂತು. ಆಗ ನೈಸ್ ಸಂಸ್ಥೆ ಜತೆಗೆ ಮಾಡಿಕೊಂಡ ಒಪ್ಪಂದದಲ್ಲಿ ಸಂಸ್ಥೆಗೆ ಕೊಡಬೇಕಾದ ಭೂಮಿಯ

ಪ್ರಮಾಣವನ್ನು 20,193 ಎಕರೆಗೆ ಏರಿಸಲಾಯಿತು. ಇದರಲ್ಲಿ 6,999 ಎಕರೆ ಪ್ರದೇಶವನ್ನು ರಸ್ತೆ ನಿರ್ಮಾಣಕ್ಕೆ ಉಳಿದ ಭೂಮಿಯನ್ನು ಟೌನ್‌ಶಿಪ್ ನಿರ್ಮಾಣಕ್ಕೆ ಎಂದು ನಿಗದಿ ಮಾಡಲಾಯಿತು. ಆದರೆ, ಸರ್ಕಾರಿ ಜಮೀನನ್ನು ಮಾರುಕಟ್ಟೆ ದರದಲ್ಲಿ ಖರೀದಿಸಬೇಕು ಎಂಬ ಷರತ್ತನ್ನು ಸಡಿಲಿಸಿ ಒಂದು ಎಕರೆ ಜಮೀನಿಗೆ ಒಂದು ವರ್ಷಕ್ಕೆ ಹತ್ತು ರೂಪಾಯಿಯಂತೆ ಗುತ್ತಿಗೆ ಕೊಡಬೇಕು ಎಂದು ಒಪ್ಪಂದ ಮಾಡಿಕೊಳ್ಳಲಾಯಿತು!

ಪಟೇಲರ ನಂತರ ಎಸ್.ಎಂ.ಕೃಷ್ಣ ಸರ್ಕಾರ ಅಧಿಕಾರಕ್ಕೆ ಬಂದಾಗ, ನೈಸ್ ಸಂಸ್ಥೆಗೆ ರೈತರ ಭೂಮಿ ಖರೀದಿ ಮಾಡಲು ಹತ್ತು ಕೋಟಿ ರೂಪಾಯಿ ಠೇವಣಿ ಇಡಬೇಕು ಎಂದು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ, ಸಂಸ್ಥೆಗೆ ತಿಳಿಸಿತು. 'ಅಷ್ಟು ಹಣ ನಮ್ಮ ಬಳಿ ಇಲ್ಲ. ಸಾಲ ಎತ್ತಲು ಸರ್ಕಾರದ ಭೂಮಿಯನ್ನು ಅಡವು ಇಡಲು ಅನುಮತಿ ಕೊಡಿ' ಎಂದು ನೈಸ್ ಸಂಸ್ಥೆ ಸರ್ಕಾರಕ್ಕೆ ಕೇಳಿಕೊಂಡಿತು. ಇದಕ್ಕೆ ಸಂಬಂಧಿಸಿದಂತೆ ಒಂದು ಒಪ್ಪಂದವೂ ಆಯಿತು. ಇದಕ್ಕೆ ಪೂರಕವಾಗಿ ತನಗೆ ಹಂಚಿಕೆಯಾಗ್ಗಿದ 1,800 ಎಕರೆ ಜಮೀನನ್ನು ಹಾಗೂ ಖಾಸಗಿಯವರಿಂದ ಖರೀದಿಸಿದ್ದ ಜಮೀನನ್ನು ಅಡವು ಇಡಲು ಖಾತ್ರಿ ನಿಂತುಕೊಳ್ಳುವುದಕ್ಕೆ ಪುರಾವೆಯಾಗಿ 'ಲೆಟರ್ ಆಫ್ ಕಂಫರ್ಟ್' ಅನ್ನೂ ಕೃಷ್ಣ ಸರ್ಕಾರ ಸಂಸ್ಥೆಗೆ ನೀಡಿತು. ಆ ಮೂಲಕ, ಮೂಲ ಒಪ್ಪಂದದಲ್ಲಿ ಇದ್ದ, 'ಸರ್ಕಾರದ ಮೇಲೆ ಯಾವುದೇ ಹೊರೆ ಬೀಳಬಾರದು' ಎಂಬ ಷರತ್ತು ಕಡೆಗಣಿತವಾಯಿತು. ನೈಸ್ ಸಂಸ್ಥೆ ಈ ಜಮೀನನ್ನು ಐ.ಸಿ.ಐ.ಸಿ.ಐ ಬ್ಯಾಂಕಿಗೆ ಅಡವು ಇಟ್ಟು 150 ಕೋಟಿ ರೂಪಾಯಿ ಸಾಲ ಎತ್ತಿತು.

ಜತೆಗೆ ಕೃಷ್ಣ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೇ ಈ ರಸ್ತೆ ಯೋಜನೆಗೆ ಕೊಟ್ಟಿರುವ ಸರ್ಕಾರಿ/ ಖಾಸಗಿ ಜಮೀನನ್ನು ಪರಭಾರೆ ಮಾಡಲು ಮತ್ತು ರಸ್ತೆ ಯೋಜನೆಯನ್ನು ಪದೇ ಪದೇ ಬದಲಿಸಲು ಅವಕಾಶ ಸಿಕ್ಕಿತು. ಹಾಗೂ ಡಿ.ಕೆ.ಶಿವಕುಮಾರ್ ಅಧ್ಯಕ್ಷರಾಗಿದ್ದ ಬಿಎಂಐಸಿ ಯೋಜನಾ ಪ್ರಾಧಿಕಾರ 1.53 ಲಕ್ಷ ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆಯನ್ನೂ ಹೊರಡಿಸಿತು. ಒಟ್ಟು ಯೋಜನೆಗೆ ಬೇಕಾಗಿದ್ದ 20,193 ಎಕರೆ ಜಮೀನಿಗೆ ಹೋಲಿಸಿದಾಗ 1.53 ಲಕ್ಷ ಎಕರೆ ಜಮೀನಿಗೆ ಅಧಿಸೂಚನೆ ಹೊರಡಿಸ್ಸಿದು ಶಂಕೆ ಮೂಡಿಸಿತು. ದೇವೇಗೌಡರು, ಈಗ 'ಮದ್ದೂರಿನವರು, ಕನಕಪುರದವರು ಏನೇನು ಮಾಡಿದ್ದಾರೆ, ಅದು ಹೊರಗೆ ಬರಲಿ' ಎಂದು ಹೇಳುತ್ತಿರುವುದು ಈ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡೇ ಇರಬೇಕು. ನೈಸ್ ಸಂಸ್ಥೆ, ರಸ್ತೆ ಅಭಿವೃದ್ಧಿ ಮಾಡುತ್ತಲೇ ಸ್ಥಿರಾಸ್ತಿ ವಹಿವಾಟಿನಲ್ಲಿ ತೊಡಗಿದಾಗ ನಿವೃತ್ತ ಎಂಜಿನಿಯರ್ ಸೋಮಶೇಖರರೆಡ್ಡಿ ಎಂಬುವರು ರಾಜ್ಯ ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದರು. ಈ ಅರ್ಜಿಯ ಮೇಲೆ ಹೈಕೋರ್ಟ್ ತೀರ್ಪು ನೀಡಿ ಪಟೇಲ್ ಸರ್ಕಾರದ ಅವಧಿಯಲ್ಲಿ ಆದ ಒಪ್ಪಂದದ ಚೌಕಟ್ಟಿನಲ್ಲಿಯೇ ಯೋಜನೆ ಜಾರಿಯಾಗಬೇಕು ಎಂದು ಆದೇಶಿಸಿತು. ಈ ತೀರ್ಪನ್ನು ನೈಸ್ ಸಂಸ್ಥೆ ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನೆ ಮಾಡಿದಾಗ ಹೈಕೋರ್ಟ್ ತೀರ್ಪನ್ನೇ ಅದು ಕೂಡ ಎತ್ತಿ ಹಿಡಿಯಿತು.

ಆದರೆ, ಸರ್ಕಾರಗಳು ತಮ್ಮ ಯೋಜನೆಗೆ ಜಮೀನು ನೀಡಲು ವಿಳಂಬ ಮಾಡಿದಾಗ, ನೈಸ್ ಸಂಸ್ಥೆ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ಹೂಡಿತು. ವಿಳಂಬಕ್ಕೆ ದೇವೇಗೌಡ ಕುಟುಂಬ ಕಾರಣ ಎಂದೂ ಅದು ದೂರಿತು. ಈ ಪ್ರಕರಣ ಇನ್ನೂ ಇತ್ಯರ್ಥವಾಗಬೇಕಿದೆ. ಈ ಯೋಜನೆಯಿಂದ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಭಾವಿಸಿದ ನಿವೃತ್ತ ನ್ಯಾಯಮೂರ್ತಿ ರಾಮಾಜೋಯಿಸ್ ಅವರು ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರಕ್ಕೆ ಒಂದು ಪ್ರಸ್ತಾವ ಸಲ್ಲಿಸಿ ಇದುವರೆಗೆ ಈ ಯೋಜನೆಗೆ ಆಗಿರುವ ವೆಚ್ಚವನ್ನು ನೈಸ್ ಸಂಸ್ಥೆಗೆ ಸರ್ಕಾರವೇ ಭರಿಸಿಕೊಟ್ಟು ತಾನೇ ಅನುಷ್ಠಾನ ಮಾಡಬೇಕು, ಈ ಬಗ್ಗೆ ಒಂದು ಮಸೂದೆ ಮಂಡಿಸಬೇಕು ಎಂದು ಶಿಫಾರಸು ಮಾಡಿದರು. ಆದರೆ, ಈ ಮಸೂದೆ ಬಗ್ಗೆ ಸಂಪ್ಪಟದಲ್ಲಿ ಚರ್ಚೆಯಾಗುವಾಗ ಪಂಚತಾರಾ ಹೋಟೆಲ್‌ಗಳಲ್ಲಿ ಬಿಜೆಪಿ ಶಾಸಕರ ಸಭೆ ನಡೆದು ಸಂಪುಟ ಸಭೆಯಲ್ಲಿ ಯಾರೂ ಭಾಗವಹಿಸಲಿಲ್ಲ. ಹಾಗಿದ್ದೂ, ರಸ್ತೆ ನಿರ್ಮಾಣಕ್ಕೆ ಕುಮಾರಸ್ವಾಮಿ ಜಾಗತಿಕ ಟೆಂಡರ್ ಕರೆಯಲು ತೀರ್ಮಾನಿಸಿದರು. ನೈಸ್ ಯೋಜನೆ ಕುರಿತು ವಿಧಾನಮಂಡಲದಲ್ಲಿ ನಡೆದ ಸುದೀರ್ಘ ಚರ್ಚೆಯ ಫಲಶ್ರುತಿ ಎಂಬಂತೆ ಕುಮಾರಸ್ವಾಮಿ ಸರ್ಕಾರ ಬಿ.ಸಿ.ಪಟೇಲ್ ಆಯೋಗ ನೇಮಿಸಿ ವಿಚಾರಣೆಗೆ ಆದೇಶಿಸಿತು. ಅದಕ್ಕೆ ನೈಸ್ ಸಂಸ್ಥೆ ಸುಪ್ರೀಂ ಕೋರ್ಟಿನಿಂದ ತಡೆಯಾಜ್ಞೆ ತಂದಿತು. ನಂತರ ಯಡಿಯೂರಪ್ಪ ಈ ಪ್ರಸ್ತಾವ ಕೈ ಬಿಟ್ಟರು.

2002ರಲ್ಲಿ ಕನಕಪುರ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿ ಗೆದ್ದ ನಂತರ ನೈಸ್ ಸಂಸ್ಥೆಯ ವಿರುದ್ಧ ಸಮರ ಸಾರಿದ ದೇವೇಗೌಡರು, ನೈಸ್ ಸಂಸ್ಥೆ ಸಲ್ಲಿಸಿದ ಅರ್ಜಿಗಳ ಮೇಲೆ ನ್ಯಾಯಾಲಯ ನೀಡುತ್ತಿರುವ ಆದೇಶಗಳು 'ಸೃಷ್ಟಿತ ದಾಖಲೆಗಳ ಆಧಾರದ್ದು' ಎಂಬ ಒಂದು ಪುಸ್ತಕವನ್ನೇ ಬರೆದು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟಿನ ನ್ಯಾಯಮೂರ್ತಿಗಳಿಗೆ ಕಳುಹಿಸಿಕೊಟ್ಟರು. ಈ ಪುಸ್ತಕ ಕಳುಹಿಸಿದ ರೀತಿಯನ್ನು ಇಷ್ಟಪಡದ್ದಿದರೂ ಹೈಕೋರ್ಟ್ ಅದನ್ನು ಒಂದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಎಂದು ಪರಿಗಣಿಸಿ ಈ ಬಗ್ಗೆ ಲೋಕಾಯುಕ್ತರಿಂದ ತನಿಖೆ ಮಾಡಿಸಬೇಕು ಎಂದು ಆದೇಶಿಸಿತು. ಅದಕ್ಕೂ ನೈಸ್ ಸಂಸ್ಥೆ ಸುಪ್ರೀಂ ಕೋರ್ಟಿನಿಂದ ತಡೆಯಾಜ್ಞೆ ತಂದಿತು. ಈ ಮಧ್ಯೆ, ದೇವೇಗೌಡರು ನ್ಯಾಯಾಂಗ ನಿಂದನೆ ಅರ್ಜಿಯಲ್ಲಿ ತಾವು ಇಂಪ್ಲೀಡ್ ಆಗಲು ಬಯಸಿ ಅರ್ಜಿ ಸ್ಲಲಿಸಿದರು. ಸಾಹಿತಿ ಅನಂತಮೂರ್ತಿಯವರೂ ಈ ಯೋಜನೆಯಿಂದ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ದೂರಿ ಇಂಪ್ಲೀಡ್ ಆಗಲು ಬಯಸಿ ಅರ್ಜಿ ಸಲ್ಲಿಸ್ದಿದಾರೆ.

ಇದೀಗ ಅಡ್ವೋಕೇಟ್ ಜನರಲ್ ಅಶೋಕ ಹಾರ್‍ನಹಳ್ಳಿಯವರು 2004ರ ಓಡಿಪಿ (ಕೃಷ್ಣ ಸರ್ಕಾರದ್ಲಲಿ ಆದ ಒಪ್ಪಂದ) ಅನುಸಾರ ಯೋಜನೆಗೆ ಜಮೀನು ಕೊಡಲು ಸಿದ್ಧ ಎಂದು ಸುಪ್ರೀಂ ಕೋರ್ಟಿಗೆ ತಿಳಿಸಿದ್ದಾರೆ. ಅವರು 97ರ (ಪಟೇಲ ಸರ್ಕಾರ) ಮೂಲ ಚೌಕಟ್ಟು ಆಧಾರದ ಮೇಲೆ ಜಮೀನು ಕೊಡುತ್ತೇವೆ ಎಂದು ಹೇಳಬೇಕಿತ್ತು ಎಂಬುದು ದೇವೇಗೌಡರ ವಾದ. ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆ ಪ್ರಧಾನ ಕಾರ್ಯದರ್ಶಿಗಳ ವಾದವೂ ಅದೇ ಇದ್ದಂತಿದೆ. 2004ರ ಓಡಿಪಿ ಪ್ರಕಾರ

ಜಮೀನು ಕೊಟ್ಟರೆ ಅದು ದೇವೇಗೌಡರು ಆರೋಪಿಸುತ್ತಿರುವಂತೆ ರಸ್ತೆ ನಿರ್ಮಾಣ ಬಿಟ್ಟು ಫಿಲ್ಮ್ ಸಿಟಿಗಳ ನಿರ್ಮಾಣಕ್ಕೆ ಅವಕಾಶ ಕಲ್ಪಿಸಬಹುದು ಎಂಬ ಶಂಕೆ ಇದೆ. ಹಾರ್ನಹಳ್ಳಿಯವರು ಹೇಳಿದ್ದನ್ನು ಹಿಂದಿನ ಅಡ್ವೋಕೇಟ್ ಜನರಲ್ ಉದಯ್ ಹೊಳ್ಳ ಹೇಳಲು ಒಪ್ಪಲಿಲ್ಲವೇ? ಅದಕ್ಕೇ ಅವರು ರಾಜೀನಾಮೆ ಕೊಟ್ಟು ಹೊರಟು ಹೋದರೇ?

ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ಹೈಕೋರ್ಟ್ ಆದೇಶವನ್ನು ಎತ್ತಿ ಹಿಡಿದಿರುವ ಸುಪ್ರೀಂ ಕೋರ್ಟ್ ನ್ಯಾಯಾಂಗ ನಿಂದನೆ, ಅನಂತಮೂರ್ತಿ ಮತ್ತು ದೇವೇಗೌಡರ ಇಂಪ್ಲೀಡ್ ಅರ್ಜಿಗಳ ಮೇಲೆ ತೀರ್ಮಾನ ಕೊಡಬೇಕಿದೆ. ದೇವೇಗೌಡರು, ತಮ್ಮ ಎಲ್ಲ ಪ್ರತಿಷ್ಠೆಯನ್ನು ಪಣಕ್ಕೆ ಇಟ್ಟು ಹೋರಾಟ ಮಾಡುತ್ತಿದಾರೆ. ತಾಳ್ಮೆಯನ್ನೂ ಕಳೆದುಕೊಳ್ಳುತ್ತಿದಾರೆ. ಯಡಿಯೂರಪ್ಪನವರು ಪ್ರಧಾನಿ ಬಳಿಯೇ ಚರ್ಚೆಗೆ ಹೋಗೋಣ ಎನ್ನುತ್ತಿದಾರೆ (ಏಕೆ? ಕೃಷ್ಣ ಅವರನ್ನು ಸಿಗಿಸಿಹಾಕಲೇ?!). ಈ ಆರೋಪ, ಪ್ರತ್ಯಾರೋಪಗಳಲ್ಲಿ ವಸ್ತುಸ್ಥಿತಿ ಏನು ಎಂಬುದು ಯಾರಿಗೂ ಗೊತ್ತಾಗುತ್ತಿಲ. 15 ವರ್ಷಗಳ ಕಾಲ ಒಂದು ಯೋಜನೆ ಎಳೆದಾಡಿದರೆ ಏನೆಲ್ಲ ಗೊಂದಲ ಆಗಬೇಕೋ ಈಗ ಅದೇ ಆಗಿದೆ. ದೇವೇಗೌಡರಿಗೆ ನೈಸ್ ಯೋಜನೆ ಬಗ್ಗೆ ಪೂರ್ವಗ್ರಹ ಇದೆ ಎಂದು ಬೇಕಾದರೆ ಅಂದುಕೊಳ್ಳೋಣ. ಅನಂತಮೂರ್ತಿ, ರಾಮಾ ಜೋಯಿಸರಿಗೆ ಯಾವ ಪೂರ್ವಗ್ರಹ? ಯಡಿಯೂರಪ್ಪನವರು ಹೇಳುವಂತೆ ನೈಸ್ ಯೋಜನೆಗೆ ಅವರ ಸರ್ಕಾರ ಒಂದು ಅಂಗುಲ ಜಾಗವನ್ನೂ ಕೊಡದೇ ಇದ್ದರೆ ಶ್ವೇತಪತ್ರ ಹೊರಡಿಸಲು ಏನು ಅಡ್ಡಿ? ದೇವೇಗೌಡರು ಮುಖ್ಯಮಂತ್ರಿ ಬಗ್ಗೆ ಬಳಸಿದ ಕೆಟ್ಟ ಭಾಷೆ ಮೂಲ ವಿಷಯವನ್ನೇ ಮರೆಮಾಚುವ ಸಾಧ್ಯತೆ ಇದೆ. ಯಡಿಯೂರಪ್ಪನವರಿಗೂ ಅದೇ ಬೇಕಾಗಿದೆಯೇ?

■

# ಯಂತ್ರಗಳನ್ನು ಕಳಚಿ...
# 'ಚರಕ'ಗಳನ್ನು ಹಿಡಿದು...

ಶಿವಮೊಗ್ಗದಲ್ಲಿ ಗುರುವಾರ ಮುಖ್ಯಮಂತ್ರಿ ಯಡಿಯೂರಪ್ಪ 600 ಕೋಟಿ ರೂ. ಬಂಡವಾಳದ ಸಿದ್ಧ ಉಡುಪು ಕಾರ್ಖಾನೆಗೆ ಶಂಕುಸ್ಥಾಪನೆ ಮಾಡಿದರು. ಜಿಲ್ಲೆಯ ಹೆಗ್ಗೋಡಿನ 'ಚರಕ' ಕೇಂದ್ರದಲ್ಲಿ ಅದೇ ದಿನ ಕೈಮಗ್ಗ ನೇಕಾರರ ಉತ್ಪನ್ನಗಳ ಮಾರಾಟಗಾರರ ಮತ್ತು ಕೊಳ್ಳುವವರ ಸಭೆ ನಡೆಯಿತು. ಸಿದ್ಧ ಉಡುಪು ಘಟಕ ಯಂತ್ರ ವೈಭವದ್ದು. ಗ್ರಾಮಗಳಿಂದ ಜನರ ವಲಸೆ ಬೇಡು ವಂಥದು ಮತ್ತು ಪ್ರಚೋದಿಸುವಂಥದು. 'ಚರಕ' ಜನರನ್ನು ಗ್ರಾಮಗಳಲ್ಲಿಯೇ ಉಳಿಸುವಂಥದು. ಅವರನ್ನು ಸ್ವಾವಲಂಬಿ ಮಾಡುವಂಥದು. ಪರಿಸರವನ್ನು ಉಳಿಸುವಂಥದು. ವಿದ್ಯುತ್ತೂ ಬೇಡ, ಯಂತ್ರಗಳೂ ಬೇಡ ಎನ್ನುವಂಥದು.

ಹೌದು, ಯಂತ್ರಗಳು ಬೇಡ ಎಂದು ಹೇಳುವುದು ಸುಲಭ. ಅನುಸರಿಸುವುದು ಕಷ್ಟ. ನಾವು ಹಿಂದೆ ಹೋಗಲಾಗದಷ್ಟು ಮುಂದೆ ಬಂದಿದ್ದೇವೆ. ಪರಿಣಾಮ ಗುಡಿ ಕೈಗಾರಿಕೆಗಳು ಒಂದೊಂದೇ ನಾಶವಾಗುತ್ತಿವೆ. ನಮ್ಮ ಹಳ್ಳಿಗಳಲ್ಲಿ ಕಂಬಾರರು, ಕುಂಬಾರರು, ಬಡಗಿಗಳು ಸಿಗುವುದು ಈಗ ಬಹಳ ಕಷ್ಟ. ಸಿಕ್ಕರೂ ಅವರ ಬದುಕು ದುರ್ಭರ. ಕೈಮಗ್ಗಗಳು, ಖಾದಿ ಗ್ರಾಮೋದ್ಯೋಗ ಘಟಕಗಳು ಒಂದೊಂದಾಗಿ ಕಣ್ಣು ಮುಚ್ಚಿವೆ.

ಕಣ್ಣು ತೆರೆದಿದ್ದರೂ ಬದುಕಿದ ಲಕ್ಷಣಗಳೇನೂ ಕಾಣುವುದಿಲ್ಲ. ಆದರೂ ಪ್ರವಾಹದ ವಿರುದ್ಧ ಈಜುವ ಒಂದು ಪ್ರವೃತ್ತಿ, ಬಯಕೆ, ಒತ್ತಡ ಎಲ್ಲೋ ಎಲ್ಲರನ್ನೂ ಕಾಡುತ್ತದೆ. ಅದು 'ಮರಳಿ ಮಣ್ಣಿಗೆ' ಹೋಗುವ ಬಯಕೆ, ಆ ಬಯಕೆಯನ್ನು ಬೆಂಬತ್ತಿ ಮರಳಿ ಹಳ್ಳಿಗೆ ಹೋದವರು ವಿರಳ. ಕನ್ನಡದ ಪ್ರಸಿದ್ಧ ಲೇಖಕ, ನಾಟಕಕಾರ ಪ್ರಸನ್ನ ಅಂಥ ಕೆಲಸ ಮಾಡಿದ್ದಾರೆ. ದೆಹಲಿಯಂಥ ದೇಶದ ರಾಜಧಾನಿ ಯಲ್ಲಿ ಸಾಕಷ್ಟು ಸಂಬಳ ತರುವ ಉನ್ನತ ಕೆಲಸದಲ್ಲಿ ಇದ್ದಾಗಲೂ 'ನನ್ನ ಬೇರುಗಳು ಇಲ್ಲಿ ಇಲ್ಲ ಎಂದೋ' ಅಥವಾ 'ನಾನು ಮಾಡಬೇಕಾದುದು ಇದಲ್ಲ' ಎಂದೋ ಬಿಟ್ಟು ಬಂದವರು ಅವರು. ಅದು 22 ವರ್ಷಗಳ ಹಿಂದಿನ ಕಥೆ. ಬಂದ ನಾಲ್ಕು ವರ್ಷಗಳ ನಂತರ ಅವರು ಕೈಗೆ ತೆಗೆದುಕೊಂಡುದು 'ಚರಕ'ವನ್ನು. ಈಗ 'ಚರಕ' ಒಂದು ದೊಡ್ಡ ಸಂಸ್ಥೆಯಾಗಿ ಬೆಳೆದು ನಿಂತಿದೆ. ನೂರಾರು ಮಂದಿ ಹೆಣ್ಣು ಮಕ್ಕಳಿಗೆ ಬದುಕು ಕೊಟ್ಟಿದೆ. ಯಂತ್ರ ನಾಗರಿಕತೆಗೆ ತನ್ನದೇ ಆದ ರೀತಿಯಲ್ಲಿ ಉತ್ತರವನ್ನೂ ಕೊಡುತ್ತಿದೆ.

ಪ್ರಸನ್ನ, ದೆಹಲಿಯಲ್ಲಿ ಇದ್ದರೂ ಶಿವಮೊಗ್ಗದ ದಟ್ಟ ಕಾಡು ಅವರನ್ನು ಕಾಡುತ್ತಿತ್ತು. ಊರಿನಲ್ಲಿಯೇ ಏನಾದರೂ ಸಾಹಿತ್ಯ-ಪಾಹಿತ್ಯ ಎಂದು ಇದ್ದುಕೊಂಡ ರಾಯಿತು ಎಂದು ಊರಿಗೆ ಬಂದರು. ಇವರಿಗೆ ಕೆ.ವಿ ಸುಬ್ಬಣ್ಣ ಒಂದಿಷ್ಟು ಜಾಗ ತೆಗೆದಿಟ್ಟಿದ್ದರು. ಅಲ್ಲಿ ಪ್ರಸನ್ನ ಮೊದಲು ಆರಂಭಿಸಿದ್ದು 'ಕವಿ-ಕಾವ್ಯ' ಟ್ರಸ್ಟ್, ಕೆಲ ಕಾಲ ಸಾಹಿತ್ಯ, ವಿಚಾರ ಸಂಕಿರಣ ಇತ್ಯಾದಿ ಮಾಡಿದ್ದಾಯಿತು. ಆದರೆ, ಸುತ್ತಮುತ್ತ ನಡೆಯುತ್ತಿದ್ದ ವಿದ್ಯಮಾನ ಅವರನ್ನು ಕಾಡತೊಡಗಿತು. ಜನರಿಗೆ ಬಡತನ, ಕೃಷಿ ಮಾಡಲು ಜಮೀನು ಇಲ್ಲ. ಅದಕ್ಕಾಗಿ ಕಾಡು ಕಡಿಯುವುದು. ಕಡಿದ ಕಾಡು ಕೂಡ ಕೃಷಿಗೆ ಸಾಕಾಗದೇ ಇದ್ದುದು. ಅದರಿಂದ ನಿಸರ್ಗ ಹಾಳಾದುದು. ಹತಾಶೆ ಬೆಳೆಯುತ್ತಿದ್ದುದು... ಇದು ಆ ವಿದ್ಯಮಾನ.

ಈ ಜನರನ್ನು ಕೃಷಿಯಲ್ಲದ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿದರೆ ಕಾಡು ಉಳಿದೀತು. ಅವರಿಗೂ ಒಂದು ಸುಸ್ಥಿರ ಆರ್ಥಿಕ ಬಲ ಬಂದೀತು ಎಂದುಕೊಂಡು ನೇಕಾರಿಕೆಯಲ್ಲಿ ಅವರನ್ನು ತೊಡಗಿಸಲು ಪ್ರಸನ್ನ ಯೋಚಿಸಿದರು. 'ಚರಕ' ಸಂಸ್ಥೆ ಕಟ್ಟಿದರು. 'ಹಳ್ಳಿಗಳ ಗಂಡುಮಕ್ಕಳು ಎಷ್ಟು ಹಾಳಾಗಿದ್ದಾರೆ ಎಂದರೆ ಅವರನ್ನು ನೆಚ್ಚಿಕೊಂಡು ಏನನ್ನೂ ಮಾಡಲು ಸಾಧ್ಯವಿಲ್ಲ. ಚಟ, ಸಣ್ಣತನ, ರಾಜಕೀಯ, ಅಲೆದಾಟ ಅವರನ್ನು ಪೂರ್ಣಹಾಳು ಮಾಡಿಬಿಟ್ಟಿವೆ. ಹೆಣ್ಣು ಮಕ್ಕಳನ್ನು ತೊಡಗಿಸಿ ಕೊಂಡರೆ ಏನನ್ನಾದರೂ ಮಾಡಲು ಸಾಧ್ಯ. ಅವರ ಮನೆ ಉಳಿಸಲು ಸಾಧ್ಯ ಎಂದು ಕೊಂಡು 'ಚರಕ' ಸಂಸ್ಥೆಯನ್ನು ಮಹಿಳೆಯರ ಕೈಗೇ ಕೊಡಲು ನಿರ್ಧರಿಸಿದೆವು. ಆದರೆ ಹೆಣ್ಣು ಮಕ್ಕಳು ಮೂಕರಾಗಿದ್ದಾರೆ. ಅವರನ್ನು ಮಾತಿಗೆ, ಕ್ರಿಯೆಗೆ ಹಚ್ಚುವುದು ಕಷ್ಟ. ಆದರೆ, ಒಂದು ಸಾರಿ ಅವರು ಕೆಲಸ ಹಿಡಿದರೆ ಅದನ್ನು ಪಟ್ಟಾಗಿ ಕುಳಿತು ಮಾಡುತ್ತಾರೆ. ಗಂಡಸರೋ ಶುದ್ಧ ಕಪ್ಪೆಗಳು. ಒಂದು ಕಡೆ ಕೂಡುವುದಿಲ್ಲ. ಯಾವುದನ್ನೂ ನೆಟ್ಟಗೆ ಮಾಡುವುದಿಲ್ಲ...' ಪ್ರಸನ್ನ ಹೇಳುತ್ತ ಹೋದರು.

'ಆ ಹೆಣ್ಣು ಮಕ್ಕಳಿಗೆಲ್ಲ ಟೇಲರಿಂಗ್ ತರಬೇತಿ ಕೊಡಿಸಿ, ಸುತ್ತಲಿನ ಊರುಗಳಿಂದ ನೂಲು ತರಿಸಿ ಮೊದಲು ಜುಬ್ಬಾ ಹೊಲಿಸಿದೆ. ಮೊದಲ ಗ್ರಾಹಕ ನಾನೇ ಆಗಿರಬೇಕು ಎಂದು. ಜುಬ್ಬಾ ಹೊಲೆದು ಉಳಿದ ಬಟ್ಟೆ ತುಂಡುಗಳನ್ನು ಹಾಳು ಮಾಡಬಾರದು

ಎಂದು ಕನ್ನಡಕದ ಪೌಚುಗಳನ್ನು, ಮಹಿಳೆಯರ ಪರ್ಸುಗಳನ್ನು, ಕೌದಿಗಳನ್ನು ಹೊಲೆದೆವು. ಐದು ವರ್ಷಗಳ ಕಾಲ ನಮ್ಮ ವಸ್ತುಗಳಿಗೆ ಗ್ರಾಹಕರು ಸಿಗುವುದು ಕಷ್ಟವಾಯಿತು. ಯಾರಾದರೂ ನನಗೆ ಭಾಷಣಕ್ಕೆ ಕರೆದರೆ ಸಂಭಾವನೆ ಬದಲು ಪ್ರಯಾಣಕ್ಕೆ ಒಂದು ಟ್ಯಾಕ್ಸಿ ಕೊಡಿ ಎಂದು ಕೇಳುತ್ತಿದೆ. ಆ ಟ್ಯಾಕ್ಸಿಯ ಡಿಕ್ಕಿಯಲ್ಲಿ ನಮ್ಮ ಉತ್ಪನ್ನಗಳನ್ನು ಹಾಕಿಕೊಂಡು ಒಬ್ಬಿಬ್ಬರು ಕೆಲಸಗಾರರನ್ನು ಕರೆದುಕೊಂಡು ಸಭೆಗೆ ಹೋಗುತ್ತಿದ್ದೆ. ನಾನು ಒಳಗೆ ಭಾಷಣ ಮಾಡುತ್ತಿದ್ದಾಗ ಹೊರಗೆ ಈ ವಸ್ತುಗಳ ಮಾರಾಟ ನಡೆಯುತ್ತಿತ್ತು. ಭಾಷಣ ಮಾಡುವಾಗ ಈ ವಸ್ತುಗಳನ್ನು ಕೊಳ್ಳಿರಿ ಎಂದು ನಾನು ಹೇಳುತ್ತಿದ್ದೆ.

'ಚರಕಕ್ಕೆ ಒಂದಿಷ್ಟು ಬಲ ಬಂತು ಎನಿಸಿದಾಗ ಆ ಜಾಗದಲ್ಲಿ ಕಟ್ಟಿದ ಕಟ್ಟಡದ ಕೀಲಿ ಕೈಯನ್ನು ಚರಕ ಮಹಿಳಾ ಸಹಕಾರಿ ವಿವಿಧೋದ್ದೇಶ ಸಂಘದ ಕಾರ್ಯ ದರ್ಶಿಣಿಗೆ ಕೊಟ್ಟೆವು. ಇನ್ನು ನೀವೇ ಈ ಸಂಘವನ್ನು ನಡೆಸಿಕೊಂಡು ಹೋಗಬೇಕು ಎಂದೆವು. ಇಲ್ಲಿ ಉತ್ಪಾದನೆಯಾದ ವಸ್ತುಗಳ ಮಾರಾಟಕ್ಕೆ 'ದೇಸಿ (ಡೆವಲಪ್ಪಿಂಗ್ ಇಕಾಲಜಿಕಲಿ ಸಸ್ಟೇನೆಬಲ್ ಇಂಡಸ್ಟ್ರೀಸ್)' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದೆವು. ಈ 'ದೇಸಿ' ಮಳಿಗೆಗಳು ಈಗ ವಾರ್ಷಿಕ ಐದು ಕೋಟಿ ರೂಪಾಯಿ ವಹಿವಾಟು ಮಾಡುತ್ತಿವೆ. ಬೆಂಗಳೂರು, ಧಾರವಾಡ, ಶಿವಮೊಗ್ಗಗಳಲ್ಲಿ ಈ ಮಳಿಗೆಗಳು ಇವೆ. 'ಚರಕ' ಆವರಣದಲ್ಲಿ ಕೈಮಗ್ಗ ನೇಕಾರಿಕೆಗೆ ಸಂಬಂಧಿಸಿದಂತೆ ಒಟ್ಟು 15 ಬಗೆಯ ಚಟುವಟಿಕೆಗಳು ನಡೆಯುತ್ತಿವೆ. ಅದರಲ್ಲಿ ಬಹಳ ಮುಖ್ಯವಾದುದು ಬಟ್ಟೆಗಳಿಗೆ ನೈಸರ್ಗಿಕ ಬಣ್ಣಗಳಿಂದಲೇ ಡೈಯಿಂಗ್ ಮಾಡುತ್ತಿರುವುದು. ನೇಕಾರಿಕೆ ಎಂಬುದು ನಮಗೆ 5,000 ವರ್ಷಗಳಿಂದ ಗೊತ್ತಿದ್ದ ಕಲೆ. 2,000 ವರ್ಷಗಳಷ್ಟು ಹಿಂದೆ ರೋಮ್ ದೇಶಕ್ಕೆ ಭಾರತದಿಂದಲೇ ಬಟ್ಟೆ ರಫ್ತಾಗುತ್ತಿತ್ತು. ರಫ್ತಾದ ಬಟ್ಟೆಗೆ ಅವರು ನಮಗೆ ಚಿನ್ನ ಕೊಡಬೇಕಿತ್ತು. ಭಾರತ ಚಿನ್ನ ತೆಗೆದುಕೊಂಡು ನಮಗೆ ಬಟ್ಟೆ ಕೊಡುತ್ತಿದೆ. ಆ ದೇಶದಿಂದ ಬಟ್ಟೆ ತೆಗೆದುಕೊಳ್ಳುವುದು ಬೇಡ ಎಂದು ರೋಮ್‌ನ ಸೆನೆಟ್‌ನಲ್ಲಿ ನಿರ್ಣಯ ಅಂಗೀಕಾರವಾಯಿತು. ಸೆನೆಟ್‌ನಲ್ಲಿ ಅವರು ಪಾಸು ಮಾಡಿದ ಇನ್ನೊಂದು ನಿರ್ಣಯ: ಭಾರತದಿಂದ ರಫ್ತಾಗುವ ಮಸ್ಲಿನ್ ಬಟ್ಟೆಯಲ್ಲಿ ನಮ್ಮ ಹೆಂಗಸರ ಮೈಯೆಲ್ಲ ಕಾಣುತ್ತದೆ. ಅದಕ್ಕಾಗಿ ಮಸ್ಲಿನ್ ಬಟ್ಟೆ ಖರೀದಿಸುವುದು ಬೇಡ ಎಂದು. ಆಗ ಖಂಡಿತ ಯಂತ್ರಗಳು ಇರಲಿಲ್ಲ!

'ಇದೀಗ 'ಚರಕ' ಸಂಸ್ಥೆಯ ಪಕ್ಕದಲ್ಲಿಯೇ 8 ಎಕರೆ ಜಾಗ ಖರೀದಿಸಿ ಅಲ್ಲಿ ಪ್ರೀ ಲೂಮ್ ಪ್ರೊಸೆಸಿಂಗ್ ಸಮುಚ್ಚಯ, ತರಬೇತಿ, ಸಗಟು ಮಾರುಕಟ್ಟೆಗೆ ವ್ಯವಸ್ಥೆ ಮಾಡುತ್ತಿದ್ದೇವೆ. ನಿಮಗೆ ನಂಬಿಕೆಯಾಗಲಿಕ್ಕಿಲ್ಲ. ಈ ಊರಿನಲ್ಲಿ 'ಚರಕ ಅಂಗಡಿ' ಇದೆ. ಅಲ್ಲಿ ನಮ್ಮ ಉತ್ಪನ್ನಗಳನ್ನೇ ಮಾರಾಟ ಮಾಡುತ್ತೇವೆ. ದಿನಕ್ಕೆ ನಾನೂರು ರೂಪಾಯಿ ವ್ಯಾಪಾರ ಆದರೆ ಸಾಕು ಎಂದುಕೊಂಡಿದ್ದೆವು. ಈಗ ಆರು ಸಾವಿರ ರೂಪಾಯಿ ವ್ಯಾಪಾರ ಆಗುತ್ತಿದೆ. ನಿಮಗೆ ಇದೂ ಗೊತ್ತಿರಲಿಕ್ಕಿಲ್ಲ. ಕೈಮಗ್ಗ ಉತ್ಪನ್ನಗಳ ಹೆಸರಿನಲ್ಲಿ ಶೇ 70ರಷ್ಟು ಬಟ್ಟೆ ಬರುತ್ತಿರುವುದು ವಿದ್ಯುತ್ ಮಗ್ಗದ್ದೇ. ಇದು ಖಾದಿಗೂ ಅನ್ವಯ. ಈಗಂತೂ ಖಾದಿ ಹೆಸರಿನಲ್ಲಿ ಬಂದ ಮಳಿಗೆಗಳಲ್ಲಿ ಎಲ್ಲಿಯೂ ಕೈಮಗ್ಗದ ಉತ್ಪನ್ನ

ಸಿಗುವುದಿಲ್ಲ. ಅದೆಲ್ಲ ವಿದ್ಯುತ್ ಮಗ್ಗದ್ದೇ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಅದಕ್ಕಿಂತ ಹಿಂದೆ ಖಾದಿ ಗ್ರಾಮೋದ್ಯೋಗ ಮಂಡಳಿ ಸ್ಥಾಪಿಸಿದಾಗ ಇದ್ದ ಉದ್ದೇಶಗಳೆಲ್ಲ ಹೇಗೆ ಮರೆಯಾಗಿ ಹೋದುವು ಎಂದರೆ ಗೊತ್ತೇ ಆಗಲಿಲ್ಲ'... ಪ್ರಸನ್ನ ಹೇಳುತ್ತಲೇ ಇದ್ದರು.

'ಚರಕ'ದ ಸದಸ್ಯರಾಗಿರುವ ಸ್ವ ಸಹಾಯ ಗುಂಪಿನ ಮಹಿಳೆಯರಿಗೆ ಅವರು ಮಾಡಿದ ಕೆಲಸಕ್ಕೆ ಕೂಲಿ ಎಂದು ಹೇಳಬಹುದಾದ ಹಣ ಮಾತ್ರ ಸಿಗುತ್ತಿಲ್ಲ. ಗುಜರಾತಿನ 'ಆನಂದ'ದ ಡೇರಿಗೆ ಹಾಲು ಪೂರೈಸುವ ರೈತರಿಗೆ ಹಾಲು ಮಾತ್ರವಲ್ಲದೇ ಅದರ ಉಪ ಉತ್ಪನ್ನಗಳಿಗೂ ತಕ್ಕ ಹಣ ಸಿಗುತ್ತದೆ. ಅದೇ ಮಾದರಿಯನ್ನು ಇಲ್ಲಿಯೂ ಅನುಸರಿಸಲಾಗಿದೆ. ಜತೆಗೆ ಕ್ಯಾಂಟೀನ್, ವಿಮೆ, ಬೋನಸ್ ಸೌಲಭ್ಯವೂ ಇದೆ. 'ಚರಕ'ದಲ್ಲಿ ಪದಾಧಿಕಾರಿಗಳಾಗಿ ಕೆಲಸ ಮಾಡಿದವರೇ 'ದೇಸಿ' ಮಳಿಗೆಗಳಲ್ಲಿ ಮ್ಯಾನೇಜರ್ ಹುದ್ದೆ ನಿಭಾಯಿಸುತ್ತಾರೆ. 'ಚರಕ'ದಲ್ಲಿ ಸಂಸ್ಥೆ ನಡೆಸಿದ ಅನುಭವ ಇಲ್ಲಿ ಅವರ ನೆರವಿಗೆ ಬರುತ್ತದೆ. ಪ್ರತಿ ವರ್ಷ 'ಚರಕ' ಉತ್ಸವ ನಡೆಯುತ್ತದೆ. ಅಲ್ಲಿ ಈ ಹೆಣ್ಣು ಮಕ್ಕಳೇ ನಾಟಕ ಆಡುತ್ತಾರೆ. ಈ ವರ್ಷ 'ಅಂಧೇರಿ ನಗರ ಚೌಪಟ್ ರಾಜಾ' ನಾಟಕ ರಂಗ ಏರಿತು. ಬಹುಶಃ ಇದು ಸಾರ್ವಕಾಲಿಕ ನಾಟಕ ಅನಿಸುತ್ತದೆ! ಎಲ್ಲ ಕಾಲದಲ್ಲೂ ಅಂಧೇರಿ ನಗರಗಳು ಚೌಪಟ್ ರಾಜರು ಇದ್ದೇ ಇರುತ್ತಾರೆ! 'ಧರ್ಮ ಮತ್ತು ಸಮಾಜ ಕಾರ್ಯ' ಕುರಿತು ವಿಚಾರ ಸಂಕಿರಣವೂ ನಡೆಯಿತು (ಇಂದು ಎರಡನೇ ದಿನದ ವಿಚಾರ ಸಂಕಿರಣ ನಡೆಯಲಿದೆ). ಬಹುತೇಕ ಮಠಗಳು ಈಗ ಧರ್ಮ ಮತ್ತು ರಾಜಕೀಯ ಕಾರ್ಯದಲ್ಲಿ ತೊಡಗಿರುವ ಕಾರಣ ಯಾವ ಮಠಾಧೀಶರನ್ನೂ ಸಂಕಿರಣಕ್ಕೆ ಕರೆಯಲಿಲ್ಲ! ದೀವರ ಹೆಂಗಸರು ಬಿಡಿಸಿದ ಹಸೆಯ ಚಿತ್ರಗಳೂ ಉತ್ಸವದ ಗೋಡೆಗಳ ಮೇಲೆ ಅಲಂಕೃತವಾಗಿದ್ದುವು.

ಕನ್ನಡದ ಲೇಖಕರಲ್ಲಿ ಕಾರಂತರನ್ನು ಬಿಟ್ಟರೆ ಹೀಗೆ ಸಮುದಾಯದ ಕೆಲಸಗಳಲ್ಲಿ ದೊಡ್ಡದಾಗಿ ತೊಡಗಿದ ಲೇಖಕರು ಇಬ್ಬರೇ. ಒಬ್ಬರು ಕೆ.ವಿ.ಸುಬ್ಬಣ್ಣ. ಸುಬ್ಬಣ್ಣ ಮಾಡಿದ ಕೆಲಸ ಮ್ಯಾಗ್ಸೆಸೆ ಪ್ರಶಸ್ತಿ ಅವರನ್ನು ಹುಡುಕಿಕೊಂಡು ಹೆಗ್ಗೋಡಿಗೆ ಬರುವಂತೆ ಮಾಡಿತು. ಇನ್ನೊಬ್ಬರು ಪ್ರಸನ್ನ. ಹೆಗ್ಗೋಡಿನ ನೀನಾಸಂನ ಕೂಗಳತೆ ದೂರದಲ್ಲಿ ಪ್ರಸನ್ನ ಪುಟ್ಟ ಕ್ರಾಂತಿಯನ್ನೇ ಮಾಡಿದ್ದಾರೆ. ಸಾಹಿತ್ಯದ ಆದರ್ಶಗಳು ಕ್ರಿಯೆಯಲ್ಲಿ ಮೂಡಿದ ಬಗೆ ಅದು. ಪ್ರಸನ್ನ ಅವರನ್ನು ಕೇಳಿದೆ: 'ನೀವು ಕೈಮಗ್ಗ ಮಾರಾಟಗಾರರ–ಕೊಳ್ಳುವವರ ಸಭೆ ಮಾಡಿದಾಗಲೇ ಶಿವಮೊಗ್ಗದಲ್ಲಿ ಭಾರಿ ಸಿದ್ಧ ಉಡುಪು ಕಾರ್ಖಾನೆಗೆ ಶಂಕು ಸ್ಥಾಪನೆ ಆಗಿದೆ. ಸಂದೇಶ ಏನು?' ಎಂದು. 'ದೊಡ್ಡಬಳ್ಳಾಪುರದಲ್ಲಿ ಈಗಾಗಲೇ ನಿರ್ಮಿಸಿರುವ ಸಿದ್ಧ ಉಡುಪು ಘಟಕ ನೇಕಾರರ ಸಮಾಧಿ ಮೇಲೆ ನಿಂತಿದೆ. ಶಿವಮೊಗ್ಗ ಘಟಕ ಯಾವಾಗ ಕೆಲಸ ಆರಂಭಿಸುತ್ತದೆ ಗೊತ್ತಿಲ್ಲ. ಆದರೆ, ಅಲ್ಲಿ ಬಳಸುವ ಬಟ್ಟೆಯಲ್ಲಿ ಶೇ 10ರಷ್ಟು ಬಟ್ಟೆ ಕೈಮಗ್ಗದ್ದಾಗಿರ ಬೇಕು ಎಂದು ಯಡಿಯೂರಪ್ಪ ಆದೇಶಿಸಿದರೂ ಸಾಕು ನೇಕಾರರಿಗೆ ದೊಡ್ಡ ಉಪಕಾರ ಆಗುತ್ತದೆ' ಎಂದರು ಪ್ರಸನ್ನ. ಅವರು ಹೇಳುವ ಮಾತು ಹಳ್ಳಿಗಳನ್ನು ಉಳಿಸುವ ಮಾತು. ಅದು ಯಡಿಯೂರಪ್ಪ ಅವರಿಗೆ ಕೇಳುತ್ತದೆಯೇ? ಕೇಳಿಸಬೇಕು. ■

# ಈಶ್ವರಪ್ಪ ಆಯ್ಕೆ: ವರವೇ ಅಥವಾ ಕೈ ತಪ್ಪಿದ ಅವಕಾಶವೇ?

ಈ ಬಿಜೆಪಿಯವರು ವಿಚಿತ್ರ ಮಂದಿ. ಕೇಂದ್ರದಲ್ಲಿ ಅಡ್ವಾಣಿಯಂಥ ಘಟಾನುಘಟಿ ನಾಯಕರೇ ನಿವೃತ್ತರಾಗಬೇಕು ಎನ್ನುತ್ತಾರೆ. ಅಥವಾ ಹಾಗೆ ಹೇಳುವ ಸಂಘ ಪರಿವಾರದ ಮಾತನ್ನು ಕೇಳುತ್ತಾರೆ. ರಾಜನಾಥಸಿಂಗ್ ಕೂಡ ಅದೇ ರೀತಿ ನಿರ್ಗಮಿಸುತ್ತಾರೆ. ಸಿಂಗ್ ಜಾಗಕ್ಕೆ ರಾಷ್ಟ್ರ ಮಟ್ಟದಲ್ಲಿ ಅಷ್ಟೇನು ಖ್ಯಾತರಲ್ಲದ ನಿತಿನ್ ಗಡ್ಕರಿ ಬಂದು ಕೂಡುತ್ತಾರೆ. ಸುಷ್ಮಾ ಸ್ವರಾಜ್‌ಗೆ ಅಡ್ವಾಣಿ ಜಾಗ ಬಿಟ್ಟು ಕೊಡುತ್ತಾರೆ. ಕೇಂದ್ರ ಮಟ್ಟದಲ್ಲಿ ಆಗಬೇಕಾದುದು ಅಥವಾ ಆಗಿದ್ದು ರಾಜ್ಯ ಮಟ್ಟದಲ್ಲಿಯೂ ಆಗಬೇಕು ಎಂದು ಇವರಿಗೆ ಅನಿಸುವುದಿಲ್ಲ. ಕೇಂದ್ರ ಮಟ್ಟದಲ್ಲಿ ಹಳೆಯ ಪಳೆಯ ಮುಖಗಳು ತೆರೆಯ ಹಿಂದೆ ಸರಿಯುವುದು ಅಗತ್ಯವಾದರೆ ರಾಜ್ಯ ಮಟ್ಟದಲ್ಲಿ ಏಕೆ ಬೇಡ? ಅದಕ್ಕೆ ಉತ್ತರ ಇಲ್ಲ. ಉತ್ತರ ಇಲ್ಲ ಎಂಬುದಕ್ಕೆ ಪುರಾವೆ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಮತ್ತೆ ಕೆ.ಎಸ್.ಈಶ್ವರಪ್ಪ ಗದ್ದುಗೆ ಏರಿದ್ದು.

ಈಶ್ವರಪ್ಪ ಅವರಿಗೆ ಈಗ 61 ವರ್ಷ ವಯಸ್ಸು. ಸರ್ಕಾರಿ ನೌಕರರಾದರೆ ಅವರು ನಿವೃತ್ತರಾಗಿ ಮನೆಯಲ್ಲಿ ಇರಬೇಕು. ರಾಜಕಾರಣದಲ್ಲಿ ಅದು ಅನ್ವಯ ವಾಗುವುದಿಲ್ಲ ಎಂದು

ಗೊತ್ತು. ಆದರೆ, ಪಕ್ಷದಲ್ಲಿ ಯುವಕರು ಇರಲಿಲ್ಲವೇ? ಅವರು ಆಕಾಂಕ್ಷಿಗಳು ಆಗಿರಲಿಲ್ಲವೇ? ಇದ್ದರು. ಬೇಕಾದಷ್ಟು ಜನ ಇದ್ದರು. ಇಲ್ಲದಿದ್ದರೂ 'ನಿಮಗೆ ಹೊಣೆ ಕೊಡುತ್ತೇವೆ ಹೊತ್ತು ನಿಭಾಯಿಸುತ್ತೀರಾ' ಎಂದು ಹಿರಿಯ ರಾದವರು ತಮ್ಮ ಅಹಂ ಬಿಟ್ಟು ಕೇಳಬೇಕಿತ್ತು. ಕೇಳಿದ ಹಾಗೆ ಕಾಣಲಿಲ್ಲ.

ಈಶ್ವರಪ್ಪ ಎರಡು ಸಾರಿ ರಾಜ್ಯ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದವರು. ಕುರುಬ ಸಮಾಜಕ್ಕೆ ಸೇರಿದವರು ಎಂಬ ಕಾರಣಕ್ಕಾಗಿಯೇ ಹಿಂದೆಯೂ ಅವರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಈಗಲೂ ಅದೇ ಕಾರಣ. 1993 ಮತ್ತು 95ರಲ್ಲಿ ಅವರು ಅಧ್ಯಕ್ಷರಾಗಿದ್ದಾಗ ಸಿದ್ದರಾಮಯ್ಯ ಅವರ ಸುತ್ತ ಕುರುಬ ಸಮಾಜದ ಆಕಾಂಕ್ಷೆ ಈಚಿನ ವರ್ಷಗಳಲ್ಲಿ ಬೆಳೆದಿರುವ ಹಾಗೆ ಬೆಳೆದಿರಲಿಲ್ಲ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ ನೋಡಬೇಕು ಎಂಬುದು ಕುರುಬ ಸಮಾಜದ ಒಂದೇ ಒಂದು ಆಕಾಂಕ್ಷೆ. ಹಾಗಾಗಿ ಆ ಸಮಾಜದವರು ಈಗ ಇನ್ನೊಬ್ಬ ನಾಯಕನ ಬೆನ್ನು ಹತ್ತುವುದಿಲ್ಲ. 'ಸಿದ್ದರಾಮಯ್ಯ ಮಾತ್ರ ಏಕೆ ಮುಖ್ಯಮಂತ್ರಿಯಾಗಬೇಕು? ನಾನೂ ಆಗಬಹುದಲ್ಲ' ಎಂದುಕೊಂಡೇ ಈಶ್ವರಪ್ಪ ದಿಢೀರನೇ ಮಂತ್ರಿ ಹುದ್ದೆ ಬಿಟ್ಟು ಪಕ್ಷದ ಹುದ್ದೆ ಒಪ್ಪಿಕೊಂಡಂತೆ ಕಾಣುತ್ತದೆ. ಅವರ ಪಕ್ಷದವರೂ ಅದೇ ಮಾತು ಹೇಳುತ್ತಾರೆ. 'ಈಶ್ವರಪ್ಪನವರದು ದೂರ ದೃಷ್ಟಿ' ಎಂದು. ನಿಜ, ಇಂಧನದಂಥ ಪ್ರಮುಖ ಖಾತೆ ಬಿಟ್ಟುಕೊಟ್ಟು ಪಕ್ಷದ ಅಧ್ಯಕ್ಷರಾಗುವುದು ಸುಲಭದ ಮಾತಲ್ಲ. ಆ ದೃಷ್ಟಿಯಿಂದ ಈಶ್ವರಪ್ಪ ತೆಗೆದುಕೊಂಡಿರುವುದು ದೊಡ್ಡ 'ಚಾನ್ಸ್'. ರಾಜ್ಯದಲ್ಲಿ ಮತ್ತೆ ವಿಧಾನಸಭೆಗೆ ಚುನಾವಣೆ ನಡೆಯಬೇಕಿರುವುದು 2013ರಲ್ಲಿ. ಅದಕ್ಕೆ ಇನ್ನೂ ಸಾಕಷ್ಟು ಸಮಯ. ಆದರೂ ಅವರು ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಪಕ್ಷದ ನೊಗವನ್ನು ಹೆಗಲಿಗೆ ಏರಿಸಿಕೊಂಡಿದ್ದಾರೆ. ವಿಧಾನಸಭಾಧ್ಯಕ್ಷರಂಥ ಹುದ್ದೆಯನ್ನೇ ಬೇಡ ಎಂದು ಮಂತ್ರಿಯಾದ ಜಗದೀಶ್ ಶೆಟ್ಟರ್ ಅವರನ್ನು ನೋಡಿದರೆ ಈಶ್ವರಪ್ಪ ಅವರಿಗೆ 'ಭಲೇ' ಎನ್ನಲೇಬೇಕು!

ಆದರೆ, ನೊಗಕ್ಕೆ ಹಳೆಯ ಎತ್ತನ್ನೇ ಹೂಡುವ ಬದಲು ಸಿ.ಟಿ. ರವಿ, ಪ್ರಹ್ಲಾದ ಜೋಶಿ, ಆರಗ ಜ್ಞಾನೇಂದ್ರ ಅಥವಾ ಶೋಭಾ ಕರಂದ್ಲಾಜೆ ಅವರಲ್ಲಿ ಒಬ್ಬರಿಗೆ ಬಿಜೆಪಿ ಅವಕಾಶ ಕೊಡಬೇಕಿತ್ತು. ಈ ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಒಂದಿಷ್ಟು ರಿಸ್ಕ್ ಇತ್ತು. ಆದರೆ, ಆ ಹೊಣೆ ಹೊತ್ತ ಯುವಕರಿಗೆ ಅದು ಒಂದು ಸವಾಲು ಆಗುತ್ತಿತ್ತು. ಯುವಕರಿಗೆ ಸವಾಲುಗಳನ್ನು ಕೊಡದೇ ಇದ್ದರೆ ಯಾವುದೇ ಪಕ್ಷ ಮುಂದೆ ಹೋಗುವುದು ಕಷ್ಟ. ನಿಂತ ನೀರಿನ ಹಾಗೆ ಸಂಚಲನ ಇಲ್ಲದೇ ಕಾಲ ದೂಡುತ್ತ ಇರಬೇಕಾಗುತ್ತದೆ. ರವಿ, ಜ್ಞಾನೇಂದ್ರ ಮತ್ತು ಶೋಭಾ ಒಕ್ಕಲಿಗರು. ಹಿಂದೆಯೂ ಅಧ್ಯಕ್ಷರಾಗಿದ್ದ ಡಿ.ವಿ.ಸದಾನಂದ ಗೌಡರು ಒಕ್ಕಲಿಗರೇ ಆಗಿದ್ದ ಕಾರಣ ಮತ್ತೆ ಒಕ್ಕಲಿಗರಿಗೇ ಅವಕಾಶ ಕೊಡಬಾರದು ಎಂದು ಪಕ್ಷದ ನಾಯಕರು ಅಂದು ಕೊಂಡಂತೆ ಕಾಣುತ್ತದೆ. ಜೋಶಿ ಅವರಿಗೆ ಜಾತಿ ಅಡ್ಡವಾಯಿತು. ಪಕ್ಷದ ಮುಖಂಡರು ಜಾತಿ ಲೆಕ್ಕ ಹಾಕುತ್ತ ಶಿವಮೊಗ್ಗ ಅಧಿಕಾರದ ಕೇಂದ್ರ ಆಗುತ್ತಿದೆ ಎಂಬುದನ್ನು ಮರೆತರು. ಮುಖ್ಯಮಂತ್ರಿಯೂ ಅದೇ ಜಿಲ್ಲೆಯವರು, ಪಕ್ಷದ ಅಧ್ಯಕ್ಷರೂ ಅದೇ ಜಿಲ್ಲೆಯವರು.

ಯಡಿಯೂರಪ್ಪ ಮತ್ತು ಈಶ್ವರಪ್ಪ ಜತೆಯಾಗಿ ಬೆಳೆದವರು. ಪಕ್ಷ ಕಟ್ಟಿದವರು. ಲೋಕಸಭೆ ಚುನಾವಣೆ ನಂತರ ಇಬ್ಬರ ನಡುವೆ ಸಂಬಂಧ ಹಳಸಿತ್ತು. ಈಗ ಎಷ್ಟು ಸುಧಾರಿಸಿದೆ ಗೊತ್ತಿಲ್ಲ. ಆದರೂ, ಯಡಿಯೂರಪ್ಪ 'ಗೊತ್ತಿಲ್ಲದ ದೇವರಿಗಿಂತ ಗೊತ್ತಿರುವ ದೆವ್ವವೇ ಲೇಸು' ಎಂದು ಈಶ್ವರಪ್ಪ ಅವರನ್ನು ಒಪ್ಪಿಕೊಂಡಂತೆ ಕಾಣು ತ್ತದೆ. ಅಥವಾ 'ನಮ್ಮ ದೇವರ ಮಹಿಮೆ ನಮಗೆ ಗೊತ್ತಿಲ್ಲವೇ' ಎಂದೂ ಅಂದು ಕೊಂಡಿರಬೇಕು. ಯಡಿಯೂರಪ್ಪ ಮತ್ತು ಈಶ್ವರಪ್ಪ ಸೈದ್ಧಾಂತಿಕವಾಗಿ ಜಗಳವಾಡಿದ್ದೇ ಇಲ್ಲ ಎಂದು ಪಕ್ಷದವರೇ ಕುಹಕ ಆಡುತ್ತಾರೆ. ಅದರ ಅರ್ಥ ಏನು ಎಂದೂ ಅವರಿಗೆ ಗೊತ್ತಿದೆ; ಜನರಿಗೂ ಗೊತ್ತಿದೆ.

ಇಂಧನ ಸಚಿವರಾಗಿ ಈಶ್ವರಪ್ಪ ದೊಡ್ಡ ಸಾಧನೆಯನ್ನೇನೂ ಮಾಡಲಿಲ್ಲ. ಇಲಾಖೆಗೆ ಚುರುಕು ಮುಟ್ಟಿಸಲಿಲ್ಲ. ಮುಖ್ಯಮಂತ್ರಿ ಒಂದು ಹೇಳಿದರೆ ಅವರು ಇನ್ನೊಂದು ಹೇಳಿದರು. ಇವರಿಬ್ಬರ ಮಧ್ಯೆ ಅಧಿಕಾರಿಗಳು ಹೇಳಿದ್ದು ಮಾತ್ರ ಸತ್ಯವಿತ್ತು. ಅದನ್ನು ಜನ ಈಗ ಅನುಭವಿಸುತ್ತಿದ್ದಾರೆ. ಕರೆಂಟ್ ಯಾವಾಗ ಹೋಗುತ್ತದೆ, ಯಾವಾಗ ಬರುತ್ತದೆ ಎಂದು ಯಾರಿಗೂ ಗೊತ್ತಿಲ್ಲ. ರಾಜ್ಯದ ಈಗಿನ ವಿದ್ಯುತ್ ಅಭಾವ ಸ್ಥಿತಿಗೆ ಬರೀ ಈಶ್ವರಪ್ಪ ಅವರನ್ನು ದೂರಿ ಪ್ರಯೋಜನವಿಲ್ಲ. ಅವರ ಹಿಂದೆ ಈ ಖಾತೆ ಹೊಂದಿದ ಸಚಿವರು ಕೂಡ ರಾಜ್ಯದಲ್ಲಿ ಹೊಸದಾಗಿ ಐದು ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದಿಸುತ್ತೇವೆ ಎಂದು ಹೇಳಿದವರೇ. ಉತ್ಪಾದಿಸಿದ್ದು ಎಷ್ಟು ಮೆಗಾವಾಟ್ ಎಂದು ಯಾರಿಗೂ ಗೊತ್ತಿಲ್ಲ. ಏನಿದ್ದರೂ ಶರಾವತಿಯ ಪುಣ್ಯವೇ ಜನರನ್ನು ಕಾಪಾಡಬೇಕು.

ಇಂಧನ ಸಚಿವರಾಗಿ ಮಾಡಲಾಗದ ಕೆಲಸವನ್ನು ಈಗ ಈಶ್ವರಪ್ಪ ಪಕ್ಷದಲ್ಲಿ ಮಾಡಬೇಕಾಗಿದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಒಂದೂ ಮುಕ್ಕಾಲು ವರ್ಷ ಕಳೆದಿದೆ. ಈ ಅವಧಿಯಲ್ಲಿ ಏನೇನು ರಾದ್ಧಾಂತವಾಗಿದೆ. ಪಕ್ಷ ಹೇಗೆ ಒಡೆದು ಛಿನ್ನಾಛಿದ್ರವಾಗಿದೆ ಎಂಬುದೆಲ್ಲ ಈಗ ಜನಜನಿತ. ಯಾರೂ ಯಾರ ಮಾತನ್ನೂ ಕೇಳುವ ಸ್ಥಿತಿಯಲ್ಲಿ ಇಲ್ಲ. ನಾಯಕನಾದವನಿಗೇ ಸವಾಲು ಹಾಕುತ್ತಿದ್ದಾರೆ. ಇದನ್ನೆಲ್ಲ ತಾವು ಮೂಕವಾಗಿ ನೋಡಿಕೊಂಡು ಸುಮ್ಮನಿರಬೇಕಾಯಿತು ಎಂದು ಹಿಂದಿನ ಅಧ್ಯಕ್ಷ ಸದಾನಂದಗೌಡರು ಸೋಲನ್ನು ಒಪ್ಪಿಕೊಂಡಿದ್ದಾರೆ. ಈಗಲೂ ಭಿನ್ನಮತ ಬೂದಿ ಮುಚ್ಚಿದ ಕೆಂಡದಂತೆಯೇ ಇದೆ. ಯಾರ ಅಸಮಾಧಾನ ಯಾವಾಗ ಯಾವ ರೂಪದಲ್ಲಿ ಸ್ಫೋಟಿಸುತ್ತದೆ ಎಂದು ಗೊತ್ತಿಲ್ಲ. ಜ್ವಾಲಾಮುಖಿ ಮಲಗಿದಂತೆ ಇರುತ್ತದೆ. ಒಳಗೆ ಮಾತ್ರ ಕುದಿಯುತ್ತಲೇ ಇರುತ್ತದೆ. ಈಶ್ವರಪ್ಪ ಅವರ ಮುಂದೆ ಇರುವ ದೊಡ್ಡ ಸವಾಲು ಇದು. ಎಲ್ಲರನ್ನು ಅವರು ಹೇಗೆ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷವನ್ನು ಮುನ್ನಡೆಸುತ್ತಾರೆ ಎಂಬುದು ಇನ್ನೇನು ಗೊತ್ತಾಗಲಿದೆ.

ಯಡಿಯೂರಪ್ಪ ಸರ್ಕಾರದಲ್ಲಿ ಪಕ್ಷದ ಒಳಗಿನವರಿಗಿಂತ ಹೊರಗಿನವರಿಗೇ ಹೆಚ್ಚು ಆದ್ಯತೆ ಸಿಕ್ಕಿದೆ. ಇದು ತೀರಾ ಅತಿರೇಕಕ್ಕೆ ಹೋಗಿ ಅಧಿಕಾರದ ಗದ್ದುಗೆಗಳಲ್ಲಿ ಯಾರ್‍ಯಾರೋ ಬಂದು ಕುಳಿತುಕೊಂಡಿದ್ದಾರೆ. ಕೇಡರ್ ಮೂಲದಿಂದ ಬಂದ ಕಾರ್ಯಕರ್ತರಿಗೂ ಈ ಅಧಿಕಾರಸ್ಥರಿಗೂ ಯಾವ ಭಾವನಾತ್ಮಕ ಸಂಬಂಧವೂ ಇಲ್ಲ. ಒಂದು ಪಕ್ಷ ಅಧಿಕಾರಕ್ಕೆ ಬಂದಾಗ ಕಾರ್ಯಕರ್ತರಿಗೆ ಕೆಲವು ಆಕಾಂಕ್ಷೆಗಳು ಇರುತ್ತವೆ.

ಯಡಿಯೂರಪ್ಪ ಸರ್ಕಾರ ಆ ಆಕಾಂಕ್ಷೆಗಳನ್ನು ಈಡೇರಿಸಲು ವಿಫಲವಾಗಿದೆ. ಕೇಡರ್ ಮೂಲದಿಂದ ಬಂದ ಕಾರ್ಯಕರ್ತರಿಗೆ ಈ ಅಧಿಕಾರಕ್ಕಿಂತ ಹೆಚ್ಚಿನ ದುಃಖ ಇರುವುದು ಸರ್ಕಾರ ನಡೆಯುತ್ತಿರುವ ರೀತಿಯ ಬಗ್ಗೆ. ಇದು ಕಾಂಗ್ರೆಸ್, ಜೆ.ಡಿ(ಎಸ್) ಸರ್ಕಾರಕ್ಕಿಂತ ಯಾವ ರೀತಿಯಲ್ಲಿ ಭಿನ್ನ ಎಂದು ಅವರಿಗೆ ಗುರುತಿಸಲು, ಗುರುತಿಸಿ ಜನರಿಗೆ ಹೇಳಲು ಆಗುತ್ತಿಲ್ಲ. ಒಬ್ಬಿಬ್ಬರು ಸಚಿವರು ಬಿಟ್ಟರೆ ಉಳಿದವರ ಕಾರ್ಯ ಶೈಲಿಯಲ್ಲಿಯೂ ಹೊಸತನ ಕಾಣುವುದಿಲ್ಲ.

ಈ ಒಬ್ಬಿಬ್ಬರು ಕೂಡ ಸಚಿವ ಹುದ್ದೆ ಬಿಟ್ಟು ಹೋಗುವಾಗ ತಾವು ಖಾತೆಯಲ್ಲಿ ಬಿಟ್ಟು ಹೋದ 'ಮಾರ್ಕ್' ಏನು ಎಂದು ಜನರಿಗೆ ಹೇಳಬೇಕಾಗುತ್ತದೆ. ಹತ್ತರಲ್ಲಿ ತಮಗೆ ತಾವೇ ಎಷ್ಟು 'ಮಾರ್ಕ್ಸ್' ಕೊಟ್ಟುಕೊಳ್ಳಲು ಸಾಧ್ಯ ಎಂದು ಕೇಳಿಕೊಳ್ಳ ಬೇಕಾಗುತ್ತದೆ. ಈಶ್ವರಪ್ಪನವರು ದೂರದೃಷ್ಟಿ ಇಟ್ಟುಕೊಂಡು ಪಕ್ಷದ ಅಧ್ಯಕ್ಷರಾಗಿದ್ದಾರೆ. ಮುಂದೆ ಚುನಾವಣೆ ಬಂದಾಗ ಅವರು ಈ ಸರ್ಕಾರದ 'ಸಾಧನೆ'ಗಳನ್ನು ಬೆನ್ನಿಗೆ ಇಟ್ಟುಕೊಂಡೇ ಜನರನ್ನು ಎದುರಿಸಬೇಕಾಗುತ್ತದೆ. 'ಜನರನ್ನು ಎದುರಿಸಲು ನಮಗೇನು ಭಯವಿಲ್ಲ. ನಾವು ಬೇಕಾದಷ್ಟು ಸಾಧನೆ ಮಾಡಿದ್ದೇವೆ' ಎನ್ನುವುದಾದರೆ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಎದುರಿಸಲು ಅವರ ಪಕ್ಷಕ್ಕೆ ಏಕೆ ಹಿಂಜರಿಕೆ? ಚುನಾವಣೆ ಮುಂದೂಡಲು ಯಾರು ಏನು ಮಾಡುತ್ತಿದ್ದಾರೆ ಎಂದು ಯಡಿಯೂರಪ್ಪ, ಈಶ್ವರಪ್ಪ ಅವರಿಗೆ ಗೊತ್ತಿಲ್ಲವೇ? ಗೊತ್ತಿಲ್ಲದಿದ್ದರೆ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಆಕಾಂಕ್ಷಿಗಳಾಗಿರುವ ತಮ್ಮ ಪಕ್ಷದ ಅಭ್ಯರ್ಥಿಗಳನ್ನೇ ಅವರು ಕೇಳಿ ನೋಡಬಹುದಲ್ಲ? ಅಥವಾ ಚುನಾವಣೆ ಮುಂದೂಡಿಕೆಯ ಹುನ್ನಾರದಲ್ಲಿ ಯಡಿಯೂರಪ್ಪ ಮತ್ತು ಈಶ್ವರಪ್ಪ ಅವರೂ ಪಾಲುದಾರರೇ? ಸರ್ಕಾರಗಳು ಮಾತ್ರ ಹೈರ್ ಮಾಡಬಹುದಾದ ಶಾಂತಿಭೂಷಣ್, ಅನಿಲ್ ದಿವಾನ್ ಅವರಂಥ ದುಬಾರಿ ವಕೀಲರು ಮೀಸಲಾತಿ ತಪ್ಪಿಸಿಕೊಂಡ ಇಬ್ಬರು ಸಾಮಾನ್ಯ ಕಕ್ಷಿದಾರರ ಪರವಾಗಿ ಸುಪ್ರೀಂ ಕೋರ್ಟಿನಲ್ಲಿ ವಾದ ಮಾಡಿದ್ದು ಅಚ್ಚರಿಯ ವಿಚಾರ ಅಲ್ಲವೇ?

ತಮ್ಮ ಪಕ್ಷದವರೇ ಮೂರು ಜನ ಸಂಸದರು, 17 ಜನ ಶಾಸಕರು ಇರುವ, ಸಾಮಾನ್ಯವಾಗಿ ನಗರ ಮತದಾರರು ಬಿಜೆಪಿ ಪರ ಎನ್ನುವ ಬೆಂಗಳೂರಿನಲ್ಲಿಯೇ ಚುನಾವಣೆ ಎದುರಿಸಲು ಮುಖ ಇಲ್ಲದಿದ್ದರೆ ನಾಳೆ ಇಡೀ ರಾಜ್ಯದ ಜನರನ್ನು ಹೇಗೆ ಎದುರಿಸಲು ಸಾಧ್ಯ? ಬಿಜೆಪಿಗೆ ಯಾವ ಅಳುಕು? ಯಾರ ಅಳುಕು? ಒಂದು ಪಕ್ಷದ ಬಲ ಇರುವುದು ಜನರನ್ನು ನೇರವಾಗಿ ಹೋಗಿ ಯಾವಾಗ ಬೇಕಾದರೂ ಎದುರಿಸುತ್ತೇವೆ ಎನ್ನುವ ಆತ್ಮವಿಶ್ವಾಸದಲ್ಲಿ. ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ಅದು ಉಡುಗಿ ಹೋಗಿರುವದು ವಿಚಿತ್ರ ದುರಂತ. ಯಡಿಯೂರಪ್ಪ ಮತ್ತು ಈಶ್ವರಪ್ಪ ಇಬ್ಬರೇ ಕುಳಿತುಕೊಂಡು ಮಾತನಾಡಬೇಕಾದುದು, ಮಾಡಬೇಕಾದುದು ಬಹಳಷ್ಟು ಇದೆ. ಯಡಿಯೂರಪ್ಪನವರು ಆಗಾಗ ಟೈಂ ಮಾಡಿಕೊಳ್ಳಬೇಕು ಅಷ್ಟೇ!

■

# ಹಾಳಾಗಿ ಹೋದ ರಸ್ತೆಗಳೂ... 'ಉದಾಸೀ'ನ ಸಚಿವರೂ...

ಒಮ್ಮೊಮ್ಮೆ ಅನಿಸುತ್ತದೆ ಜನರಿಗೆ ಎಷ್ಟೊಂದು ತಾಳ್ಮೆ ಇರುತ್ತದೆ ಎಂದು. 'ನಮ್ಮ ಜನರ ಸಹನೆಯ ಕಟ್ಟೆ ಒಡೆಯುವುದೇ ಇಲ್ಲವೇ? ಏನಾದರೂ ಇವರು ಪ್ರತಿಭಟಿಸುವುದೇ ಇಲ್ಲವಲ್ಲ' ಎಂದು ಸೋಜಿಗವೂ ಆಗುತ್ತದೆ. ಕಳೆದ ತಿಂಗಳು ಹುಬ್ಬಳ್ಳಿಯಿಂದ ಅಂಕೋಲಾ ಮಾರ್ಗವಾಗಿ ಕಾರವಾರಕ್ಕೆ ಹೋಗುವಾಗ ನನಗೆ ಈ ಪ್ರಶ್ನೆ ಕಾಡಿತು. 160 ಕಿ.ಮೀ ಉದ್ದದ ಈ ಮಾರ್ಗವನ್ನು ಕ್ರಮಿಸಲು ನಮಗೆ ಆರು ಗಂಟೆ ಬೇಕಾಯಿತು. ಅದೂ ವೇಗದ ಹೊಂಡಾ ಕಾರಿನಲ್ಲಿ. ಅದೂ ಅಂಕೋಲಾ ದಾರಿ ಬಿಟ್ಟು ಮಾದನಕೇರಿ ಮಾರ್ಗದಲ್ಲಿ ಹಳ್ಳ ದಿಣ್ಣೆಗಳನ್ನು ಕ್ರಮಿಸಿದ ನಂತರ. ಎರಡೂವರೆ ಗಂಟೆಯಲ್ಲಿ ಊರು ತಲುಪುತ್ತೇವೆ ಎಂದುಕೊಂಡಿದ್ದೆವು; ತಲುಪಬೇಕಿತ್ತು ಕೂಡ.

ಹುಬ್ಬಳ್ಳಿ ದಾಟಿ ಕಲಘಟಗಿ ಪ್ರವೇಶಿಸುತ್ತಿದ್ದಂತೆಯೇ ರಸ್ತೆಯಲ್ಲಿ ಕೆಂಪು ದೂಳು. ದಾರಿಯುದ್ದಕ್ಕೂ ಸಾಲಾಗಿ ನಿಂತಿದ್ದ ದೈತ್ಯ ಅದಿರು ಲಾರಿಗಳು. ಒಂದು ಕಾಲದಲ್ಲಿ ರಾಜ್ಯದ ಅತ್ಯುತ್ತಮ ರಸ್ತೆ ಎನಿಸಿದ್ದ ಎಲ್ ಅಂಡ್ ಟಿ ಕಂಪೆನಿ ನಿರ್ಮಿಸಿದ್ದ ಹುಬ್ಬಳ್ಳಿ-ಅಂಕೋಲಾ ರಸ್ತೆ ಈಗ ರಾಜ್ಯದ ಜನರ

ದುಃಸ್ವಪ್ನ ಎಂದು ಹೆಸರಾಗಿದೆ. ಎರಡು ವಾಹನಗಳು ಆರಾಮಾಗಿ ಹೋಗಬಹುದಾದ ಈ ರಸ್ತೆಯ ಒಂದು ಭಾಗವನ್ನು ಕಲಘಟಗಿ ದಾಟುತ್ತಿದ್ದಂತೆಯೇ ಅದಿರು ಲಾರಿಗಳು ಆಕ್ರಮಿಸಿ ಬಿಡುತ್ತವೆ. ಉಳಿದ ಭಾಗದಲ್ಲಿ ಎರಡೂ ಬದಿಯಿಂದ ವಾಹನ ಸಂಚಾರ ನಡೆಯಬೇಕು. ಎದುರಿನಿಂದ ಲಾರಿ ಬಂದರೆ ಮುಗಿಯಿತು. ಆತ ರಸ್ತೆ ಬಿಟ್ಟು ಕೆಳಗೆ ಇಳಿಯುವುದಿಲ್ಲ. ಇಳಿದರೆ ಆಳ ತಗ್ಗಿನ ಭಯ. ಆತ ದಾಟದೆ ನಾವು ಮುಂದೆ ಹೋಗುವಂತಿಲ್ಲ. ಆಮೆ ನಡಿಗೆ ಗೊತ್ತಲ್ಲ? ಎಲ್ಲ ವಾಹನಗಳು ಹೋಗುವುದು ಹಾಗೆಯೇ. ಜೀವ ಕೈಯಲ್ಲಿ ಹಿಡಿದುಕೊಂಡು ಹೋಗಬೇಕು. ಸ್ವಲ್ಪ ಹೆಚ್ಚೂ ಕಡಿಮೆಯಾದರೂ ಪ್ರಾಣಕ್ಕೆ ಕುತ್ತು. ಕಳೆದ ತಿಂಗಳು ಈ ರಸ್ತೆಯಲ್ಲಿ ಬಿದ್ದ ಹೆಣಗಳ ಸಂಖ್ಯೆ ಇಪ್ಪತ್ತು ದಾಟಿತು.

ಮುಂದೆ ಬರುವ ವಾಹನ ತಪ್ಪಿಸಿಕೊಳ್ಳಲು ಧಡ್ ಎಂದು ನಿಂತ ಕಾರಿನಿಂದ ಹೊರಗೆ ಮುಖ ಮಾಡಿ ನೋಡಿದರೆ ಎರಡೂ ಬದಿಯಲ್ಲಿ ಕಾಡಿನ ಮೈಬಣ್ಣವೇ ಬದಲಾಗಿ ಹೋಗಿದೆ. ಹಸಿರು ಎಲೆಗಳ ಮೇಲೆ ದಟ್ಟ ಕೆಂಪು ಮಣ್ಣು. ಗಾಜು ಇಳಿಸಿದ ನಮ್ಮ ಮುಖದ ತುಂಬ ಅದೇ ದೂಳು. ಕಲಘಟಗಿಯ ಸಣ್ಣಕ್ಕಿ ಇಡೀ ರಾಜ್ಯದಲ್ಲಿಯೇ ಪ್ರಸಿದ್ಧವಾಗಿತ್ತು. ರಸ್ತೆ ಪಕ್ಕದ ಗದ್ದೆಗಳನ್ನು ಅದಿರು ಮಣ್ಣು ಆಕ್ರಮಿಸಿ ಜನರ ಭತ್ತ ಬೆಳೆಯುವುದೇ ಬಿಟ್ಟು ಬಿಟ್ಟರು. ನಾವು ಹಾಗೂ ಹೀಗೂ ತೆವಳಿಕೊಂಡು ಮಾಸ್ತಿಕಟ್ಟೆ ಮುಟ್ಟಿ ಚಹ ಕುಡಿದು ಅಂಕೋಲಾ ತಲುಪಬೇಕೆಂದರೆ ನಮ್ಮ ಎದುರಿನಿಂದ ಬಂದ ಒಂದು ಕಾರಿನವರು ಅಡ್ಡಗಟ್ಟಿ 'ಮುಂದೆ ಹೋಗಬೇಡಿ ಮುಂದೆ ನಾಲ್ಕು ಕಿ.ಮೀ ರಸ್ತೆ ಜಾಮ್. ವಾಪಸು ಮಾದನಕೇರಿ ಮಾರ್ಗದಲ್ಲಿ ಹೋಗಿ' ಎಂದು ಸಲಹೆ ಕೊಟ್ಟು ಪುಣ್ಯ ಕಟ್ಟಿಕೊಂಡರು. ಮಾದನಕೇರಿ ಮಾರ್ಗ ಯಾವ ಸರ್ಕಾರಕ್ಕೂ ಗೌರವ ತರುವಂಥದಲ್ಲ. ಆಳವಾದ ತಗ್ಗುಗಳು. ರಸ್ತೆಯಿಂದ ಎದ್ದು ಬಂದ ದೊಡ್ಡ ದೊಡ್ಡ ಕಲ್ಲುಗಳು. ಕಾವಳಕತ್ತಲು. ರಸ್ತೆಯಲ್ಲಿ ವಾಹನ ಕೆಟ್ಟು ನಿಂತರೆ ಕಥೆ ಮುಗಿಯಿತು. ಕಾಡಿನ ಈ ರಸ್ತೆಯಲ್ಲಿ ಮೊಬೈಲ್ ಸಂಪರ್ಕವೂ ಅಲಭ್ಯ. ಆದರೂ ಎದುರಿನಿಂದ ಐರಾವತ ವಾಹನಗಳು ಬರುತ್ತಿದ್ದುವು. ಅಂಕೋಲಾ ರಸ್ತೆ ಜಾಮ್ ಆದರೆ ಜನರಿಗೆ ಬೇರೆ ಮಾರ್ಗವೇ ಇಲ್ಲ. ಜನರಿಗೆ ಎಷ್ಟೊಂದು ಸಹನೆ ಎಂದು ಮತ್ತೆ ಅನಿಸಿತು.

ಆದರೆ, ಜನರು ಮತ್ತೆ ಮತ್ತೆ ಪ್ರತಿಭಟನೆ ಮಾಡುತ್ತಲೇ ಇದ್ದಾರೆ. ರಸ್ತೆ ತಡೆ ಎಂಬುದು ಇಲ್ಲಿ ಸಾಮಾನ್ಯ. ಜನವರಿ 23ರಂದು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಜನ ಆರು ತಾಸುಗಳ ಕಾಲ ರಾಷ್ಟ್ರೀಯ ಹೆದ್ದಾರಿಯನ್ನು ಬಂದ್ ಮಾಡಿ ಪ್ರತಿಭಟಿಸಿದರು. ನಿತ್ಯ ಅಳುವವರಿಗೆ ಕೇಳುವವರು ಯಾರು? ಸರ್ಕಾರಕ್ಕೆ ಕಣ್ಣು, ಕಿವಿ ಎರಡೂ ಇಲ್ಲ. ಹೃದಯ ಮೊದಲೇ ಇಲ್ಲ. ಸರ್ಕಾರವನ್ನೇ ನಿಯಂತ್ರಿಸುವವರು ಅದಿರು ಲಾರಿಗಳನ್ನು ರಸ್ತೆಗೆ ಬಿಟ್ಟರೆ ತಡೆದು ನಿಲ್ಲಿಸುವವರು ಯಾರು? ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠರೂ ಇದು ಕೈ ಮೀರಿದ ಕೆಲಸ ಎಂದು ಮೌನ ತಾಳಿದ್ದಾರೆ. ದಾರಿಯುದ್ದಕ್ಕೂ ಲಾರಿ ಚಾಲಕರ ಗಿಂಬಳ ಸೇವೆ ಇದ್ದೇ ಇರುತ್ತದೆ. ಸಾವಿರ ಲಾರಿಗಳಿಗೆ ಪರ್ಮಿಟ್ ಇದ್ದರೆ ಐದು ಸಾವಿರ ಲಾರಿಗಳು ಓಡಾಡುವುದು ಹೇಗೆ ಸಾಧ್ಯ? ಸಚಿವರು ಈ ರಸ್ತೆಯಲ್ಲಿ ಅಡ್ಡಾಡುತ್ತಾರೆ, ಇಲ್ಲವೆಂದಲ್ಲ. ಆದರೆ,

ಬೆಂಗಾವಲು ಪಡೆಯ ರಕ್ಷಣೆಯಲ್ಲಿ ಅವರಿಗೆ ಬಿಸಿ ತಟ್ಟುವುದೇ ಇಲ್ಲ. ಬೈಂದೂರು-ಸುರತ್ಕಲ್ ನಡುವಿನ ರಾಷ್ಟ್ರೀಯ ಹೆದ್ದಾರಿ 17ರಲ್ಲಿಯೂ ಇದೇ ಗೋಳು. ಶಿರಾಡಿಘಾಟ್ ರಸ್ತೆಯದು ಕರ್ಮಕಾಂಡ. ಸಿ.ಬಿ.ಐ ತನಿಖೆಯೇ ನಡೆಯುತ್ತಿದೆ. ಚಿತ್ರದುರ್ಗ-ಸೊಲ್ಲಾಪುರ ನಡುವಿನ ರಾಷ್ಟ್ರೀಯ ಹೆದ್ದಾರಿ 13 ರಲ್ಲಿ ಗಣಿ ಲಾರಿಗಳ ಕಾಟ. ಊರಿಗೆ ವೇಳೆಗೆ ಸರಿಯಾಗಿ ಮುಟ್ಟುವ ಭರವಸೆಯೇ ಇಲ್ಲ.

ಬೆಂಗಳೂರು-ಪುಣೆ ನಡುವೆ ಚತುಷ್ಪಥ ರಸ್ತೆ ಕಾಮಗಾರಿ ಶುರುವಾಗಿ ಏಳು ವರ್ಷಗಳೇ ಕಳೆದಿವೆ. ವಾಜಪೇಯಿ ಪ್ರಧಾನಿಯಾಗಿದ್ದಾಗ ಶುರುವಾದ ಕೆಲಸ ಅದು. ಈಗಲೂ ರಾಣೆಬೆನ್ನೂರು-ಹಾವೇರಿ ನಡುವೆ ಹೆದ್ದಾರಿಯೇ ಇಲ್ಲ. ಇರುವುದು ಬರೀ ಕಲ್ಲುಗುಂಡಿಗಳು. ಏರು ತಗ್ಗುಗಳು. ನಿತ್ಯ ಅಪಘಾತ. ಹೇಳುವವರೂ ಇಲ್ಲ. ಕೇಳುವವರೂ ಇಲ್ಲ. ಮೊನ್ನೆ ಮಂಗಳವಾರ ಹಾವೇರಿ ಹತ್ತಿರ ನಿಲೂಗಲ್ ಬಳಿ ಅಪಘಾತವಾಗಿ ಇಬ್ಬರು ಸತ್ತರು. ಸಂಬಂಧಿಕರು ರಸ್ತೆಯಲ್ಲಿ ಶವ ಇಟ್ಟು ನಾಲ್ಕು ತಾಸು ಪ್ರತಿಭಟನೆ ನಡೆಸಿದರು. ಆ ಕಡೆ ಎಂಟು ಕಿ.ಮೀ, ಈ ಕಡೆ ಎಂಟು ಕಿ.ಮೀ ವಾಹನಗಳು ಸಾಲಾಗಿ ನಿಂತವು. ಊರಿನಲ್ಲಿಯೇ ಇದ್ದ ಹಾವೇರಿ ಶಾಸಕರು ಸ್ಥಳಕ್ಕೆ ಬರಲಿಲ್ಲ. ಹಾನಗಲ್‌ನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದ ಲೋಕೋಪಯೋಗಿ ಸಚಿವ ಸಿ.ಎಂ. ಉದಾಸಿಯವರಿಗೂ ಬಿಡುವು ಇರಲಿಲ್ಲ. ಹೆಣ ಇಟ್ಟುಕೊಂಡು ಎಷ್ಟು ಹೊತ್ತು ಕಾಯುವುದು ಎಂದು ಸಂಬಂಧಿಕರೇ ಕೊನೆಗೆ ಜಾಗ ಖಾಲಿ ಮಾಡಿದರು. ಎಂಟು ಕಿ.ಮಿ ಆಚೆ, ಎಂಟು ಕಿ.ಮೀ ಈಚೆ ನಾಲ್ಕು ಗಂಟೆ ವಾಹನಗಳಲ್ಲಿ ಕಾದ ಜನರ ಪಾಡು ಕೇಳುವವರು ಯಾರು? ಇದೇನು ಅರಣ್ಯ ರಾಜ್ಯವೇ?

ರಾಜ್ಯದಲ್ಲಿ ರಸ್ತೆಗಳ ಅಭಿವೃದ್ಧಿಯಾಗಿದ್ದು ಧರ್ಮಸಿಂಗ್ ಲೋಕೋಪಯೋಗಿ ಸಚಿವರಾಗಿದ್ದ ಕಾಲದಲ್ಲಿ. ಅದಾಗಿ ಆರೇಳು ವರ್ಷಗಳೇ ಕಳೆದು ಹೋಗಿವೆ. ನಂತರ ರಸ್ತೆ ಅಭಿವೃದ್ಧಿ ಎಂಬುದು ಬರೀ ಕಾಗದದಲ್ಲಿ ಉಳಿದ ಮಾತು. ಗಣಿಧಣಿಗಳ ಲಾರಿಗಳೂ ರಸ್ತೆಗೆ ಇಳಿದುವು. ಇದ್ದ ರಸ್ತೆಗಳೂ ಹಾಳಾಗಿ ಹೋದುವು. ಉದಾಸಿಯವರು ಹಾವೇರಿ ಜಿಲ್ಲೆ ಉಸ್ತುವಾರಿ ಸಚಿವರೂ ಹೌದು. ಅವರ ಊರಿನಲ್ಲಿ ಚಹ ಕುಡಿಯಲು ನೀವು ಇಳಿದರೆ ನಿಮ್ಮ ಮೈ ತುಂಬ ಕೆಂಪು ಮಣ್ಣು ಮೆತ್ತಿಕೊಳ್ಳು ತ್ತದೆ. ದೂಳು ಮಂಜಿನ ಹಾಗೆ ಇಡೀ ಊರನ್ನು ಆವರಿಸಿಕೊಂಡಿರುತ್ತದೆ. ಅಲ್ಲಿನ ಜನ ಏಕೆ ಸುಮ್ಮನಿದ್ದಾರೆ ಎಂದು ಅಚ್ಚರಿಯಾಗುತ್ತದೆ. ಉದಾಸಿಯವರನ್ನು ಕೇಳಿದರೆ ಇಪ್ಪತ್ತು ವರ್ಷಗಳ ಹಿಂದೆ ರಸ್ತೆ ಹೇಗಿದ್ದವು ಗೊತ್ತಿಲ್ಲವೇ ಎನ್ನುತ್ತಾರೆ. ಇಪ್ಪತ್ತು ವರ್ಷ ಹಿಂದೆ ಇರುವ ಸಚಿವರನ್ನು ಕಟ್ಟಿಕೊಂಡು ಯಡಿಯೂರಪ್ಪ ಏಕೆ ಏಗುತ್ತಾರೆ? ತಮ್ಮ ಊರಿನ ರಸ್ತೆಯನ್ನು ಸುಧಾರಿಸದವರು ರಾಜ್ಯದ ರಸ್ತೆಗಳನ್ನು ಹೇಗೆ ಸುಧಾರಿಸಿಯಾರು? ರಾಷ್ಟ್ರೀಯ ಹೆದ್ದಾರಿಗಳು ಕೇಂದ್ರದ ಅಧೀನ. ಉದಾಸಿಯವರು ಎಷ್ಟು ಸಾರಿ ದೆಹಲಿಗೆ ಹೋಗಿ ನಮ್ಮ ಹೆದ್ದಾರಿಗಳ ದುರವಸ್ಥೆ ಬಗ್ಗೆ ಮಾತಾನಾಡಿ ದ್ದಾರೆ? ದೆಹಲಿಯಲ್ಲಿರುವ ರಾಜ್ಯದ ವಿಶೇಷ ಪ್ರತಿನಿಧಿಯಾದರೂ ಆ ಕೆಲಸ ಮಾಡಿ ದ್ದಾರೆಯೇ? ಏಕೆ ಮಾಡಿಲ್ಲ. ಜನರ ತಾಳ್ಮೆಯನ್ನು ಎಷ್ಟೆಂದು ಪರೀಕ್ಷಿಸುವುದು?

ವಿಪರ್ಯಾಸ ನೋಡಿ. ಬೆಂಗಳೂರಿನಲ್ಲಿ ಚೊಕ್ಕ ಡಾಂಬರು ರಸ್ತೆಗಳ ಮೇಲೆ ಮತ್ತೆ

ಡಾಂಬರು ಹಾಕುತ್ತಿದ್ದಾರೆ. ಹೇಗಿದ್ದರೂ ಬೆಂಗಳೂರು ಪಾಲಿಕೆ ಚುನಾವಣೆ ಮಾಡಲು ಈ ಸರ್ಕಾರಕ್ಕೆ ಇಷ್ಟವಿಲ್ಲ. ಡಾಂಬರು ಹಾಕಿದ ರಸ್ತೆಗಳ ಮೇಲೆಯೇ ಮತ್ತೆ ಡಾಂಬರು ಹಾಕಿ ಏನು ಸಾಧಿಸಲು ಹೊರಟಿದ್ದಾರೆ? ಏನು ಮಾಡುವುದು ಉಳಿದೆಡೆ ರಸ್ತೆ ದುರಸ್ತಿಗೆ ಗಣಿ ಲಾರಿಗಳ ಮೇಲೆ ತೆರಿಗೆ ಹಾಕಿದರೆ ಸರ್ಕಾರವೇ ಬೀಳುತ್ತದೆ ಎನ್ನುತ್ತಾರೆ ಯಡಿಯೂರಪ್ಪ. ಅದು ನಿಜವೂ ಹೌದು. ಹಾಗಾದರೆ ಜನರಿಗೆ ಮುಕ್ತಿಯೇ ಇಲ್ಲವೇ? ಜನರು ಗಾಂಧಿ ಮಾರ್ಗದಲ್ಲಿ ಇರುವವರೆಗೆ ಇಲ್ಲ ಎನಿಸುತ್ತದೆ. ಅದು ಸರ್ಕಾರಕ್ಕೆ ಬಿಟ್ಟ ಆಯ್ಕೆ.

■

# ಸತ್ತ ಹುಲಿಯನ್ನು ಬಡಿದೆಬ್ಬಿಸುತ್ತೀರೇಕೆ?

ಅದು ಸತ್ತು ಹೋದ ಬೇಡಿಕೆ. ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂಬ ಬೇಡಿಕೆ ರಾಜ್ಯಗಳ ಪುನರ್ ವಿಂಗಡಣೆಯಾದ ದಿನವೇ ಸತ್ತು ಹೋಗಿದೆ. ಆದರೆ, ಮಹಾರಾಷ್ಟ್ರ ಏಕೀಕರಣ ಸಮಿತಿ(ಎಂ.ಇ.ಎಸ್)ಗೆ ಅದು ಅರಗಿಸಿ ಕೊಳ್ಳಲಾಗದ ಸತ್ಯ. ಆಗಿನಿಂದ ಈಗಿನವರೆಗೆ ಆಗೀಗ ವರ್ಷದಲ್ಲಿ ಒಂದೆರಡು ಬಾರಿ 'ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು' ಎಂದು ಒತ್ತಾಯಿಸಿ ಸಭೆ, ಮೇಳಾವಗಳನ್ನು ಅದು ಸಂಘಟಿಸುತ್ತದೆ. ಮಹಾರಾಷ್ಟ್ರದಲ್ಲಿ ಕೆಲಸವಿಲ್ಲದ ಕೆಲವರು ನಾಯಕರು ಬಂದು ತಮ್ಮ ಗಂಟಲ ಪಸೆ ಆರಿಸಿಕೊಂಡು ಹೋಗುತ್ತಾರೆ. ಎಂ.ಇ.ಎಸ್ ಸಭೆ, ಮೇಳಾವ ನಡೆಸಿತು ಎಂದು ಬೆಳಗಾವಿ ಮಹಾರಾಷ್ಟ್ರಕ್ಕೇನೂ ಹೋಗಲಿಲ್ಲ. ಹೋಗುವುದಿಲ್ಲ ಕೂಡ. ಭಾಷೆಯ ಆಧಾರದ ಮೇಲೆ, ಭಾವನೆಗಳ ಆಧಾರದ ಮೇಲೆ ಯಾವುದೇ ಒಂದು ಚಳವಳಿಯನ್ನು ಬಹುಕಾಲ ಜೀವಂತ ಉಳಿಸಿಕೊಳ್ಳುವುದು ಸಾಧ್ಯವಿಲ್ಲ. ಎಂ.ಇ.ಎಸ್‌ಗೂ ಅದೇ ಗತಿಯಾಗಿದೆ. ಒಂದು ಕಾಲದಲ್ಲಿ ಕರ್ನಾಟಕ ವಿಧಾನ ಸಭೆಗೆ ಎಂ.ಇ.ಎಸ್‌ನಿಂದ ಕನಿಷ್ಠ ಐವರು ಶಾಸಕರು ಗೆದ್ದು ಬರುತ್ತಿದ್ದರು. ಈ ಸಂಖ್ಯೆ ಇಳಿಯುತ್ತ ಹೋಗಿ ಈಗ ಶೂನ್ಯ ತಲುಪಿದೆ. ಮರಾಠಿ ಪರ ಇರುವವರ ಕನಸುಗಳಲ್ಲಿ ಸದಾ ಕುಣಿಯುವ ಬೆಳಗಾವಿ ಕೂಡ ಅವರ ಕೈ ಬಿಟ್ಟು ಹೋಗಿದೆ. ಕಳೆದ ಮೂರು ಅವಧಿಯಿಂದ ವಿಧಾನಸಭೆಯಲ್ಲಿ ಬೆಳಗಾವಿಯನ್ನು ಕನ್ನಡಿಗರೇ ಪ್ರತಿನಿಧಿಸುತ್ತಿದ್ದಾರೆ.

2008ರ ಚುನಾವಣೆಯಲ್ಲಿ ಎಂ.ಇ.ಎಸ್ ಅಭ್ಯರ್ಥಿ ಮೊದಲ ಬಾರಿ ಠೇವಣಿಯನ್ನೂ ಕಳೆದುಕೊಂಡರು. ಬೆಳಗಾವಿ ಪಾಲಿಕೆ ಮೇಲೆ ಎಂ.ಇ.ಎಸ್‌ನ ಭಗವಾ ಝಂಡಾ ಹಾರಾಡುತ್ತಿರಬಹುದು. ಹಾಗೆಂದು ಪಾಲಿಕೆಯ ಆಡಳಿತ ಸೂತ್ರವೇನೂ ಅವರ ಕೈಯಲ್ಲಿಲ್ಲ. 1992ರಲ್ಲಿಯೇ ಪಾಲಿಕೆಗೆ ಕನ್ನಡ ಮೇಯರ್ ಒಬ್ಬರು ಆಯ್ಕೆಯಾದರು. ಈಗಲೂ ಎಂ.ಇ.ಎಸ್ ವಿರೋಧಿಗಳ ಕೈಯಲ್ಲಿಯೇ ಪಾಲಿಕೆಯ ಆಡಳಿತ ಇದೆ.

ಇದೆಲ್ಲ ಆಗಿದ್ದು ಹೇಗೆ? ಸ್ವಹಿತಾಸಕ್ತಿಗಳ ಮೇಲಾಟದಲ್ಲಿ ಎಂ.ಇ.ಎಸ್ ಒಡೆದು ಹೋಯಿತು. ಈ ಸಂಘಟನೆಯ ನಾಯಕರ ಡಾಂಭಿಕತನವೂ 'ಮರಾಠಿ ಮಾನೂಸ್'ನ ಗಮನಕ್ಕೆ ಬರತೊಡಗಿತು. ವಿಧಾನಸಭೆಗೆ ನಾಲ್ವರು ಆಯ್ಕೆಯಾಗಲಿ, ಐವರು ಆಯ್ಕೆ ಯಾಗಲಿ, ಒಬ್ಬರೂ ಎದ್ದು ನಿಂತು 'ಬೆಳಗಾವಿಗೆ ರಸ್ತೆ ಬೇಕು, ಕುಡಿಯುವ ನೀರು ಬೇಕು' ಎಂದು ಒಂದು ಸಾರಿಯೂ ಕೇಳಿರಲಿಲ್ಲ. ವಿಧಾನಸಭೆ ಸೇರಿದ ಮೊದಲ ದಿನ ಕೇಸರಿಪೇಟ ಧರಿಸಿಕೊಂಡು ಬಂದು 'ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕು' ಎಂದು ಕೂಗಿ ಸಭಾತ್ಯಾಗ ಮಾಡಿದವರು ಮತ್ತೆ ಧ್ವನಿ ಎತ್ತುತ್ತಿರಲಿಲ್ಲ. ಅವರಿಗೆ ಮರಾಠಿ ಅಸ್ಮಿತೆ ಮುಖ್ಯವಾಗಿತ್ತು. ಕರ್ನಾಟಕದಲ್ಲಿ ಬದುಕಿ, ಇಲ್ಲಿ ಉದ್ಯೋಗ ಅವಕಾಶ ಹುಡುಕಬೇಕಾದರೆ ಬರೀ ಮರಾಠಿ ಅಸ್ಮಿತೆ ಸಾಲದು ಎಂಬುದೂ 'ಮರಾಠಿ ಮಾನೂಸ್'ನ ಅರಿವಿಗೆ ಬಂತು. ಆತ ನಿಧಾನವಾಗಿ ಮುಖ್ಯ ಪ್ರವಾಹದ ಜತೆಗೆ ಒಂದಾಗ ತೊಡಗಿದ. ಆತನಿಗೆ ಕನ್ನಡಿಗನ ಜತೆಗೆ ಜಗಳವೇ ಇರಲಿಲ್ಲ. ಇಬ್ಬರೂ ಜತೆಯಾಗಿ ಬದುಕಬೇಕಿತ್ತು, ನಿತ್ಯದ ಅನ್ನ ಸಂಪಾದಿಸಬೇಕಿತ್ತು.

1992ರಲ್ಲಿ ಸಿದ್ದನಗೌಡ ಪಾಟೀಲರು ಕನ್ನಡದ ಮೊದಲ ಮೇಯರ್ ಆಗಿ ಆಯ್ಕೆ ಯಾಗಿದ್ದು ಎಂ.ಇ.ಎಸ್‌ಗೆ ಆದ ಮೊದಲ ಮರ್ಮಾಘಾತ. ಆಗ ಮುಖ್ಯಮಂತ್ರಿ ಯಾಗಿದ್ದ ಬಂಗಾರಪ್ಪ ಅವರು ರೂಪಿಸಿದ ತಂತ್ರದ ಫಲವಾಗಿ ಕನ್ನಡಿಗರ ಬಹುದಿನಗಳ ಕನಸು ಈಡೇರಿತ್ತು. ಆಗ ಎಂ.ಇ.ಎಸ್‌ನ ಮೇಯರ್ ಸೇರಿ ಆರು ಮಂದಿ ಕಾರ್ಪೊರೇಟರ್‌ಗಳು ಗುಟ್ಟಾಗಿ ಕನ್ನಡಿಗನ ಪರ ಮತ ಹಾಕಿದ್ದರು! ಎಂ.ಇ.ಎಸ್‌ನ ಒಡಕು ದೊಡ್ಡ ಕಂದರವಾದುದು ಆಗಲೇ. ಸಂಘಟನೆಯ ಇಬ್ಬರು ನಾಯಕರಾದ ಕಿರಣ್ ಠಾಕೂರ್ (ತರುಣ್ ಭಾರತ್ ಪತ್ರಿಕೆಯ ಸಂಪಾದಕ ಮತ್ತು ಮಾಲೀಕ) ಮತ್ತು ಸಂಭಾಜಿ ಪಾಟೀಲ ನಡುವಿನ ಈ ಒಡಕು ಇಡೀ ಸಂಘಟನೆಯನ್ನು ಚೂರು ಚೂರು ಮಾಡಿ ಹಾಕಿತು. ಈ ಒಡಕಿಗೆ ಸಾಮಾಜಿಕ ಕಾರಣವೂ ಇತ್ತು. ಮರಾಠಿ ಮಾತನಾಡುವ ಬ್ರಾಹ್ಮಣ ಸಮುದಾಯ ಮತ್ತು ಮರಾಠಾ (ಕ್ಷತ್ರಿಯ) ಸಮುದಾಯದ ನಡುವೆ ಶಿವಾಜಿ ಕಾಲದಿಂದಲೂ ವೈಮನಸ್ಯವಿದೆ. ಆ ವೈಮನಸ್ಯ ಬೆಳಗಾವಿ ಮರಾಠಿ ನಾಯಕರನ್ನು ಒಡೆದು ಇಟ್ಟಿದೆ. ಹೀಗಾಗಿ ಈಗ ಅಲ್ಲಿ ನಾಯಕತ್ವ ಎನ್ನುವುದೇ ಇಲ್ಲ. 1999ರಲ್ಲಿ ಕನ್ನಡಿಗ ರಮೇಶ ಕುಡಚಿ ಬೆಳಗಾವಿಯಿಂದ ಶಾಸಕರಾಗಿ ಆಯ್ಕೆಯಾದ ನಂತರವಂತೂ ಎಂ.ಇ.ಎಸ್‌ಗೆ ನಿಂತ ನೆಲ ಕುಸಿದಂತಾಯಿತು. ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಕೊಡಬೇಕೆಂಬ ಬೇಡಿಕೆಗೆ ಇದ್ದ ಹುಲ್ಲು ಕಡ್ಡಿಯ ಆಸರೆಯೂ ಕೊಚ್ಚಿ ಹೋಯಿತು. ಹಾಗೆಂದು ಎಂ.ಇ.ಎಸ್ ನವೆಂಬರ್ 1ರಂದು 'ಕಾಳಾದಿನ' ಆಚರಿಸುವುದನ್ನು ಬಿಡಲಿಲ್ಲ. ಪ್ರತಿ ಜನವರಿ 17ರಂದು ಮಹಾರಾಷ್ಟ್ರ ಏಕೀಕರಣಕ್ಕಾಗಿ ಹೋರಾಡಿ ಸತ್ತ ಹುತಾತ್ಮರನ್ನು

ನೆನಪಿಸುವುದನ್ನೂ ನಿಲ್ಲಿಸಲಿಲ್ಲ. ಮೊದಮೊದಲು ಈ ಸಭೆಗಳಿಗೆ ಸಾವಿರ ಸಂಖ್ಯೆಯಲ್ಲಿ ಬರುತ್ತಿದ್ದವರು ಹತ್ತಿಪ್ಪತ್ತರ ಸಂಖ್ಯೆಯಲ್ಲಿ ಬರತೊಡಗಿದರು. ಸಂಘಟನೆಯ ಜತೆಗೆ ಚಳವಳಿಯೂ ನಿರ್ವಿಣ್ಣವಾಯಿತು.

ಬೆಳಗಾವಿ ಕನ್ನಡ ಚಳವಳಿಯ ನಾಯಕರು ಬಯಸಿದ್ದೂ ಇದನ್ನೇ. ಅವರು ಎಂದೂ ಎಂ.ಇ.ಎಸ್ ವಿರುದ್ಧ ಬೀದಿಗೆ ಇಳಿಯಲಿಲ್ಲ. ರಾಜ್ಯದ ನಾಯಕರನ್ನು ಭೇಟಿಯಾಗಿ ಅವರು ಮುಂದಿಟ್ಟದ್ದು ಎರಡೇ ಬೇಡಿಕೆ: ಒಂದು, ಬೆಳಗಾವಿಯನ್ನು ಅಭಿವೃದ್ಧಿ ಮಾಡಿ. ಇನ್ನೊಂದು, ಎಂ.ಇ.ಎಸ್‌ನಲ್ಲಿನ ಬಂಡಾಯ ನಾಯಕರನ್ನು ಒಡೆದು ನಮ್ಮ ಕಡೆಗೆ ತೆಗೆದುಕೊಳ್ಳಿ. ಈಗ ಎರಡೂ ಆಗಿವೆ.

ಬೆಳಗಾವಿಯ ಮೇಲೆ ಕನ್ನಡಿಗರ ಹಿಡಿತ ಹೀಗೆ ಹೆಚ್ಚುತ್ತ ಹೋದಂತೆ ಸರ್ಕಾರಗಳೂ ಆ ನಗರದ ಅಭಿವೃದ್ಧಿಗೆ ಒತ್ತು ನೀಡಿದವು. ವಿಧಾನಸಭೆಯ ವಿಶೇಷ ಅಧಿವೇಶನವನ್ನು ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಕೂಡಿಯೇ ಮಾಡಿದರು. ಈಗ ಅಲ್ಲಿ ಸುವರ್ಣ ಸೌಧದ ನಿರ್ಮಾಣ ಭರದಿಂದ ನಡೆಯುತ್ತಿದೆ. ರಸ್ತೆ ಅಭಿವೃದ್ಧಿಗೆ ಎರಡು, ಮೂರು ಕೋಟಿ ರೂ. ಖರ್ಚು ಮಾಡಲು ಪರದಾಡುತ್ತಿದ್ದ ಪಾಲಿಕೆಗೆ, ಜಿಲ್ಲಾಡಳಿತಕ್ಕೆ ಈಗ ಕೋಟಿಗಟ್ಟಲೆ ದುಡ್ಡು ಬರುತ್ತಿದೆ. ತಮ್ಮ ರಸ್ತೆಗಳನ್ನೂ ದುರಸ್ತಿ ಮಾಡಿ ಎಂದು ಮರಾಠಿಗರೇ ಈಗ ಕನ್ನಡಿಗ ಶಾಸಕರ ಬೆನ್ನು ಬಿದ್ದಿದ್ದಾರೆ.

ಯಾವುದೇ ಚಳವಳಿಯನ್ನು ಬರೀ ನಾಯಕರು ಮಾತ್ರ ಮಾಡಲು ಆಗದು. ಜನ ಬೆಂಬಲವೇ ಇಲ್ಲದೇ ಸತ್ತು ಹೋಗಿದ್ದ ಸಂಘಟನೆ ಮೊನ್ನೆ ಮತ್ತೆ ದೊಡ್ಡ ಸುದ್ದಿ ಮಾಡಿತು. ಚುನಾವಣೆ ಬಂದಾಗಲೆಲ್ಲ ಅಥವಾ ಬರುವಾಗಲೆಲ್ಲ ಸೀಮಾ ಪರಿಷತ್ತು ಮೇಳಾವಗಳನ್ನು ಸಂಘಟಿಸಿಕೊಂಡು ಬಂದಿದೆ. ಇದೂ ಕಳೆದ 40–50 ವರ್ಷಗಳಲ್ಲಿ ಅನೇಕ ಸಾರಿ ನಡೆದಿದೆ. ಇನ್ನೇನು ಪಂಚಾಯ್ತಿ ಚುನಾವಣೆಗಳು ಬಂದುವು ಎಂದು ಈ ಸಾರಿ ಸೀಮಾ ಪರಿಷತ್ತು ಮರಾಠಿ ಮೇಳಾವ ಸಂಘಟಿಸಿತು. ಮಾಜಿ ಶಾಸಕ ಬಿ.ಐ.ಪಾಟೀಲ ಸಂಘಟಿಸಿದ್ದ ಈ ಮೇಳಾವಕ್ಕೆ ಪ್ರಚಾರ ಕೊಡಬೇಕಿದ್ದ ಕಿರಣ್ ಠಾಕೂರರಿಗೇ ಅದರಲ್ಲಿ ಆಸಕ್ತಿ ಇರಲಿಲ್ಲ. ಕಿರಣ್ ಠಾಕೂರ್ ತಮ್ಮ ಪತ್ರಿಕೆಯಲ್ಲಿ ಆ ಸುದ್ದಿಯನ್ನು ಸರಿಯಾಗಿ ಪ್ರಕಟಿಸದೇ ಇದ್ದರೆ ಎಂ.ಇ.ಎಸ್‌ಗೆ ಇನ್ನೂ ಹಿನ್ನಡೆ ಯಾಗುತ್ತಿತ್ತು.

ಕೆಲಸವಿಲ್ಲದ ಬಡಗಿ ಇನ್ನೇನೋ ಮಾಡಿದ ಎನ್ನುವಂತೆ ಬೆಂಗಳೂರಿನ ಕನ್ನಡ ಹೋರಾಟಗಾರರು ಬೆಳಗಾವಿಗೆ ಹೋದರು. 'ಮೇಳಾವಕ್ಕೆ ಅನುಮತಿ ಕೊಡಬಾರದು, ಕೊಟ್ಟರೆ ರಕ್ತಪಾತವಾಗುತ್ತದೆ' ಎಂದೆಲ್ಲ ಕೂಗಾಡಿದರು. ಮರಾಠಿ ನಾಯಕರು ಮನಸ್ಸಿನಲ್ಲಿಯೇ ನಕ್ಕರು. 'ರೋಗಿ ಬಯಸಿದ್ದೂ ಹಾಲೂ ಅನ್ನ, ವೈದ್ಯರು ಹೇಳಿದ್ದೂ ಅದನ್ನೇ' ಎನ್ನುವಂತೆ ಆಯಿತು. ಮೇಳಾವವನ್ನು ಕನ್ನಡ ನಾಯಕರು ವಿರೋಧಿಸಿ ದಷ್ಟೂ ಅದಕ್ಕೆ ಪ್ರಚಾರ ಸಿಗುತ್ತ ಹೋಯಿತು. ಬೆಳಗಾವಿಯ ಮರಾಠಿ ಪತ್ರಿಕೆಗಳಲ್ಲೇ ಪ್ರಚಾರ ಸಿಗದೇ ಸತ್ತು ಹೋಗಬಹುದಾಗಿದ್ದ ಒಂದು ವಿಷಯ ದೇಶ ಮಟ್ಟದ ಸುದ್ದಿಯಾಯಿತು. ಟಿ.ವಿ ಚಾನೆಲ್‌ಗಳು ನಿತ್ಯವೂ ಇದನ್ನು ದೊಡ್ಡ ಸುದ್ದಿಯಾಗಿ ಬಿಂಬಿಸಿದುವು. ಬೆಳಗಾವಿಯ ಕನ್ನಡಿಗರು ಹಣೆ ಹಣೆ ಚಚ್ಚಿಕೊಂಡರು. ಬೆಂಗಳೂರಿನ

ಚಳವಳಿಗಾರರಿಗೆ ಸ್ಥಳೀಯ ಕನ್ನಡಿಗರ ಬೆಂಬಲ ಇರಲೇ ಇಲ್ಲ. ಕೊನೆಗೆ ಬೆಂಗಳೂರು, ಮೈಸೂರುಗಳಿಂದ ಹೋದ ಹುಡುಗರು ಬೆಳಗಾವಿ ಲೇಲೆ ಮೈದಾನದಲ್ಲಿ ಗಲಾಟೆ ಮಾಡಿ ಬಂದರು. ಪ್ರಜಾಪ್ರಭುತ್ವದಲ್ಲಿ ಯಾರಿಗೇ ಆಗಲಿ ಒಂದು ಸಭೆ ಮಾಡಲು, ತಮ್ಮ ಬೇಡಿಕೆ ಮಂಡಿಸಲು ಅವಕಾಶವಿಲ್ಲವೇ? ಮರಾಠಿ ನಾಯಕರು ಸಭೆ ಮಾಡಿ ಬೆಳಗಾವಿಯನ್ನೇನೂ ಪಾಕಿಸ್ತಾನಕ್ಕೆ ಸೇರಿಸಬೇಕು ಎಂದು ಕೇಳುತ್ತಿರಲಿಲ್ಲ. ಬೆಳಗಾವಿ ತಮಗೆ ಬೇಕು ಎಂದು ಅವರು ಇದೇ ಮೊದಲ ಬಾರಿಯೇನೂ ಕೇಳುತ್ತಿಲ್ಲವಲ್ಲ? 1956ರಿಂದಲೇ ಕೇಳುತ್ತಿದ್ದಾರೆ.

ಬೆಳಗಾವಿ ಅವರಿಗೆ ಸಿಕ್ಕಿದೆಯೇ? ಕರ್ನಾಟಕದ ರಾಜಕೀಯ ನಕ್ಷೆಯಿಂದ ಒಂದಿಂಚು ಜಾಗವೂ ಬೇರೆ ರಾಜ್ಯಕ್ಕೆ ಹೋಗಿಲ್ಲವಲ್ಲ? 'ಕಾಸರಗೋಡು ಕರ್ನಾಟಕಕ್ಕೆ ಸೇರಬೇಕು. ಕರ್ನಾಟಕಕ್ಕೆ ಸೇರಿದ ಕಾಸರಗೋಡಿನಲ್ಲಿಯೇ ಕೊನೆಯುಸಿರು ಎಳೆಯ ಬೇಕು' ಎಂದು ಕನ್ನಡದ ಹಿರಿಯ ಜೀವ ಕಯ್ಯಾರ ಕಿಂಞಣ್ಣ ರೈ ಈಗಲೂ ಹೋರಾಟ ಮಾಡುತ್ತಿಲ್ಲವೇ? ಕಾಸರಗೋಡಿನಲ್ಲಿ ಈಗಲೂ ನಮಗೆ ಕನ್ನಡದ ಫಲಕಗಳು ಕಾಣಿಸುವುದಿಲ್ಲವೇ? ಅಲ್ಲಿ ಬಹುತೇಕ ಜನ ಕನ್ನಡದಲ್ಲಿಯೇ ಮಾತನಾಡುವುದಿಲ್ಲವೇ? ಕಿಂಞಣ್ಣ ರೈ ನಾಳೆ ಕಾಸರಗೋಡಿನಲ್ಲಿ ಕನ್ನಡದ ಸಮಾವೇಶ ಮಾಡಿದರೆ ಅಲ್ಲಿನ ಮಲಯಾಳಿಗಳು ಅದರ ವಿರುದ್ಧ ನಮ್ಮ ಕನ್ನಡ ನಾಯಕರಂತೆ ಹೋರಾಟ ಮಾಡುತ್ತಾರೆಯೇ? 'ಕನ್ನಡಿಗರು ಇನ್ನೊಂದು ಅಭಿಪ್ರಾಯವನ್ನು ಸಹಿಸುವುದಿಲ್ಲ. ಚರ್ಚೆಯ ಬದಲು ಮಸಿ ಬಳಿಯುತ್ತಾರೆ' ಎಂಬ ಆರೋಪ ಗುರುವಾರ ಮತ್ತೆ ಸಾಬೀತಾಗಿದೆ. ಇದು ಕನ್ನಡ ಚಳವಳಿಗಾರರು ಹಾಕಿಕೊಟ್ಟ ದಾರಿಯಲ್ಲವೇ? ಆಗ ಅವರು ಮರಾಠಿಗರಿಗೆ ಮಸಿ ಬಳಿದಿದ್ದರು. ಈಗ ಕಾಂಗ್ರೆಸ್ಸಿಗರು ಕನ್ನಡಿಗರಿಗೇ ಮಸಿ ಬಳಿದರು.

ಬೆಳಗಾವಿಯಲ್ಲಿ ನಡೆಯುವ ಮರಾಠಿ ಮೇಳಾವಗಳಲ್ಲಿ ಭಾಗವಹಿಸಿ ಆಡಬಾರದ ಮಾತು ಆಡಿದ ಛಗನ್ ಭುಜಬಲ್ ವಿರುದ್ಧ ರಾಜ್ಯ ಸರ್ಕಾರ ಕೇಸು ಹಾಕಿ ವರ್ಷಗಟ್ಟಲೆ ಕೋರ್ಟಿಗೆ ಅಲೆದಾಡುವಂತೆ ಮಾಡಿತ್ತು. ಮುಂಬೈನ ಮೇಯರ್ ಆಗಿದ್ದ ಛಗನ್, ಬೆಳಗಾವಿಗೆ ಬಂದು ಬಾಯಿ ತೀಟೆ ತೀರಿಸಿಕೊಂಡಿದ್ದರು. ಈಗಲೂ ರಾಜ್ಯ ಸರ್ಕಾರ ಆ ಕೆಲಸ ಮಾಡಬಹುದಿತ್ತು. ಅದು ತಂತ್ರಗಾರಿಕೆ ಎನಿಸುತ್ತಿತ್ತು. ಈಗ ಮರಾಠಿಗರು ಒಂದು ಸಭೆ ನಡೆಸಲೂ ಕನ್ನಡಿಗರು ಬಿಡುವುದಿಲ್ಲ. ಅವರು ಅಸಹನೆಯ ಜನ ಎಂಬ ಗೂಬೆ ನಮ್ಮ ಮೇಲೆ ಬಂತು.

ಒಂದು ಚಳವಳಿಗೆ ದಿಕ್ಕು ಇರಬೇಕು, ಉದ್ದೇಶವಿರಬೇಕು. ಅದಕ್ಕಿಂತ ಮುಖ್ಯವಾಗಿ ಸಿದ್ಧಾಂತದ ಚೌಕಟ್ಟು ಇರಬೇಕು. ಬೆಳಗಾವಿಗೆ ಹೋಗಿ ಗಲಾಟೆ ಮಾಡಿದವರಿಗೆ ಇದಾವುದೂ ಇದ್ದಂತೆ ಇರಲಿಲ್ಲ. ಬೆಳಗಾವಿಯ ಕನ್ನಡಿಗರಿಗೇ ಬೇಡವಾದ ಚಳವಳಿಯನ್ನು ಮಾಡಲು ಇವರಿಗೇನು ಆಸಕ್ತಿ? ಕನ್ನಡದ ಹೆಸರಿನಲ್ಲಿ ಬಂಡವಾಳ ಮಾಡಿಕೊಳ್ಳುವುದನ್ನು ಬಿಟ್ಟು ಬೇರೆ ಇನ್ನೇನು ಆಸಕ್ತಿ ಇರುತ್ತದೆ? ಹೊಟ್ಟೆಪಾಡಿನ ನಾಯಕರು ಹುಡುಕುವುದು ಹೊಟ್ಟೆಪಾಡಿನ ದಾರಿಯನ್ನು, ಕನ್ನಡ ಹಿತದ ದಾರಿಯನ್ನು ಅಲ್ಲ. ನನ್ನ ಮಾತು ನಿಜವಲ್ಲ ಅನುವುದಾದರೆ ಬೆಳಗಾವಿಯ ಕನ್ನಡ ನಾಯಕರನ್ನು ಹೋಗಿ ಕೇಳಿ. ಅವರು ಏನು ಹೇಳುತ್ತಾರೆ ಎಂದು ಗೊತ್ತಾಗುತ್ತದೆ. ■

# ಮರೆತೆವೆ ನಾವು ಮುಳುಗಡೆಯಾದವರ?

ಮರೆವು ಒಂದು ವರ; ಒಂದು ಶಾಪ. ಯಾವುದನ್ನು ಬೇಗ ಮರೆಯಬೇಕೋ ಅದನ್ನು ಮರೆಯುವುದು ಕಷ್ಟ. ಅದು ಮತ್ತೆ ಮತ್ತೆ ಮನಃಪಟಲದ ಮೇಲೆ ಬಂದು ಕಾಡತೊಡಗುತ್ತದೆ. ಯಾವುದನ್ನು ಮರೆಯಬಾರದೋ ಅದನ್ನು ಎಷ್ಟೇ ನೆನಪು ಇಟ್ಟುಕೊಳ್ಳಬೇಕು ಎಂದರೂ ಅದು ಮರೆತು ಹೋಗುತ್ತದೆ. ಕಳೆದ (2009) ಸೆಪ್ಟೆಂಬರ್ ತಿಂಗಳ ಕೊನೆಯಲ್ಲಿ ಹಾಗೂ ಅಕ್ಟೋಬರ್ ತಿಂಗಳ ಆರಂಭದಲ್ಲಿ ಉತ್ತರ ಕರ್ನಾಟಕದ 14–15 ಜಿಲ್ಲೆಗಳನ್ನು ಕಾಡಿದ ಮಹಾಪೂರ, ಸಂತ್ರಸ್ತರಾದ ಲಕ್ಷಾಂತರ ಜನರ ಪಡಿಪಾಟಲನ್ನು ಎಲ್ಲರೂ ಮರೆತುದು ಇಂಥ ಒಂದು ಶಾಪ. ಮಾತಾ ಅಮೃತಾನಂದಮಯಿ ಮಠದವರು ಮೊನ್ನೆ ನೂರು ಮನೆಗಳನ್ನು ಸರ್ಕಾರಕ್ಕೆ ಹಸ್ತಾಂತರ ಮಾಡದೇ ಇದ್ದರೆ ಸಂತ್ರಸ್ತರ ಪಾಡು ನಮಗೆ ನೆನಪು ಆಗುತ್ತಿತ್ತೋ ಇಲ್ಲವೋ ಹೇಳುವುದು ಕಷ್ಟ. ನೆನಪು ಆಗುತ್ತಿರಲಿಲ್ಲ ಎಂಬುದೇ ನಿಜ.

ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ ಎರಡು ಲಕ್ಷ ಮನೆಗಳು ಬಿದ್ದಿವೆ. 1.78 ಕೋಟಿ ಜನ ಸಂತ್ರಸ್ತರಾಗಿದ್ದಾರೆ. ಈ ಸಂತ್ರಸ್ತರೆಲ್ಲ ಒಂದೋ ಮುರಿದು ಬಿದ್ದ ಮನೆಯಲ್ಲಿಯೇ

ವಾಸವಾಗಿದ್ದಾರೆ; ಇಲ್ಲವೇ ಸರ್ಕಾರ ಊರ ಹೊರಗೆ ಒದಗಿಸಿದ ತಾತ್ಕಾಲಿಕ ಟಿನ್ (ತಗಡು) ಶೆಡ್‌ಗಳಲ್ಲಿ ತಂಗಿದ್ದಾರೆ.

ಕರ್ನಾಟಕ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಮಹಾಪೂರಕ್ಕೆ ತುತ್ತಾದಾಗ ಯಡಿಯೂರಪ್ಪ ಮತ್ತು ಅವರ ಸಂಪುಟದ ಸದಸ್ಯರು ಮೈಸೂರಿನ ಸುತ್ತೂರು ಮಠದಲ್ಲಿ ಯೋಗ ಕಲಿಯುತ್ತ ರಿಲ್ಯಾಕ್ಸ್ ಮಾಡುತ್ತಿದ್ದರು. ಯೋಗ ಮುಗಿಸಿ ಬೆಂಗಳೂರಿಗೆ ಬಂದ ಯಡಿಯೂರಪ್ಪನವರಿಗೆ ಏನು ತಿಳಿಯಿತೋ ಏನೋ, ಬುದ್ಧ ಎದ್ದು ಹೊರಟಂತೆ, ಮಧ್ಯರಾತ್ರಿ ಎದ್ದು ಪ್ರವಾಹ ಪೀಡಿತ ಪ್ರದೇಶಗಳಿಗೆ ಪ್ರವಾಸ ಹೊರಟರು. ವಾಪಸು ಬಂದು ಬೆಂಗಳೂರಿನ ಗಲ್ಲಿ, ಗಲ್ಲಿಗಳಲ್ಲಿ ಜೋಳಿಗೆ ಹಿಡಿದು ನಿಂತರು. ಜನರು ಉದಾರವಾಗಿ ದೇಣಿಗೆ ಕೊಟ್ಟರು. ಮಾಧ್ಯಮಗಳಲ್ಲಿ ಬಂದ ಸಂತ್ರಸ್ತರ ಪಡಿಪಾಟಲಿನ ವರದಿಗಳನ್ನು ನೋಡಿ ಮಠ–ಮಾನ್ಯಗಳು, ಕಾರ್ಪೊರೇಟ್ ಸಂಸ್ಥೆಗಳು ಉದಾರವಾಗಿ ಮನೆ ಕಟ್ಟಿಕೊಡುವ ಭರವಸೆ ಕೊಟ್ಟವು. ಹೀಗೆ ಭರವಸೆ ಕೊಟ್ಟ ಸಂಸ್ಥೆಗಳ ಸಂಖ್ಯೆ 53. ಅವರು ಕಟ್ಟಿ ಕೊಡುತ್ತೇವೆ ಎಂದು ಹೇಳಿದ ಮನೆಗಳ ಸಂಖ್ಯೆ ಸುಮಾರು 74,000.

ಇದಾಗಿ ಐದು ತಿಂಗಳು ಕಳೆದು ಹೋಗಿದೆ. ಮುಖ್ಯಮಂತ್ರಿಗಳ ಕಚೇರಿ ಮೂಲಗಳು ಹೇಳಿದ್ದು, 'ನಮಗೆ ಆರು ತಿಂಗಳು ಸಮಯ ಕೊಡಿ. ನೀವೇ ನೋಡಿ ಹೇಗೆ ಪ್ರಗತಿ ಆಗಿರುತ್ತದೆ. ಆಗಿಲ್ಲದೇ ಇದ್ದರೆ ನಮ್ಮನ್ನು ಹರಾಜು ಹಾಕಿ' ಎಂದು. ಬಳ್ಳಾರಿ, ರಾಯಚೂರು, ವಿಜಾಪುರಗಳಲ್ಲಿ ಏನಾಗಿದೆ ಎಂದು ಸುಮ್ಮನೆ ವಿಚಾರಿಸಿದೆ. ರಾಯಚೂರು ಜಿಲ್ಲೆ ಡೊಂಗರಾಂಪುರ ಹಳ್ಳಿಯಲ್ಲಿ ಮಾತಾ ಅಮೃತಾನಂದಮಯಿ ಮಠದವರು ಕಟ್ಟಿದ ನೂರು ಮನೆಗಳನ್ನು ಬಿಟ್ಟರೆ ಒಂದೇ ಒಂದು ಮನೆ ನಿರ್ಮಾಣ ವಾಗಿಲ್ಲ. ಅಲ್ಲಿ, ಇಲ್ಲಿ ಮಾದರಿ ಮನೆಗಳು ಮಾತ್ರ ನಿರ್ಮಾಣವಾಗಿವೆ. ಕೆಲವು ಕಡೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಕಚ್ಚಾ ರಸ್ತೆ, ಚರಂಡಿ ಕೆಲಸ ಮಾತ್ರ ಆಗಿದೆ. ಇನ್ನೂ ಹಲವು ಕಡೆ ಭೂಮಿ ಸ್ವಾಧೀನ ಪ್ರಕ್ರಿಯೆಯೇ ನಡೆದಿಲ್ಲ. ಮನೆ ಕಟ್ಟುವುದು ದೂರದ ಮಾತೇ ಸರಿ.

ಸರ್ಕಾರ ಭರವಸೆ ಕೊಟ್ಟಂತೆ ಆರು ತಿಂಗಳಲ್ಲಿ ಕೊಂಚವಾದರೂ ಪ್ರಗತಿ ಮಾಡಬಹುದಿತ್ತೋ ಏನೋ? ಆದರೆ, ಅಕ್ಟೋಬರ್ ಅಂತ್ಯದಲ್ಲಿಯೇ ಯಡಿಯೂರಪ್ಪ ಸರ್ಕಾರಕ್ಕೆ ಭಿನ್ನಮತದ ಬರಸಿಡಿಲು ಬಂದು ಅಪ್ಪಳಿಸಿತು. ಸೋಜಿಗ ಎಂದರೆ, ಗಣಿಧಣಿಗಳೆಲ್ಲ ಸೇರಿ ಪ್ರವಾಹ ಸಂತ್ರಸ್ತರಿಗೆ 500 ಕೋಟಿ ರೂಪಾಯಿ ವೆಚ್ಚದಲ್ಲಿ 50,000 ಮನೆಗಳನ್ನು ಕಟ್ಟಿಕೊಡುವ ವಿಚಾರದಲ್ಲಿ ಈ ಭಿನ್ನಮತ ಸ್ಫೋಟಿಸಿದ್ದಂತೆ ಮಾಧ್ಯಮಗಳಲ್ಲಿ ಬಿಂಬಿತವಾಗಿತ್ತು. (ಹಾಗೆಂದು ರೆಡ್ಡಿ ಸೋದರರು ಮಾಧ್ಯಮದ ಮುಂದೆ ಹೇಳಿಕೊಂಡಿದ್ದರು). 'ಪ್ರವಾಹ ಸಂತ್ರಸ್ತರಿಗೆ 50,000 ಮನೆಗಳನ್ನು ಕಟ್ಟಿಕೊಡುವುದು ನಮ್ಮ ಉದ್ದೇಶ. ಆದರೆ, ಅದರಿಂದ ನಮಗೆ ಜನಪ್ರಿಯತೆ ಬರುತ್ತದೆ ಎಂದು ಕೆಲವರು (ಯಡಿಯೂರಪ್ಪ) ಇಡೀ ಯೋಜನೆಗೆ ಕಲ್ಲು ಹಾಕುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯ ಅಧಿಕಾರಿಗಳನ್ನು ಬೇಕಾಬಿಟ್ಟಿ ವರ್ಗ ಮಾಡುತ್ತಿದ್ದಾರೆ' ಎಂದು ಜನಾರ್ದನ ರೆಡ್ಡಿ ಕಳೆದ ನವೆಂಬರ್‌ನಲ್ಲಿ ಹೇಳಿದ್ದರು.

ಅದಿರು ಸಾಗಿಸುವ ಪ್ರತಿ ಲಾರಿಯ ಮೇಲೆ 1,000 ರೂಪಾಯಿ ಶುಲ್ಕ ವಿಧಿಸಿದ್ದು ಭಿನ್ನಮತ ಸ್ಫೋಟಿಸುವುದಕ್ಕೆ ಕಾರಣ ಎಂಬುದು ಎಲ್ಲರಿಗೂ ಗೊತ್ತಿತ್ತು. 'ಈ ಶುಲ್ಕವನ್ನು ರದ್ದು ಮಾಡಿದರೆ ಗಣಿ ಮಾಲೀಕರಿಂದ ದಾನ ಪಡೆಯಲು ಸಾಧ್ಯವಾಗುತ್ತದೆ. ಅದೇ ಹಣವನ್ನು ಮನೆ ಕಟ್ಟಲು ಬಳಸಬಹುದು' ಎಂದೂ ರೆಡ್ಡಿ ಸೋದರರ ನಿಕಟ ಮೂಲಗಳು ಹೇಳಿಕೊಂಡಿದ್ದವು. ಅಂತಿಮವಾಗಿ ರೆಡ್ಡಿ ಸೋದರರು ಯಡಿಯೂರಪ್ಪ ಅವರನ್ನು ಹೆಡಮುರಿಗೆ ಕಟ್ಟಿ ಹಾಕಿ ಹೇಗೆ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಂಡರು ಎಂಬುದು ಈಗ ಇತಿಹಾಸ. ಅದಿರು ಲಾರಿಯ ಮೇಲೆ ಹಾಕಿದ್ದ ಶುಲ್ಕವೂ ಮರೆತು ಹೋಯಿತು. ಹಾಗೆಂದು ಉಳಿಸಿದ ಹಣವನ್ನು ಗಣಿ ಧಣಿಗಳು ಮನೆ ಕಟ್ಟಲು ಬಳಸಿದರೇ? ಇಲ್ಲವಲ್ಲ?

ಅಕ್ಟೋಬರ್ ತಿಂಗಳಲ್ಲಿ ಭಿನ್ನಮತ ತಾರಕಕ್ಕೆ ಮುಟ್ಟಿದ ಸಮಯದಲ್ಲಿಯೇ ಬಳ್ಳಾರಿ ಜಿಲ್ಲೆ ಶಿರಗುಪ್ಪದಲ್ಲಿ ಕಂದಾಯ ಸಚಿವ ಕರುಣಾಕರರೆಡ್ಡಿಯವರು ಮನೆಗಳ ನಿರ್ಮಾಣಕ್ಕೆ ಶಂಕು ಸ್ಥಾಪನೆ ಮಾಡಿದ್ದರು. ಕಂಸ (ಯಡಿಯೂರಪ್ಪ) ವಧೆಯ ಮಾತು ಕೇಳಿ ಬಂದುದು ಅದೇ ದಿನ. ಆ ಶಿರಗುಪ್ಪದಲ್ಲಿಯೇ ಈಗ ರೆಡ್ಡಿ ಸೋದರರು 'ನಮ್ಮದು ಈ ಮನೆ' ಎಂದು ತೋರಿಸಲು ಒಂದೇ ಒಂದು ಮನೆಯನ್ನೂ ಕಟ್ಟಿಲ್ಲ. ಶಿರಗುಪ್ಪದ ಜನರನ್ನು ವಿಚಾರಿಸಿದರೆ, 'ಅವರು ಶಂಕುಸ್ಥಾಪನೆ ಮಾಡಿದ ದಿನವೂ ಸ್ವಂತ ದುಡ್ಡಿನಲ್ಲಿ ಮನೆ ಕಟ್ಟಿ ಕೊಡುತ್ತೇವೆ ಎಂದು ಹೇಳಿರಲಿಲ್ಲ!' ಎನ್ನುತ್ತಾರೆ. ಶಿರಗುಪ್ಪದ ಸಮೀಪ ಆರು ಸಾವಿರ ಟಿನ್ ಶೆಡ್‌ಗಳಲ್ಲಿ ಜನರು ಜೀವನ ಮಾಡುತ್ತಿದ್ದಾರೆ. ಬಳ್ಳಾರಿ ಬಿಸಿಲು ಹೇಗಿರುತ್ತದೆ ಗೊತ್ತಲ್ಲ? ಈ ಬೇಸಿಗೆಯಲ್ಲಿ ಟಿನ್ ಶೀಟಿನ ಅಡಿಯಲ್ಲಿ ಜೀವನ ಮಾಡಲು ಆದೀತೇ? ಸಂತ್ರಸ್ತರ ಬದುಕು ಬಾಣಲೆ ಯಿಂದ ಬೆಂಕಿಗೆ ಬಿದ್ದಂತೆ ಆಗಿದೆ. ಟಿನ್ ಶೆಡ್ಡಿನಲ್ಲಿ ವಾಸಿಸುವಂತಿಲ್ಲ; ವಾಪಸು ಮನೆಗೂ ಹೋಗುವಂತಿಲ್ಲ.

ನಿಸರ್ಗದ ಹೊಟ್ಟೆಯನ್ನು ಬಗೆಯುವವರಿಗೆ ಕರುಣೆ ಎಂಬುದು ಇರುವುದಿಲ್ಲ. ಅವರಿಗೆ ಲಾಭ ಹೇಗೆ ಮಾಡಿಕೊಳ್ಳಬೇಕು ಎಂಬುದು ಮಾತ್ರ ಗೊತ್ತಿರುತ್ತದೆ. ಹಿತಾಸಕ್ತಿಗಳನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದು ತಿಳಿದಿರುತ್ತದೆ. ಬಳ್ಳಾರಿ, ರಾಯಚೂರು ಭಾಗದಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟುವ ಗುತ್ತಿಗೆಯನ್ನು ಜಗನ್‌ಮೋಹನ ರೆಡ್ಡಿ (ಆಂಧ್ರದ ದಿ.ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ಅವರ ಪುತ್ರ) ಅವರ ಕಡೆಯವರಿಗೆ ಕೊಡಬೇಕು ಎಂದು ರೆಡ್ಡಿ ಸೋದರರು, ಈ ಹಿತಾಸಕ್ತಿಯ ಹಿನ್ನೆಲೆಯಲ್ಲಿಯೇ ತಾಕೀತು ಮಾಡಿದ್ದರು ಎನ್ನಲಾಗುತ್ತಿದೆ.

ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎನ್ನುವಂತೆ ರೆಡ್ಡಿ ಸೋದರರು, ಯಡಿಯೂರಪ್ಪ ಬೀದಿಗೆ ಬಂದು ಜಗಳ ಶುರು ಮಾಡುತ್ತಿದ್ದಂತೆಯೇ ಸಭ್ಯ ದಾನಿಗಳು ಆಸಕ್ತಿ ಕಳೆದುಕೊಂಡರು. ಪುನರ್ವಸತಿ ಕೆಲಸದಲ್ಲಿ ಸರ್ಕಾರಕ್ಕೇ ಆಸಕ್ತಿ ಇಲ್ಲದಿದ್ದರೆ ಬೇರೆಯವರಿಗೆ ಹೇಗೆ ಆಸಕ್ತಿ ಇರುತ್ತದೆ? ಅದರ ಜತೆಗೆ ಮನೆ ಕಟ್ಟಲು ಭೂಮಿ ಸಿಗದೇ ಇದ್ದುದು, ಸಿಕ್ಕರೂ ಜಮೀನು ಮಾಲೀಕರು ಹೆಚ್ಚು ಬೆಲೆಯನ್ನು ಕೇಳಿದ್ದು, ಅದರಿಂದ ಸರ್ಕಾರದ ಹಣಕಾಸಿನ ಲೆಕ್ಕಾಚಾರ ತಪ್ಪಿದ್ದು, ಗುತ್ತಿಗೆದಾರರು ಲಾಭ ಮಾಡಿಕೊಳ್ಳಲು ಹವಣಿಸಿದ್ದು... ಒಂದೇ ಎರಡೇ...? ಕಲ್ಯಾಣ ಕೆಲಸಕ್ಕೆ ವಿಘ್ನಗಳು ಬಹಳ.

ಈ ಎಲ್ಲ ವಿಘ್ನಗಳನ್ನು ಮೀರಿ ಅಮೃತಾನಂದಮಯಿ ಮಠದವರು ಮನೆ ಕಟ್ಟಿದ್ದಾರೆ. ಗುತ್ತಿಗೆದಾರರಿಗೆ ಅವರು ಕಾದು ಕೂಡ್ರಲಿಲ್ಲ. ತಾವೇ ಹಿಮಾಚಲ ಪ್ರದೇಶದಿಂದ ತಮ್ಮ ಎಂಜಿನಿಯರ್‌ಗಳನ್ನು ಕರೆಸಿ, ಕೆಲಸಗಾರರನ್ನು ಕರೆಸಿ ಮನೆಗಳ ನಿರ್ಮಾಣ ಮುಗಿಸಿದರು. ಇನ್ನೂ 250 ಮನೆಗಳನ್ನು ಅವರು ಕಟ್ಟಬೇಕು. ಉದ್ದೇಶ ಪ್ರಾಮಾಣಿಕವಾಗಿದ್ದರೆ, ಆ ಉದ್ದೇಶದ ಹಿಂದೆ ನೈಜ ಕಾಳಜಿ ಇದ್ದರೆ (ಈ ಕೆಲಸಕ್ಕೆ ಪ್ರತಿಯಾಗಿ ಸರ್ಕಾರದಿಂದ ಬೆಂಗಳೂರಿನಲ್ಲಿ ಆಶ್ರಮದ ಆಸ್ಪತ್ರೆಗೆ 15 ಎಕರೆ ಜಾಗ ಮತ್ತು ಐದು ಕೋಟಿ ರೂಪಾಯಿ ನೆರವು ತೆಗೆದುಕೊಂಡುದರಿಂದ 'ವ್ಯಾಪಾರದ ಆಯಾಮ' ಬಂದಿದ್ದರೂ) ಕೆಲಸ ಆಗುವುದು ಕಷ್ಟವಾಗುವುದಿಲ್ಲ. ಆದರೆ, ಸರ್ಕಾರ ನಡೆಸುವವರ ಉದ್ದೇಶಗಳು ಯಾವಾಗಲೂ ನಿಸ್ಪೃಹವಾಗಿರುವುದಿಲ್ಲ. ಅಲ್ಲಿ ಬರೀ 'ವ್ಯಾಪಾರ' ಮಾತ್ರ ಇರುತ್ತದೆ. ಅದಕ್ಕೇ ಸಮಸ್ಯೆಗಳು ಅಡ್ಡ ಬರುತ್ತವೆ.

ಮರೆವು ಒಂದು ಶಾಪ ಎಂದೆ. ಸರ್ಕಾರ ಪ್ರವಾಹ ಸಂತ್ರಸ್ತರಿಗೆ ಸಹಾನುಭೂತಿ ಪ್ರಕಟಿಸಲು ರಾಜ್ಯೋತ್ಸವವನ್ನು ರದ್ದು ಮಾಡಿತು. ಅದೇ ಸರ್ಕಾರ ಮುಂದೆ ನಿಂತು ಕೃಷ್ಣದೇವರಾಯನ ಪಟ್ಟಾಭಿಷೇಕ ಮಹೋತ್ಸವದ 500ನೇ ವರ್ಷವನ್ನು ಅದ್ಧೂರಿಯಾಗಿ ಆಚರಿಸಿತು. ಸರ್ಕಾರದ ಲೆಕ್ಕದ ಪ್ರಕಾರವೇ ಅದಕ್ಕೆ 13 ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ ಎಂದಿಟ್ಟುಕೊಳ್ಳೋಣ. ರಾಜ್ಯೋತ್ಸವಕ್ಕೆ ಎಷ್ಟು ಖರ್ಚು ಬರುತ್ತಿತ್ತು? 'ರಾಜ್ಯೋತ್ಸವ ಒಂದು ಸಂಭ್ರಮ. ಸೂತಕದ ಮನೆಯಲ್ಲಿ ಸಂಭ್ರಮ ಬೇಡ' ಎನ್ನುವುದಾದರೆ ಬಳ್ಳಾರಿಯಂಥ ಸೂತಕದ ಜಿಲ್ಲೆಯಲ್ಲಿಯೇ ಕೃಷ್ಣದೇವರಾಯನ ಪಟ್ಟಾಭಿಷೇಕ ವರ್ಷಾಚರಣೆ ಮಾಡಿದ್ದು ಸಂಭ್ರಮ ಅಲ್ಲವೇ? ಬಳ್ಳಾರಿ ರೆಡ್ಡಿ ಸೋದರರಿಗೆ ತಮ್ಮದೇ ಜಿಲ್ಲೆಯಲ್ಲಿ ಮನೆ ಕಳೆದುಕೊಂಡ ಸಾವಿರಾರು ಜನರಿಗೆ ತಲೆ ಮೇಲೆ ಒಂದು ಸೂರು ಒದಗಿಸುವುದಕ್ಕಿಂತ ಪಟ್ಟಾಭಿಷೇಕ ವರ್ಷಾಚರಣೆ ಏಕೆ ಮುಖ್ಯ ಅನಿಸಿತು? ಯಡಿಯೂರಪ್ಪ ರಾಜ್ಯೋತ್ಸವ ಕೈ ಬಿಟ್ಟು ಸಾಧಿಸಿದ್ದೇನು? ಗದಗ ಸಾಹಿತ್ಯ ಸಮ್ಮೇಳನವನ್ನು ಸರಳವಾಗಿ ಆಚರಿಸಲು ಹೇಳಿ ಸಾಧಿಸುತ್ತಿರುವುದು ಏನು? ಒಂದಕ್ಕೊಂದು ಸಂಬಂಧವಿಲ್ಲ. ತರ್ಕವೂ ಕಾಣುವುದಿಲ್ಲ.

ಕಾಲ ನಿಲ್ಲುವುದಿಲ್ಲ. ಸಮಯ ನಮಗಾಗಿ ಕಾಯುವುದಿಲ್ಲ. ಐದು ತಿಂಗಳು ಆದುದು 6 ತಿಂಗಳು ಆಗುತ್ತದೆ. ಬೇಸಿಗೆ ಮುಗಿದು ಮಳೆಗಾಲ ಬರುತ್ತದೆ. ಉತ್ತರ ಕರ್ನಾಟಕದ ಜನರ ದುರ್ದೈವಕ್ಕೆ ಈ ಸಾರಿಯೂ ಮತ್ತೆ ಭಾರಿ ಮಳೆ ಬಂದು ಮುರಿದು ಬಿದ್ದ ಅರ್ಧ ಮನೆ ಪೂರ್ತಿ ಬಿದ್ದರೆ, ಟಿನ್ ಶೆಡ್‌ಗಳು ಗಾಳಿಗೆ ಹಾರಿ ಹೋದರೆ ಹಳ್ಳಿಗರ ಬದುಕು ಬಟಾ ಬಯಲಾಗುತ್ತದೆ. 'ಮರೆವು ಒಂದು ವರ, ಸಾರ್ವಜನಿಕರ ನೆನಪಿನ ಶಕ್ತಿ ಕಡಿಮೆ' ಎಂದು ಸರ್ಕಾರ ಸುಮ್ಮನೆ ಕುಳಿತರೆ ಆಗದು. ಸಂತ್ರಸ್ತರಿಗೂ ಅಂಥದೇ ಮರೆವು ಇರಬೇಕಲ್ಲ? ಅದು ಶಾಪ ಆಗಲು ತಡವಾದೀತೇ?

■

# ಗದಗ ಸಮ್ಮೇಳನ ಮತ್ತು ಕೆಟ್ಟ ಸಂಪ್ರದಾಯದ ಆರಂಭ

ಸಾಹಿತ್ಯ ಸಮ್ಮೇಳನ ಒಂದು ಜಾತ್ರೆಯೇ? ಸಮ್ಮೇಳನದಲ್ಲಿ ರಾಜಕಾರಣಿಗಳಿಗೆ ಅವಕಾಶ ಇರಬೇಕೇ ಬೇಡವೇ?... ಸಾಹಿತ್ಯ ಸಮ್ಮೇಳನ ನಡೆದಾಗಲೆಲ್ಲ ಕೇಳಿ ಬರುವ ಪ್ರಶ್ನೆಗಳು ಇವು. ಆದರೆ, ಕನ್ನಡ ಲೇಖಕರು, ಕನ್ನಡ ಸಾಹಿತ್ಯ ಪರಿಷತ್ತು ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡಿಲ್ಲ. ಅಥವಾ ಈ ಪ್ರಶ್ನೆಗಳನ್ನು ಅವೈಡ್ ಮಾಡಿ ಕೊಂಡು ಬಂದಿವೆ. ಗದುಗಿನಲ್ಲಿ ಮೊನ್ನೆ ನಡೆದ ಸಾಹಿತ್ಯ ಸಮ್ಮೇಳನ ಜಾತ್ರೆಯ ಹಾಗೆಯೇ ಇತ್ತು. ಹಾಗೆ ನೋಡಿದರೆ ಹಿಂದೆ ನಡೆದ ಸಮ್ಮೇಳನಗಳ ಸ್ವರೂಪವೂ ಇದಕ್ಕಿಂತ ಭಿನ್ನವಾಗಿರಲಿಲ್ಲ. 'ಹೌದು, ಇದು ಜಾತ್ರೆಯೇ' ಎಂದು ಹೇಳುವ ಸಾಹಿತಿಗಳು, ಪರಿಷತ್ತಿನ ಹಾಜಿ, ಮಾಜಿ ಅಧ್ಯಕ್ಷರೂ ಇದ್ದಾರೆ.

ಸಮ್ಮೇಳನದಲ್ಲಿ ರಾಜಕಾರಣಿಗಳಿಗೆ ಅವಕಾಶ ಇರಬೇಕೇ ಬೇಡವೇ ಎಂಬ ಪ್ರಶ್ನೆಯೂ ಹಾಗೆಯೇ ಜ್ವಲಂತವಾಗಿ ಉಳಿದುಕೊಂಡು ಬಂದಿದೆ. ಕರ್ನಾಟಕದಲ್ಲಿ ರಾಜಕಾರಣಿಗಳನ್ನು ಹೊರಗೆ ಇಟ್ಟು ಸಮ್ಮೇಳನ ನಡೆಸಿದ ಉದಾಹರಣೆಯೇ ಇಲ್ಲ. ಪರಿಷತ್ತು ಆರ್ಥಿಕವಾಗಿ ಸದೃಢವಾಗಿ ಇರದ ಕಾರಣ ಮತ್ತು ಇನ್ನೂ ಅನೇಕ

ಕಾರಣಗಳಿಗಾಗಿ ಸರ್ಕಾರವನ್ನು ಅವಲಂಬಿಸಬೇಕಾಗಿರುವುದರಿಂದ ರಾಜಕಾರಣಿಗಳು ಸಮ್ಮೇಳನದ ಒಂದು ಅವಿಭಾಜ್ಯ ಅಂಗವಾಗಿ ಪರಿಣಮಿಸಿದ್ದಾರೆ. ರಾಜಕಾರಣಿಗಳನ್ನು ಸಮ್ಮೇಳನದ ವೇದಿಕೆಗೆ ಕರೆತರಬಾರದು ಎಂದು ಮೊದಲು ಗಟ್ಟಿಯಾಗಿ ಹೇಳಿದವರು ದಿ.ಹಾ.ಮಾ.ನಾಯಕರು. ಪ್ರತಿಯೊಬ್ಬ ಕನ್ನಡಿಗ ಒಂದು ರೂಪಾಯಿಯನ್ನು ಪರಿಷತ್ತಿಗೆ ದೇಣಿಗೆ ಕೊಟ್ಟರೂ ಸಾಕು ಮೂರು ಕೋಟಿ ರೂಪಾಯಿ ಧ್ರುವನಿಧಿ ಸ್ಥಾಪಿಸಿ ಆ ಹಣದಿಂದಲೇ ಪರಿಷತ್ತಿನ ಚಟುವಟಿಕೆ ನಡೆಸಬಹುದು ಎಂದು ನಾಯಕರು ಹೇಳಿದ್ದರು. ಇನ್ನೂವರೆಗೆ ಮೂರು ಕೋಟಿ ರೂಪಾಯಿ ಸಂಗ್ರಹವಾಗಿಲ್ಲ. ಸಾಹಿತ್ಯ ಪರಿಷತ್ತಿನ ವೆಬ್‌ಸೈಟ್ ತೆರೆದು ನೋಡಿದರೆ ಹಿಂದಿನ ಅಧ್ಯಕ್ಷ ಚಂದ್ರಶೇಖರ ಪಾಟೀಲರು ಕನ್ನಡಿಗರ ಉದಾರ ನೆರವಿಗೆ ಮಾಡಿಕೊಂಡ ಮನವಿ ಈಗಲೂ ಕಾಣುತ್ತದೆ. (ಈಗ ಅಧ್ಯಕ್ಷರು ಬದಲಾಗಿದ್ದರೂ ಹಿಂದಿನ ಅಧ್ಯಕ್ಷರ ಮನವಿ ಹಾಗೆಯೇ ಉಳಿದಿರುವುದು ಸೋಜಿಗ!)

ನಮ್ಮ ರಾಜಕೀಯ ನಾಯಕರ ಆರ್ಥಿಕ ಶಕ್ತಿಯೇ ಪರಿಷತ್ತು ಅವರ ಬೆನ್ನು ಬೀಳುವಂತೆ ಮಾಡುತ್ತಿದೆ. ಗದುಗಿನಲ್ಲಿ ಸಮ್ಮೇಳನ ನಡೆಯಬೇಕು ಎಂದರೆ ಅಲ್ಲಿನ ಜಿಲ್ಲಾ ಉಸ್ತುವಾರಿ ಸಚಿವರೇ ಸ್ವಾಗತ ಸಮಿತಿ ಅಧ್ಯಕ್ಷರಾಗಿರುತ್ತಾರೆ. ಜಿಲ್ಲೆಯ ಶಾಸಕರು ಇತರ ಹುದ್ದೆಗಳಲ್ಲಿ ಇರುತ್ತಾರೆ. ಶಾಸಕರಿಗೂ ಜಿಲ್ಲಾ ಉಸ್ತುವಾರಿ ಸಚಿವರಿಗೂ ಹೊಂದಾಣಿಕೆ ಆಗದೇ ಇದ್ದರೆ ಸಮ್ಮೇಳನಕ್ಕೆ ಕುತ್ತು ಬಂದಂತೆಯೇ. ಗದಗ ಸಮ್ಮೇಳನಕ್ಕೆ ನಿರಂತರವಾಗಿ ಅನಿಶ್ಚಿತತೆ ಕಾಡಿದ್ದು ಇದೇ ಕಾರಣಕ್ಕಾಗಿ. ಚಿತ್ರದುರ್ಗ ಸಮ್ಮೇಳನದಲ್ಲಿ ಅವ್ಯವಸ್ಥೆ ತಾಂಡವವಾಡಿದ್ದೂ ಇದೇ ಕಾರಣಕ್ಕಾಗಿ. ಒಂದು ಸಮ್ಮೇಳನಕ್ಕೆ ಮುಖ್ಯಮಂತ್ರಿ ಯಾವುದೋ ಕಾರಣದಿಂದ ಬರದೇ ಇದ್ದರೆ ಅದು ದೊಡ್ಡ ವಿವಾದವಾಗುತ್ತದೆ. ಗದಗ ಸಮ್ಮೇಳನದ ಉದ್ಘಾಟನೆಗೆ ಮುಖ್ಯಮಂತ್ರಿ ಬರದೇ ಇದ್ದಾಗ ರಾದ್ಧಾಂತವೇ ಆಯಿತು. ಅವರು ಸಮಾರೋಪಕ್ಕೆ ಖಂಡಿತ ಬರುತ್ತಾರೆ ಎಂದಾಗಲೇ ವಿವಾದ ತಣ್ಣಗಾದುದು. ಏಕೆ ಈ ಅವಲಂಬನೆ? ಸಾಹಿತ್ಯಕ್ಕೂ ರಾಜಕಾರಣಿಗಳಿಗೂ ಏನು ಸಂಬಂಧ? ನಮ್ಮ ಎಷ್ಟು ಜನ ಮುಖ್ಯ ಮಂತ್ರಿಗಳು ಒಂದಾದರೂ ಸಾಹಿತ್ಯ ಕೃತಿಯನ್ನು ಓದಿದ್ದಾರೆ? ಓದುತಿದ್ದಾರೆ?

ನೆರೆಯ ಮರಾಠಿ ಸಾಹಿತ್ಯ ಸಮ್ಮೇಳನಕ್ಕೆ ಒಂದು ಸಾರಿ ಹೋಗಿ ಬನ್ನಿ. ಒಬ್ಬನೇ ಒಬ್ಬ ರಾಜಕಾರಣಿ ವೇದಿಕೆ ಮೇಲೆ ಇರುವುದಿಲ್ಲ. ಹಾಗೆಂದು ಅವರು ರಾಜಕಾರಣಿಗಳನ್ನು ಸಮ್ಮೇಳನಕ್ಕೆ ಕರೆಯುವುದಿಲ್ಲ ಎಂದಲ್ಲ. ಕರೆಯುತ್ತಾರೆ. ಆದರೆ, ಅವರು ಬಂದು ಜನರ ಮಧ್ಯದಲ್ಲಿ ಕುಳಿತು ಸಮ್ಮೇಳನದ ಕಲಾಪವನ್ನೆಲ್ಲ ಸಮಾಧಾನ ದಿಂದ ವೀಕ್ಷಿಸಿ ಎದ್ದು ಹೊರಟು ಹೋಗುತ್ತಾರೆ. ಮುಖ್ಯಮಂತ್ರಿ ಬಂದರೆಂದು ಯಾವ ಸಾಹಿತಿಯೂ ಪುಳಕಗೊಂಡು ಅವರ ದೃಷ್ಟಿಗೆ ಬೀಳಲು ಯತ್ನಿಸುವುದಿಲ್ಲ. ಕರ್ನಾಟಕದಲ್ಲಿ ಸಾಹಿತ್ಯ ಸಮ್ಮೇಳನವನ್ನು ಮುಖ್ಯಮಂತ್ರಿಯೇ ಉದ್ಘಾಟಿಸಬೇಕು. ಅಲ್ಲಿ ಹಾಗಲ್ಲ. ಬೇರೆ ಇನ್ನಾವುದೋ ಭಾಷೆಯ ಸಾಹಿತಿಯನ್ನು ಕರೆದು ಅವರು ತಮ್ಮ ಅಖಿಲ ಭಾರತ ಮರಾಠಿ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸುತ್ತಾರೆ. ನಮ್ಮ ಶಿವರಾಮ ಕಾರಂತ, ವಿ.ಕೃ.ಗೋಕಾಕ, ಎಸ್.ಎಲ್.ಭೈರಪ್ಪ, ಗಿರೀಶ್ ಕಾರ್ನಾಡ

ಅವರಿಗೆ ಈ ಗೌರವ ಸಿಕ್ಕಿದೆ. ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಇದಕ್ಕೆ ಎಂದೂ ಅಡ್ಡಿಯಾಗಲಿಲ್ಲ. ನಾವೂ ಒಬ್ಬ ಮರಾಠಿ ಸಾಹಿತಿಯನ್ನು ನಮ್ಮ ಸಾಹಿತ್ಯ ಸಮ್ಮೇಳನದ ಉದ್ಘಾಟನೆಗೆ ಕರೆಯಲು ಸಾಧ್ಯವಿದೆಯೇ? ಕ.ರ.ವೇ ಗೆಳೆಯರು ಸುಮ್ಮನೇ ಇರುತ್ತಾರೆಯೇ? ಅವರು ಸುಮ್ಮನೆ ಇರಲು ಮಾಧ್ಯಮದವರು ಬಿಡುತ್ತಾರೆಯೇ?

ಕನ್ನಡ–ಮರಾಠಿ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಇರುವ ಮುಖ್ಯ ವ್ಯತ್ಯಾಸ ವಿದು. ಮರಾಠಿ ಸಾಹಿತ್ಯ ಪರಿಷತ್ತು ಸರ್ಕಾರದಿಂದ ಹಣ ತೆಗೆದುಕೊಳ್ಳುವುದಿಲ್ಲ ಎಂದು ಅಲ್ಲ. ತೆಗೆದುಕೊಳ್ಳುತ್ತದೆ. ತೆಗೆದುಕೊಳ್ಳುವುದು ತನ್ನ ಹಕ್ಕು ಎಂದು ಅದು ಭಾವಿಸುತ್ತದೆ. ಆದರೆ, ಅದೇ ಕಾಲಕ್ಕೆ ರಾಜಕಾರಣಿಗಳು ವೇದಿಕೆಯಿಂದ ದೂರ ಇರುವಂತೆಯೂ ನೋಡಿಕೊಳ್ಳುತ್ತದೆ. ನಮ್ಮ ಸಾಹಿತ್ಯ ಪರಿಷತ್ತು ಕೃಷ್ಣರಾಜ ಒಡೆಯರ್ ಮತ್ತು ಎಂ.ವಿಶ್ವೇಶ್ವರಯ್ಯ ಕಾಲದಲ್ಲಿ ಹುಟ್ಟಿದ್ದು. ಕೃಷ್ಣರಾಜ ಒಡೆಯರ್ ಎಂದೂ ವೇದಿಕೆ ಮೇಲೆ ಕುಳಿತುಕೊಳ್ಳಬೇಕು ಎಂದು ಬಯಸಿದವರಲ್ಲ. ಅಂಥ ನಿಸ್ಪೃಹರು ಮುಂದೆ ಬರಲಿಲ್ಲ. ರಾಜಕಾರಣಿಗಳು ವೇದಿಕೆ ಏರುವುದನ್ನು ತಡೆಯುವಂಥ ಗಟ್ಟಿ ಬೆನ್ನೆಲುಬನ್ನು ಪರಿಷತ್ತೂ ಹೊಂದಲಿಲ್ಲ. ಈಗ ರಾಜಕಾರಣಿಗಳ ಮೇಲಿನ ಅವಲಂಬನೆ ಒಂದು ರೂಢಿ, ಅದನ್ನು ಬಿಡುವುದು ಕಷ್ಟ ಎನ್ನುವಂತೆ ಆಗಿದೆ. ತುರ್ತು ಸ್ಥಿತಿ ಸಮಯದಲ್ಲಿ ಮರಾಠಿಯ ಶ್ರೇಷ್ಠ ಲೇಖಕಿಯರಲ್ಲಿ ಒಬ್ಬರಾದ ದುರ್ಗಾ ಭಾಗವತ್ ಮತ್ತು ಆಗಿನ ಕೇಂದ್ರ ಸಚಿವ ವೈ.ಬಿ.ಚವಾಣ್ ಅವರ ನಡುವೆ 'ಸಾಹಿತ್ಯದಲ್ಲಿ ಬದ್ಧತೆ' ಕುರಿತು ವೇದಿಕೆಯ ಮೇಲೆಯೇ ದೊಡ್ಡ ಚರ್ಚೆ, ವಾಗ್ವಾದ ನಡೆದಿತ್ತು. ಆ ಇಂಡಿಪೆಂಡ್ಸ್‌ನ್ನು ಮರಾಠಿ ಲೇಖಕರು ಈಗಲೂ ಉಳಿಸಿಕೊಂಡಿದ್ದಾರೆ. ಶಿವಸೇನೆ, ಮಹಾರಾಷ್ಟ್ರ ನವನಿರ್ಮಾಣ ಸಮಿತಿಯಂಥ ಸಂಘಟನೆಗಳ ಜತೆಗೆ ಅಲ್ಲಿನ ಯಾವ ಲೇಖಕರೂ ಗುರುತಿಸಿಕೊಳ್ಳುವುದಿಲ್ಲ.

ಮರಾಠಿ ಸಾಹಿತ್ಯ ಸಮ್ಮೇಳನ ಕನ್ನಡಕ್ಕಿಂತ ಹೆಚ್ಚು ವೈಬ್ರಂಟ್ ಆಗಿರಲು ಕಾರಣ, ಅಲ್ಲಿನ ಸಾಹಿತ್ಯ ಸಮ್ಮೇಳನಗಳಲ್ಲಿ ಹೆಣ್ಣು ಮಕ್ಕಳು ತೊಡಗಿಕೊಳ್ಳುವ ರೀತಿ ಮತ್ತು ತೋರುವ ಸಂಭ್ರಮ. ಅಲ್ಲಿನ ಗ್ರಾಮೀಣ ಭಾಗದಲ್ಲಿ ಊರಿನ ಜನರೇ ಸಾಹಿತ್ಯ ಸಮ್ಮೇಳನ ಸಂಘಟಿಸುತ್ತಾರೆ. ಕರ್ನಾಟಕದಲ್ಲಿ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಸಮ್ಮೇಳನ ನಡೆಯಬೇಕೆಂದರೆ ಅದಕ್ಕೆ ಪರಿಷತ್ತು, ರಾಜಕಾರಣಿಗಳು ಮತ್ತು ಸ್ಥಳೀಯ ಆಡಳಿತದ ಸಹಾಯ ಬೇಕೇ ಬೇಕು. ಸಂತ ತುಕಾರಾಂ ಮತ್ತು ಜ್ಞಾನೇಶ್ವರನ ಪರಮ ಭಕ್ತರಾದ ಮರಾಠಿ ಜನರು ಗ್ರಾಮೀಣ ಸಾಹಿತ್ಯ ಸಮ್ಮೇಳನಗಳಲ್ಲಿ 'ಜ್ಞಾನೇಶ್ವರಿ' ಗ್ರಂಥವನ್ನು ಪಲ್ಲಕ್ಕಿಯಲ್ಲಿ ಇಟ್ಟು ಮೆರವಣಿಗೆ ಮಾಡುತ್ತಾರೆ. ಹಾದಿ ಬೀದಿಯಲ್ಲಿ ಪನ್ನೀರು ಸಿಂಪಡಿಸಿ, ರಂಗೋಲಿ ಹಾಕಿ ಸಂಭ್ರಮಿಸುತ್ತಾರೆ. ಸಮ್ಮೇಳನಕ್ಕೆ ಬರುವವರು ಮನೆಯಿಂದಲೇ ರೊಟ್ಟಿ ಬುತ್ತಿ ಕಟ್ಟಿಕೊಂಡು ಬಂದು ಬಿಡುವಿನ ಸಮಯದಲ್ಲಿ ಊಟ ಮಾಡುತ್ತಾರೆ. ನಮ್ಮ ಸಮ್ಮೇಳನಗಳಲ್ಲಿ ಊಟದ್ದೇ ದೊಡ್ಡ ಚಿಂತೆ! ಊಟ ಸಿಗದೇ ಇದ್ದರೆ ಇಡೀ ಸಮ್ಮೇಳನಕ್ಕೆ ಕಪ್ಪು ಚುಕ್ಕೆ. ಎಂಥ ವ್ಯತ್ಯಾಸ?

ಮರಾಠಿ ಸಮ್ಮೇಳನದ ಗೋಷ್ಠಿಗಳೂ ಅಷ್ಟೇ. ಮುಖ್ಯ ವೇದಿಕೆ ಮೇಲೆ ಪ್ರಸಿದ್ಧ ಲೇಖಕರು ಮಾತ್ರ ಭಾಗವಹಿಸುತ್ತಾರೆ. ಪಕ್ಕದ ಸಮಾನಾಂತರ ವೇದಿಕೆಗಳಲ್ಲಿ

ಉದಯೋನ್ಮುಖ ಲೇಖಕರ 'ಕವಿ ಕಟ್ಟೆ' ಏರ್ಪಡುತ್ತದೆ. ಅಲ್ಲಿ ದಿನಗಟ್ಟಲೆ ಕವಿಗಳು ತಮ್ಮ ಕವಿತೆ ಓದುತ್ತಾರೆ. ಪ್ರತಿ ವರ್ಷ ಸಮ್ಮೇಳನಾಧ್ಯಕ್ಷರು ತಮ್ಮ ಆಯ್ಕೆಯ ಉದಯೋನ್ಮುಖ ಲೇಖಕನ ಹೆಸರನ್ನು ಮೊದಲ ದಿನವೇ ಪ್ರಕಟಿಸುತ್ತಾರೆ. ಅವಳಿ(ನಿ)ಗೆ ಪರಿಷತ್ತು ದೊಡ್ಡ ಮೊತ್ತದ ಪ್ರಶಸ್ತಿ ಕೊಡುತ್ತದೆ. ಕೊನೆಯ ದಿನ ವರ್ಷದ ಶ್ರೇಷ್ಠ ಕಥಾಸಂಕಲಕ್ಕೆ ಪ್ರಶಸ್ತಿ ಪ್ರಕಟಿಸಲಾಗುತ್ತದೆ. ಗದಗ ಸಾಹಿತ್ಯ ಸಮ್ಮೇಳನದ ಮುಖ್ಯ ವೇದಿಕೆಯ ಕೆಲವು ಗೋಷ್ಠಿಗಳಲ್ಲಿ ಗುಣಮಟ್ಟದ ಕೊರತೆ ಎದ್ದು ಕಾಣುತ್ತಿತ್ತು. ನಿರೂಪಕರ ಹಾವಳಿ ವಿಪರೀತವಾಗಿತ್ತು. ಕೆಲವರು ಸಾಹಿತಿಗಳು ಅದರಲ್ಲೂ ಲೇಖಕಿಯರು ವೇದಿಕೆಯ ರೋಮಾಂಚನಕ್ಕೆ ಸಿಲುಕಿ 'ಭರಪೂರ' ಭಾಷಣ ಮಾಡಿದರು. ಸಮ್ಮೇಳನ ಅಧ್ಯಕ್ಷರ ಜತೆಗಿನ ಸಂವಾದ ಕನ್ನಡದಲ್ಲಿಯೇ ನಡೆದರೂ ನಿರೂಪಕಿ. 'ಅಧ್ಯಕ್ಷರು ಏನ್ ಹೇಳಿದರಂದ್ರ...' ಎಂದು ರಾಗವಾಗಿ ಅದನ್ನೇ ಪುನರಾವರ್ತನೆ ಮಾಡುತ್ತಿದ್ದುದು ಹಾಸ್ಯಾಸ್ಪದವಾಗಿತ್ತು. ಕವಿಗೋಷ್ಠಿಯಲ್ಲಿ ಮೆಚ್ಚುಗೆ ಪಡೆದವರು ಬೆರಳೆಣಿಕೆಯಷ್ಟು ಕವಿಗಳು ಮಾತ್ರ. ಹಾಗೆ ನೋಡಿದರೆ ಸಮಾನಾಂತರ ಗೋಷ್ಠಿಗಳಲ್ಲಿಯೇ ಹೆಚ್ಚು ಅರ್ಥಪೂರ್ಣ ಚರ್ಚೆ ನಡೆಯಿತು. ಆದರೆ, ಅಲ್ಲಿ ಜನರು ಇರಲಿಲ್ಲ.

ಈ ಎಲ್ಲ ಅರೆಕೊರೆಗಳನ್ನು ಮೀರಿ ಗದಗ ಸಾಹಿತ್ಯ ಸಮ್ಮೇಳನ ಅತ್ಯಂತ ಕೆಟ್ಟ ಪರಂಪರೆಯೊಂದನ್ನು ಆರಂಭಿಸಿದೆ. ಅದು ಸಮ್ಮೇಳನಾಧ್ಯಕ್ಷರಿಗೆ ಭಾರಿ ಮೊತ್ತದ ಹಮ್ಮಿಣಿ ಕೊಟ್ಟುದು. ಪರಿಷತ್ತು ಇಂಥ ಕೆಲಸವನ್ನು ಯಾವತ್ತೂ ಮಾಡಿರಲಿಲ್ಲ. ಇದು ಕೆಟ್ಟ ಪರಂಪರೆ ಏಕೆ ಎಂದರೆ ಕನ್ನಡದಲ್ಲಿ ಸಮ್ಮೇಳನ ಅಧ್ಯಕ್ಷತೆಗೆ ಪೈಪೋಟಿ ಮಾಡುತ್ತಿರುವವರ ಸಂಖ್ಯೆ ಈಗಲೇ ಬೇಕಾದಷ್ಟು ಇದೆ. ಅವರಲ್ಲಿ ಅರ್ಹರೂ ಬಹಳಷ್ಟು ಜನರಿದ್ದಾರೆ. ಈ ಪೈಪೋಟಿ ಇನ್ನು ಮುಂದೆ ಮೇರೆ ಮೀರಲು ಈಗ ಕೊಟ್ಟಿರುವ ಹಮ್ಮಿಣಿ ಮತ್ತೊಂದು ಆಕರ್ಷಣೆಯಾಗಿ ಪರಿಣಮಿಸುತ್ತದೆ. ಗದಗ ಸಮ್ಮೇಳನದ ಅಧ್ಯಕ್ಷೆ ಗೀತಾ ನಾಗಭೂಷಣ ಅವರು ಸಮ್ಮೇಳನದ ಮುನ್ನಾದಿನ 'ಬದುಕು ಬರಹದ ನಡುವೆ ಸಂಬಂಧ ಇರಬೇಕಿಲ್ಲ' ಎಂದು ಹೇಳಿದ್ದು, ಅವರು ಹಮ್ಮಿಣಿಯನ್ನು ತೆಗೆದುಕೊಂಡ ನಂತರ ಬೇರೆ ಅರ್ಥ ಕಲ್ಪಿಸಲು ಕಾರಣವಾಯಿತು.

1999ರಲ್ಲಿ ನಡೆದ ಕನಕಪುರ ಸಮ್ಮೇಳನದ ಅಧ್ಯಕ್ಷ ಎಸ್.ಎಲ್.ಭೈರಪ್ಪ ಅವರಿಗೆ ಸಂಘಟಕರು ಒಂದು ಲಕ್ಷ ರೂಪಾಯಿ ಹಮ್ಮಿಣಿ ಕೊಟ್ಟಿದ್ದರು. ಆದರೆ, ಭೈರಪ್ಪ ಅದನ್ನು ವಾಪಸು ಪರಿಷತ್ತಿಗೆ ಕೊಟ್ಟುಬಿಟ್ಟರು. ಹಣ ಮತ್ತು ಅಧ್ಯಕ್ಷತೆಗೆ ತಳಕು ಹಾಕುವುದನ್ನು ಅವರು ಒಪ್ಪಿರಲಿಲ್ಲ. ಇದಕ್ಕೂ ಬಹಳ ಮುಂಚೆ 1981ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಸಮ್ಮೇಳನದ ಅಧ್ಯಕ್ಷ ಪು.ತಿ.ನರಸಿಂಹಾಚಾರ್ ಅವರಿಗೆ ಆ ಊರಿನ ಶ್ರೇಷ್ಠಿಯೊಬ್ಬರು ಹತ್ತು ಸಾವಿರ ರೂಪಾಯಿಗಳ ನಿಧಿ ಸಲ್ಲಿಸಿದ್ದರು. ವೇದಿಕೆಯಲ್ಲಿ ಇದ್ದ ಆಗಿನ ಪರಿಷತ್ ಅಧ್ಯಕ್ಷ ಹಂಪ.ನಾಗರಾಜಯ್ಯ, 'ಸಮ್ಮೇಳನದ ವೇದಿಕೆ ಮೇಲೆ ಅಧ್ಯಕ್ಷರಿಗೆ ಹೀಗೆ ಹಣ ಕೊಡುವುದು ಸಲ್ಲದು. ಬೇಕಾದರೆ, ನೀವು ಬೇರೆ ಸಮಾರಂಭ ಮಾಡಿ ಹಣ ಕೊಡಿ' ಎಂದು ವಿರೋಧಿಸಿದ್ದರು. ಶ್ರೇಷ್ಠಿಯವರು ಹೀಗೆ ಹಣ ಕೊಡಲು ಮುಂದಾದುದಕ್ಕೆ 80ರಲ್ಲಿ ನಡೆದ ಬೆಳಗಾವಿ ಸಮ್ಮೇಳನದಲ್ಲಿ ನಡೆದ ಒಂದು ಘಟನೆ ಕಾರಣವಾಗಿತ್ತು.

ಬೆಳಗಾವಿ ಸಮ್ಮೇಳನದ ಅಧ್ಯಕ್ಷತೆಯನ್ನು ಬಸವರಾಜ ಕಟ್ಟೀಮನಿ ವಹಿಸಿದ್ದರು. 79ರಲ್ಲಿ ನಡೆದ ಧರ್ಮಸ್ಥಳ ಸಮ್ಮೇಳನದ ಅಧ್ಯಕ್ಷ ಗೋಪಾಲಕೃಷ್ಣ ಅಡಿಗರು ಕಟ್ಟೀಮನಿಯವರಿಗೆ ಅಧ್ಯಕ್ಷತೆಯ ಅಧಿಕಾರವನ್ನು ಹಸ್ತಾಂತರಿಸುವ ಸಂದರ್ಭದಲ್ಲಿ 'ಸಮ್ಮೇಳನಾಧ್ಯಕ್ಷರಿಗೆ ಹಣವೂ ಇಲ್ಲ, ಅಧಿಕಾರವೂ ಇಲ್ಲ. ಅಧ್ಯಕ್ಷರಾದವರಿಗೆ ಹತ್ತಿಪ್ಪತ್ತು ಸಾವಿರವಾದರೂ ಕೊಡಬೇಕು' ಎಂದಿದ್ದರು. ಈ ಸಮ್ಮೇಳನದ ಸಮಾರೋಪ ಸಮಾರಂಭಕ್ಕೆ ಬಂದಿದ್ದ ಹಿರಿಯ ಸಾಹಿತಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರು ಅಡಿಗರ ಮಾತುಗಳನ್ನು ಬಲವಾಗಿ ಖಂಡಿಸಿದ್ದರು. 'ಸಮ್ಮೇಳನದ ಅಧ್ಯಕ್ಷತೆ ಒಂದು ದೊಡ್ಡ ಗೌರವ, ಅದನ್ನು ಅಧಿಕಾರವೆಂದಾಗಲೀ, ಹಣ ತರುವ ಸಾಧನವೆಂದಾಗಲೀ ಭಾವಿಸಬಾರದು' ಎಂದು ಖಂಡತುಂಡ ಮಾತುಗಳಲ್ಲಿ ತರಾಟೆಗೆ ತೆಗೆದುಕೊಂಡಿದ್ದರು.

ಗದಗ ಸಮ್ಮೇಳನದ ಅಧ್ಯಕ್ಷರಿಗೆ ಹಣ ಕೊಡಬೇಕು ಎಂಬ ಪ್ರಸ್ತಾವ ಎಲ್ಲಿಂದ ಬಂತು ತಿಳಿಯದು. ಸಮ್ಮೇಳನದ ಸಭಾಂಗಣದಲ್ಲಿ 'ಅಧ್ಯಕ್ಷರು ಹಣ ಕೇಳುತ್ತಿದ್ದಾರೆ' ಎಂಬ ಗುಸು ಗುಸು ಇತ್ತು. ಅವರೇ ಕೇಳಿದರೇ ಅಥವಾ ಪರಿಷತ್ತೇ ಔದಾರ್ಯ ಮೆರೆಯಿತೇ ಗೊತ್ತಿಲ್ಲ. ಆದರೆ, ಸ್ಪಷ್ಟನೆ ನೀಡುವ ಹೊಣೆ ಇಬ್ಬರ ಮೇಲೂ ಇದೆ. ದುರಂತ ಎಂದರೆ ಇಂಥ ಕೆಟ್ಟ ಸಂಪ್ರದಾಯವನ್ನು ಖಂಡಿಸುವ ಮಾಸ್ತಿಯವರು ಈಗ ಬದುಕಿಲ್ಲ. ಉಳಿದ ಸಾಹಿತಿಗಳು ಏಕೋ ಸುಮ್ಮನಿದ್ದಾರೆ. ಎಲ್ಲವೂ ಕಾಲಮಹಿಮೆ!

■

# ಯಾರ ಮುಖಕ್ಕೆ ಮಸಿ ಬಳಿಯಿತು ಕಲ್ಲಿದ್ದಲು?

ಮಸಿಯ ಆಟವೇ ಹಾಗೆ. ಇನ್ನೊಬ್ಬರ ಮುಖಕ್ಕೆ ಮಸಿ ಹಚ್ಚುವುದಕ್ಕಿಂತ ಮುಂಚೆ ನಮ್ಮ ಕೈಗೆ ಮಸಿ ಹಚ್ಚಿಕೊಳ್ಳಬೇಕಾಗುತ್ತದೆ. ಇನ್ನೊಬ್ಬರ ಮುಖಕ್ಕೆ ಮಸಿ ಬಳಿಯುವ ಆತುರದಲ್ಲಿ ನಮ್ಮ ಮುಖಕ್ಕೂ ಅದು ಹತ್ತುವ ಸಾಧ್ಯತೆ ಹೆಚ್ಚು. ವಿಧಾನಸಭೆಯಲ್ಲಿ ಮೊನ್ನೆ ಜೆ.ಡಿ.ಎಸ್ ನಾಯಕ ಎಚ್.ಡಿ.ರೇವಣ್ಣ ಮತ್ತು ಮುಖ್ಯ ಮಂತ್ರಿ ಯಡಿಯೂರಪ್ಪ, ಕರ್ನಾಟಕ ವಿದ್ಯುತ್ ಮಂಡಳಿ (ಕೆ.ಪಿ.ಸಿ)ಗೆ ಕಲ್ಲಿದ್ದಲು ಖರೀದಿಸಿದ ವ್ಯವಹಾರದಲ್ಲಿ ಪರಸ್ಪರರಿಗೆ ಮಸಿ ಹಚ್ಚುವ ಕೆಲಸವನ್ನೇ ಮಾಡಿದರು.

ಆ ಪಕ್ಷ ಈ ಪಕ್ಷ ಎಂದಲ್ಲ. ಎಲ್ಲ ಪಕ್ಷಗಳ ರಾಜಕಾರಣಿಗಳೂ ಈಗ ಗಾಜಿನ ಮನೆಯಲ್ಲಿಯೇ ಇದ್ದಾರೆ. ಇನ್ನೊಬ್ಬರ ಮನೆಯ ಮೇಲೆ ಕಲ್ಲು ಎಸೆಯುವಾಗ ತಮ್ಮ ಮನೆಯ ಮೇಲೂ ಕಲ್ಲು ಬೀಳಬಹುದು ಎಂದು ಅವರು ಲೆಕ್ಕಿಸುವುದಿಲ್ಲ. ಅವರು ಪರಸ್ಪರರ ಮುಖಕ್ಕೆ ಮಸಿ ಬಳಿದರೆ ಅಥವಾ ಗಾಜಿನ ಮನೆಗಳ ಮೇಲೆ ಕಲ್ಲು ತೂರಿಕೊಂಡರೆ ಸಾರ್ವಜನಿಕರಿಗೆ ಚಿಂತೆಯಿಲ್ಲ. ಆದರೆ, ಸಾರ್ವಜನಿಕ ಹಣದ ವಿಚಾರದಲ್ಲಿ ಹೀಗೆ ಆದರೆ ಅದು ಸಮಸ್ಯೆ.

‘ಭಾಟಿಯಾ ಕಂಪೆನಿಯಿಂದ ಕೆ.ಪಿ.ಸಿಗೆ ಕಲ್ಲಿದ್ದಲು ಖರೀದಿ ಮಾಡುವಲ್ಲಿ ಮುಖ್ಯಮಂತ್ರಿ ಕೈವಾಡವಿದೆ. 2008ರ ಜುಲೈ ಮತ್ತು ಆಗಸ್ಟ್ ತಿಂಗಳಿಗೆ ಅಗತ್ಯವಾಗಿದ್ದ ಕೇವಲ ಎರಡು ಲಕ್ಷ ಟನ್ ಕಲ್ಲಿದ್ದಲಿಗೆ ಬದಲು 3.06 ಲಕ್ಷ ಟನ್ ಕಲ್ಲಿದ್ದಲು ಖರೀದಿ ಮಾಡಲಾಯಿತು. ಅದಕ್ಕೆ ಮುಖ್ಯಮಂತ್ರಿಗಳು ಕೆ.ಪಿ.ಸಿಗೆ ಕೊಟ್ಟ ಲಿಖಿತ ನಿರ್ದೇಶನ ಕಾರಣ. ಇದರಿಂದ ಬೊಕ್ಕಸಕ್ಕೆ 80 ಕೋಟಿ ರೂಪಾಯಿ ನಷ್ಟವಾಯಿತು. ಮುಖ್ಯಮಂತ್ರಿ ಆದೇಶ ಪಾಲಿಸಿದ ಪ್ರಧಾನ ಕಾರ್ಯದರ್ಶಿ ಮಟ್ಟದ ಮೂವರು ಅಧಿಕಾರಿಗಳಿಗೆ ಹೈಕೋರ್ಟ್ ತಲಾ 25,000 ರೂಪಾಯಿ ದಂಡ ವಿಧಿಸಿತು’ ಎಂಬುದು ರೇವಣ್ಣ ಆರೋಪ.

ಇದಕ್ಕೆ ಉತ್ತರವಾಗಿ ‘ರೇವಣ್ಣ ಅವರು ವಿದ್ಯುತ್ ಸಚಿವರಾಗಿದ್ದಾಗ, ಜೆ.ಡಿ.ಎಸ್ ರಾಜ್ಯಸಭೆ ಸದಸ್ಯ ಎಂ.ಎ.ಎಂ.ರಾಮಸ್ವಾಮಿ ಅವರ, ಸೌತ್ ಇಂಡಿಯಾ ಕಾರ್ಪೊರೇಷನ್‌ನಿಂದ ಕಲ್ಲಿದ್ದಲು ಖರೀದಿ ಮಾಡುವಾಗ ಶೇ 36ರಷ್ಟು ಹೆಚ್ಚಿನ ದರ ನೀಡಿದ್ದಾರೆ. ಸಮ್ಮಿಶ್ರ ಸರ್ಕಾರ ಬಹುಮತ ಕಳೆದುಕೊಂಡ ನಂತರ ಕಲ್ಲಿದ್ದಲು ಪೂರೈಕೆ ಟೆಂಡರ್‌ಗೆ ಅನುಮತಿ ನೀಡಲಾಯಿತು. ಇದರಿಂದ ಕೆ.ಪಿ.ಸಿಗೆ 180 ಕೋಟಿ ರೂಪಾಯಿ ಲುಕ್ಸಾನು ಆಯಿತು’ ಎಂಬುದು ಯಡಿಯೂರಪ್ಪ ಅವರ ಆರೋಪ. ಎರಡೂ ಗುರುತರ ಆರೋಪಗಳು. ಈ ಬಗ್ಗೆ ಲೋಕಾಯುಕ್ತ ಅಥವಾ ಸಿ.ಬಿ.ಐ ತನಿಖೆ ಆಗಲಿ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾಡಿದ ಆಗ್ರಹಕ್ಕೆ ಮುಖ್ಯಮಂತ್ರಿ ಒಪ್ಪಿಲ್ಲ. ರೇವಣ್ಣ ಮುಖ್ಯಮಂತ್ರಿಗಳ ರಾಜೀನಾಮೆ ಕೇಳಿದ್ದಾರೆ. ಕೊನೆಯ ಪಕ್ಷ ಲೋಕಾಯುಕ್ತ ತನಿಖೆಗೆ ಒಪ್ಪಿಸಿ ಎಂದಿದ್ದಾರೆ.

ಅಧಿವೇಶನ ನಡೆದಾಗಲೆಲ್ಲ ಇಂಥ ಒಂದೊಂದೇ ಹಗರಣಗಳನ್ನು ರೇವಣ್ಣ ಬಯಲಿಗೆ ಎಳೆಯುತ್ತಿದ್ದಾರೆ. ಹಿಂದೆಲ್ಲ ಈ ಕೆಲಸವನ್ನು ವಿರೋಧ ಪಕ್ಷದ ನಾಯಕರೇ ಮಾಡುತ್ತಿದ್ದರು. ಅಧಿಕೃತ ದಾಖಲೆಗಳನ್ನು ಸದನದಲ್ಲಿ ಬಹಿರಂಗಪಡಿಸಿ ಸರ್ಕಾರವನ್ನು ಇರಿಸುಮುರಿಸಿಗೆ ಈಡು ಮಾಡುತ್ತಿದ್ದರು. ಈ ಸರ್ಕಾರ ಬಂದ ಮೇಲೆ ಆ ಕೆಲಸವನ್ನು ರೇವಣ್ಣ ಮಾತ್ರ ಮಾಡುತ್ತಿದ್ದಾರೆ. ಸರ್ಕಾರದ ಮಟ್ಟದಲ್ಲಿ ಸಿದ್ದರಾಮಯ್ಯ ಅವರಿಗಿಂತ ರೇವಣ್ಣನವರ ‘ಇಂಟೆಲಿಜನ್ಸ್’ ಪಡೆ ಬಹಳ ಚುರುಕಾಗಿ ಕೆಲಸ ಮಾಡುತ್ತಿರುವಂತಿದೆ. ಮುಖ್ಯಮಂತ್ರಿಗಳ ಮನೆಯಿಂದ ಹೋದ ಫ್ಯಾಕ್ಸ್ ಸಂದೇಶ ಕೂಡ ರೇವಣ್ಣ ಅವರ ಕೈಗೆ ಸಿಗುತ್ತದೆ! ‘ವಿಧಾನಸೌಧದಲ್ಲಿ ಯಾವುದೇ ಕಡತ ಒಂದು ಹೆಜ್ಜೆ ಮುಂದೆ ಹೋದರೂ ಆ ಸುದ್ದಿ ಗೌಡರ ಮನೆಗೆ ತಲುಪುತ್ತದೆ’ ಎಂಬ ಸುದ್ದಿ ಸುಳ್ಳು ಇರಲಿಕ್ಕಿಲ್ಲ. ರಾಜಕಾರಣ ಇರಬೇಕಾದುದೇ ಹಾಗೆ. ಆ ದೃಷ್ಟಿಯಿಂದ ರೇವಣ್ಣ ‘ಸಮರ್ಥ’ವಾಗಿಯೇ ಕೆಲಸ ಮಾಡುತ್ತಿದ್ದಾರೆ.

ಆದರೆ, ಈ ಎಲ್ಲ ಹಗರಣಗಳು ಒಂದು ತಾರ್ಕಿಕ ಕೊನೆಯನ್ನು ಕಾಣುತ್ತಿಲ್ಲ. ಬರೀ ಪರಸ್ಪರರ ವಿರುದ್ಧ ಕೆಸರು ಎರಚಾಟದಲ್ಲಿ ಮಾತ್ರ ಪರ್ಯವಸಾನ ಆಗುತ್ತಿವೆ. ರೇವಣ್ಣ ವಿದ್ಯುತ್ ಸಚಿವರಾಗಿದ್ದಾಗ ಅಷ್ಟೊಂದು ದೊಡ್ಡ ಹಗರಣ ಆಗಿದ್ದರೆ, ಬೊಕ್ಕಸಕ್ಕೆ ನಷ್ಟ ಆಗಿದ್ದರೆ ಅದನ್ನು ಲೋಕಾಯುಕ್ತ ಅಥವಾ ಸಿ.ಬಿ.ಐ ತನಿಖೆಗೆ ಒಳಪಡಿಸಲು ಮುಖ್ಯಮಂತ್ರಿಗಳಿಗೆ ಏನು ಅಡ್ಡಿ? ರಾಜ್ಯದ ಹೈಕೋರ್ಟ್, ಕಲ್ಲಿದ್ದಲು ಖರೀದಿಯಲ್ಲಿ

ಅಕ್ರಮವಾಗಿದೆ ಎಂದು ಮೂವರು ಹಿರಿಯ ಅಧಿಕಾರಿಗಳಿಗೆ ದಂಡ ವಿಧಿಸಿದರೆ ಅದು ಸರ್ಕಾರಕ್ಕೆ ಕಪ್ಪು ಚುಕ್ಕೆ ಅಲ್ಲವೇ? ಇಂಥ ಒಂದು ತೀರ್ಪು ಬಂದ ಮೇಲೂ ಹೈಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಮೋಹನ್ ಕುಮಾರ್ ನೇತೃತ್ವದಲ್ಲಿ ಒಂದು ಸಮಿತಿಯನ್ನೋ ಆಯೋಗವನ್ನೋ ರಚಿಸಿದರೆ ಏನಾಗುತ್ತದೆ? ರಾಜ್ಯದಲ್ಲಿ ಕಳೆದ ಮೂವತ್ತು ವರ್ಷಗಳಲ್ಲಿ ಇಂಥ ಎಷ್ಟು ಆಯೋಗಗಳು ರಚನೆಯಾಗಿಲ್ಲ? ಕನಿಷ್ಠ ಒಂದು ಆಯೋಗದ ವರದಿ ಮೇಲಾದರೂ ಕ್ರಮ ಆಗಿದೆಯೇ? ಯಾವುದಾದರೂ ಹಗರಣವನ್ನು ಮುಚ್ಚಿ ಹಾಕಲು ಒಂದೋ ಸಮಿತಿ ನೇಮಕ ಮಾಡಿ ಇಲ್ಲವೇ ಆಯೋಗ ರಚಿಸಿರಿ ಎಂದಲ್ಲವೇ ಹೇಳುವುದು? ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ರಚನೆಯಾದಷ್ಟು ಆಯೋಗಗಳು ಯಾವ ಸರ್ಕಾರದ ಅವಧಿಯಲ್ಲಿಯೂ ಆಗಲಿಲ್ಲ. ಆಗಲೂ ಒಂದೇ ಒಂದು ಆಯೋಗದ ಶಿಫಾರಸಿನಂತೆ ಕ್ರಮ ತೆಗೆದುಕೊಂಡ ಉದಾಹರಣೆ ಇರಲಿಲ್ಲ. ಈಗ ಮೋಹನ್ ಕುಮಾರ್ ಅವರು ತಮ್ಮ ಎದುರು ಹಾಜರಾಗುವಂತೆ ಮುಖ್ಯಮಂತ್ರಿಗಳನ್ನು ಕರೆಯಲು ಆಗುತ್ತದೆಯೇ? ಈ ಆಯೋಗದ ವರದಿಯಿಂದಲಾದರೂ ಏನಾಗುತ್ತದೆ?

'ನಮ್ಮ ತಪ್ಪು ಹೇಳುತ್ತೀರಲ್ಲ; ನೀವು ತಪ್ಪು ಮಾಡಲಿಲ್ಲವೇ' ಎನ್ನುತ್ತ, ರೇವಣ್ಣ ಕಾಲದ ಹಗರಣಗಳನ್ನು ಪುಸ್ತಕ ಮಾಡಿ ಮನೆ ಮನೆಗೆ ಹಂಚುವುದಾಗಿ ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಅದು ವಾಸ್ತವವಾಗಿ ಸಾಧ್ಯವೇ? ಅಥವಾ ಅವರಿಗೂ ಇಂಥ ಅಕ್ರಮಗಳನ್ನು ತಾರ್ಕಿಕ ಕೊನೆಗೆ ಮುಟ್ಟಿಸುವುದು ಬೇಕಿಲ್ಲವೇ? ಕೃಷ್ಣಯ್ಯ ಶೆಟ್ಟಿ ವಸತಿ ಸಚಿವರಾಗಿದ್ದಾಗ ಕಡಿಮೆ ಬೆಲೆಯಲ್ಲಿ ಖರೀದಿಸಿದ ಭೂಮಿಯನ್ನು ಕರ್ನಾಟಕ ಗೃಹ ಮಂಡಳಿಗೆ ಜಾಸ್ತಿ ಬೆಲೆಗೆ ಮಾರಿದ ಹಗರಣವನ್ನೂ ರೇವಣ್ಣನವರೇ ಪ್ರಸ್ತಾಪಿಸಿದ್ದರು. ಅದೂ ಒಂದೆರಡು ದಿನಗಳ ಕಾಲ ಮಾಧ್ಯಮಗಳಲ್ಲಿ ಮಿಂಚಿದ್ದು ಬಿಟ್ಟರೆ ಹೆಚ್ಚಿಗೇನೂ ಆಗಲಿಲ್ಲ. ರೇವಣ್ಣನವರೂ ಮತ್ತೆ ಅದನ್ನು ಪ್ರಸ್ತಾಪಿಸಲಿಲ್ಲ. ಏಕೆ? ಎಲ್ಲರೂ ತತ್ಕಾಲದ ಪ್ರಚಾರಕ್ಕೆ ಕಟ್ಟು ಬಿದ್ದಿದ್ದಾರೆಯೇ?

ಕಲ್ಲಿದ್ದಲು ಖರೀದಿಗೆ ಸಂಬಂಧಿಸಿದಂತೆ ನಡೆದ ಚರ್ಚೆ ಮತ್ತು ದಾಖಲೆಗಳನ್ನು ನೋಡಿದರೆ ರಾಜ್ಯದಲ್ಲಿ ಅಧಿಕಾರಿಗಳು ಧ್ವನಿ ಕಳೆದು ಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಸಂವಿಧಾನದ ಪ್ರಕಾರ ಒಬ್ಬ ಶಾಸಕನಾಗಲು ಅಥವಾ ಸಚಿವನಾಗಲು ನಿರ್ದಿಷ್ಟ ವಿದ್ಯಾರ್ಹತೆಯೇನೂ ಬೇಕಿಲ್ಲ. ಆದರೆ, ಸರ್ಕಾರಿ ನೌಕರಿ ಸೇರಲು ಪ್ರತಿ ಹುದ್ದೆಗೂ ನಿರ್ದಿಷ್ಟ ವಿದ್ಯಾರ್ಹತೆ ಬೇಕು. ಅವಿದ್ಯಾವಂತ ಆಗಿರಬಹುದಾದ ಜನಪ್ರತಿನಿಧಿಗೆ ಮಾರ್ಗದರ್ಶನ ಮಾಡಲು ಕಾರ್ಯಾಂಗಕ್ಕೆ ವಿದ್ಯೆಯ ಬಲ ಬೇಕು. ಆದರೆ, ಕಾಲ ಕಳೆದಂತೆ ಕಾರ್ಯಾಂಗ, ತನ್ನ ಸ್ವಂತಿಕೆಯನ್ನು ಶಾಸಕಾಂಗದ ಪದತಲದಲ್ಲಿ ಇಟ್ಟು ಕೈ ಕಟ್ಟಿ, ನಡು ಬಾಗಿ ನಿಂತಿದೆ. ಅದರ ಫಲವಾಗಿಯೇ ಶಾಸಕಾಂಗ, ಸಂವಿಧಾನ ತನ್ನ ಮೇಲೆ ವಿಧಿಸಿದ ಮಿತಿಯನ್ನು ಮೀರಿ ಹೆಜ್ಜೆ ಇಡುತ್ತಿದೆ. ಅದನ್ನು ಪ್ರತಿಭಟಿಸಿ, 'ಹೀಗೆ ಮಾಡುವುದು ಕಾನೂನು ಬಾಹಿರ' ಎಂದು ಅಧಿಕಾರಶಾಹಿ ಹೇಳುತ್ತಿಲ್ಲ. ಹೀಗಾಗಿಯೇ ಆಡಳಿತ ಸೂತ್ರ ಹಿಡಿದ ರಾಜಕಾರಣಿಗಳು 'ನಿಮ್ಮ ಸರ್ಕಾರ ಇದ್ದಾಗ ಅಕ್ರಮ ನಡೆಯಲಿಲ್ಲವೇ?' ಎಂದು

ಕೇಳುವ ಹಂತಕ್ಕೆ ಬಂದಿದ್ದಾರೆ. ಅಂದರೆ ಹಿಂದಿನ ಸರ್ಕಾರದಲ್ಲಿ ನಡೆದ ಅಕ್ರಮಗಳು ಈಗಿನ ಸರ್ಕಾರದ ಅಕ್ರಮಕ್ಕೆ ರಕ್ಷಣೆಯೇ? ಅದು ಹೇಗೆ ಆಗುತ್ತದೆ? 'ಹಿಂದಿನ ಸರ್ಕಾರ ತಪ್ಪು ಮಾಡಿದರೂ ನಮ್ಮ ಸರ್ಕಾರ ತಪ್ಪು ಮಾಡಲಿಲ್ಲ' ಎಂದು ಹೇಳುವ ನೈತಿಕ ಆಡಳಿತಾರೂಢರು ಈಚಿನ ದಶಕಗಳಲ್ಲಿ ಬಂದಿಲ್ಲ. ಮೌಲ್ಯಾಧಾರಿತ ರಾಜಕೀಯದ ಮಾತನಾಡಿದ್ದ ರಾಮಕೃಷ್ಣ ಹೆಗಡೆ ಅವರ ಕಾಲದಲ್ಲಿಯೇ 'ನಿಮ್ಮ ಸರ್ಕಾರದಲ್ಲಿ ಏನು ಮಾಡಿದಿರಿ ಗೊತ್ತಿಲ್ಲವೇ' ಎಂಬ ಮಾತು ಕೇಳಿ ಬಂತು. ನಂತರ ಬಂದವರು ಮೌಲ್ಯಾಧಾರಿತ ರಾಜಕಾರಣದ ಮಾತನ್ನೇ ಆಡಲಿಲ್ಲ!

ನೀರಾವರಿಯ ಹಾಗೆ ವಿದ್ಯುತ್ ವಲಯ ಕೋಟ್ಯಂತರ ರೂಪಾಯಿ ವಹಿವಾಟಿನ ಒಂದು ಇಲಾಖೆ. ಈಗ ವಿಧಾನ ಮಂಡಲದಲ್ಲಿ ನಡೆಯುತ್ತಿರುವ ಕಲ್ಲಿದ್ದಿಲು ಖರೀದಿ ವಿಚಾರವೊಂದನ್ನೇ ತೆಗೆದುಕೊಂಡರೂ ಕೋಟಿಗಟ್ಟಲೆ ನಷ್ಟವಾಗುತ್ತಿರುವುದು ಎದ್ದು ಕಾಣುತ್ತದೆ. ವಿದ್ಯುತ್ತಿನ ಖರೀದಿಯಲ್ಲಿ, ಉತ್ಪಾದನೆ ಯಲ್ಲಿ, ಖಾಸಗಿ ಕಂಪೆನಿಗಳಿಗೆ ಅನುಮತಿ ಕೊಡುವಾಗ ಪಾರದರ್ಶಕತೆ ಇಲ್ಲದೇ ಇರುವುದೇ ನಷ್ಟಕ್ಕೆ ಅಥವಾ ಅಕ್ರಮಕ್ಕೆ ಕಾರಣ. ಪೂರೈಕೆ ಆಗುತ್ತಿರುವ ವಿದ್ಯುತ್ತಿನಲ್ಲಿ ಸೋರಿಕೆ ಪ್ರಮಾಣ ಎಷ್ಟು ಎಂಬುದು ಈಗಲೂ ಖಚಿತವಾಗಿಲ್ಲ. ಗ್ರಾಮೀಣ ಪ್ರದೇಶಕ್ಕೆ, ಅದರಲ್ಲೂ ರೈತರಿಗೆ ಪೂರೈಕೆ ಆಗುತ್ತಿರುವ ವಿದ್ಯುತ್ತಿನ ಅಂದಾಜು ಮಾಡಲು ಮೀಟರ್‌ಗಳೇ ಇಲ್ಲ. ಅದು ಕೆ.ಪಿ.ಟಿ.ಸಿ.ಎಲ್ ಲೆಕ್ಕದಲ್ಲಿ ಸೋರಿಕೆ ಬಾಬತ್ತು. ರೈತರು ತಮ್ಮ ಪಂಪ್‌ಸೆಟ್‌ಗಳಿಗೆ ಮೀಟರ್ ಹಾಕಲು ಒಪ್ಪಿದರೆ ಬೇರೆ ಯಾವ ಮೂಲದಲ್ಲಿ ಸೋರಿಕೆ ಆಗುತ್ತದೆ, ಎಷ್ಟು ಆಗುತ್ತದೆ ಎಂಬುದನ್ನು ಅಂದಾಜು ಮಾಡಲು ಸಾಧ್ಯವಾಗುತ್ತದೆ. ಆದರೆ, ಮೀಟರ್ ಅಳವಡಿಸಲು ರೈತರು ಸುತರಾಂ ಒಪ್ಪುತ್ತಿಲ್ಲ. ವಿದ್ಯುತ್ತಿಗೆ ನಾನಾ ಮೂಲಗಳಿಂದ ಬೇಡಿಕೆ ಹೆಚ್ಚುತ್ತಲೇ ಇದೆ. 2004–05ನೇ ಸಾಲಿನಲ್ಲಿ 37,625 ದಶಲಕ್ಷ ಯೂನಿಟ್ ವಿದ್ಯುತ್‌ಗೆ ಬೇಡಿಕೆ ಇದ್ದರೆ ಈಗ ಅದರ ಪ್ರಮಾಣ 51,019 ದಶಲಕ್ಷ ಯೂನಿಟ್ (ಕೊರತೆ ಶೇ 14). ಈಗ ಲಭ್ಯ ಇರುವ ವಿದ್ಯುತ್ 44,549 ದಶಲಕ್ಷ ಯೂನಿಟ್ (ಕೊರತೆ ಶೇ 12.68). ಸೋಜಿಗ ಎಂದರೆ ಕಳೆದ ಹತ್ತು ವರ್ಷಗಳಲ್ಲಿ ರಾಜ್ಯದ ಗ್ರಿಡ್‌ಗೆ ಪ್ರತಿ ವರ್ಷ ಸೇರ್ಪಡೆಯಾದ ವಿದ್ಯುತ್‌ನ ಪ್ರಮಾಣ ಕನಿಷ್ಠ ಎಂದರೆ 255 ಮೆ.ವಾ (2000–01). ಗರಿಷ್ಠ ಎಂದರೆ 639 ಮೆ.ವಾ (2004–05). ಹಾಗೆ ನೋಡಿದರೆ ಈ ವರ್ಷವೇ 1252 ಮೆ.ವಾ ವಿದ್ಯುತ್ ಹೆಚ್ಚುವರಿಯಾಗಿ ಸೇರ್ಪಡೆಯಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ರಾಜ್ಯದ ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಹೆಚ್ಚಿಸಲು ನಡೆದ ಕೆಲಸ ಯಾವುದಕ್ಕೂ ಸಾಲದು.

ಸರ್ಕಾರಗಳು ಒಂದು ಕಡೆ ಉತ್ಪಾದನೆ ಹೆಚ್ಚು ಮಾಡುತ್ತಲೇ ಇನ್ನೊಂದು ಕಡೆ ಸೋರಿಕೆಯನ್ನು ತಡೆಯುವ, ಪಾರದರ್ಶಕತೆಯನ್ನು ತರುವ ಕೆಲಸ ಮಾಡಬೇಕಿದೆ. ವಿದ್ಯುತ್ ಬಾಬ್ತಿಗೆ ಸಂಬಂಧಿಸಿದ ಎಲ್ಲ ಖರೀದಿಗಳನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆ.ಇ.ಆರ್.ಸಿ) ಅನುಮತಿಯ ಪಡೆದೇ ಮಾಡಬೇಕು. ಈ ಆಯೋಗದ ಅಧ್ಯಕ್ಷರಾಗಿದ್ದ ಕೆ.ಪಿ.ಪಾಂಡೆ ನಿವೃತ್ತರಾಗಿ ತಿಂಗಳುಗಳೇ ಕಳೆದಿವೆ. ಅಧ್ಯಕ್ಷರನ್ನು ಆಯ್ಕೆ ಮಾಡಲು ರಚಿಸಿದ್ದ ಸಮಿತಿ ಕ್ರಮವಾಗಿ ನಿವೃತ್ತ ಐ.ಎ.ಎಸ್

ಅಧಿಕಾರಿ ಅರಕಲಗೂಡು ರಾಮಸ್ವಾಮಿ ಮತ್ತು ಇನ್ನೇನು ನಿವೃತ್ತರಾಗಲಿರುವ ಐ.ಎ.ಎಸ್ ಅಧಿಕಾರಿ ಎಂ.ಆರ್.ಶ್ರೀನಿವಾಸಮೂರ್ತಿ ಅವರ ಹೆಸರುಗಳನ್ನು ಶಿಫಾರಸು ಮಾಡಿದೆ. ನಿಯಮದ ಪ್ರಕಾರ ಮೊದಲ ಹೆಸರನ್ನೇ ಸರ್ಕಾರ ಒಪ್ಪಿಕೊಳ್ಳಬೇಕು. ಅರಕಲಗೂಡು ರಾಮಸ್ವಾಮಿ ಹಾಸನದವರು(!) ಎಂಬ ಕಾರಣಕ್ಕೋ ಏನೋ ಅವರನ್ನು ನೇಮಿಸಲು ಯಡಿಯೂರಪ್ಪನವರಿಗೆ ಇಷ್ಟವಿಲ್ಲ. ಶ್ರೀನಿವಾಸಮೂರ್ತಿ ನಿವೃತ್ತರಾಗಲಿ ಎಂದು ಅವರು ಕಾಯುತ್ತಿರುವಂತಿದೆ. ಯಡಿಯೂರಪ್ಪನವರು ಶ್ರೀನಿವಾಸಮೂರ್ತಿಯವರಿಗೆ 'ಫೇವರ್' ಮಾಡಿದರೆ ಅಷ್ಟರಮಟ್ಟಿಗೆ ಮೂರ್ತಿಯವರ ಕೈ ಕಟ್ಟಿ ಹಾಕಿದಂತೆ. ಅಷ್ಟರಮಟ್ಟಿಗೆ ಕೆ.ಇ.ಆರ್.ಸಿ ಸರ್ಕಾರದ ಒತ್ತಡಕ್ಕೆ ಒಳಗಾದಂತೆ. ಅಷ್ಟರ ಮಟ್ಟಿಗೆ 'ಕಲ್ಲಿದ್ದಲು' ಖರೀದಿಯಂಥ ಅಕ್ರಮಗಳಿಗೆ ಅನುಮತಿ ಕೊಟ್ಟಂತೆ ಹಾಗಾದರೆ ಈ ಸರಪಣಿ ನಿರಂತರವಾಗಿ ಮುಂದುವರಿಯುತ್ತದೆಯೇ? ■

# ಕಾನ್ನಿ ಎಂಬ ಜೀವನ ಪರ್ಯಂತದ 'ಪ್ರತಿಭಟನೆ'

ಈ ಹೆಣ್ಣುಮಗಳ ಬಗ್ಗೆ ಮೂರು ತಿಂಗಳ ಹಿಂದೆಯೇ ನಾನು ಬರೆಯ ಬೇಕಿತ್ತು. ಆಕೆಯೇನೂ ಅದ್ಭುತ ಸುಂದರಿಯಲ್ಲ. ಬಿಸಿಲು, ಚಳಿ, ಗಾಳಿಯಿಂದ ಮುಖ ಮುದುಡಿ ಹೋಗಿದೆ, ಅಲ್ಲಲ್ಲಿ ಕಂದುಗಟ್ಟಿದೆ. ಎತ್ತರದ ಮಟ್ಟಸ ಆಳೂ ಅಲ್ಲ. ಕುಬ್ಜೆ. ಕೇವಲ ಐದಡಿ ಎತ್ತರ. ವಿಚಿತ್ರವಾದ ಬಟ್ಟೆ. ಆಕೆ ಇರುವುದು ಜಗತ್ತಿನ ಅತಿ ಪ್ರಬಲ ವ್ಯಕ್ತಿಯ ಮನೆಯ ಮುಂದೆ. ವಾಷಿಂಗ್ಟನ್‌ನ ಲಫಾಯಟ್ ಪಾರ್ಕ್‌ನ ಅಂಚಿನ ಪಾದಚಾರಿ ತಾಣದ ಮೇಲೆ. ಕಳೆದ ಅನೇಕ ವರ್ಷಗಳಿಂದ ಅದೇ ಆಕೆಯ ಮನೆ. ರಸ್ತೆಯ ಆಚೆ ಬದಿಯಲ್ಲಿ ಅಮೆರಿಕದ ಅಧ್ಯಕ್ಷರ ಮನೆ!

ಇಷ್ಟು ವರ್ಷ ಆಕೆಯನ್ನು ನೋಡಿದವರು 'ಅವಳೊಬ್ಬ ಪುಟ್ಟ ದೈತ್ಯೆ' ಎನ್ನುತ್ತಾರೆ. 'ಛಲಬಿಡದ ತ್ರಿವಿಕ್ರಮೆ' ಎನ್ನುತ್ತಾರೆ. 'ಮಾನವ್ಯದ ರಕ್ಷಕಿ' ಎನ್ನುತ್ತಾರೆ. 'ಜೀವನ ಪ್ರೀತಿಯ ಸಂಕೇತ' ಎನ್ನುತ್ತಾರೆ. ಆಕೆಯ ಹೆಸರು, ಕನ್ಸೆಪ್ಸಿಯಾನ್ ಪಿಕ್ಕಿಟ್ಟೊ (ಆದರೆ ಕಾನ್ನಿ ಎಂದೇ ಕರೆಯುತ್ತಾರೆ).

ಒಂದು ಅರ್ಥದಲ್ಲಿ ಕಾನ್ನಿ ಏಕಾಂಗಿ. ಈ ಅವಧಿಯಲ್ಲಿ ಆಕೆಗೆ ಬೆಂಬಲವಾಗಿ ನಿಂತವರು ಒಬ್ಬರೋ ಇಬ್ಬರೋ.

ಆದರೆ, ಆಕೆಯ ಜತೆಗೆ ದೊಡ್ಡ, ದೊಡ್ಡ, ಚಿಕ್ಕ ಚಿಕ್ಕ ಭಿತ್ತಿ ಫಲಕಗಳು ಇವೆ. ಅವು ಆಕೆಯ ಹೋರಾಟಕ್ಕೆ ಅರ್ಥ ತಂದಿವೆ. ಜೀವ ತಂದಿವೆ. ಆಕೆ ಕೇಳುವುದು ಒಂದೇ: 'ಇಡೀ ಮಾನವ ಜನಾಂಗವನ್ನೇ ನಾಶ ಮಾಡುವ ಅಣ್ವಸ್ತ್ರಗಳನ್ನು ತ್ಯಜಿಸಿ' ಎಂದು ಅಮೆರಿಕ ಅಧ್ಯಕ್ಷರ ಮನೆಯನ್ನು ದೂರದಿಂದ ನೋಡಲು ಬರುವ ಪ್ರವಾಸಿಗರ ಕಣ್ಣನ್ನು ಅಧ್ಯಕ್ಷರ ಮನೆಗಿಂತ ಕಾನ್ನಿಯ ಗುಡಿಸಲು ಹೆಚ್ಚು ಆಕರ್ಷಿಸುತ್ತದೆ. ಅಧ್ಯಕ್ಷರ ಮನೆಗೆ ಬೆನ್ನು ಮಾಡಿ ಛಾಯಾಚಿತ್ರ ತೆಗೆಸಿಕೊಳ್ಳುವವರ ದೃಷ್ಟಿ ಕಾನ್ನಿಯ ಮೇಲೆ ಬೀಳುತ್ತದೆ. ಆಕೆ ಇಟ್ಟುಕೊಂಡ ಭಿತ್ತಿ ಚಿತ್ರಗಳು ಕಣ್ಣಿಗೆ ಹೊಡೆಯುತ್ತವೆ. ಚಿತ್ರ ತೆಗೆಸಿಕೊಂಡವರು ಸೀದಾ ಈಕೆಯ ಬಳಿ ಬರುತ್ತಾರೆ. ತನ್ನ ಬಳಿ ಬಂದವರಿಗೆಲ್ಲ ವಿಚಿತ್ರ ಉಚ್ಚಾರದಲ್ಲಿ ಅಣ್ವಸ್ತ್ರಗಳ ಅಪಾಯದ ಬಗ್ಗೆ ಆಕೆ ತಿಳಿ ಹೇಳುತ್ತಾಳೆ. ಅಧ್ಯಕ್ಷರ ಮನೆಯ ಚಿತ್ರ ತೆಗೆದುಕೊಂಡವರು ಆಕೆಯ ಚಿತ್ರವನ್ನೂ ತೆಗೆದುಕೊಳ್ಳುತ್ತಾರೆ.

ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ನಸುಕಿನ 3 ಗಂಟೆ ಹೀಗೆ ದಿನದ ಎಲ್ಲ ಹೊತ್ತಿನಲ್ಲಿಯೂ ಕಾನ್ನಿ ತಂಗುವುದು ಅಲ್ಲಿಯೇ. ಆಕೆಗೆ ಸ್ವಂತ ಮನೆ ಎಂಬುದು ಇಲ್ಲ. ಜಗತ್ತಿನ ಅತಿ ಪ್ರಬಲ ವ್ಯಕ್ತಿಯ ಮನೆಯ ಮುಂದೆ ಹೀಗೆ ಟೆಂಟ್ ಹಾಕಿಕೊಂಡು ಆತನ ವಿರುದ್ಧವೇ ಪ್ರತಿಭಟನೆ ಮಾಡುವುದು ಹುಡುಗಾಟವಲ್ಲ. ಕಾನ್ನಿಗೆ ಅದರಿಂದ ಆದ ತೊಂದರೆ ಕಡಿಮೆಯೇನೂ ಅಲ್ಲ. ರಾತ್ರಿಯಲ್ಲಿ ಕುಡಿದು ಬಂದು ಕೀಟಲೆ ಕೊಟ್ಟವರೂ ಕಡಿಮೆಯಿಲ್ಲ. ಆದರೂ ಕಾನ್ನಿ ಧೃತಿಗೆಟ್ಟಿಲ್ಲ. ಬಹುಶಃ ಪ್ರಪಂಚದ ಅತಿ ದೀರ್ಘ ಪ್ರತಿಭಟನೆಯನ್ನು, ಒಂದು ಕನಸಿನ ಜಗತ್ತಿನ ಬೆನ್ನು ಹತ್ತಿ ಆಕೆ ನಡೆಸಿಕೊಂಡು ಹೊರಟಿದ್ದಾಳೆ.

1981ರ ಆಗಸ್ಟ್ 1ರಂದು ತನ್ನ ಪ್ರತಿಭಟನೆಯನ್ನು ಶುರು ಮಾಡಿದ ಕಾನ್ನಿ ಮತ್ತು ವಿಲಿಯಂ ಥಾಮಸ್ ಎಂಬ ಆಕೆಯ ಸ್ನೇಹಿತ ಹುಟ್ಟು ಹಾಕಿದ ಸಂಘಟನೆಯ ಹೆಸರು: 'ವೈಟ್‌ಹೌಸ್ ಆ್ಯಂಟಿ ನ್ಯೂಕ್ಲಿಯರ್ ಪೀಸ್ ವಿಜಿಲ್'. ಅದಕ್ಕೆ ಅವರಿಬ್ಬರೇ ಸ್ಥಾಪಕರು, ಪದಾಧಿಕಾರಿಗಳು ಮತ್ತು ಸದಸ್ಯರು. ಆದರೆ, ಶ್ವೇತಭವನ ನೋಡಲು ಬಂದ ಲಕ್ಷಾಂತರ ಜನ ಆಕೆಯ ಹೋರಾಟಕ್ಕೆ ಸಹಾನುಭೂತಿ ವ್ಯಕ್ತಪಡಿಸಿದವರು. ಮೊದ ಮೊದಲು ಆಕೆಯ ಬಗ್ಗೆ ಅಸಡ್ಡೆ ತೋರಿಸಿದ್ದ ಮಾಧ್ಯಮ ಕೂಡ ಕಳೆದ ಹಲವು ವರ್ಷಗಳಲ್ಲಿ ಆಕೆಯ ಬಗ್ಗೆ ಬರೆದ ಲೇಖನಗಳಿಗೆ ಲೆಕ್ಕವಿಲ್ಲ. ಪ್ರಕಟಿಸಿದ ಸಂದರ್ಶನಗಳೂ ಅಸಂಖ್ಯ. ವಿಲಿಯಂ ಥಾಮಸ್ ಈಗ ಇಲ್ಲ. ಕಾನ್ನಿ ಮತ್ತೆ ಒಬ್ಬಂಟಿ.

ವಿಚಿತ್ರ ನೋಡಿ. ಕಾನ್ನಿ ಹುಟ್ಟಿದ್ದು ಅಮೆರಿಕೆದಲ್ಲಿ ಅಲ್ಲ. ಇಲ್ಲಿಂದ ಅರ್ಧ ಜಗತ್ತಿನಷ್ಟು ದೂರದ ಪಶ್ಚಿಮ ಸ್ಪೇನ್‌ನಲ್ಲಿ. ಎಳೆವಯಸ್ಸಿನಲ್ಲಿಯೇ ತಂದೆ ತಾಯಿ ಕಳೆದುಕೊಂಡ ಆಕೆಯನ್ನು ಬೆಳೆಸಿದ್ದು ಅಜ್ಜಿ. ಅಜ್ಜಿಯೂ ಸತ್ತ ನಂತರ ಕಾನ್ನಿ ಹೊರಟಿದ್ದು ತನ್ನ ಕನಸಿನ ದೇಶ ಅಮೆರಿಕಕ್ಕೆ. ತನ್ನ 18ನೇ ವಯಸ್ಸಿನಲ್ಲಿ ನ್ಯೂಯಾರ್ಕ್‌ನ ಸ್ಪ್ಯಾನಿಷ್ ಕಾನ್ಸುಲೇಟ್‌ನಲ್ಲಿ ಕಾರ್ಯದರ್ಶಿಯಾಗಿ ಕೆಲಸಕ್ಕೆ ಸೇರಿದಳು. 21ನೇ ವಯಸ್ಸಿನಲ್ಲಿ ಇಟಲಿಯ ವರ್ತಕರೊಬ್ಬರ ಜತೆಗೆ ಮದುವೆ ಯಾದಳು. ಒಂದು ಮಗವೂ ಆಯಿತು. ಗಂಡ-ಹೆಂಡತಿಗೆ ಸರಿಹೋಗಲಿಲ್ಲ. ಅದು ವಿಚ್ಛೇದನದಲ್ಲಿ ಕೊನೆಗೊಂಡಿತು. ಮಗಳು ಪತಿಯ ವಶಕ್ಕೆ ಹೋದಳು. ಮುಂದೆ ಕಾನ್ನಿಗೆ ಕಾಡಿದ್ದು ಕಷ್ಟಗಳ ಸರಮಾಲೆ. ಗಂಡ

ಕೈ ಬಿಟ್ಟ. ಮಗಳು ಆತನ ಜತೆಗೇ ಹೋದಳು. ಕಾನ್ನಿ ನೌಕರಿಯನ್ನೂ ಕಳೆದುಕೊಂಡಳು. ಮನೆಯೂ ಇಲ್ಲವಾಯಿತು.

ತನ್ನ ಮಗಳನ್ನು ತನ್ನ ವಶಕ್ಕೆ ಕೊಡಿಸಬೇಕು ಎಂದು ಏಳು ವರ್ಷ ಸತತ ಹೋರಾಟ ಮಾಡಿದ ಕಾನ್ನಿಗೆ ಯಶಸ್ಸು ಸಿಗಲಿಲ್ಲ. ಕೊನೆಗೆ ಆಕೆ ಕಂಡುಕೊಂಡುದು ಲಫಾಯಟ್ ಪಾರ್ಕ್ ಅಂಚಿನ ಪಾದರಸ್ತೆಯನ್ನು. ಅಲ್ಲಿ ಆಗಲೇ ನಾನಾ ಕಾರಣಗಳನ್ನು ಇಟ್ಟುಕೊಂಡು ಪ್ರತಿಭಟನೆ ಮಾಡುತ್ತಿದ್ದವರ ಜತೆಗೂಡಿದ ಕಾನ್ನಿ ಆಕರ್ಷಿತಳಾದುದು ಅಣ್ವಸ್ತ್ರ ನಿಷೇಧಕ್ಕೆ ಒತ್ತಾಯಿಸಿ ಪ್ರತಿಭಟನೆ ಮಾಡುತ್ತಿದ್ದ ವಿಲಿಯಂ ಥಾಮಸ್ ಅವರ ಹೋರಾಟದ ಕಡೆಗೆ. ಯಾವ ಪ್ರತಿಭಟನೆಯನ್ನೂ ಸಹಿಸದ ವ್ಯವಸ್ಥೆ, ಕಾನ್ನಿ ಮತ್ತು ಥಾಮಸ್ ಅವರ ಪ್ರತಿಭಟನೆಯನ್ನೂ ಸಹಿಸಲಿಲ್ಲ. ಅಮೆರಿಕದ ಪೊಲೀಸರು ಇವರಿಬ್ಬರನ್ನು ಆಚೆ ಕಳುಹಿಸಲು ಬಳಸಿದ ಪ್ರಯೋಗ ಒಂದೆರಡಲ್ಲ. ದೈಹಿಕ ಹಲ್ಲೆಗಳೂ ನಡೆದುವು. ಪ್ರತಿಭಟನೆ ವ್ಯಕ್ತಪಡಿಸುವ ಎರಡಕ್ಕಿಂತ ಹೆಚ್ಚು ಭಿತ್ತಿಪತ್ರಗಳನ್ನು ಇಟ್ಟುಕೊಳ್ಳಬಾರದು ಎಂಬ ಆದೇಶವೂ ಹೊರಬಿತ್ತು. ಆದರೆ ಕಾನ್ನಿ ಮತ್ತು ಥಾಮಸ್ ಎಲ್ಲವನ್ನೂ ಮೀರಿ ನಿಂತರು. ಆರಂಭದಲ್ಲಿ ಉದ್ಯಾನಗಳ ಬಳಿ ಇಂಥ ಪ್ರತಿಭಟನೆ ಸರಿಯಲ್ಲ ಎಂದ ಅಮೆರಿಕದ 'ನಾಗರಿಕ'ರು, 'ಇವರು ಕೇವಲ ಪ್ರತಿಭಟನೆಗಾಗಿ ಪ್ರತಿಭಟನೆ ಮಾಡುವ ಜನ ಅಲ್ಲ. ಒಂದು ಕಾಜ್‌ಗಾಗಿ ಹೋರಾಟ ಮಾಡುವವರು' ಎಂದು ಅರ್ಥ ಮಾಡಿಕೊಂಡರು. ಇವರಿಬ್ಬರ ಪರವಾಗಿ ಸಹಾನುಭೂತಿ ಬೆಳೆಯುತ್ತ ಹೋಯಿತು. ನ್ಯಾಯಾಲಯ ಕೂಡ ಕಾನ್ನಿ ಮತ್ತು ಥಾಮಸ್ ಅವರ ಪ್ರತಿಭಟನೆಯ ಹಕ್ಕನ್ನು ಎತ್ತಿ ಹಿಡಿಯಿತು. 'ಅಮೆರಿಕದ ಸಂವಿಧಾನದಲ್ಲಿ 'ಹೇಟ್ ಕ್ಯಾಂಪೇನ್'ಗೆ ಕೂಡ ಅವಕಾಶ ಇದೆ. ಹಾಗಿರುವಾಗ ಪ್ರತಿಭಟನೆ ತಪ್ಪಲ್ಲ' ಎಂದು ನ್ಯಾಯಾಲಯ ಹೇಳಿತು. ಆಗ ಅಮೆರಿಕ ಸರ್ಕಾರ ನಿಶ್ಶಸ್ತ್ರವಾಯಿತು.

ಕಾನ್ನಿಯನ್ನು ನಾನು ಕಂಡುದು ಕೆಟ್ಟ ಚಳಿಗಾಲದಲ್ಲಿ. ಚಳಿಯಿಂದ ರಕ್ಷಿಸಿಕೊಳ್ಳಲು ಏನೆಲ್ಲ ಬೇಕೋ ಆ ಎಲ್ಲ ಬಟ್ಟೆಯನ್ನು ಆಕೆ ಹಾಕಿಕೊಂಡಿದ್ದರು. ಮಾತನಾಡುವ ಭಾಷೆ ಅರ್ಥವಾಗದಷ್ಟು ಅವರದು ವಿಚಿತ್ರ ಆ್ಯಕ್ಸೆಂಟ್. ನೋಡಲು ಅಡ್ಡಾದಿಡ್ಡಿಯಾಗಿ ಕಾಣುವ ಕಾನ್ನಿ ತಾವಿರುವ ಜಾಗವನ್ನು ಚೊಕ್ಕಟವಾಗಿ ಇಟ್ಟುಕೊಂಡಿದ್ದಾರೆ. ಚಳಿಗೆ ಉದುರಿ ಬೀಳುತ್ತಿದ್ದ ಮರದ ಎಲೆಗಳನ್ನು ಮತ್ತೆ ಮತ್ತೆ ಗುಡಿಸಿ ಗುಡ್ಡೆ ಹಾಕಿದ್ದರು. ಪಕ್ಕದಲ್ಲೇ ಇರುವ ಎರಡು ಹೋಟೆಲ್‌ಗಳು ಅವರಿಗೆ ಊಟ ತಿಂಡಿ ಪೂರೈಸುತ್ತಿವೆ. ಗೆಳೆಯರು ಏನಾದರೂ ತಂದು ಕೊಡುವುದೂ ಉಂಟು. ನಮ್ಮ ಸುಲಭ ಶೌಚಾಲಯದಂಥ ಒಂದು ತಾಣದಲ್ಲಿ ಆಗೀಗ ಸ್ನಾನ ಮಾಡುತ್ತಾರೆ. ದಿನಕ್ಕೆ ಮೂರು ಗಂಟೆ ನಿದ್ದೆ ಮಾಡುತ್ತಾರೆ. ಜಗತ್ತಿನ ಅನೇಕ ಕಡೆಗಳಿಂದ ಅವರಿಗೆ ಪತ್ರಗಳು ಬರುತ್ತವೆ. ಇವರ ಪ್ರತಿಭಟನೆಯ ತಾಣದಲ್ಲಿ ಒಂದು ಚಿಕ್ಕ ಅಂಚೆ ಪೆಟ್ಟಿಗೆಯನ್ನೂ ತೂಗು ಬಿಡಲಾಗಿದೆ. ಉಳಿದಂತೆ ಕಾನ್ನಿಯ ಜತೆಗಾರರು ಪಾರ್ಕಿನ ಅಳಿಲುಗಳು. ಅಳಿಲುಗಳಿಗೆ ತಿನ್ನಿಸಲು ವಾರಕ್ಕೆ ಒಮ್ಮೆಯಂತೆ ಒಂದು ಪಾರ್ಕ್ ಕಡಲೆಬೀಜಗಳನ್ನು ಹ್ಯೂಮೇನ್ ಸೊಸೈಟಿಯ ಮಹಿಳೆಯೊಬ್ಬರು ಕಳುಹಿಸಿ ಕೊಡುತ್ತಾರೆ.

'ಜನರನ್ನು ಸದಾ ಜಾಗೃತಗೊಳಿಸುತ್ತಲೇ ಇರಬೇಕು. ಇಲ್ಲದಿದ್ದರೆ ಮನುಷ್ಯ

ಜನಾಂಗವೇ ನಾಶವಾಗುತ್ತದೆ. ಯಾವ ಸರ್ಕಾರವೂ ಜನರನ್ನು ಪ್ರತಿನಿಧಿಸುವುದಿಲ್ಲ. ಅವು ಪ್ರತಿನಿಧಿಸುವುದು ಕಂಪೆನಿಗಳನ್ನು, ಹಣವಿದ್ದವರನ್ನು. ಜನ ಹೋರಾಟ ಮಾಡಲು ಮುಂದಡಿಯಿಟ್ಟರೆ ನಾಯಕರು ಹಿಂಬಾಲಿಸುತ್ತಾರೆ. ನಾಯಕನೊಬ್ಬ ಬರಲಿ ಎಂದು ಕಾಯುತ್ತ ಕೂರುವುದರಲ್ಲಿ ಅರ್ಥವಿಲ್ಲ. ಆಗಲೇ ಕ್ರಾಂತಿ ಆಗುವುದು' ಎಂದು ನಾನು ಕಷ್ಟಪಟ್ಟು ಅರ್ಥ ಮಾಡಿಕೊಳ್ಳುವ ಆಕ್ಸೆಂಟ್‌ನಲ್ಲಿ ಕಾನ್ನಿ ಹೇಳುತ್ತ ಹೋದರು. ಈ ಮಾತನ್ನು ನನ್ನ ಹಾಗೆ ಅವರು ಅನೇಕರಿಗೆ ಹೇಳಿರಬಹುದು; ಮುಂದೆಯೂ ಹೇಳುತ್ತಲೇ ಇರಬಹುದು.

ಆಶ್ಚರ್ಯ ಎಂದರೆ 1993ರಷ್ಟು ಹಿಂದೆ ಕಾನ್ನಿ ಹೇಳಿದ್ದರು: 'ಜನರು ಕಷ್ಟದಲ್ಲಿ ಇದ್ದಾರೆ. ದೇಶದ ಆರ್ಥಿಕತೆ ಕುಸಿದು ಬೀಳುತ್ತಿದೆ. ಅಪರಾಧ ಪ್ರವೃತ್ತಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಎಲ್ಲ ಕಡೆ ಬಾಂಬರ್‌ಗಳು ಇದ್ದಾರೆ.' 16 ವರ್ಷಗಳಷ್ಟು ಹಿಂದೆ ಆಕೆ ಹೇಳಿದ ಮಾತು ಈಗ ಎಷ್ಟು ನಿಜ ಅನಿಸುತ್ತದೆ! ಎಷ್ಟು 'ದಾರ್ಶನಿಕ' ಎನಿಸುತ್ತದೆ!

ಕಾನ್ನಿ ಹೇಳಿದ್ದು ಇನ್ನೊಂದು ಮಾತು : 'ಮಕ್ಕಳಿಗೆ ಜೀವನವನ್ನು ಗೌರವಿಸಲು ಕಲಿಸಬೇಕು, ಭೌತಿಕ ಸಂಗತಿಗಳನ್ನು ಗೌರವಿಸಲು ಅಲ್ಲ. ಸರ್ಕಾರಗಳು ಜನರ ಹಣವನ್ನು ಬಳಸಿ ಶಸ್ತ್ರಗಳನ್ನು ಖರೀದಿಸುವ, ಆ ಶಸ್ತ್ರಗಳಿಗೆ ಕೆಲಸವಿಲ್ಲ ಎಂದು ಬೇರೆ ಬೇರೆ ದೇಶಗಳಿಗೆ ಪೂರೈಸಿ ಜಗಳ ಹಚ್ಚುವ ಅಥವಾ ತಾನೇ ದಾಳಿ ಮಾಡುವ ಅಧ್ಯಕ್ಷರ ಮನೆಯ ಮುಂದೆ ಬಿಡಾರ ಹೂಡಿರುವ ಕಾನ್ನಿ ಹೇಳುವುದು : 'ಇಲ್ಲಿ ನಾನೇನು ಸುಖವಾಗಿಲ್ಲ. ಹಾಗೆಂದು ಅದು ವ್ಯರ್ಥವಲ್ಲ. ನನ್ನ ಜೀವನ ಉದ್ದೇಶದ ಸಾಫಲ್ಯದ ಗಳಿಗೆಗೆ ಕಾಯುತ್ತಿದ್ದೇನೆ' ಎಂದು. ಅವರ ಜೀವನಮಾನದಲ್ಲಿ ಆಕೆಗೆ ಜಯ ಸಿಗುವುದು ಕಷ್ಟ. ಅದು ದುರಂತ.

■

# ಬೆಂಗಳೂರನ್ನು ಮತ್ತೆ ಸ್ವರ್ಗ ಮಾಡುವ ಕನಸಿನಲ್ಲಿ...

ಒಂದು ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಡೆಯುವ ಯಾವುದೇ ಉಪ ಚುನಾವಣೆ, ಸ್ಥಳೀಯ ಸಂಸ್ಥೆಗಳ ಚುನಾವಣೆ ಆ ಸರ್ಕಾರಕ್ಕೆ ಜನಾದೇಶ ಇದ್ದಂತೆ. ಆದರೆ, ಯಾವ ಪಕ್ಷವೂ ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಫಲಿತಾಂಶ ತನ್ನ ಪರವಾಗಿ ಬಂದರೆ ಅದು ತನ್ನ ಆಡಳಿತಕ್ಕೆ ಸಿಕ್ಕ ಮನ್ನಣೆ, ಜನಾದೇಶ ಎಂದು ಹೇಳುವ ಸರ್ಕಾರಗಳು, ಸೋತರೆ ಸ್ಥಳೀಯ 'ಇಶ್ಯೂ'ಗಳು ಕಾರಣ ಎಂದು ಕೈ ತೊಳೆದುಕೊಳ್ಳುತ್ತವೆ. ಈಗ ಹೊಸ್ತಿಲಲ್ಲಿಯೇ ಇರುವ ಬೃಹತ್ ಬೆಂಗಳೂರು ಪಾಲಿಕೆ ಚುನಾವಣೆ ಅಂಥ ಒಂದು ಸಂದರ್ಭ. ಈ ಹಿಂದೆ ನಡೆದ ಅನೇಕ ಉಪ ಚುನಾವಣೆಗಳಲ್ಲಿ ಕಮಲದ ಪಕ್ಷ ಜಯಭೇರಿಯನ್ನೇ ಬಾರಿಸಿದೆ. ಆದರೆ, ಏಕೋ ಏನೋ ಬೆಂಗಳೂರು ಪಾಲಿಕೆ ಚುನಾವಣೆ ಎದುರಿಸಲು ಸರ್ಕಾರ ಮತ್ತು ಪಕ್ಷಗಳೆರಡಕ್ಕೂ ಭಾರಿ ಹಿಂಜರಿಕೆ ಇತ್ತು. ನ್ಯಾಯಾಲಯ ಎನ್ನುವ ಒಂದು ಕಾವಲು ವ್ಯವಸ್ಥೆ ಇಲ್ಲದೇ ಇದ್ದರೆ ಚುನಾವಣೆ ನಡೆಯುವ ಬಗ್ಗೆ ಯಾರಿಗೂ ಭರವಸೆ ಇರಲಿಲ್ಲ. ಚುನಾವಣೆ ಮುಂದೂಡಲು ಸರ್ಕಾರದಲ್ಲಿಯೇ ಇದ್ದ ಹಿತಾಸಕ್ತಿಗಳು ಮಾಡಿದ ಯಾವ ಯತ್ನವೂ

ನ್ಯಾಯದೇವತೆಯ ಪರೀಕ್ಷೆಯಲ್ಲಿ ಗೆಲ್ಲಲಿಲ್ಲ. ಅದು ಪ್ರಜಾಸತ್ತೆಯ ಗೆಲುವು.

ನಿಜ, ಕಳೆದ ಮೂರುವರೆ ವರ್ಷಗಳಿಂದ ಅಧಿಕಾರಿಗಳು ಆಡಿದ ಆಟದಲ್ಲಿ ಬೆಂಗಳೂರು ತತ್ತರಿಸಿ ಹೋಗಿದೆ. ಜನಪ್ರತಿನಿಧಿಗಳು ಎನ್ನುವವರು ಇದ್ದರೆ ಆ ಆಡಳಿತಕ್ಕೆ ಒಂದು ಅಕೌಂಟೆಬಿಲಿಟಿ ಇರುತ್ತದೆ. ಅಧಿಕಾರಿಗಳ ಆಡಳಿತಕ್ಕೂ ಸರ್ವಾಧಿಕಾರಿಗಳ ಆಡಳಿತಕ್ಕೂ ಹೆಚ್ಚು ವ್ಯತ್ಯಾಸವೇನೂ ಇರುವುದಿಲ್ಲ. ಅಧಿಕಾರಿಗಳು ಯಾರಿಗೂ ಅಕೌಂಟೆಬಲ್ ಅಲ್ಲವಲ್ಲ? ಅವರನ್ನು ಕೈ ಹಿಡಿದು ನಿಲ್ಲಿಸಿ ಕೇಳುವವರು ಯಾರು? ಅಂತಲೇ ಜನಪ್ರತಿನಿಧಿಗಳ ಆಡಳಿತಕ್ಕೆ ಬೆಂಗಳೂರು ಹಾತೊರೆಯುತ್ತಿತ್ತು. ದುರಂತ ಎಂದರೆ ಅದು ಜನ ಪ್ರತಿನಿಧಿಗಳಿಗೇ ಅರ್ಥವಾಗಲಿಲ್ಲ. ಅವರ ಸ್ವಾರ್ಥ ಅಷ್ಟು ಮೇರೆ ಮೀರಿತ್ತು. ಆಯಿತು, ಅದೆಲ್ಲ ಈಗ ಹಳೆಯ ಕಥೆ. ಮುಂದಿನ ಭಾನುವಾರ ಚುನಾವಣೆ ನಡೆಯುತ್ತದೆ. ಬೆಂಗಳೂರು ಪಾಲಿಕೆ ತನ್ನ ಹೆಸರಿನಲ್ಲಿ ಮಾತ್ರ ಬೃಹತ್ ಆಗಿಲ್ಲ. ಮೊದಲು 100 ಇದ್ದ ವಾರ್ಡ್‌ಗಳ ಸಂಖ್ಯೆ ಈಗ ಎರಡು ಕಡಿಮೆ ಡಬಲ್ ಆಗಿದೆ. 'ಸ್ಮಾಲ್ ಈಸ್ ಬ್ಯೂಟಿಫುಲ್' ಎನ್ನುತ್ತಾರೆ. ಪಿಂಚಣಿದಾರರ ಸ್ವರ್ಗ ಎನಿಸಿದ್ದ ಬೆಂಗಳೂರು ಚಿಕ್ಕದಾಗಿತ್ತು. ಹವೆ ಚೆನ್ನಾಗಿತ್ತು. ವಾಹನಗಳು ಇಷ್ಟು ಇರಲಿಲ್ಲ. ಮರಗಳು ತಂಪು ನೆರಳಾಗಿದ್ದುವು, ಈಗ ಬೆಂಗಳೂರು ಬೆಂಕಿಯುಂಡೆ. ಎಲ್ಲೆಲ್ಲೂ ಗಾಜಿನ ಹೊದಿಕೆ ಹೊದ್ದ ಬಹುಮಹಡಿ ಕಟ್ಟಡಗಳು ಅದಕ್ಕೆ ಕೊಟ್ಟ ಕೊಡುಗೆ ಕಡಿಮೆಯೇನಲ್ಲ. 75 ಲಕ್ಷ ಜನಸಂಖ್ಯೆಗೆ 36 ಲಕ್ಷ ವಾಹನಗಳು ಇವೆ. ರಸ್ತೆಗಳಲ್ಲಿ ಇರುವೆ ಸಾಲಿನ ಪ್ರಯಾಣ. ಎಲ್ಲಿಯಾದರೂ ವಾಹನ ನಿಲ್ಲಿಸೋಣ ಎಂದರೆ ಅದಕ್ಕೂ ಜಾಗವಿಲ್ಲ. ಮೆಟ್ರೊ ರೈಲು ಬಂದರೆ ವಾಹನಗಳ ಸಂಚಾರ ಕಡಿಮೆಯಾದೀತು ಎಂದರೆ ಅದೂ ಸದ್ಯದ ಕನಸಲ್ಲ.

ಹಾಗೆಂದು ಬೆಂಗಳೂರಿನ ಜನ ಸಣ್ಣ ಪುಟ್ಟ ಕನಸುಗಳನ್ನು ಕಾಣುವುದನ್ನು ಬಿಟ್ಟಿಲ್ಲ. ಜನಪ್ರತಿನಿಧಿಗಳ ಆಡಳಿತ ಬಂದರೆ ಊರಿನ ರಸ್ತೆಗಳು ಅಗಲವಾದಾವು, ಪಾದರಸ್ತೆಯನ್ನೇ ಅವಲಂಬಿಸಿದವರಿಗೆ ಒಂದಿಷ್ಟು ಜಾಗ ಸಿಕ್ಕೀತು. ಅಲ್ಲಲ್ಲಿ ವಾಹನ ನಿಲ್ಲಿಸಲು ಒಂದಿಷ್ಟು ತಾಣ ಸಿಕ್ಕೀತು. ರಸ್ತೆಗಳಲ್ಲಿ ಬೀದಿ ದೀಪ ಉರಿದಾವು. ನಿತ್ಯ ಕಸ ಗುಡಿಸಿ ಹಾಕಿಯಾರು. ಗುಡಿಸಿ ಹಾಕಿದ ಕಸವನ್ನು ಸಂಸ್ಕರಿಸಿ ಮಾಲಿನ್ಯ ಕಡಿಮೆ ಮಾಡಿಯಾರು. ಮಳೆ ಬಂದಾಗ ರಸ್ತೆಗಳಲ್ಲಿ ಮುಳುಗುವುದು ತಪ್ಪೀತು. ಚರಂಡಿಗಳಲ್ಲಿ ಜನ ಕೊಚ್ಚಿ ಹೋಗುವುದು ತಪ್ಪೀತು, ಇದೇನು ಯಾರೂ ಮಾಡಲಾಗದ ಕೆಲಸವಲ್ಲ. ಪುರಸಭೆ, ಪಾಲಿಕೆ ಮಾಡಬೇಕಾದ ಕನಿಷ್ಠ ಕೆಲಸ ಇದು. ಸಮಸ್ಯೆ ಎಂದರೆ ಈ ಕನಿಷ್ಠ ಕೆಲಸಗಳ ಅರಿವು ಇರುವ ಪುರಪಿತೃಗಳು ಆರಿಸಿ ಬರಬೇಕು. ಅವರಿಗೆ ಸುಮ್ಮನೆ 'ಪುರಪಿತೃ'ಗಳು ಎಂದು ಕರೆಯಲಿಲ್ಲವಲ್ಲ? ಪಾಲಿಕೆ ಚುನಾವಣೆಗೆ ಈಗ ನಡೆದಿರುವ ಪೈಪೋಟಿ ನೋಡಿದರೆ ಆರಿಸಿ ಬರುವ ಪುರಪಿತೃಗಳ ಬಗ್ಗೆ ಭಯವಾಗುತ್ತದೆ.

ಬಿಜೆಪಿಗೆ ಚುನಾವಣೆ ಬೇಕಿರಲಿಲ್ಲ. ಕಾಂಗ್ರೆಸ್ಸಿಗೆ ಬಾಯುಪಚಾರಕ್ಕಾಗಿ ಯಾದರೂ ಬೇಕಿತ್ತು. ವಿಚಿತ್ರ ಎಂದರೆ ಕಾಂಗ್ರೆಸ್ಸು ಅಧಿಕೃತವಾಗಿ ಇದುವರೆಗೆ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿಲ್ಲ. ಬಿಜೆಪಿ, ಪಟ್ಟಿ ಬಿಡುಗಡೆ ಮಾಡಲು ಅಷ್ಟೇನೂ ಕಷ್ಟ ಪಡಲಿಲ್ಲ. ಎಲ್ಲರಿಗಿಂತ ಸುಲಭವಾಗಿ ಪಟ್ಟಿ ಬಿಡುಗಡೆ ಮಾಡಿದ್ದು ಜೆ.ಡಿ (ಎಸ್). ಅಲ್ಲಿ ಟಿಕೆಟ್

ಕೇಳುವವರು ಜಾಸ್ತಿ ಇರಲಿಲ್ಲ ಎಂದರೆ ಕುಮಾರಸ್ವಾಮಿ ಮತ್ತು ದೇವೇಗೌಡರಿಗೆ ಸಿಟ್ಟು ಬರಬಹುದು. ಬಿಜೆಪಿ ಪಟ್ಟಿ ತಯಾರಿಯಲ್ಲಿ 'ಹಿತಾಸಕ್ತ'ರ ಕೈ ಮೇಲಾಗುವುದನ್ನು ಅಧ್ಯಕ್ಷ ಕೆ.ಎಸ್.ಈಶ್ವರಪ್ಪ ತಪ್ಪಿಸಿ ಶೇ 40ರಷ್ಟು ಸೀಟುಗಳಿಗೆ ಕಾರ್ಯಕರ್ತರನ್ನೇ ಆಯ್ಕೆ ಮಾಡಿದ್ದಾರೆ. ಈಗ ಕಣದಲ್ಲಿ ಉಳಿದಿರುವ ಒಟ್ಟಾರೆ ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಲ್ಲಿ ಬಹುತೇಕರು ರಿಯಲ್ ಎಸ್ಟೇಟ್ ದಂಧೆಯಿಂದ ಬಂದವರು. ಈ ಪಕ್ಷ, ಆ ಪಕ್ಷ ಎಂದು ಅದರಲ್ಲಿ ವ್ಯತ್ಯಾಸವೇನೂ ಇಲ್ಲ. ಅದರಲ್ಲೂ ಮೂಲ ಬೆಂಗಳೂರು ಬಿಟ್ಟು ಹೊರಗಿನ ವಾರ್ಡ್‌ಗಳಲ್ಲಿ ಅವರದೇ ಬಹುಮತ! ಅವರಲ್ಲಿ ದುಡ್ಡು ಇದೆ. ಚುನಾವಣೆಗೆ ಒಬ್ಬೊಬ್ಬರೂ ಕನಿಷ್ಠ ಒಂದೂವರೆಯಿಂದ ಎರಡು ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಈಗ ಸಚಿವರಾಗಿರುವ ಸುರೇಶಕುಮಾರ್, ರಾಮಚಂದ್ರಗೌಡರು ಒಂದು ಕಾಲದಲ್ಲಿ ಕಾರ್ಪೊರೇಟರ್ ಆಗಿದ್ದವರು. ಅವರು ಎಷ್ಟು ಖರ್ಚು ಮಾಡಿದ್ದರು ಎಂಬುದನ್ನು ಕೇಳಿದರೆ ಈಗ ಕಣಕ್ಕೆ ಇಳಿದವರು ಮುಸಿ ಮುಸಿ ನಗುತ್ತಾರೆ. ಯಾರಾದರೂ ಚುನಾವಣೆಯಲ್ಲಿ ಸುಮ್ಮನೇ ಹಣ ಖರ್ಚು ಮಾಡುತ್ತಾರೆಯೇ? 'ನನ್ನ ಬಳಿ ಒಂದೂವರೆ ಕೋಟಿ ಎಲ್ಲಿದೆ' ಎನ್ನುವವರೂ 'ಕನಿಷ್ಠ 40 ಲಕ್ಷ ಹೊಂದಿಸಬೇಕು' ಎಂದು ನನ್ನ ಮುಂದೆ ಗೋಳು ತೋಡಿಕೊಂಡರು. 40 ಲಕ್ಷವಾದರೂ ಎಲ್ಲಿಂದ ಬರುತ್ತದೆ? ಅದನ್ನು ಭರಿಸಿಕೊಳ್ಳುವುದು ಹೇಗೆ? 'ಪುರಪಿತೃ'ಗಳ ಬಗ್ಗೆ ಭಯವಾಗಲು ಇದು ಕಾರಣ. ಪಾಲಿಕೆಯನ್ನು ಅಂದರೆ ಬೆಂಗಳೂರನ್ನು ಈಗ ಹಿಂಡಿ ಹಿಪ್ಪೆ ಮಾಡಿರುವುದು ಭ್ರಷ್ಟಾಚಾರ ಎಂಬ ಪೆಡಂಭೂತ. ಅದನ್ನು ಎಬ್ಬಿಸಿ ಕೂಡಿಸಿ ಬಿಟ್ಟಿದ್ದೇವೆ. ಮಲಗಿಸುವುದು ಹೇಗೆ? ಅದು ನಮ್ಮನ್ನೇ ಮುಗಿಸುತ್ತದೆಯೇ?

ಇಂಥದನ್ನು ನಿಯಂತ್ರಿಸಬೇಕಾದವರು 'ಬೆಂಗಳೂರು ನನ್ನದು' ಎಂದು ಪ್ರೀತಿಸುವ ಜನ. ಅಂಥವರು ಎಷ್ಟು ಜನ ಇದ್ದಾರೆ? ಹೋಗಲಿ, ಬೆಂಗಳೂರು ಯಾರದು? ಇಲ್ಲಿ ಕನ್ನಡ ಭಾಷೆ ಬೆಂಗಳೂರನ್ನು ಒಂದಾಗಿ ಹಿಡಿದು ಇಟ್ಟಿಲ್ಲ. ಚೆನ್ನೈನಲ್ಲಿ ತಮಿಳು ಭಾಷೆ ಆ ಕೆಲಸ ಮಾಡಿದೆ. ಮುಂಬೈನಲ್ಲಿ ಬಹು ಮಟ್ಟಿಗೆ ಮರಾಠಿ ಭಾಷೆ ಆ ಕೆಲಸ ಮಾಡಿದೆ. ಆದರೆ, ಬೆಂಗಳೂರಿನಲ್ಲಿ ಕನ್ನಡಿಗರು ಅಲ್ಪ ಸಂಖ್ಯಾತರು. ಒಂದು ಸಂಬಂಧವನ್ನು ಭಾಷೆಯಷ್ಟು ಬಿಗಿಯಾಗಿ ಹಿಡಿದುಕೊಳ್ಳುವ ಸಾಧನ ಮತ್ತೊಂದು ಇಲ್ಲ. ಬೆಂಗಳೂರಿನಲ್ಲಿ ಯಾವುದೇ ಚುನಾವಣೆಯಲ್ಲಿ ಮತದಾನ ಕಡಿಮೆಯಾಗಲು ಈ 'ಬಂಧನ' ಇಲ್ಲದೇ ಇರುವುದು ಮುಖ್ಯ ಕಾರಣ. ತಿಳಿವಳಿಕೆಯುಳ್ಳ ಮತದಾರ ನಿರಾಸಕ್ತ ಆದಷ್ಟೂ ಹಣವಿದ್ದ ಅಭ್ಯರ್ಥಿಗೆ ಗೆಲುವು ಸುಲಭವಾಗುತ್ತದೆ. ಹಣ ತೆಗೆದುಕೊಂಡು ಯಾರು ಮತ ಹಾಕುತ್ತಾರೋ ಅವರನ್ನು ಮತಗಟ್ಟೆಗೆ ತರುವ ಕಡೆಗೆ ಮಾತ್ರ ಆತ ಮುತುವರ್ಜಿ ವಹಿಸುತ್ತಾನೆ. ಇದು ಪ್ರಜಾಸತ್ತೆಯ ಅಣಕ. ಈ ಅಣಕ ತಪ್ಪಿಸಬೇಕು ಎಂದು 'ಲೋಕಸತ್ತಾ' ಸಂಘಟನೆಯ ಕೆಲವರು ಕಣಕ್ಕೆ ಇಳಿದಿದ್ದಾರೆ. ಅವರು ನಿರಾಸಕ್ತ ಮತದಾರನ ಮೇಲೆ ಎಷ್ಟರ ಪರಿಣಾಮ ಬೀರುತ್ತಾರೆ ಎಂಬುದು ದೊಡ್ಡ ಪ್ರಶ್ನೆ. ಬೀರುವುದಿಲ್ಲ ಎಂಬುದು ಕಟು ವಾಸ್ತವ.

ಬೆಂಗಳೂರಿನ ಜನ ಬರೀ ಮತ ಹಾಕುವುದರಲ್ಲಿ ಮಾತ್ರ ನಿರಾಸಕ್ತರಲ್ಲ. ತೆರಿಗೆ ಕಟ್ಟುವುದರಲ್ಲೂ ಹಿಂದು. 22 ಲಕ್ಷ ಆಸ್ತಿಗಳಲ್ಲಿ 6.5 ಲಕ್ಷ ಆಸ್ತಿಗಳ ಒಡೆಯರು ಮಾತ್ರ

ತೆರಿಗೆ ಕಟ್ಟುತ್ತಾರೆ. ಆ ಮೊತ್ತ ಕೇವಲ 680 ಕೋಟಿ. ಇದು ಆಡಳಿತ ವೆಚ್ಚಕ್ಕೂ ಸಾಕಾಗುವುದಿಲ್ಲ. ಮತ್ತೆ ನಮಗೆ ರಸ್ತೆ ಬೇಕು, ಅದು ಬೇಕು, ಇದು ಬೇಕು ಎಂದು ಕೇಳಲು ಬೆಂಗಳೂರಿಗರಿಗೆ ಏನು ಹಕ್ಕು ಇರುತ್ತದೆ? ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರಿನ ಮೂಲಸೌಕರ್ಯ ಬಳಸಿಕೊಂಡು ದೊಡ್ಡದಾಗಿ ಬೆಳೆದ ಕಾರ್ಪೊರೇಟ್ ಸಂಸ್ಥೆಗಳನ್ನು ಒಟ್ಟಾರೆ ನಗರದ ಅಭಿವೃದ್ಧಿಯಲ್ಲಿ ಒಳಗೊಳ್ಳುವ ಕೆಲಸ ಮಾಡಿದ್ದರು. ನಂತರ ಮುಖ್ಯಮಂತ್ರಿಗಳಾದವರಿಗೂ ಈ ಸಂಸ್ಥೆಗಳಿಗೂ ಸಂವಾದವೇ ಸಾಧ್ಯವಾಗಲಿಲ್ಲ. ಯಡಿಯೂರಪ್ಪ ಅವರದೂ ಅದೇ ಕಥೆ.

ಕಳೆದ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರಿನ ಜನ ಬಿಜೆಪಿಗೆ ದೊಡ್ಡದಾಗಿ ಬೆಂಬಲ ನೀಡಿದ್ದಾರೆ. ನಗರವಾಸಿಗಳು ಸಹಜವಾಗಿ ಬಿಜೆಪಿ ಬಗ್ಗೆ ತೋರುವ ಒಲವು ಅದು. ಆದರೆ, ಯಡಿಯೂರಪ್ಪ ಅವರನ್ನು ನೋಡಿ ಹಾಕಿದ ಮತವಲ್ಲ ಅದು. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ 'ಈ ಮನುಷ್ಯ ಬೆಂಗಳೂರಿನ ಬಗ್ಗೆ ಒಲವು ಹೊಂದಿದ್ದಾನೆ' ಎಂದು ಜನರು ಕಾಂಗ್ರೆಸ್ಸಿಗೆ ಮತ ಹಾಕಿದ್ದರು. ರಾಮಕೃಷ್ಣ ಹೆಗಡೆ ಕಾಲದಲ್ಲಿಯೂ ಅವರ ಮುಖ ನೋಡಿ ಮತ ಚುನಾವಣೆ ಆಗಿತ್ತು. ಯಡಿಯೂರಪ್ಪ ಅವರಿಗೆ ನಗರದ ಮತದಾರರನ್ನು ಸೆಳೆಯುವ ವರ್ಚಸ್ಸು ಇಲ್ಲ. ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರಿನ ಮತದಾರರಲ್ಲಿ ಬಿಜೆಪಿ ಬಗ್ಗೆ ಇದ್ದ ಒಲವು ಕಡಿಮೆಯಾಗಿದೆಯೇ ಇಲ್ಲವೇ ಎಂಬುದು ಏಪ್ರಿಲ್ 5ರಂದು ಗೊತ್ತಾಗಲಿದೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಅದು ಇತಿಹಾಸ ಸೃಷ್ಟಿಯಾದಂತೆ. ಬೆಂಗಳೂರು ಪಾಲಿಕೆ ಮೇಲೆ ಮೊದಲ ಬಾರಿಗೆ ಬಿಜೆಪಿ ಧ್ವಜ ಹಾರಲಿದೆ. ಚುನಾವಣೆ ಮುಂದೂಡಲು ಬಿಜೆಪಿ ಸಚಿವರು ಮಾಡಿದ ಹಿಕಮತ್ತು, ಸರ್ಕಾರದಲ್ಲಿ ಆರಂಭದ ವರ್ಷಗಳಲ್ಲಿಯೇ ಕಂಡು ಕೇಳಿ ಅರಿಯದಂಥ ಭಿನ್ನಮತ, ಭ್ರಷ್ಟಾಚಾರ, ಅಭಿವೃದ್ಧಿಗೆ ಒತ್ತು ಇಲ್ಲದ ಆಡಳಿತ ಇತ್ಯಾದಿ ಋಣಾ ಅಂಶಗಳನ್ನು ಮತದಾರ ಹೇಗೆ ಗಮನಿಸಿದ್ದಾನೆ ಎಂಬುದೂ ಚುನಾವಣೆಯಲ್ಲಿ ಪ್ರತಿಫಲಿತವಾಗಲಿದೆ.

ಯಡಿಯೂರಪ್ಪ ಇದನ್ನು ಒಪ್ಪುವುದಿಲ್ಲ. 'ಬೆಂಗಳೂರಿನಲ್ಲಿ ಹಿಂದೆ ಎಂದೂ ಆಗದಷ್ಟು ಹಣ (4,500 ಕೋಟಿ ರೂಪಾಯಿ) ಖರ್ಚು ಮಾಡಿ ಅಭಿವೃದ್ಧಿ ಚಟುವಟಿಕೆ ಕೈಗೊಂಡಿದ್ದೇವೆ. ಜನ ಅದನ್ನು ಗಮನಿಸುತ್ತಾರೆ' ಎಂಬುದು ಅವರ ನಂಬಿಕೆ. ಕಾಂಗ್ರೆಸ್ಸಿಗರು, 'ಇವರೇನು ತಮ್ಮ ಮನೆ ದುಡ್ಡು ಖರ್ಚು ಮಾಡಿದ್ದಾರೆಯೇ? ನಮ್ಮ (ನರ್ಮ್ ಎಂದು ಓದಿಕೊಳ್ಳಿ) ದುಡ್ಡಿನಲ್ಲಿಯೇ ಆಗಿದ್ದು ಈ ಎಲ್ಲ ಅಭಿವೃದ್ಧಿ' ಎನ್ನುತ್ತಾರೆ. ಜೆ.ಡಿ (ಎಸ್)ನವರು 'ಸರ್ಕಾರದಲ್ಲಿ ಇದ್ದವರು ದುಡ್ಡು ಹೊಡೆದಿದ್ದಾರೆ ಅಭಿವೃದ್ಧಿ ಎಲ್ಲಿ ಆಗಿದೆ' ಎನ್ನುತ್ತಿದ್ದಾರೆ. ಯಾರು ಒಪ್ಪಲಿ ಬಿಡಲಿ ಸ್ಪರ್ಧೆ ಇರುವುದು ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ. ಬೆಂಗಳೂರಿನ ಜನ ಕುಮಾರಸ್ವಾಮಿ ಅವರನ್ನು ನಂಬಬಹುದು. ದೇವೇಗೌಡರನ್ನು ಒಪ್ಪುವುದು ಕಷ್ಟ. ಅದು ಕುಮಾರಸ್ವಾಮಿ ಅವರ ಕಷ್ಟ ಕೂಡ. ಅನ್ನಲೂ ಆಗದು, ಅನ್ನದೇ ಇರಲೂ ಆಗದು!

ಸುಮ್ಮನೇ ಕಣದಲ್ಲಿ ಇರುವ ಅಭ್ಯರ್ಥಿಗಳ ಹೆಸರುಗಳ ಮೇಲೆ ಒಂದು ಸಾರಿ ಕಣ್ಣು

ಹಾಯಿಸಿದರೆ ಎಲ್ಲರೂ ಕೆಟ್ಟವರಲ್ಲ ಎನಿಸುತ್ತದೆ. ಕಾರ್ಪೊರೇಟರ್ ಆಗಿದ್ದಾಗ ಮೇಯರ್ ಆಗಿದ್ದಾಗ ಬೆಂಗಳೂರಿನ ಸೌಂದರ್ಯ ವೃದ್ಧಿಸಲು ಕೆಲಸ ಮಾಡಿದವರು ಕಣದಲ್ಲಿ ಇದ್ದಾರೆ. ಕನಿಷ್ಠ ತಮ್ಮ ವಾರ್ಡ್‌ಗಳನ್ನಾದರೂ ಅಂದವಾಗಿ ಇಟ್ಟುಕೊಂಡವರು ಇದ್ದಾರೆ. ಇದೇ ಮೊದಲ ಸಾರಿ ಕಣಕ್ಕೆ ಇಳಿದವರಲ್ಲಿ ಕನಸುಗಳು ಇವೆ. ಬೆಂಗಳೂರಿಗೆ ಏನಾದರೂ ಮಾಡಬೇಕು ಎಂಬ ಹುಕಿ ಇದೆ. ಜನರು ಅಂಥವರನ್ನು ಆರಿಸಬೇಕು. ಪಾಲಿಕೆಯಲ್ಲಿ ಯಾರು ಆಡಳಿತಕ್ಕೆ ಬಂದರೂ ಇಂಥವರು ಒಂದು ಸಮತೋಲ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.

ಪಾಲಿಕೆ ಚುನಾವಣೆ ಮುಗಿದ ಮೇಲೆ ಯಡಿಯೂರಪ್ಪ ಅವರು ಮಾಡಬೇಕಾದುದು ತಮ್ಮ ಬಳಿ ಇಟ್ಟುಕೊಂಡಿರುವ ಬೆಂಗಳೂರು ನಗರ ಖಾತೆಯನ್ನು ಒಬ್ಬ ಸಚಿವರಿಗೆ ವಹಿಸುವುದು. ಅವರು ಪ್ರಾಮಾಣಿಕರಾಗಿರಬೇಕು. ಅವರಿಗೆ ಬೆಂಗಳೂರಿನ ಅಭಿವೃದ್ಧಿಯ ಕನಸು ಇರಬೇಕು. ಬದ್ಧತೆ ಇರಬೇಕು. ಮುಖ್ಯಮಂತ್ರಿಯಾದವರು ಕೆಲವು ಸಂದೇಶಗಳನ್ನು ಸೂಚ್ಯವಾಗಿ, ಕೆಲವು ಸಂದೇಶಗಳನ್ನು ವಾಚ್ಯವಾಗಿ ಕೊಡಬೇಕು. ಆಗ ಅವರಿಗೂ ಒಂದು ಕನಸು, ಒಂದು ಬದ್ಧತೆ ಇದೆ ಎಂದು ಜನರಿಗೆ ಗೊತ್ತಾಗುತ್ತದೆ. ಯಡಿಯೂರಪ್ಪ ಅವರ ಬಳಿ ಈಗ ಎಷ್ಟು ಖಾತೆಗಳು ಇವೆ ಎಂಬುದು ಅವರಿಗೂ ನೆನಪು ಇರಲಿಕ್ಕಿಲ್ಲ. ಹೀಗೆ ಖಾತೆಗಳನ್ನು ಗುಡ್ಡೆ ಹಾಕಿ ಕೊಳ್ಳುವುದು ಅವರ ಆರೋಗ್ಯಕ್ಕೆ ಒಳ್ಳೆಯದಲ್ಲ; ರಾಜ್ಯದ ಆರೋಗ್ಯಕ್ಕೆ ಇನ್ನೂ ಒಳ್ಳೆಯದಲ್ಲ. ನಮ್ಮ ಕಾಳಜಿ ರಾಜ್ಯದ ಆರೋಗ್ಯದ ಬಗ್ಗೆ! ಬೆಂಗಳೂರಿನ ಆರೋಗ್ಯದ ಬಗ್ಗೆ!

■

# ಇಷ್ಟು ಯುನಿವರ್ಸಿಟಿಗಳು ಬೇಕೇ ಅಂಬಾವಳಿಯವರೇ?

ಇದನ್ನು ತೆವಲು ಎನ್ನೋಣವೇ? ಒಣ ಪ್ರತಿಷ್ಠೆ ಎನ್ನೋಣವೇ? ರಾಜಕೀಯ ಒತ್ತಡಕ್ಕೆ ಮಣಿದ ತೀರ್ಮಾನ ಎನ್ನೋಣವೇ? ತಿಳಿಯುವುದಿಲ್ಲ. ಹೀಗೆ ಪ್ರಶ್ನೆ ಕೇಳಿಸಿಕೊಳ್ಳುವವರಿಗೆ ಬೇಸರ ಆಗಬಹುದು. ಆದರೆ, ಬೇರೆ ಪರ್ಯಾಯ ಕಾಣುತ್ತಿಲ್ಲ. ಕಳೆದ ಕೇವಲ ಎರಡು ವರ್ಷಗಳಲ್ಲಿ ರಾಜ್ಯ ಸರ್ಕಾರ ಹತ್ತು ಹೊಸ ವಿಶ್ವವಿದ್ಯಾಲಯಗಳಿಗೆ ಅನುಮತಿ ನೀಡಿದೆ. ಅದುವರೆಗೆ ರಾಜ್ಯದಲ್ಲಿ ಶತಮಾನಗಳಷ್ಟು ಹಳೆಯದಾದ ಮೈಸೂರು ವಿಶ್ವವಿದ್ಯಾಲಯವೂ ಸೇರಿ ಇದ್ದ ವಿಶ್ವವಿದ್ಯಾಲಯಗಳ ಸಂಖ್ಯೆ 15 ಮಾತ್ರ. ಈಗ ಸ್ಥಾಪಿಸಿರುವ ಹೊಸ ಹತ್ತು ವಿಶ್ವವಿದ್ಯಾಲಯಗಳು ಸಾಲದು ಎಂದೋ ಏನೋ ಜಾನಪದ ವಿಶ್ವವಿದ್ಯಾಲಯ, ರೇಷ್ಮೆ ವಿಶ್ವವಿದ್ಯಾಲಯ ಮತ್ತು ಮಾಧ್ಯಮ ವಿಶ್ವ ವಿದ್ಯಾಲಯಗಳ ಸ್ಥಾಪನೆಯ ಮಾತೂ ಕೇಳಿ ಬರುತ್ತಿದೆ. ಈ ಸರ್ಕಾರ ಇನ್ನೂ ಮೂರು ವರ್ಷ ಅಧಿಕಾರದಲ್ಲಿ ಇರಲಿದ್ದು ಇನ್ನೂ ಎಷ್ಟು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಿದೆ ಎಂಬುದು ಗೊತ್ತಿಲ್ಲ.

ಹತ್ತು ಮಕ್ಕಳನ್ನು ಹೆತ್ತ ತಾಯಿಯನ್ನು ನೆನಪಿಸಿಕೊಳ್ಳಿ. ಆ

ಮಕ್ಕಳಿಗೆ ಎರಡು ಹೊತ್ತಿನ ಊಟ ಹಾಕಲೂ ಗಂಡ ಎನಿಸಿಕೊಂಡವನಿಗೆ ಶಕ್ತಿಯಿಲ್ಲ. ಮಕ್ಕಳನ್ನು ಹುಟ್ಟಿಸುವ ಶಕ್ತಿ ಮಾತ್ರ ಆತನಲ್ಲಿ ಬೇಕಾದಷ್ಟು ಇದೆ. ಗಂಡನ 'ದೌರ್ಜನ್ಯ'ಕ್ಕೆ ನಿತ್ಯ ತುತ್ತಾಗಿ ಆಕೆಯ ದೇಹ ಬಡಕಲಾಗಿದೆ. ಮುಖದ ಮೇಲೆ ಆಳವಾದ ನೆರಿಗೆಗಳು ಬಿದ್ದಿವೆ. ಎದೆ ಬತ್ತಿ ಹೋಗಿದೆ. ಹರಿದು ತಿನ್ನುವ ಮಕ್ಕಳನ್ನು ಪಾಲಿಸುವ, ಪೋಷಿಸುವ ಶಕ್ತಿಯನ್ನು ಆಕೆ ಕಳೆದುಕೊಂಡಿದ್ದಾಳೆ. ನಂತರ ಹುಟ್ಟಿದ ಮಕ್ಕಳ ಪಾಲನೆಯಲ್ಲಿ ಮೊದಲು ಹುಟ್ಟಿದ ಮಕ್ಕಳೂ ಬಡವಾಗುತ್ತಿವೆ... ಕೇವಲ ಎರಡು ಮಕ್ಕಳನ್ನು ಹೆತ್ತ ತಾಯಿಯನ್ನು ನೆನಪಿಸಿಕೊಳ್ಳಿ. ಮಕ್ಕಳನ್ನು ಹೆರುವ ಹಕ್ಕನ್ನು ಆಕೆಯೇ ಉಳಿಸಿಕೊಂಡಿದ್ದಾಳೆ. ಐದು ವರ್ಷಗಳ ಅಂತರದಲ್ಲಿ ಹುಟ್ಟಿದ ಎರಡೂ ಮಕ್ಕಳನ್ನು ಚೆನ್ನಾಗಿ ನೋಡಿಕೊಂಡಿದ್ದಾಳೆ. ಆಕೆಯೂ ಚೆನ್ನಾಗಿ ಇದ್ದಾಳೆ.

ಈ ಹೋಲಿಕೆ ರೂಕ್ಷ ಅನಿಸಬಹುದು. ಆದರೆ, ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಿತಿಯನ್ನು ನೋಡಿದರೆ ರಾಜ್ಯ ಸರ್ಕಾರ ಹತ್ತು ಮಕ್ಕಳನ್ನು ಹೆತ್ತ ತಾಯಿಯ ಸ್ಥಿತಿಯಲ್ಲಿಯೇ ಇದೆ. ದುರಂತ ಎಂದರೆ ಆಕೆ ಮತ್ತೆ ಮತ್ತೆ ಮಕ್ಕಳನ್ನು ಹೆರುತ್ತಲೇ ಇದ್ದಾಳೆ. ಮಕ್ಕಳನ್ನು ಹೆರುವ ತನ್ನ ಹಕ್ಕನ್ನು 'ದೌರ್ಜನ್ಯ' ಎಸಗುವ ಗಂಡನಿಗೆ ಮಾರಿಕೊಂಡಿದ್ದಾಳೆ!

ಕಾಸಿಗೊಂದು, ಕೊಸರಿಗೊಂದು ಕಾಲೇಜಲ್ಲ ವಿಶ್ವವಿದ್ಯಾಲಯವನ್ನೇ ಸ್ಥಾಪಿಸುವ ಪರಂಪರೆ ಶುರುವಾದುದು ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ. ಆಗಿನ ಉನ್ನತ ಶಿಕ್ಷಣ ಸಚಿವರ ಪ್ರತಿಷ್ಠೆಗಾಗಿ ತುಮಕೂರು ಜಿಲ್ಲೆ ಯೊಂದಕ್ಕೇ ಒಂದು ವಿಶ್ವವಿದ್ಯಾಲಯ ಪ್ರಾರಂಭಿಸಲಾಯಿತು. ಕೋಲಾರದಂಥ ಹಿಂದುಳಿದ ಜಿಲ್ಲೆ ಕೂಡ ಈ ಹೊಸ ವಿಶ್ವವಿದ್ಯಾಲಯದ ವ್ಯಾಪ್ತಿಗೆ ತನ್ನನ್ನು ಸೇರಿಸಿಕೊಳ್ಳಲು ಒಪ್ಪಲಿಲ್ಲ. ಈಗ ತುಮಕೂರು ವಿಶ್ವವಿದ್ಯಾಲಯ ಅನುಭವಿಸುತ್ತಿರುವ ಸ್ಥಿತಿಯನ್ನು ನೋಡಿಯಾದರೂ ಯಡಿಯೂರಪ್ಪನವರು ಹೊಸ ವಿಶ್ವವಿದ್ಯಾಲಯ ಸ್ಥಾಪಿಸುವ ನಿರ್ಧಾರವನ್ನು ಕೈ ಬಿಡಬೇಕಿತ್ತು. ಒಂದು ವಿಶ್ವವಿದ್ಯಾಲಯ ಕಟ್ಟಬೇಕಾದರೆ ಮೊದಲ ಐದು ವರ್ಷ, ಕನಿಷ್ಠ 50 ಕೋಟಿ ರೂಪಾಯಿಗಳಂತೆ ಪ್ರತಿವರ್ಷ ಅನುದಾನ ಕೊಡಬೇಕು. ಕನಿಷ್ಠ ನೂರು ಎಕರೆಯಾದರೂ ಸ್ವಂತ ಭೂಮಿ ಇರಬೇಕು. ತುಮಕೂರು ವಿಶ್ವವಿದ್ಯಾಲಯಕ್ಕೆ ಇದುವರೆಗೆ ಸಿಕ್ಕ ವಾರ್ಷಿಕ ಅನುದಾನ ಕನಿಷ್ಠ ಎಂದರೆ ಎರಡು ಕೋಟಿ; ಗರಿಷ್ಠ ಎಂದರೆ ಐದು ಕೋಟಿ. ಬರುವ ಏಪ್ರಿಲ್‌ಗೆ ಐದು ವರ್ಷ ತುಂಬಲಿರುವ ಈ ವಿಶ್ವವಿದ್ಯಾಲಯಕ್ಕೆ ಈಗಲೂ ಸ್ವಂತ ಕಟ್ಟಡವಿಲ್ಲ; ಸ್ವಂತ ಜಾಗವಿಲ್ಲ. ಅದಕ್ಕೆ ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯುಜಿಸಿ) ಮಾನ್ಯತೆಯೂ ಇಲ್ಲ!

ಯುಜಿಸಿ ಮಾನ್ಯತೆ ಸಿಗಬೇಕಾದರೆ ಒಂದು ವಿಭಾಗದಲ್ಲಿ ಕನಿಷ್ಠ ಒಬ್ಬ ಪ್ರಾಧ್ಯಾಪಕ, ಇಬ್ಬರು ರೀಡರ್ ಮತ್ತು ಮೂವರು ಉಪನ್ಯಾಸಕರು ಇರಲೇಬೇಕು. ತುಮಕೂರು ವಿಶ್ವವಿದ್ಯಾಲಯದ ಒಟ್ಟು 11 ವಿಭಾಗಗಳ ಪೈಕಿ ವಾಣಿಜ್ಯ, ಇತಿಹಾಸ, ಗಣಿತ ಮತ್ತು ಕನ್ನಡ ವಿಭಾಗಗಳಲ್ಲಿ ಮಾತ್ರ ಪ್ರತಿ ವಿಭಾಗದಲ್ಲಿಯೂ ತಲಾ ಒಬ್ಬರಂತೆ ನಾಲ್ವರು ಕಾಯಂ ಉಪನ್ಯಾಸಕರು ಇದ್ದಾರೆ. ಅಂದರೆ ಇಡೀ ವಿಶ್ವವಿದ್ಯಾಲಯದಲ್ಲಿ ರುವ ಕಾಯಂ ಉಪನ್ಯಾಸಕರ ಸಂಖ್ಯೆ ಕೇವಲ ನಾಲ್ಕು. ಉಳಿದವರೆಲ್ಲ ಅರೆಕಾಲಿಕ

ಉಪನ್ಯಾಸಕರು. ತುಮಕೂರು ನಗರದ ಅಥವಾ ಜಿಲ್ಲೆಯ ಯಾವ ಕಾಲೇಜಿಗೆ ನೀವು ಹೋದರೂ ಇದಕ್ಕಿಂತ ಹೆಚ್ಚು ಮಂದಿ ಉಪನ್ಯಾಸಕರು ಒಂದು ವಿಭಾಗದಲ್ಲಿಯೇ ಸಿಗುತ್ತಾರೆ. ಹಾಗಿದ್ದರೆ ಯಾವ ಪುರುಷಾರ್ಥಕ್ಕೆ ಆ ವಿಶ್ವವಿದ್ಯಾಲಯ ಸ್ಥಾಪಿಸಲಾಯಿತು?

'ನಾವು ಇತಿಹಾಸದಿಂದ, ಹಳೆಯ ತಪ್ಪುಗಳಿಂದ ಪಾಠ ಕಲಿಯಬಾರದು ಎಂದು ತೀರ್ಮಾನ ಮಾಡಿದ್ದೇವೆ' ಎನ್ನುವಂತೆ ಅತ್ಯಂತ ಶೋಚನೀಯ ಸ್ಥಿತಿಯಲ್ಲಿ ಇರುವ ತುಮಕೂರು ವಿಶ್ವವಿದ್ಯಾಲಯದ ಪಕ್ಕದಲ್ಲಿಯೇ ದಾವಣಗೆರೆಯಲ್ಲಿ ಇನ್ನೊಂದು ವಿಶ್ವವಿದ್ಯಾಲಯ ಸ್ಥಾಪಿಸಲು ಸರ್ಕಾರ ತೀರ್ಮಾನಿಸಿದೆ. ಶಿವಮೊಗ್ಗದ ಲಕ್ಕವಳ್ಳಿಯ ಕುವೆಂಪು ವಿಶ್ವವಿದ್ಯಾಲಯವನ್ನು ವಿಭಜಿಸಿ ದಾವಣಗೆರೆ ವಿಶ್ವವಿದ್ಯಾಲಯ ಸ್ಥಾಪಿಸಲಾಯಿತು. ತುಮಕೂರು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಒಂದು ಜಿಲ್ಲೆಯಿದ್ದರೆ ದಾವಣಗೆರೆ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಎರಡು ಜಿಲ್ಲೆಗಳು ಇವೆ. ಅದೊಂದೇ ಸಮಾಧಾನದ ಸಂಗತಿ! ಎರಡು ವರ್ಷಗಳಲ್ಲಿ ಈ ವಿಶ್ವವಿದ್ಯಾಲಯಕ್ಕೆ ಮಂಜೂರು ಆಗಿರುವುದು 20 ಕೋಟಿ ರೂಪಾಯಿ. ಬಿಡುಗಡೆ ಆಗಿರುವುದು 6.25 ಕೋಟಿ. ಕುವೆಂಪು ವಿಶ್ವವಿದ್ಯಾಲಯದಲ್ಲಿ ಇರುವ ಅರ್ಧಕರ್ಧ ಸಿಬ್ಬಂದಿಗೆ ಕೆಲಸವಿಲ್ಲ. ದಾವಣಗೆರೆ ವಿವಿ.ಯ ಕುಲಪತಿಗಳು ಆ ಸಿಬ್ಬಂದಿಯ ಸೇವೆ ತೆಗೆದುಕೊಳ್ಳಲು ಸಿದ್ಧರಿಲ್ಲ. ಅಲ್ಲಿ ಅವರಿಗೆ ಕೆಲಸವಿಲ್ಲ. ಸಂಬಳ ಇದೆ. ಇಲ್ಲಿ ಜನವೂ ಇಲ್ಲ, ಕೆಲಸವೂ ಸಾಗುತ್ತಿಲ್ಲ. ಬರೀ ಸರ್ಕಾರಕ್ಕೆ ಮಾತ್ರ ಪ್ರತಿಷ್ಠೆ ಇರುತ್ತದೆಯೇ? ಅದು ಕೆಳಗೆ ಹರಿದು ಕುಲಪತಿಗಳ ಮಟ್ಟಕ್ಕೂ ಬರುವುದಿಲ್ಲವೇ? ದಾವಣಗೆರೆಯಲ್ಲಿ ಆಗುತ್ತಿರುವುದೂ ಅದೇ!

ರಾಜ್ಯದಲ್ಲಿ ಇರುವುದು ಒಂದೇ ಮಹಿಳಾ ವಿಶ್ವವಿದ್ಯಾಲಯ. ಆರು ವರ್ಷಗಳ ಹಿಂದೆ ವಿಜಾಪುರದಲ್ಲಿ ಪ್ರಾರಂಭವಾದ ಈ ವಿಶ್ವವಿದ್ಯಾಲಯಕ್ಕೆ 200 ಎಕರೆ ಜಾಗ ಮಂಜೂರಾಗಿದೆ. ಈಗ ಬಳಕೆ ಆಗಿರುವುದು ಐದಾರು ಎಕರೆ ಜಾಗ ಮಾತ್ರ. ಅದರಲ್ಲಿ ಎದ್ದಿರುವುದು ಎರಡು ಮೂರು ಕಟ್ಟಡಗಳು ಅಷ್ಟೇ. ಕಳೆದ ವರ್ಷ ಈ ವಿಶ್ವವಿದ್ಯಾಲಯಕ್ಕೆ 30 ಕೋಟಿ ರೂಪಾಯಿ ನಿಗದಿಯಾಗಿತ್ತು. ಬಿಡುಗಡೆ ಆಗಿದ್ದು ಕೇವಲ ಐದು ಕೋಟಿ; ಅದು ಆಡಳಿತ ವೆಚ್ಚಕ್ಕೇ ಸಾಕಾಗಲಿಲ್ಲ. ಇನ್ನು ಕಟ್ಟಡಗಳು ಮೇಲೆ ಏಳಲು ಹೇಗೆ ಸಾಧ್ಯ? ಈ ವಿಶ್ವವಿದ್ಯಾಲಯದಲ್ಲಿ 96 ಮಂದಿ ಸಿಬ್ಬಂದಿ ಇರಬೇಕು. ಇರುವವರು 45 ಮಂದಿ ಮಾತ್ರ. ಅವರು ಏನು ಕಲಿಸುತ್ತಾರೆ? ಮಕ್ಕಳು ಏನು ಕಲಿಯುತ್ತವೆ? ಎಲ್ಲ ವಿಶ್ವವಿದ್ಯಾಲಯಗಳ ಪಾಡೂ ಇದೇ. ಗುಲ್ಬರ್ಗ ವಿಶ್ವವಿದ್ಯಾಲಯದ ಇಂಗ್ಲಿಷ್ ಮತ್ತು ಹಿಂದಿ ವಿಭಾಗಗಳಲ್ಲಿ ತಲಾ ಒಬ್ಬರು ಅಧ್ಯಾಪಕರು ಇದ್ದಾರೆ. ಪತ್ರಿಕೋದ್ಯಮ ವಿಭಾಗದಲ್ಲಿ ಒಬ್ಬರೂ ಇಲ್ಲ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದಲ್ಲಿ ಇದುವರೆಗೆ ಇದ್ದವರು ಇಬ್ಬರು ಅಧ್ಯಾಪಕರು ಮಾತ್ರ. ಈಗ ಅದಕ್ಕೆ ಇನ್ನೊಬ್ಬರು ಸೇರ್ಪಡೆಯಾಗಿದ್ದಾರೆ. ಖಾಲಿ ಇರುವ ಅಧ್ಯಾಪಕರ ಕೆಲಸವನ್ನು ಅರೆಕಾಲಿಕ ಉಪನ್ಯಾಸಕರು ನಿರ್ವಹಿಸಬೇಕು. ಅವರಿಗೆ ಉತ್ತರದಾಯಿತ್ವ ಎಂಬುದು ಇಲ್ಲ. ವಿಶ್ವವಿದ್ಯಾಲಯಗಳು ಕೊಡುವ ಅರೆಕಾಸಿನ ಸಂಬಳಕ್ಕೆ ಅವರು ಪಾಠ ಮಾಡುವುದೂ ಅಷ್ಟರಲ್ಲಿಯೇ ಇದೆ.

ಮೂರು ವರ್ಷಗಳ ಹಿಂದೆ ವಿಶ್ವವಿದ್ಯಾಲಯಗಳು ಸ್ವಂತ ಸಂಪನ್ಮೂಲದಲ್ಲಿ ಅಧ್ಯಾಪಕರನ್ನು ನೇಮಿಸಿಕೊಳ್ಳಬಹುದು ಎಂದು ಸರ್ಕಾರ ಆದೇಶ ಹೊರಡಿಸಿತು. ಬೆಂಗಳೂರು ವಿಶ್ವವಿದ್ಯಾಲಯ ಹೀಗೆ 80 ಮಂದಿ ಅಧ್ಯಾಪಕರನ್ನು ನೇಮಿಸಿ ಕೊಂಡಿತು. ಅವರ ಸಂಬಳವನ್ನು ವಿಶ್ವವಿದ್ಯಾಲಯವೇ ಭರಿಸುತ್ತದೆ. ಸ್ವಂತ ಕಟ್ಟಡ, ಕ್ಯಾಂಪಸ್ ಬಿಟ್ಟು ಬೇರೇನೂ ಸೌಕರ್ಯಗಳು ಇಲ್ಲದ ಬೆಳಗಾವಿಯ ಸ್ನಾತಕೋತ್ತರ ಕೇಂದ್ರಕ್ಕೆ ಯಡಿಯೂರಪ್ಪನವರು ವಿಶ್ವವಿದ್ಯಾಲಯದ ಭಾಗ್ಯ ದೊರಕಿಸಿ ಕೊಟ್ಟಿದ್ದಾರೆ. ಬೆಳಗಾವಿಯಲ್ಲಿ ಪೂರ್ಣ ಪ್ರಮಾಣದ ವಿಶ್ವವಿದ್ಯಾಲಯ ಇರಬೇಕು ಎಂಬುದು ಬಹುಕಾಲದ ಬೇಡಿಕೆ ಇರಬಹುದು. ಆದರೆ, ಅದಕ್ಕೆ ಅಗತ್ಯವಾದ ಮೂಲ ಸೌಕರ್ಯ ಒದಗಿಸದೇ ಇದ್ದರೆ ಏನು ಪ್ರಯೋಜನ?

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪಕ್ಕದಲ್ಲಿಯೇ ಬಳ್ಳಾರಿಯಲ್ಲಿ ವಿಜಯ ನಗರ ವಿಶ್ವವಿದ್ಯಾಲಯ ಸ್ಥಾಪಿಸಲು ಸರ್ಕಾರ ಇದೀಗ ಮುಂದಾಗಿದೆ. ರೆಡ್ಡಿ ಸೋದರರು ತಮ್ಮ ಹಣ ಹಾಕಿ ಮಾಡಿದರೆ ಇದು ಮಾದರಿ ವಿಶ್ವವಿದ್ಯಾಲಯ ಆದೀತು. ಮಳೆಯಲ್ಲಿ ಮನೆ ಕಳೆದುಕೊಂಡವರಿಗೇ ಒಂದು ಮನೆ ಕಟ್ಟಿಕೊಡದವರು ವಿಶ್ವವಿದ್ಯಾಲಯಕ್ಕೆ ಕೋಟಿಗಟ್ಟಲೆ ಹಣ ಎಲ್ಲಿ ಹಾಕುತ್ತಾರೆ? ಹಾಕುತ್ತಾರೆ ಎಂದು ನಿರೀಕ್ಷಿಸಬೇಕಾದರೂ ಏಕೆ? ಹಾಗಾದರೆ ಅಲ್ಲಿ ವಿಶ್ವವಿದ್ಯಾಲಯ ತಲೆ ಎತ್ತುವುದು ಹೇಗೆ? ಹಂಪಿಯ ಕನ್ನಡ ವಿಶ್ವವಿದ್ಯಾಲಯ ಈಗ ಪರಿಪೂರ್ಣವೇ? ಅಲ್ಲ. ಅದನ್ನು ಬಡಕಲು ಮಾಡಿ ಇನ್ನೊಂದು ವಿಶ್ವವಿದ್ಯಾಲಯ ಸೃಷ್ಟಿಸುವ ಅಗತ್ಯವಾದರೂ ಏನು? ಹೋಗಲಿ, ಕನ್ನಡ ವಿಶ್ವವಿದ್ಯಾಲಯವೇ ಅಪರಿಪೂರ್ಣ ಆಗಿರುವಾಗ ಸಂಸ್ಕೃತ ವಿಶ್ವವಿದ್ಯಾಲಯ ಏಕೆ ಬೇಕು?

ಈಗ ಇರುವ ಅತ್ಯಂತ ಹಳೆಯ ವಿಶ್ವವಿದ್ಯಾಲಯಗಳ ಸಂಸ್ಕೃತ ವಿಭಾಗಗಳಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಇದ್ದಾರೆ ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ? ಗೊತ್ತಿಲ್ಲ ದಿದ್ದರೆ ಇಲ್ಲಿ ಅಂಕಿ ಅಂಶಗಳು ಇವೆ : ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮೊದಲ ವರ್ಷದಲ್ಲಿ ಮೂವರು, ಎರಡನೇ ವರ್ಷದಲ್ಲಿ ನಾಲ್ವರು ವಿದ್ಯಾರ್ಥಿಗಳು ಸಂಸ್ಕೃತ ಎಂ.ಎ. ಮಾಡುತ್ತಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎರಡನೇ ಸೆಮಿಸ್ಟರ್‌ನಲ್ಲಿ ನಾಲ್ವರು ಮತ್ತು ನಾಲ್ಕನೇ ಸೆಮಿಸ್ಟರ್‌ನಲ್ಲಿ ಒಬ್ಬರು ಹಾಗೂ ಮೈಸೂರು ವಿಶ್ವ ವಿದ್ಯಾಲಯದಲ್ಲಿ 19 ವಿದ್ಯಾರ್ಥಿಗಳು ಸಂಸ್ಕೃತ ಅಧ್ಯಯನ ಮಾಡುತ್ತಿದ್ದಾರೆ. ಮೂರು ಅತ್ಯಂತ ಹಳೆಯ ವಿಶ್ವವಿದ್ಯಾಲಯಗಳು ಸೇರಿ ಒಟ್ಟು 31 ವಿದ್ಯಾರ್ಥಿಗಳು ಇರುವ ಸಂಸ್ಕೃತಕ್ಕೆ ಒಂದು ವಿಶ್ವವಿದ್ಯಾಲಯ ಬೇಕೇ? ಇದನ್ನು ಒಣ ಪ್ರತಿಷ್ಠೆ ಎನ್ನಬೇಕೇ? ತೆವಲು ಎನ್ನಬೇಕೇ? ಒಬ್ಬ ವಿದ್ಯಾರ್ಥಿ ಪ್ರಾಥಮಿಕ ಹಂತದಿಂದ ಪದವಿ ಹಂತದ ವರೆಗೆ ಅನೇಕ ವಿಷಯಗಳನ್ನು ಕಲಿತು ಒಂದು ವಿಷಯದಲ್ಲಿ ಪಾರಂಗತನಾಗಲು ವಿಶ್ವವಿದ್ಯಾಲಯಕ್ಕೆ ಬರುತ್ತಾನೆ. ಈಗ ಯಾವ ವಿಶ್ವವಿದ್ಯಾಲಯದಲ್ಲಿ ಅಂಥ ಶಿಕ್ಷಣ ಸಿಗುತ್ತದೆ?

ಭಾರತದಲ್ಲಿ ಕ್ರಿಸ್ತಪೂರ್ವ ಕಾಲದಲ್ಲಿಯೇ ನಳಂದ ವಿಶ್ವವಿದ್ಯಾಲಯ ಇತ್ತು. ದೇಶ ವಿದೇಶಗಳಿಂದ ಅಲ್ಲಿಗೆ ಬಂದು ವಿದ್ಯಾರ್ಥಿಗಳು ಓದುತ್ತಿದ್ದರು. ಊರಿಗೊಂದು ಎನ್ನುವಂತೆ ಯಡಿಯೂರಪ್ಪನವರು ಎರಡು ವರ್ಷಗಳಲ್ಲಿ ಹತ್ತು ವಿಶ್ವವಿದ್ಯಾಲಯ

ಸ್ಥಾಪಿಸುವ ಬದಲು ಮೈಸೂರು ಅಥವಾ ಧಾರವಾಡದ ವಿಶ್ವವಿದ್ಯಾಲಯವನ್ನು ವಿಶ್ವಮಟ್ಟದಲ್ಲಿ ಅಭಿವೃದ್ಧಿಪಡಿಸುವ ಕನಸು ಕಾಣಬಾರದಿತ್ತೇ? ಅದಕ್ಕೆ ಒಂದು ಯೋಜನೆ ರೂಪಿಸಬಾರದಿತ್ತೇ? ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ ಕನ್ನಡದಲ್ಲಿಯೇ ಎಲ್ಲ ವಿದ್ಯೆ ಕಲಿಸುವ ಒಂದು ವಿಶ್ವವಿದ್ಯಾಲಯದಂಥ ಸಂಸ್ಥೆ ಇರಬೇಕು ಎಂದು ಅನಂತಮೂರ್ತಿ, ಚಂದ್ರಶೇಖರ ಕಂಬಾರರಂಥವರು ಎಷ್ಟು ಸಾರಿ ಹೇಳಿಲ್ಲ? ಅದು ನಮಗೆ ಕೇಳಿಸಿದೆಯೇ? ಅಂಥ ಒಂದು ಶ್ರೇಷ್ಠ ಸಂಸ್ಥೆಯೊಂದನ್ನು ಹುಟ್ಟಿ ಹಾಕಿದರೆ ವಿದೇಶಗಳಿಂದಲೂ ವಿದ್ಯಾರ್ಥಿಗಳು ಬಂದು ಓದುತ್ತಾರೆ ಎಂದು ಅವರು ಹೇಳಿರಲಿಲ್ಲವೇ? ಮುನ್ನೂರು ವರ್ಷ ಇಂಗ್ಲಿಷ್‌ನಲ್ಲಿ ಕಲಿಸಿ, ಕಲಿತು ಒಬ್ಬ ವಿಜ್ಞಾನಿಯನ್ನು ಸೃಷ್ಟಿಸಲು ನಮಗೆ ಸಾಧ್ಯವಾಯಿತೇ? ನಮ್ಮ ಮಕ್ಕಳು ಆಸ್ಟ್ರೇಲಿಯಾಕ್ಕೆ ಉನ್ನತ ಅಭ್ಯಾಸ ಮಾಡಲು ಹೋಗಿ ಮುಖ, ಮೂತಿ ಎನ್ನದೇ ಇಕ್ಕಿಸಿಕೊಂಡು ಏಕೆ ಬರಬೇಕು? ಆಸ್ಟ್ರೇಲಿಯಾವೇನು ಭಾರಿ ದೊಡ್ಡ ದೇಶವೇ? ನಮ್ಮಂಥ ಉಜ್ವಲ ಪರಂಪರೆ ಆ ದೇಶಕ್ಕೆ ಇದೆಯೇ? ದೇಶದ 'ಉಜ್ವಲ ಪರಂಪರೆ'ಯ ಗುಂಗಿನ ಎ.ಬಿ.ವಿ.ಪಿ. ಹಿನ್ನೆಲೆಯಿಂದ ಬಂದ ಯುವಕನೊಬ್ಬ ಸಚಿವ ರಾಗಿರುವ ಉನ್ನತ ಶಿಕ್ಷಣ ಖಾತೆಯಲ್ಲಿಯೇ ಇಷ್ಟೆಲ್ಲ ಅನಾಹುತ ಆಗುತ್ತಿರುವುದಕ್ಕೆ ಏನು ಹೇಳೋಣ? ಬರೀ ದುರಂತ ಎಂದರೆ ಸಾಕಾಗಲಾರದೇನೋ?

■

# ಶಿಕ್ಷಣ ಸುಧಾರಣೆ ಎಂಬ ಗೋಡೆ ತೊಳೆಯುವ ಕೆಲಸ!

ಇದು ಗೋಡೆ ತೊಳೆಯುವ ಕೆಲಸ. ತೊಳೆದಷ್ಟೂ ರಾಡಿ ಬರುತ್ತದೆ. ಆದರೆ, ಕಳೆದ ವಾರ ಈ ಅಂಕಣದಲ್ಲಿ ನಾನು ಬರೆದ 'ಇಷ್ಟು ಯುನಿವರ್ಸಿಟಿಗಳು ಬೇಕೇ...' ಲೇಖನಕ್ಕೆ ಬಂದ ಪ್ರತಿಕ್ರಿಯೆ ಅಪೂರ್ವವಾಗಿತ್ತು. ಇದು ಕೊಚ್ಚಿ ಕೊಳ್ಳಲು ಹೇಳುವ ಮಾತಲ್ಲ. ನಾನು ಅದ್ಭುತವಾಗಿ ಬರೆದಿದ್ದೆ ಎಂದು ಹೇಳುವುದೂ ನನ್ನ ಉದ್ದೇಶವಲ್ಲ. ನನ್ನ ಜತೆಗೆ ಮಾತನಾಡಿದವರ ಪ್ರತಿಕ್ರಿಯೆಯಿಂದ, ಕಾಳಜಿಯಿಂದ ಶಿಕ್ಷಣ ನಮ್ಮ ಹೃದಯಕ್ಕೆ ಎಷ್ಟು ಹತ್ತಿರವಾಗಿದೆ ಎಂದು ನನಗೆ ಮತ್ತೆ ಮನವರಿಕೆಯಾಯಿತು. ಜನರು ಶಿಕ್ಷಣ ಕ್ಷೇತ್ರ ಹಾಳಾಗುವುದನ್ನು ಇಷ್ಟಪಡುವುದಿಲ್ಲ, ಅದು ನಮ್ಮ ಮಕ್ಕಳ ಭವಿಷ್ಯಕ್ಕೆ ನೇರವಾಗಿ ಸಂಬಂಧಿಸಿದ್ದು ಎಂದು ಭಾವಿಸುತ್ತಾರೆ ಎಂದು ಮತ್ತೆ ಗೊತ್ತಾಯಿತು.

ಶಿಕ್ಷಣ ಕ್ಷೇತ್ರ ಸುಧಾರಿಸಬೇಕು, ಶಿಕ್ಷಣ ಪದ್ಧತಿ ಬದಲಾಗಬೇಕು ಎಂದು ಯಾರಾದರೂ ಇಂದು ಹೇಳುತ್ತಿಲ್ಲ. 35–40 ವರ್ಷಗಳ ಹಿಂದೆ ನಾನು ವಿದ್ಯಾರ್ಥಿಯಾಗಿದ್ದಾಗಲೂ ಈ ವಿಚಾರ ಚರ್ಚೆಯಾಗುತ್ತಿತ್ತು. ಡಿಬೇಟ್‌ಗಳಲ್ಲಿ ಈ ವಿಷಯ ಇದ್ದೇ ಇರುತ್ತಿತ್ತು. ಅದಕ್ಕೆ ಮುಂಚೆಯೂ ಈ ಚರ್ಚೆ

ನಡೆಯುತ್ತಿರಲೇಬೇಕು. ಕಾಲ ಕಳೆದಂತೆ ಇದು ಅರ್ಥವಿಲ್ಲದ ವಿಚಾರ, ಶಿಕ್ಷಣ ಕ್ಷೇತ್ರವನ್ನು ಸುಧಾರಿಸಲು ಸಾಧ್ಯವೇ ಇಲ್ಲ ಎಂದು ಅನಿಸಿರಬೇಕು. ಈ ಹತಾಶೆಯ ನಡುವೆಯೂ ಅಂಥ ಒಂದು ಪ್ರಯತ್ನ ನಡೆಯಬೇಕು ಎಂಬುದು ನಮಗೆಲ್ಲೋ ಕಾಡುತ್ತಿರುವಂತಿದೆ.

ನನ್ನ ಜತೆಗೆ ಮಾತನಾಡಿದವರನ್ನು ಕೇಳುತ್ತ ಹೋದೆ: 'ಹಾಗಾದರೆ ಶಿಕ್ಷಣ ಕ್ಷೇತ್ರ ಸುಧಾರಣೆ ಮಾಡಲು ಏನು ಮಾಡಬೇಕು' ಎಂದು. ಒಬ್ಬೊಬ್ಬರು ಒಂದೊಂದು ಕಾರಣ ಹೇಳಿದರು. ಆದರೆ, ಬಹುತೇಕ ಜನ ಹೇಳಿದ್ದು 'ಉನ್ನತ ಶಿಕ್ಷಣದ ಹಂತದಲ್ಲಿ ಸ್ವಾಯತ್ತತೆ ಇರಬೇಕು, ಇಲ್ಲವಾದರೆ ಶ್ರೇಷ್ಠ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಸಾಧ್ಯವಿಲ್ಲ' ಎಂದು. ಸ್ವಾತಂತ್ರ್ಯ ಬಂದು ಸರ್ಕಾರ ರಚನೆಯಾದ ಕೂಡಲೇ ಶಿಕ್ಷಣ ಕ್ಷೇತ್ರ ಸರ್ಕಾರದ ಹಿಡಿತಕ್ಕೆ ಹೋಯಿತು. ಇಲ್ಲಿ ಸ್ವಾಯತ್ತತೆ ಇರಬೇಕು ಎಂದು ಯಾರಿಗೂ ಅನಿಸಲಿಲ್ಲ. ಬಹುಶಃ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರ ಮಾಡಬೇಕಾದ ಕೆಲಸ ಬಹಳ ಇತ್ತು ಎಂಬುದು ಇದಕ್ಕೆ ಕಾರಣವಾಗಿರ ಬೇಕು. ಹಾಗೆ ನೋಡಿದರೆ ಇಂದಿನವರೆಗೂ ಎಲ್ಲರಿಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕೊಡಲು ನಮಗೆ ಸಾಧ್ಯವಾಗಿಲ್ಲ. ಉನ್ನತ ಶಿಕ್ಷಣದಲ್ಲಿ ಅದು ಸಾಧ್ಯವಾಗುವ ಪ್ರಶ್ನೆಯೇ ಇರಲಿಲ್ಲ. ಕರ್ನಾಟಕದಲ್ಲಿ ಕೆಲವು ದಶಕಗಳ ಹಿಂದೆ ಮಠ ಮಾನ್ಯಗಳು, ಸಂಘ ಸಂಸ್ಥೆಗಳು ಕಾಲೇಜುಗಳನ್ನು ಪ್ರಾರಂಭಿಸದೇ ಇದ್ದರೆ ನನ್ನ ತಲೆಮಾರಿನವರಿಗೆ ಕೂಡ ಕಾಲೇಜು ಶಿಕ್ಷಣ ಮರೀಚಿಕೆಯೇ ಆಗುತ್ತಿತ್ತು. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಕಾಲೇಜು ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿ ಸ್ವಾಯತ್ತ ಶಿಕ್ಷಣವನ್ನು ಬಯಸು ವುದಂತೂ ಕಷ್ಟವೇ ಎನಿಸುತ್ತದೆ. ಸರ್ಕಾರದಿಂದ ಅನುದಾನ ಬೇಕೇ ಬೇಕಾಗುತ್ತದೆ. ಈ ಅನುದಾನವೇ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರದ ಹಿಡಿತವನ್ನು ಹೆಚ್ಚಿಸಿದೆ. ಅದು ದಿನದಿಂದ ದಿನಕ್ಕೆ ಸಡಿಲವಾಗುವ ಬದಲು ಹೆಚ್ಚುತ್ತ ಹೋಗಿ ಧೃತ ರಾಷ್ಟ್ರಾಲಿಂಗನವಾಗಿ ಪರಿಣಮಿಸಿದೆ. ಎಲ್ಲ ಕ್ಷೇತ್ರಗಳಲ್ಲಿ ಮೌಲ್ಯಗಳು ನಶಿಸಿ ಹೋದಂತೆ ಶಿಕ್ಷಣ ಕ್ಷೇತ್ರದಲ್ಲೂ ಆಗಿ ಅದು ಈಗ ಒಂದು ವ್ಯಾಪಾರವಾಗಿದೆ. ಸರ್ಕಾರ ಏನೆಲ್ಲ ಪ್ರಯತ್ನ ಮಾಡಿದರೂ ಈಗಲೂ ದೇಶದಲ್ಲಿ ಉನ್ನತ ಶಿಕ್ಷಣ ಸಾಧ್ಯವಾಗಿರುವುದು ಕೇವಲ ಶೇ 15 ರಷ್ಟು ಮಂದಿಗೆ ಮಾತ್ರ.

'ಶಿಕ್ಷಣ ಕ್ಷೇತ್ರ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದ್ದು. ಶೈಕ್ಷಣಿಕ ಸಂಸ್ಥೆಗಳಿಗೆ ಮೂಲ ಸೌಕರ್ಯಗಳನ್ನೆಲ್ಲ ಕಲ್ಪಿಸಿ ಅವುಗಳ ಉಸ್ತುವಾರಿ ವಹಿಸಿ ಕೊಂಡವರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಸಂಸ್ಥೆಗಳನ್ನು ಚೆನ್ನಾಗಿ ನಡೆಸಿಕೊಂಡು ಹೋಗಿ, ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ಬಂದರೆ, ಅಕ್ರಮಗಳು ನಡೆದರೆ ನಾವು ಮಧ್ಯಪ್ರವೇಶ ಮಾಡಬೇಕಾಗುತ್ತದೆ' ಎಂದು ಸರ್ಕಾರ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿ ಕೈ ತೊಳೆದುಕೊಂಡಿದ್ದರೆ ಶಿಕ್ಷಣ ಕ್ಷೇತ್ರ ಈಗಿನ ಸ್ಥಿತಿಗೆ ಬರುತ್ತಿರಲಿಲ್ಲ. ಪ್ರಾಥಮಿಕ ಹಂತದಿಂದ ಹಿಡಿದು, ಕಾಲೇಜು ಮಟ್ಟದವರೆಗೆ ಪಠ್ಯಕ್ರಮ ರಚನೆಯೂ ಸೇರಿದಂತೆ ಪ್ರತಿಯೊಂದಕ್ಕೂ ಶಿಕ್ಷಣ ಕಾರ್ಯದರ್ಶಿಗಳ ಬಾಗಿಲು ಕಾಯುವಂತೆ ಮಾಡಿರುವುದು ಈ ಕ್ಷೇತ್ರ ಹೊಲಬುಗೆಡಲು ಕಾರಣವಾಯಿತು. ಇಂಗ್ಲಿಷ್‌ರ ಅಪರಾವತಾರದಂತೆಯೇ ಇರುವ ಐ.ಎ.ಎಸ್ ಅಧಿಕಾರಿ ಪಂಪನ ಕಾವ್ಯದ ಯಾವ ಆಖ್ಯಾನ ಕಲಿಸಬೇಕು ಎಂದು ಏಕೆ ತೀರ್ಮಾನಿಸಬೇಕು? ಹೇಗೆ ತೀರ್ಮಾನಿಸಲು ಸಾಧ್ಯ? ಮಕ್ಕಳಿಗೆ ಏನನ್ನು

ಕಲಿಸಬೇಕು ಎಂದು ಶಿಕ್ಷಣ ಸಚಿವರಾದರೂ ಹೇಗೆ ತೀರ್ಮಾನ ಮಾಡುತ್ತಾರೆ? ಅವರಿಗಾದರೂ ಏನು ಅರ್ಹತೆ ಇರುತ್ತದೆ? ಈ ಪ್ರಶ್ನೆ ಕೇಳಿ ಕೇಳಿ ಶಿಕ್ಷಣ ತಜ್ಞರು ಸುಸ್ತಾಗಿ ಹೋಗಿದ್ದಾರೆ. ಆದರೆ, ಅದಕ್ಕೆ ಉತ್ತರ ಸಿಕ್ಕಿಲ್ಲ. ಈಗಲೂ ಪಠ್ಯಕ್ರಮ ಸಿದ್ಧವಾಗಿ ಶಿಕ್ಷಣ ಕಾರ್ಯದರ್ಶಿಗಳಿಗೆ ಬರಲೇಬೇಕು. ಅದನ್ನು ಅವರು ಅಪ್ರೂವ್ ಮಾಡಲೇಬೇಕು. ಅದಕ್ಕೆ ಅವರಿಗೆ ಕಾಲ ಮಿತಿಯೂ ಇಲ್ಲ. ಅವರೇಕೆ ಅದನ್ನು ಆದ್ಯತೆ ಮೇಲೆ ಮಾಡುತ್ತಾರೆ? ಸರ್ಕಾರದಲ್ಲಿ ಹೀಗೆ ಅಧಿಕಾರ ಕೇಂದ್ರೀಕೃತವಾಗುತ್ತ ಹೋದಂತೆ ಶಿಕ್ಷಕರು ಆತ್ಮ ಗೌರವವನ್ನು ಒತ್ತೆಯಿಡಬೇಕಾಯಿತು. ಅಧಿಕಾರದಲ್ಲಿ ಇದ್ದವರ ಓಲೈಕೆ ಆರಂಭವಾಯಿತು.

ಈ ಓಲೈಕೆ ತೀರಾ ಕೆಳಹಂತದಿಂದ ಶಿಕ್ಷಣ ಕ್ಷೇತ್ರದ ಅತ್ಯುಚ್ಚ ಹುದ್ದೆಯಾಗಿರುವ ಕುಲಪತಿ ಹಂತದವರೆಗೂ ವ್ಯಾಪಿಸಿದೆ. ಮೊದಲು ಆಯಾ ವಿಶ್ವವಿದ್ಯಾಲಯದ ಅತ್ಯಂತ ಹಿರಿಯ ಪ್ರಾಧ್ಯಾಪಕರನ್ನು ಕುಲಪತಿಯಾಗಿ ನೇಮಿಸಲಾಗುತ್ತಿತ್ತು. ಇದು ಬಹಳ ಕಾಲ ನಡೆಯಲಿಲ್ಲ. ನಂತರವೂ ಕುಲಪತಿಗಳ ನೇಮಕದಲ್ಲಿ ಅರ್ಹತೆಗೆ ಮಾನ್ಯತೆ ಇರಲೇ ಇಲ್ಲ ಎಂದು ಅಲ್ಲ. ಈಚಿನ ವರ್ಷಗಳಲ್ಲಿ ಹಣದ ಝಣತ್ಕಾರ ಹೆಚ್ಚುತ್ತ ಹೋದಂತೆ ಕುಲಪತಿಗಳ ನೇಮಕದಲ್ಲಿ ಅಪಸ್ವರಗಳು ಗಟ್ಟಿಯಾಗಿ ಕೇಳಿ ಬರುತ್ತಿವೆ. ಕುಲಪತಿಗಳ ನೇಮಕಕ್ಕೆ ಪ್ರಾಯೋಜಕರು ಹುಟ್ಟಿಕೊಂಡಿದ್ದಾರೆ. ಅವರು ಹಣವಿಲ್ಲದ ಒಬ್ಬ ಅಭ್ಯರ್ಥಿಯ ಪರವಾಗಿ ಪ್ರಾಯೋಜನೆ ಮಾಡುತ್ತಾನೆ. ಒಮ್ಮೆ ಈತ ಕುಲಪತಿಯಾಗಿ ನೇಮಕಗೊಂಡರೆ ತನಗೆ ಪ್ರಾಯೋಜನೆ ಮಾಡಿದವರ ಋಣಸಂದಾಯ ಮಾಡ ಬೇಕಾಗುತ್ತದೆ. ಆತ ವಿಶ್ವವಿದ್ಯಾಲಯ ಕಟ್ಟುವ ಬದಲು ಕಟ್ಟಡ ಕಟ್ಟುವ ಕೆಲಸದಲ್ಲಿ ನಿರತನಾಗುತ್ತಾನೆ! ಕುಲಪತಿಗಳ ನೇಮಕಕ್ಕೆ ಹೀಗೆ ಆಸಕ್ತರು ಪ್ರಾಯೋಜನೆ ಮಾಡುತ್ತಿದ್ದರೆ ಕುಲಸಚಿವರ ನೇಮಕಕ್ಕೆ ಕಾಲೇಜುಗಳು ಪ್ರಾಯೋಜನೆ ಮಾಡುತ್ತಿವೆ. ಕುಲಸಚಿವರೂ ಕಾಲೇಜುಗಳ ಋಣ ಸಂದಾಯ ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಈಗ ಇರುವ ಎಲ್ಲ ಕುಲಪತಿಗಳು, ಕುಲಸಚಿವರ ವಿರುದ್ಧ ಈ ಆಪಾದನೆ ಇಲ್ಲ. ತುಂಬ ಅರ್ಹತೆ ಇರುವವರು, ಯಾವುದೇ ಪ್ರಾಯೋಜನೆ ಇಲ್ಲದವರೂ ಕುಲಪತಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಇಂಥ ಒಂದು ಗಂಭೀರ ಆರೋಪ ಹೇಗೆ ಹುಟ್ಟಿಕೊಂಡಿತು ಎಂಬ ಬಗ್ಗೆ ಸರ್ಕಾರ ತಲೆಕೆಡಿಸಿಕೊಳ್ಳಬೇಕು.

ಕುಲಪತಿಗಳ ನೇಮಕಕ್ಕೆ ಹೀಗೆ ಕಳಂಕ ತಟ್ಟಿದ್ದರೆ ಸಿಂಡಿಕೇಟ್, ಅಕೆಡೆಮಿಕ್ ಕೌನ್ಸಿಲ್‌ಗೆ ಸದಸ್ಯರ ನೇಮಕ ಇನ್ನೂ ಅಧ್ವಾನ. ಈ ನೇಮಕಕ್ಕೆ ನಿರ್ದಿಷ್ಟ ಮಾನದಂಡ ಇದ್ದರೂ ಅದನ್ನು ಸರ್ಕಾರ ಪಾಲನೆ ಮಾಡುತ್ತಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಡಾ. ಎಂ.ಎಸ್. ತಿಮ್ಮಪ್ಪ ಕುಲಪತಿ ಆಗಿರುವ ವರೆಗೆ ಈ ಮಾನದಂಡಕ್ಕೆ ಒಳಪಡದವರನ್ನು ಸಿಂಡಿಕೇಟ್ ಮತ್ತು ಅಕೆಡಿಮಿಕ್ ಕೌನ್ಸಿಲ್‌ಗೆ ನೇಮಿಸಲು ಬಿಡಲಿಲ್ಲ. ಇದು ವಿವಾದಕ್ಕೆ ಎಡೆ ಮಾಡಿದಾಗ ಸರ್ಕಾರದ ವಿರುದ್ಧ ಹೈಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನೂ ಹೂಡಲಾಗಿತ್ತು. ಸರ್ಕಾರದ ಪ್ರಯತ್ನಕ್ಕೆ ಹೈಕೋರ್ಟ್ ಮಂಗಳಾರತಿ ಮಾಡಿತು. ಆದರೆ, ಇದುವರೆಗೆ ಈ ಅರ್ಜಿ ಮೇಲೆ ಅಂತಿಮ ತೀರ್ಪು ಬಂದಿಲ್ಲ.

ಈ ಕಡೆ ತಿಮ್ಮಪ್ಪ ನಿವೃತ್ತರಾಗುತ್ತಿದ್ದಂತೆಯೇ ಆ ಕಡೆ ಸರ್ಕಾರ ತಾನು ಯಾರನ್ನು

ಸಿಂಡಿಕೇಟ್ ಮತ್ತು ಅಕೆಡಮಿಕ್ ಕೌನ್ಸಿಲ್‌ಗೆ ನೇಮಕ ಮಾಡಬೇಕು ಎಂದು ಅಂದುಕೊಂಡಿತ್ತೋ ಅವರನ್ನೇ ನೇಮಿಸಿತು. ಸರ್ಕಾರ ರೂಪಿಸಿದ ವಿಶ್ವವಿದ್ಯಾಲಯ ಕಾಯ್ದೆ ಪ್ರಕಾರವೇ 'ಶ್ರೇಷ್ಠ ಶಿಕ್ಷಣ ಪರಿಣತ'ರು ನೇಮಕವಾಗಬೇಕಿದ್ದ ಜಾಗದಲ್ಲಿ ರಾಜಕೀಯ ಪಕ್ಷಗಳ ಕಾರ್ಯಕರ್ತರು ನೇಮಕಗೊಂಡರು. ಅವರನ್ನು ನೇಮಕ ಮಾಡಿದ ಸರ್ಕಾರದ ಉದ್ದೇಶ ಪ್ರಾಮಾಣಿಕವಾಗಿರಲಿಲ್ಲ. ಅದರ ಪರಿಣಾಮವೂ ನೆಟ್ಟಗಾಗಲಿಲ್ಲ.

ಕೆಲವು ಸಿಂಡಿಕೇಟ್ ಸದಸ್ಯರು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಜನರಿಗೆ ಸೀಟು ಕೊಡಿಸಿ ದುಡ್ಡು ಮಾಡಿಕೊಂಡರು. ಸೀಟು ಕೊಡದೇ ಇದ್ದ ಸಂಸ್ಥೆಗಳ ವಿರುದ್ಧ ಕಥೆ ಕಟ್ಟಿ ಪತ್ರಿಕೆಗಳಲ್ಲಿ ಬರೆಸಿದರು. ಈ ಸಿಂಡಿಕೇಟ್ ಮತ್ತು ಅಕೆಡಮಿಕ್ ಕೌನ್ಸಿಲ್ ಸದಸ್ಯರನ್ನು ಒಳಗೊಂಡ ಸ್ಥಳೀಯ ತಪಾಸಣಾ ಸಮಿತಿಗಳು (ಲೋಕಲ್ ಇನ್‌ಸ್ಪೆಕ್ಷನ್ ಕಮಿಟಿ–ಎಲ್.ಐ.ಸಿ) ಶಿಕ್ಷಣ ಸಂಸ್ಥೆಗಳಲ್ಲಿನ ಅಕ್ರಮಗಳ ಮೂಲ ಎನಿಸಿದುವು. ಶಿಕ್ಷಕರು, ಮೂಲ ಸೌಕರ್ಯಗಳು, ಕಟ್ಟಡಗಳು ಇಲ್ಲದ ಸಂಸ್ಥೆಗಳಿಗೆ ಅನುಮತಿ ಕೊಟ್ಟವು. ಎಲ್.ಐಸಿ. ಭೇಟಿ ಕೊಡುವ ಶಿಕ್ಷಣ ಸಂಸ್ಥೆಗಳಲ್ಲಿ ಈ ಶಿಕ್ಷಕರು, ಪ್ರಯೋಗಾಲಯ, ಗ್ರಂಥಾಲಯದಂಥ ಮೂಲ ಸೌಕರ್ಯಗಳು 'ಸಂಚಾರಿ'ಯಾಗಿ ಕಾರ್ಯ ನಿರ್ವಹಿಸಿದುವು. ಕೆಲವು ಸಾರಿ ಒಂದೇ ಕಟ್ಟಡ ಹಲವು ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಆವಾಸ ಸ್ಥಾನ ಎನಿಸಿತು! ರಾಜ್ಯದಲ್ಲಿ ಎಂಜಿನಿಯರಿಂಗ್ ಕಾಲೇಜುಗಳು ಬೇಕಾಬಿಟ್ಟಿ ಹುಟ್ಟಿದ್ದು ಹೀಗೆಯೇ. ಈಗ ಲಿಂಬಾವಳಿಯವರು ಹೊಸ ಎಂಜಿನಿಯರಿಂಗ್ ಕಾಲೇಜಿಗೆ ಅನುಮತಿ ಕೊಡದಂತೆ ಎಐಸಿಟಿಐಗೆ ಮನವಿ ಮಾಡಿಕೊಂಡರೆ ಏನು ಪ್ರಯೋಜನ? ಸಚಿವ ಸಂಪುಟವೇ ಅಲ್ಲವೇ ಮೊದಲು ಕಾಲೇಜುಗಳಿಗೆ ಅನುಮತಿ ಕೊಡುವುದು? ನಂತರ ಅಲ್ಲವೇ ಎಐಸಿಟಿಐನ ಅನುಮತಿ ಪ್ರಶ್ನೆ?

ನಾನು ಮೊದಲೇ ಹೇಳಿದೆ ಇದು ಗೋಡೆ ತೊಳೆಯುವ ಕೆಲಸ ಎಂದು. ಅದರಿಂದ ರಾಡಿ ಮಾತ್ರ ಬರುತ್ತದೆ. ಇಂಥ ಹುಳುಕುಗಳನ್ನು ಹುಡುಕುತ್ತ ಹೋದರೆ ಅದಕ್ಕೆ ಕೊನೆಯೇ ಇಲ್ಲ. ಈಗಲೂ ಉನ್ನತ ಶಿಕ್ಷಣಕ್ಕೆ ಐಐಟಿ, ಐಎಎಂ, ಐಐಎಸ್‌ಸಿ, ಲಾ ಸ್ಕೂಲ್‌ನಂಥ ಸಂಸ್ಥೆಗಳು ಹೆಸರುವಾಸಿ. ಇಲ್ಲಿ ಐ.ಎ.ಎಸ್ ಅಧಿಕಾರಿಗಳ ಕಾರುಬಾರು ಇಲ್ಲ. ಮಾನವ ಸಂಪನ್ಮೂಲ ಸಚಿವರ ಪಾತ್ರವೂ ಸೀಮಿತ. ಈ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವುದು ನಮ್ಮ ವಿದ್ಯಾರ್ಥಿಗಳಿಗೆ ಒಂದು ಹೆಮ್ಮೆ. ಜೀವಮಾನದ ಸಾಧನೆ. ಇಂಥ ಒಂದು ಸಂಸ್ಥೆಯನ್ನು ರಾಜ್ಯಮಟ್ಟದಲ್ಲಿ ಸ್ಥಾಪಿಸುವ ಕನಸು ಯಡಿಯೂರಪ್ಪ ಅವರಿಗೆ, ಲಿಂಬಾವಳಿಯವರಿಗೆ ಬೀಳಬೇಕು. ಐದು ವರ್ಷ ಆಡಳಿತ ಮಾಡಿ ಹೊರಗೆ ಹೋಗುವಾಗ ತಾವು ಹಿಂದೆ ಏನು ಬಿಟ್ಟು ಹೋದೆವು ಎಂಬ ನೆನಪು ಅವರಿಗೆ ಇರಬೇಕಲ್ಲ? ನಾಯಿ ಮರಿಗಳಂತೆ ಹತ್ತು ವಿಶ್ವವಿದ್ಯಾಲಯ ಗಳನ್ನು ಹೆರುವ ಬದಲು ಮುತ್ತಿನಂಥ ಒಂದು ಮಾದರಿ ಶಿಕ್ಷಣ ಸಂಸ್ಥೆಯನ್ನು ಹೆರುವುದು ಲೇಸು ಅಲ್ಲವೇ? ■

# ಕಾಂಗ್ರೆಸ್ ಕಾಯಕಲ್ಪಕ್ಕೆ ಇನ್ನೂ ಎಷ್ಟು ಸೋಲುಗಳು ಬೇಕು?

ಗೆಲುವೇ ಹಾಗೆ. ಅದಕ್ಕೆ ಗಂಡಂದಿರು ಬಹಳ! ಮೊನ್ನೆ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಸಂಜೆ ನಾಲ್ಕು ಗಂಟೆಗೆ ನಗರದ ಗೋಲ್ಡ್ ಫಿಂಚ್ ಹೋಟೆಲ್‌ನಲ್ಲಿ ಅನಂತಕುಮಾರ್ ಆದಿಯಾಗಿ ಸಂಸದರು, ಶಾಸಕರು, ಸಚಿವರು ಪತ್ರಿಕಾಗೋಷ್ಠಿ ಕರೆದರು. ಅವರು ಪತ್ರಿಕಾಗೋಷ್ಠಿ ಕರೆದಿದ್ದಾರೆ ಎಂದು ಗೊತ್ತಾಗುತ್ತಿದ್ದಂತೆಯೇ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಮಧ್ಯಾಹ್ನ ಮೂರು ಗಂಟೆಗೇ ಪತ್ರಕರ್ತರನ್ನು ಕರೆದರು. ಪಕ್ಷದ ಅಧ್ಯಕ್ಷ ಈಶ್ವರಪ್ಪ ಅವರನ್ನೂ ಕರೆಯಬೇಕು ಎಂದು ಎರಡೂ ಕಡೆಯವರಿಗೆ ಅನಿಸಲಿಲ್ಲ. ಇದು ಬಿಜೆಪಿಯಲ್ಲಿನ ಬಿರುಕನ್ನು ತೋರಿಸುತ್ತದೆ ಎಂದು ಅಲ್ಲ, ಗೆಲುವಿನ ಶ್ರೇಯವನ್ನು ಬಾಚಿಕೊಳ್ಳಲು ಹೇಗೆ ಪ್ರಯತ್ನ ನಡೆಯುತ್ತದೆ ಎಂಬುದಕ್ಕೆ ಒಂದು ಸಣ್ಣ ಉದಾಹರಣೆಯಷ್ಟೇ!

ಸಹಜ. ಅದು ಬಿಜೆಪಿಗೆ ಸಂಭ್ರಮ ತಂದ ಗೆಲುವು. ಜಾಗತಿಕವಾಗಿ ಹೆಸರು ಮಾಡಿದ ಬೆಂಗಳೂರಿನ ಪಾಲಿಕೆಯ ಪಟ್ಟದ ಮೇಲೆ ಕುಳಿತುಕೊಳ್ಳುವುದು ಬಿಜೆಪಿಗೆ ಬಹುದಿನಗಳ

ಕನಸು. ಅದು ಈಗ ನನಸಾಗಿದೆ. ಈ ಗೆಲುವಿಗೆ ಅವರವರ ಭಾವಕ್ಕೆ ತಕ್ಕಂತೆ ವಿಶ್ಲೇಷಣೆ ಕೇಳಿ ಬರುತ್ತಿದೆ. 'ಇದು ಅಭಿವೃದ್ಧಿಗೆ ಸಿಕ್ಕ ಜನಾದೇಶ' ಎಂದು ಬಿಜೆಪಿ ಹೇಳಿಕೊಂಡರೆ 'ಸಾಕಷ್ಟು ಜನ ಮತಗಟ್ಟೆಗೆ ಬರದೇ ಇರುವುದು ಕಾರಣ' ಎಂದು ಕೆ.ಪಿ.ಸಿ.ಸಿ. ಅಧ್ಯಕ್ಷ ಆರ್.ವಿ. ದೇಶಪಾಂಡೆ ಅರ್ಥೈಸಿದರು. ಜೆ.ಡಿ.(ಎಸ್) ಅಧ್ಯಕ್ಷ ಕುಮಾರಸ್ವಾಮಿ ಅವರ ಪ್ರತಿಕ್ರಿಯೆಯಲ್ಲಿ ಬೆಂಗಳೂರಿನ ಮತದಾರರ ಬಗ್ಗೆ ನಂಜು ಇತ್ತು. ಅವರು, 'ಬಿಜೆಪಿಗೆ ವೋಟ್ ಹಾಕಿದ್ದೀರಲ್ಲ, ಇನ್ನು ಅನುಭವಿಸಿ' ಎಂದರು. ಆದರೆ, ಬೆಂಗಳೂರಿನ ಜನ 'ವಿಧಾನಸೌಧದಲ್ಲಿ ಅಧಿಕಾರ ಹಿಡಿದ ಸರ್ಕಾರವೇ ಪಾಲಿಕೆಯಲ್ಲಿಯೂ ಇರಲಿ. ಅದು ಅಭಿವೃದ್ಧಿಗೆ ಅನುಕೂಲ' ಎಂದು ಭಾವಿಸಿದಂತಿದೆ. ಜತೆಗೆ, ಆಡಳಿತಾರೂಢ ಪಕ್ಷ ಮಾತ್ರ ಕೊಡುವ ಆಮಿಷಗಳೂ ಬಿಜೆಪಿ ಗೆಲುವಿಗೆ ಕಾಣಿಕೆ ಸಲ್ಲಿಸಿದುವು.

2008ರಲ್ಲಿ ನಡೆದ ವಿಧಾನಸಭೆ ಚುನಾವಣೆ, ಮಧ್ಯದಲ್ಲಿ ನಡೆದ ಉಪ ಚುನಾವಣೆ, 09ರಲ್ಲಿ ನಡೆದ ಲೋಕಸಭೆ ಚುನಾವಣೆ ಹೀಗೆ ಹಲವು ಚುನಾವಣೆ ಗಳಲ್ಲಿ ಬಿಜೆಪಿ ಗೆಲುವಿನ ದಾಪುಗಾಲು ಹಾಕುತ್ತಲೇ ಇದೆ. ವಿಧಾನ ಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳಿಂದ ನಡೆದ ಚುನಾವಣೆ ಮತ್ತು ಬೆಂಗಳೂರಿನ ಗೋವಿಂದ ರಾಜನಗರ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಫಲಿತಾಂಶ ಮಾತ್ರ ಕಾಂಗ್ರೆಸ್ ಹಾಗೂ ಜೆ.ಡಿ.(ಎಸ್)ಗಳಿಗೆ ಒಂದಿಷ್ಟು ಸಮಾಧಾನ ತಂದಿತ್ತು. ವಿಧಾನಸಭೆ ಚುನಾವಣೆಯಲ್ಲಿ ಸೋತ ನಂತರ ಕಾಂಗ್ರೆಸ್ ಹಾಗೂ ಜೆ.ಡಿ.(ಎಸ್)ಗಳ ಜಂಘಾಬಲವೇ ಉಡುಗಿ ಹೋದಂತಿದೆ. ಹೋರಾಟದ ಛಲ ಕಾಣುತ್ತಿಲ್ಲ. ಟಿಕೆಟ್ ಹಂಚಿಕೆ ಗೊಂದಲ, ಫಂಡಿನ ಕೊರತೆ, ನಾಯಕರ ನಡುವಿನ ವೈಮನಸ್ಯಗಳಿಂದ ಕಾಂಗ್ರೆಸ್‌ನ ಚೈತನ್ಯ ಕುಂದಿ ಹೋಗಿದ್ದರೆ ಜೆ.ಡಿ.(ಎಸ್) ಮೂರನೇ ಸ್ಥಾನಕ್ಕೇ ತೃಪ್ತಿ ಪಡುತ್ತಿರುವಂತಿದೆ.

ಬಿ.ಬಿ.ಎಂ.ಪಿ. ಚುನಾವಣೆಗೆ ನಿಲ್ಲಲು ಕಾಂಗ್ರೆಸ್ಸಿನಲ್ಲಿ ಅಭ್ಯರ್ಥಿಗಳಿಗೆ ಕೊರತೆ ಯೇನೂ ಇರಲಿಲ್ಲ. ಆದರೆ, ಆಯ್ಕೆ ಸರಿಯಾಗಲಿಲ್ಲ. ಏನೇನೋ 'ಪರಿಗಣನೆ'ಗಳು ಸೇರಿಕೊಂಡವು. ಅಭ್ಯರ್ಥಿಗಳ ಆಯ್ಕೆ ಸರಿಯಾಗಿ ಆಗಿದ್ದರೆ ಇನ್ನೂ 20–25 ಸ್ಥಾನಗಳಲ್ಲಿ ಗೆಲ್ಲಬಹುದಿತ್ತು ಎಂದು ದೇಶಪಾಂಡೆಯವರೇ ಈಗ ಹೇಳುತ್ತಿದ್ದಾರೆ. ಗೋವಿಂದರಾಜನಗರ ವಿಧಾನಸಭೆ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದ ಕಾಂಗ್ರೆಸ್ ಮತ್ತು ಜೆ.ಡಿ(ಎಸ್)ಗಳು ನಿರೀಕ್ಷೆಗಿಂತ ಒಳ್ಳೆಯ ಫಲಿತಾಂಶ ಪಡೆದಿದ್ದುವು. ಬಿ.ಬಿ.ಎಂ.ಪಿ. ಚುನಾವಣೆಯಲ್ಲಿಯೂ ಹೊಂದಾಣಿಕೆ ಆಗಬಹುದು ಎಂಬ ನಿರೀಕ್ಷೆಯಿತ್ತು. ಹೈಕಮಾಂಡ್‌ನಲ್ಲಿ ಕೆಲವರು ಪ್ರಮುಖ ನಾಯಕರು ಅದಕ್ಕೆ ಒಲವನ್ನೂ ತೋರಿಸಿದ್ದರು. ಆದರೆ, ಸ್ಥಳೀಯ ನಾಯಕರಿಗೆ ಜೆ.ಡಿ(ಎಸ್) ಬಗ್ಗೆ ನಂಬಿಕೆಯಿಲ್ಲ. 'ಇವರು ಯಾವಾಗ ಕೈ ಕೊಡುತ್ತಾರೆ ಗೊತ್ತಿಲ್ಲ ಎಂಬುದೇ ಅವರ ಅಳುಕು. 'ಈ ಕಾಂಗ್ರೆಸ್‌ನವರಿಗೆ ರಾಷ್ಟ್ರೀಯ ಪಕ್ಷ ಎಂಬ ಅಹಂಕಾರ. ನಾವೇಕೆ ಅವರ ಬಳಿ ಹೋಗಬೇಕು. ಅಹಂಕಾರಿಗಳಿಗೆ ಉದಾಸೀನವೇ ಮದ್ದು' ಎಂಬುದು ಜೆ.ಡಿ(ಎಸ್)

ನಿಲುವು. 'ಜೆ.ಡಿ(ಎಸ್) ಗೆ ಹಾಲು ಕುಡಿಯಲು ಆಗದೇ ಇದ್ದರೆ ಗ್ಲಾಸು ಉರುಳಿಸುವ ಶಕ್ತಿ ಇದೆ' ಎಂದು ಕಾಂಗ್ರೆಸ್ಸಿಗೆ ಗೊತ್ತಾಗುತ್ತಿಲ್ಲ. ಗೊತ್ತಾದರೂ ಏನು ಮಾಡಬೇಕು ಎಂದು ತಿಳಿಯುತ್ತಿಲ್ಲ. ಈಗ ಕಾಂಗ್ರೆಸ್ಸಿನ ನಾಯಕರು ಎಷ್ಟು ಹತಾಶ ರಾಗಿದ್ದಾರೆ ಎಂದರೆ 'ಈ ಬಿಜೆಪಿಯವರು ಯಾವಾಗ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ' ಎಂದು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ!

ಒಂದು ಕಾಲದಲ್ಲಿ ತನ್ನ ಭದ್ರಕೋಟೆಯಾಗಿದ್ದ ಕರ್ನಾಟಕದ ಮೇಲೆ ಹೀಗೆ ದಿನದಿಂದ ದಿನಕ್ಕೆ ತನ್ನ ಹತೋಟಿ ಹೊರಟು ಹೋಗುತ್ತಿರುವುದನ್ನು ತಿಳಿದೂ ಎ.ಐ.ಸಿ.ಸಿ. ಏಕೆ ಸುಮ್ಮನಿದೆ ಗೊತ್ತಿಲ್ಲ. ಒಂದಲ್ಲ ಹಲವು ಚುನಾವಣೆಗಳಲ್ಲಿ ಸಾಮರ್ಥ್ಯ ಸಾಬೀತು ಮಾಡದ ನಾಯಕರನ್ನು ಅದು ಏಕೆ ಸಹಿಸಿಕೊಂಡಿದೆ ಎಂದೂ ತಿಳಿಯುತ್ತಿಲ್ಲ. ಕೆ.ಪಿ.ಸಿ.ಸಿ.ಯಲ್ಲಿ ಎ.ಐ.ಸಿ.ಸಿ. ನಿರ್ಮಿಸಿರುವ ದೇಶಪಾಂಡೆ ಮತ್ತು ಶಿವಕುಮಾರ್ ಎಂಬ ಎರಡು ಅಧಿಕಾರ ಕೇಂದ್ರಗಳಿಂದ ಪಕ್ಷಕ್ಕೆ ಒಳಿತಾಗುವ ಬದಲು ಕೆಡುಕೇ ಆಗಿದೆ. ಅವರಿಬ್ಬರ ಸಂಬಂಧವೂ ಹಳಸಿ ಹೋಗಿದೆ. ರಾಜ್ಯದಲ್ಲಿ ಶೇ 6 ರಷ್ಟಿರುವ ಕುರುಬ ಸಮುದಾಯದ ನಾಯಕ ಸಿದ್ದರಾಮಯ್ಯ ಅವರನ್ನು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕನಾಗಿ ಕೂರಿಸಿದ ನಂತರವೂ ಹಿಂದುಳಿದ ವರ್ಗಗಳ ಬೆಂಬಲ ಪಕ್ಷಕ್ಕೆ ಪೂರ್ಣವಾಗಿ ಸಿಕ್ಕಿಲ್ಲ. ದುರಂತ ಎಂದರೆ ಕಾಂಗ್ರೆಸ್ ಪಕ್ಷ ಆರು ವರ್ಷಗಳ ಹಿಂದಿನ ಕೃಷ್ಣ ಸರ್ಕಾರದ ಸಾಧನೆಗಳ ಮೇಲೆ ಈ ಚುನಾವಣೆ ಎದುರಿಸಿತು. ಜನರಿಗೆ ನಿನ್ನೆಯ ನೆನಪೇ ಇರುವುದಿಲ್ಲ. ಆರು ವರ್ಷಗಳ ಹಿಂದಿನ ಕಥೆ ಯಾರಿಗೆ ಗೊತ್ತಿರುತ್ತದೆ?

ಕಾಂಗ್ರೆಸ್ ಪಕ್ಷದ ಇನ್ನೊಂದು ದೊಡ್ಡ ಸಮಸ್ಯೆ ಎಂದರೆ ಅದು 'ಲೇನಾ ಪಾರ್ಟಿ'. 'ದೇನಾ ಪಾರ್ಟಿ' ಅಲ್ಲ. ಹಣವನ್ನು ಗುಳೆ ಮಾಡುವುದು ಮಾತ್ರ ಆ ಪಕ್ಷದ ನಾಯಕರಿಗೆ ಗೊತ್ತು. ಕೊಡುವುದು ಗೊತ್ತಿಲ್ಲ. 'ದೇಶಪಾಂಡೆ ಖರ್ಚು ಮಾಡಲಿ' ಎಂದು ಶಿವಕುಮಾರ್, 'ಶಿವಕುಮಾರ್ ಖರ್ಚು ಮಾಡಲಿ' ಎಂದು ದೇಶಪಾಂಡೆ ಪರಸ್ಪರರ ಮೇಲೆ ಹಾಕಿ ಗಪ್‌ಚುಪ್ ಕುಳಿತು ಬಿಟ್ಟರೆ ಅಭ್ಯರ್ಥಿಗಳೇನು ಮಾಡುತ್ತಾರೆ? ಯಾರ ಬಳಿ ದುಡ್ಡು ಇತ್ತೋ ಅವರು ಚೆಲ್ಲಿ ಗೆದ್ದರು. ಉಳಿದವರು ಸೋತರು. ಹಾಗೆಂದು ಟಿಕೆಟ್ ಕೊಡುವಾಗ ಗೆಲ್ಲುವ ಸಾಮರ್ಥ್ಯ ಮಾನದಂಡ ಆಯಿತೇ? ಇಲ್ಲ. ಮೊದಲೇ ಆ ಪಕ್ಷದಲ್ಲಿ ನೂರೆಂಟು ನಾಯಕರು. ಎಲ್ಲರೂ ಒಂದಿಷ್ಟು ಸೀಟುಗಳನ್ನು 'ಹಂಚಿಕೊಂಡರು'. ಅದರ ಫಲ ಏನಾಯಿತು ಎಂದು ಫಲಿತಾಂಶದಲ್ಲಿ ಗೊತ್ತಾಗಿದೆ.

ಮಹಾರಾಷ್ಟ್ರದಲ್ಲಿ ಎನ್.ಸಿ.ಪಿ. ಜತೆಗೆ ಮೈತ್ರಿ ಮಾಡಿಕೊಂಡು ಸುಸೂತ್ರವಾಗಿ ದಶಕಗಳಿಂದ ಅಧಿಕಾರ ಮಾಡಬಹುದಾದರೆ, ಪಶ್ಚಿಮ ಬಂಗಾಲದಲ್ಲಿ ವಿಲಕ್ಷಣ ಸ್ವಭಾವದ ಮಮತಾ ಜತೆ ಹೊಂದಾಣಿಕೆ ಸಾಧ್ಯವಾಗ ಬಹುದಾದರೆ ಕರ್ನಾಟಕದಲ್ಲಿ ಜೆ.ಡಿ(ಎಸ್) ಏಕೆ ಅಸ್ಪೃಶ್ಯ? ಕಾಂಗ್ರೆಸ್ಸಿನ ಯುವರಾಜ ರಾಹುಲ್ ಗಾಂಧಿಯವರಿಗೆ ಉತ್ತರ ಪ್ರದೇಶ, ಬಿಹಾರದಲ್ಲಿ ಸ್ವಂತ ಶಕ್ತಿಯ ಮೇಲೆ ಪಕ್ಷ ಕಟ್ಟುವ ಕನಸು. ಕರ್ನಾಟಕದಲ್ಲಿಯೂ ಅದು ಸಾಧ್ಯ ಎಂದು ಅವರು ಅಂದುಕೊಂಡಂತಿದೆ. ಅದಕ್ಕೆ

ಪೂರಕವಾಗಿ ಪಕ್ಷವನ್ನು ಪುನರ್ ಸಂಘಟಿಸುವ, ಹೊಸ ಐಡಿಯಾ, ಕನಸುಗಾರಿಕೆಯ ಯುವಕರಿಗೆ ಅಧಿಕಾರ ಕೊಡುವ ಕಡೆ ಅವರು ಗಮನ ಹರಿಸಬಹುದಿತ್ತು. ಹೇಗೂ ಅವರ ಮಾತನ್ನು ಅವರ ತಾಯಿ ತೆಗೆದು ಹಾಕುವುದಿಲ್ಲ.

ಕಾಂಗ್ರೆಸ್ ಮತ್ತು ಜೆ.ಡಿ(ಎಸ್) ನಾಯಕರು ಬಿ.ಬಿ.ಎಂ.ಪಿ. ಚುನಾವಣೆಯಲ್ಲಿ ಸೋತು ಇನ್ನೂ ಬೆವರು ಒರೆಸಿಕೊಳ್ಳುವ ಮೊದಲೇ ಯಡಿಯೂರಪ್ಪ ದಾವಣಗೆರೆಯಿಂದ ಗ್ರಾಮ ಪಂಚಾಯ್ತಿ ಚುನಾವಣೆಯ 'ವಿಜಯ ಸಂಕಲ್ಪ' ಯಾತ್ರೆ ಪ್ರಾರಂಭಿಸಿದ್ದಾರೆ. ರಾಜ್ಯದ 5,600 ಗ್ರಾಮ ಪಂಚಾಯ್ತಿಗಳಿಗೆ ಮುಂದಿನ ತಿಂಗಳು ಚುನಾವಣೆ ನಡೆಯಲಿದೆ. ಆ ಚುನಾವಣೆಯಲ್ಲಿ ಕನಿಷ್ಠ 90,000 ಮಂದಿ ಆಯ್ಕೆಯಾಗಲಿದ್ದಾರೆ. ಗೆದ್ದವರೆಲ್ಲ ತಮ್ಮವರೇ ಎಂದು ಆಡಳಿತ ಪಕ್ಷಗಳು ಹಿಂದಿನಿಂದ ಹೇಳಿಕೊಂಡು ಬಂದಿವೆ. ಪಕ್ಷದ ಆಧಾರದ ಮೇಲೆ ನಡೆಯದ ಈ ಚುನಾವಣೆಯಲ್ಲಿ ಗೆದ್ದವರೆಲ್ಲ ತಮ್ಮವರೇ ಎಂದು ಹೇಳುವುದು ಬರೀ ಆಡಳಿತ ಪಕ್ಷದ ವರಸೆಯಲ್ಲ. ವಿರೋಧ ಪಕ್ಷಗಳೂ ಅದನ್ನೇ ಮಾಡುತ್ತವೆ. (ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ 15,000 ಪಂಚಾಯ್ತಿ ಸದಸ್ಯರನ್ನು ಅರಮನೆ ಮೈದಾನಕ್ಕೆ ಕರೆಸಿದ ದೇವೇಗೌಡರು, 'ಇವರೆಲ್ಲ ನಮ್ಮ ಪಕ್ಷದವರು' ಎಂದು ಸನ್ಮಾನಿಸಿ ಊಟ ಹಾಕಿದ್ದು ಗೊತ್ತಲ್ಲ?!) ಆದರೆ, ಅದೇ ಮಾತನ್ನು ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಹೇಳಲು ಆಗದು. ಅದು ಪಕ್ಷದ ಚಿಹ್ನೆಯ ಮೇಲೆ ನಡೆಯುವ ಚುನಾವಣೆ. ಈ ಮೂರೂ ಚುನಾವಣೆಗಳಲ್ಲಿ ಗೆದ್ದವರು ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ದೊಡ್ಡ ಕಾರ್ಯಕರ್ತರ ಪಡೆ. ಆ ಪಡೆಯನ್ನು ಸಿದ್ಧಗೊಳಿಸಿ ಗ್ರಾಮ ಮಟ್ಟದಲ್ಲಿ ಪಕ್ಷವನ್ನು ಬೇರೂರಿಸಬೇಕು ಎಂಬುದು ಯಡಿಯೂರಪ್ಪ ಅವರ ತರದೂದು.

ಬಿ.ಬಿ.ಎಂ.ಪಿ. ಚುನಾವಣೆ ಫಲಿತಾಂಶ ಬರುವುದಕ್ಕೂ ಮುಂಚೆಯೇ 'ವಿಜಯ ಸಂಕಲ್ಪ' ಯಾತ್ರೆ ರೂಪಿಸಿದ್ದರಲ್ಲಿಯೇ ಬಿಜೆಪಿ ನಾಯಕರ ಮುಂಧೋರಣೆ ಗೊತ್ತಾಗಿದೆ. ಬೆಚ್ಚಿ ಬಿದ್ದಿರುವ ಕಾಂಗ್ರೆಸ್ ಮತ್ತು ಜೆ.ಡಿ(ಎಸ್) ನಾಯಕರು 'ಈ ಯಡಿಯೂರಪ್ಪ ನಮಗೆ ಮಲಗಲೂ ಬಿಡುವುದಿಲ್ಲ' ಎಂದು ಶಪಿಸುತ್ತಿದ್ದಾರೆ! ರಾಜಕಾರಣವೇ ಹಾಗೆ. ಶತ್ರು ಮೈ ಮರೆಯಬೇಕು ಎಂದೇ ಅಲ್ಲವೇ ಎಲ್ಲರೂ ಬಯಸುವುದು. ಯಡಿಯೂರಪ್ಪ ಅಷ್ಟರ ಮಟ್ಟಿಗೆ ತಾವು ದೇವೇಗೌಡರಿಗಿಂತ ರಾಜಕೀಯ ಚಾಣಾಕ್ಷತೆಯಲ್ಲಿ ಕಡಿಮೆ ಏನಲ್ಲ ಎಂದು ತೋರಿಸಿಕೊಟ್ಟಿದ್ದಾರೆ.

ಕನಿಷ್ಠ ಬೆಂಗಳೂರು ಹೊರವಲಯದಲ್ಲಿ ಗೆಲುವಿನ ನಿರೀಕ್ಷೆ ಇಟ್ಟುಕೊಂಡಿದ್ದ ಜೆ.ಡಿ.(ಎಸ್)ಗೆ ಮರ್ಮಾಘಾತವಾಗಿದೆ. 'ನಗರ ವಿರೋಧಿ' ಎಂಬ ಕಳಂಕ ತೊಳೆದುಕೊಳ್ಳುವುದು ಆ ಪಕ್ಷಕ್ಕೆ ಕಷ್ಟ. ನೈಸ್ ಹೋರಾಟ ಬರೀ ದೇವೇಗೌಡರ ಹೋರಾಟವಾಗಿತ್ತು. ಅದು ಪಕ್ಷದ ಹೋರಾಟ ಎಂದು ವ್ಯಕ್ತವಾಗಲೇ ಇಲ್ಲ. ಬಿ.ಬಿ.ಎಂ.ಪಿ. ಟಿಕೆಟ್ ಹಂಚಿಕೆಯಲ್ಲಿಯೂ ದುಡ್ಡಿದ್ದವರೇ ದೊಡ್ಡಪ್ಪ ಎನಿಸಿದರು. ಕಾರ್ಯಕರ್ತರನ್ನು ಯಾರೂ ಲೆಕ್ಕಕ್ಕೆ ತೆಗೆದುಕೊಳ್ಳಲೇ ಇಲ್ಲ. ದೇವೇಗೌಡರ ಅನಾರೋಗ್ಯವೂ ಪಕ್ಷ ಮಾಡಬಹುದಿದ್ದ ಹೆಚ್ಚಿನ ಸಾಧನೆಗೆ ಅಡ್ಡಿ ಆಯಿತು. ಈಗ

ಅಲ್ಲಿಯೂ ಆತ್ಮಾವಲೋಕನ ನಡೆದಿದೆ. 'ರಾಜಕಾರಣದಲ್ಲಿ ಬರೀ ದುಡ್ಡೇ ದೊಡ್ಡದಲ್ಲ. ಪಕ್ಷ ನಿಷ್ಠೆ ಕೂಡ ಮುಖ್ಯ. ಒಳ್ಳೆಯ ಕಾರ್ಯಕರ್ತರಿಗೆ ಜನ ಮಣೆ ಹಾಕಿಯಾರು' ಎಂಬ ನಿರೀಕ್ಷೆಯಲ್ಲಿ ಪಕ್ಷದ ಧುರೀಣರು ಮತ್ತೆ ಜನರ ಬಳಿಗೆ ಹೋಗಲು ಸಿದ್ಧತೆ ನಡೆಸಿದ್ದಾರೆ.

ಸೋಲೇ ಹಾಗೆ. ಅದರಿಂದ ಚೇತರಿಸಿಕೊಳ್ಳುವುದು ಕಷ್ಟ. ಮತ್ತೆ ಮತ್ತೆ ಸೋಲಾದರೆ ಇನ್ನೂ ಕಷ್ಟ. ಮತ್ತೆ ಮತ್ತೆ ಸೋಲುತ್ತಿರುವ ಕಾಂಗ್ರೆಸ್, ಜೆ.ಡಿ.(ಎಸ್) ಧುರೀಣರು 'ತಮ್ಮ ತಪ್ಪಿಗೆ ಒಂದಲ್ಲ, ಎರಡಲ್ಲ ಹಲವು ಸಾರಿ ಶಿಕ್ಷೆ ಕೊಟ್ಟಿದ್ದೀರಿ. ಇನ್ನು ಕ್ಷಮಿಸಿ' ಎಂದು ಮತದಾರರಿಗೆ ಹೇಳಬೇಕು. ವೀರೇಂದ್ರ ಪಾಟೀಲರು 1989ರಲ್ಲಿ ಚುನಾವಣೆ ಎದುರಿಸಿದಾಗ, 'ನಮ್ಮ ತಪ್ಪನ್ನು ಮನ್ನಿಸಿ' ಎಂದು ಜನರ ಬಳಿ ಹೋಗಿ ಕಾಂಗ್ರೆಸ್ಸಿಗೆ ಅದ್ಭುತ ಜಯ ದೊರಕಿಸಿದ್ದರು. ಹಾಗೆ ಹೇಳುವ ವಿನಯ ಈಗ ಯಾರಲ್ಲಿ ಇದೆ?

■

# 'ಸ್ಫೂರ್ತಿಧಾಮ'ದ ಸುತ್ತ ಕನಸುಗಳ ಕಟ್ಟುತ್ತ...

ಅದೆಲ್ಲ ಶುರುವಾಗಿದ್ದು ಸರಿಯಾಗಿ ಇಪ್ಪತ್ತು ವರ್ಷಗಳ ಹಿಂದೆ. ಅದು 1990ನೇ ಇಸವಿ. ಮರುವರ್ಷ 1991ರಲ್ಲಿ ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮಶತಮಾನೋತ್ಸವ ನಡೆಯಬೇಕಿತ್ತು. ಯಾವ ಸಿದ್ಧತೆಯೂ ಆಗಿರಲಿಲ್ಲ. ಸರ್ಕಾರದ ಮಟ್ಟದಲ್ಲಿಯೂ ಏನೂ ಚಿಂತನೆ ನಡೆದಿರಲಿಲ್ಲ. ಕೆಲವರು ವಿಚಾರ ವಂತರು ಸೇರಿಕೊಂಡು, 'ಇದೊಂದು ಐತಿಹಾಸಿಕ ಘಟನೆ. ಇದು ಹಾಗೆಯೇ ಕಳೆದು ಹೋಗಬಾರದು. ಈ ಅವಕಾಶವನ್ನು ಎಲ್ಲ ದುರ್ಬಲ ವರ್ಗಗಳ ಸಂಘಟನೆಗೆ, ಜಾಗೃತಿಗೆ ಬಳಸಿಕೊಳ್ಳಬೇಕು' ಎಂದು ಚಿಂತಿಸಿದರು. ಅದರ ಫಲವಾಗಿಯೇ ಹುಟ್ಟಿ ಕೊಂಡುದು ಡಾ.ಬಿ.ಆರ್. ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಮತ್ತು ಸ್ವಾಭಿಮಾನ ಜಾಥಾ. ಜಾಥಾದ ಮುಂಚೂಣಿಯಲ್ಲಿ ದಲಿತ ಸಂಘರ್ಷ ಸಮಿತಿಯ ಮುಖಂಡರು ಜ್ಯೋತಿ ಹಿಡಿದುಕೊಂಡು ನಡೆಯಬಹುದು ಎಂಬ ನಿರೀಕ್ಷೆ ಹುಸಿಯಾಯಿತು. ಸಮಿತಿಯೂ ಒಡೆದು ನುಚ್ಚು ನೂರಾಗಿತ್ತು.

ಶತಮಾನೋತ್ಸವ ಸಮಿತಿಯ ಮುಖಂಡರು, 'ಇದು ಬರೀ

ದಲಿತರ ಪರವಾಗಿ ಇರುವ ಜಾಥಾ ಅಲ್ಲ. ಎಲ್ಲ ದುರ್ಬಲ ವರ್ಗಗಳ, ಶೋಷಿತರ, ಮಹಿಳೆಯರ ಪರ ಇರುವ ಜಾಥಾ' ಎಂದು ಮೊದಲೇ ಸ್ಪಷ್ಟಪಡಿಸಿದ್ದರು. ಅಂಬೇಡ್ಕರ್ ಆಶಯ ಕೂಡ ಅದೇ ಆಗಿತ್ತು. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಗಳು ಅಂಬೇಡ್ಕರ್ ಕಂಡ ಕನಸುಗಳಾಗಿದ್ದುವು. ಆ ಕನಸುಗಳೇ ಶತಮಾನೋತ್ಸವ ಸಮಿತಿಯ ಆಶಯಗಳೂ ಆಗಿದ್ದುವು. ಆಗ ಬೆಂಗಳೂರಿನ ಹೆಚ್ಚುವರಿ ಪೊಲೀಸ್ ಕಮಿಷನರ್ ಆಗಿದ್ದ ಎಸ್. ಮರಿಸ್ವಾಮಿ ಅವರ ನೇತೃತ್ವದಲ್ಲಿ ಸಮಿತಿ ರಚನೆ ಯಾಯಿತು.

ಈ ಸಮಿತಿ ಆಶ್ರಯದಲ್ಲಿ ನಡೆದ ಜಾಥಾ ಆ ವರ್ಷದ ಎಲ್ಲ 365 ದಿನಗಳೂ ಇಡೀ ರಾಜ್ಯದುದ್ದಕ್ಕೂ ಸಂಚರಿಸಿ 2,000 ಹಳ್ಳಿಗಳನ್ನು ಮುಟ್ಟಿತು. ಜಾಥಾ ಸಂಚರಿಸಿದ ಒಟ್ಟು ದಾರಿ 25,000 ಕಿ.ಮೀಗೂ ಹೆಚ್ಚು. ಆ ಜಾಥಾ ನಡೆದಾಗ ಜನರ ಪ್ರತಿಕ್ರಿಯೆ ಹೇಗಿತ್ತು ಎಷ್ಟು ಸ್ಫೂರ್ತಿಯುತವಾಗಿತ್ತು ಎಂಬುದೆಲ್ಲ ಈಗ ಇತಿಹಾಸ. ಅಥವಾ ಎಲ್ಲರಿಗೂ ಮರೆತು ಹೋಗಿದೆ. ಆದರೆ, ಅದರ ಫಲವಾಗಿ ಹುಟ್ಟಿಕೊಂಡ ಬಹುಶಃ ಇಡೀ ದೇಶದಲ್ಲಿಯೇ ತನ್ನ ಮಾದರಿಯಲ್ಲಿ ಮೊದಲನೆಯದಾದ 'ಸ್ಫೂರ್ತಿಧಾಮ' ಎಂಬ ಸಂಸ್ಥೆ ಬೆಂಗಳೂರಿನ ಹೊರವಲಯದ ಅಂಜನಾನಗರದಲ್ಲಿ ಯಾವುದೇ ಸದ್ದು ಗದ್ದಲವಿಲ್ಲದೇ ಅರಿವಿನ ಜಾಗೃತಿಯ ಮೌನ ಜಾಥಾ ನಡೆಸಿಕೊಂಡು ಬರುತ್ತಿದೆ. 'ಸ್ಫೂರ್ತಿಧಾಮ' ಸಂಸ್ಥೆಯ ಅಧ್ಯಕ್ಷರೂ ಮರಿಸ್ವಾಮಿ ಅವರೇ. ರಾಜ್ಯದ ಪೊಲೀಸ್ ಮಹಾನಿರ್ದೇಶಕರಾಗಿ ನಾಲ್ಕು ವರ್ಷಗಳ ಹಿಂದೆ ನಿವೃತ್ತರಾದ ಮರಿಸ್ವಾಮಿ ಈಗ ಈ ಕೆಲಸಕ್ಕೆ ತಮ್ಮನ್ನೇ ತಾವು ಸಮರ್ಪಿಸಿ ಕೊಂಡಿದ್ದಾರೆ. ಮರಿಸ್ವಾಮಿ ಈ ರಾಜ್ಯದ ಗೃಹಸಚಿವರಾಗಿದ್ದ ದಿ.ಬಿ.ರಾಚಯ್ಯ ಅವರ ಅಳಿಯ. ಇಂಥ ಸಂಬಂಧಗಳು, ಅಧಿಕಾರ, ಅಂತಸ್ತು ಯಾವತ್ತೂ ಅವರ ತಲೆಗೆ ಹೋಗಲಿಲ್ಲ. ಅದೇ ಸಂಭಾವಿತತನ. ಅದೇ ಮೃದುತನ. ಆದರೆ, ಸಿದ್ಧಾಂತಗಳ ವಿಚಾರದಲ್ಲಿ ಅವರು ಎಂದೂ ರಾಜಿ ಮಾಡಿಕೊಂಡವರಲ್ಲ.

ಮರಿಸ್ವಾಮಿ ಹೇಳುತ್ತ ಹೋದರು: 'ಇದು ನಮಾಜು ಮಾಡಲು ಹೋಗಿ ಮಸೀದಿ ಕೊರಳಿಗೆ ಹಾಕಿಕೊಂಡವರ ಕಥೆ. ಶತಮಾನೋತ್ಸವ ಸಮಿತಿಯ ಅಧ್ಯಕ್ಷತೆ ನನ್ನ ಕೊರಳಿಗೇ ಬಿತ್ತು. ಒಂದು ಸಾರಿ ಜವಾಬ್ದಾರಿ ತೆಗೆದುಕೊಂಡ ಮೇಲೆ ಅದನ್ನು ಸರಿಯಾಗಿ ನಿಭಾಯಿಸಬೇಕಿತ್ತು. ಪುಣ್ಯಕ್ಕೆ ಜನರಿಂದ, ಜನಪ್ರತಿನಿಧಿಗಳಿಂದ ಜಾಥಾಕ್ಕೆ ಸಿಕ್ಕ ಪ್ರತಿಕ್ರಿಯೆ ಅಭೂತಪೂರ್ವವಾಗಿತ್ತು. ಅಲ್ಲಿ ಜಾತಿ ಮತಗಳ ಭೇದ ಇರಲಿಲ್ಲ. 91ರ ಏಪ್ರಿಲ್ 13ಕ್ಕೆ ಜಾಥಾ ವಾಪಸು ಬೆಂಗಳೂರಿಗೆ ಬರುವುದಕ್ಕಿಂತ ಮುಂಚೆಯೇ ಏಪ್ರಿಲ್ 14ರ ಅಂಬೇಡ್ಕರ್ ಜನ್ಮದಿನಾಚರಣೆಗೆ ಭಾರಿ ಸಿದ್ಧತೆ ಮಾಡಿಕೊಂಡಿದ್ದೆವು. ಆ ಸಮಾರಂಭದಲ್ಲಿ 'ಸ್ಫೂರ್ತಿಧಾಮ' ಕಟ್ಟುವ ಕನಸು ಬಿತ್ತು. 92ರಲ್ಲಿ ಆಗಿನ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅಂಜನಾನಗರದಲ್ಲಿ 30 ಎಕರೆ ಜಾಗವನ್ನು 30 ವರ್ಷದ ಅವಧಿಗೆ ಲೀಸ್‌ಗೆ ಕೊಟ್ಟರು.

'ದುರ್ಬಲ ವರ್ಗಗಳ ಜನರಲ್ಲಿ ಕೀಳರಿಮೆ ಬಲವಾಗಿ ಬೇರೂರಿಬಿಟ್ಟಿದೆ. ಅವರ ಊಟ, ಉಡುಪು, ಹೆಸರು, ಆಚರಣೆ ಪ್ರತಿಯೊಂದರಲ್ಲಿಯೂ ಇದು ಎದ್ದು ಕಾಣುತ್ತದೆ. ಆದರೆ, ನಮ್ಮ ಸಂಸ್ಕೃತಿ, ಕಲೆ ಅವರಲ್ಲಿಯೇ ಆಳವಾಗಿ ಬೇರೂರಿದೆ. ಆ

ಸಂಸ್ಕೃತಿಯನ್ನು, ಕಲೆಯನ್ನು ಜಾಗೃತ ಗೊಳಿಸುವುದು, ನಿನ್ನದು ಉತ್ಕೃಷ್ಟವಾದುದು, ಅದರ ಬಗ್ಗೆ ಕೀಳರಿಮೆ ಬೇಡ ಎಂದು ಮನದಟ್ಟು ಮಾಡಿಕೊಡಬೇಕಿದೆ. ಆ ಕೆಲಸ ಮಾಡುವುದು ಈ 'ಸ್ಫೂರ್ತಿಧಾಮ'ದ ಉದ್ದೇಶ. ಇದು ಒಂದು ಅರ್ಥದಲ್ಲಿ ಮುಗಿಯದ ಕೆಲಸ, ನಿರಂತರ ಕೆಲಸ.

'ಸರ್ಕಾರ ನಮಗೆ 30 ಎಕರೆ ಜಾಗ ಕೊಟ್ಟ ಮೇಲೆ ಅಲ್ಲಿ ಇದ್ದ ಮರಗಳಿಗೆ ಇನ್ನಷ್ಟು ಗಿಡಗಳನ್ನು ಸೇರಿಸಿದ್ದೇವೆ. ಈಗ ಅವು ದೊಡ್ಡದಾಗಿ ಬೆಳೆದಿವೆ. ಇಡೀ ಆವರಣ ದೊಡ್ಡ ಉದ್ಯಾನದಂತೆ ಕಾಣುತ್ತದೆ. ಇದಕ್ಕೆ 'ಮಾನವ ವನ' ಎಂದು ಹೆಸರು ಇಟ್ಟಿದ್ದೇವೆ' ಎನ್ನುತ್ತ ಮರಿಸ್ವಾಮಿಯವರು ನನ್ನನ್ನು ಇಡೀ ಆವರಣದ ಸುತ್ತ ಕರೆದುಕೊಂಡು ಹೋದರು.

'ಇದನ್ನು ಬೌದ್ಧ ಕೇಂದ್ರ ಮಾಡಬೇಕು ಎಂಬುದೇ ನಮ್ಮ ಉದ್ದೇಶ. ಇಲ್ಲಿ ನೋಡಿ ಬುದ್ಧನ ಮೂರ್ತಿ ನಿಲ್ಲಿಸಿದೇವೆ. ಮೂರ್ತಿಯ ಹಿಂದೆ ಒಂದು ಬೋಧಿವೃಕ್ಷ ನೆಡುತ್ತೇವೆ. ಇಲ್ಲಿ ಒಂದು ಪ್ರಾರ್ಥನಾ ಮಂದಿರ ನಿರ್ಮಿಸಬೇಕಿದೆ' ಎಂದು ಗುಂಡನೆಯ ಒಂದು ವಿಶಾಲ ಜಾಗವನ್ನು ತೋರಿಸಿದರು. 'ಬುದ್ಧನ ಮೂರ್ತಿಗೆ ಎದುರಾಗಿ ಒಂದು ಕೆರೆ ಬರುತ್ತದೆ. ಅದರ ಹತ್ತಿರದಲ್ಲಿಯೇ ಒಂದು ಬಯಲು ರಂಗಮಂದಿರ ನಿರ್ಮಾಣವಾಗಿದೆ. ಇನ್ನೂ ಸ್ವಲ್ಪ ಕೆಲಸ ಆಗಬೇಕು. ಹಣದ ಅಡಚಣೆಯಿಂದ ಅದು ಆಗಲಿಲ್ಲ' ಎನ್ನುತ್ತ ಒಂದು ಎತ್ತರದ ಜಾಗಕ್ಕೆ ಬಂದು 'ಇಲ್ಲಿ ಅಂಬೇಡ್ಕರ್ ಸ್ಮಾರಕ ಭವನ ನಿರ್ಮಾಣ ಆಗುತ್ತದೆ. ಬುದ್ಧನ ಪ್ರತಿಮೆಯಿಂದ ಸ್ಮಾರಕದವರೆಗೆ ಬರುವ ದಾರಿಯುದ್ದಕ್ಕೂ ದುರ್ಬಲ ವರ್ಗಗಳ ಹೋರಾಟದ ಹಾದಿಯನ್ನು ಅದು ಜ್ಯೋತಿಬಾ ಫುಲೆ, ಪೆರಿಯಾರ್, ಅಂಬೇಡ್ಕರ್ ಅವರ ಶಿಕ್ಷಣಕ್ಕೆ ನೆರವಾದ ಬರೋಡದ ದೊರೆ ಇಂಥವರ ಚಿತ್ರ, ಶಿಲ್ಪ, ದಾಖಲೆಗಳ ಸ್ಮಾರಕಗಳನ್ನೂ ನಿರ್ಮಿಸಲಾಗುವುದು. ಇದರ ಪರಿಕಲ್ಪನೆ ಖ್ಯಾತ ಶಿಲ್ಪಿ ಲಾರಿ ಬೆಕರ್ ಅವರದು. ಈ ಹೋರಾಟದ ಹಾದಿ ಬಿಡುಗಡೆಯ ಹಾದಿ, ವಿಮೋಚನೆಯ ಹಾದಿಯ ಸಂಕೇತ' ಎಂದರು ಮರಿಸ್ವಾಮಿ.

'ಸ್ಫೂರ್ತಿಧಾಮ'ದ ಆವರಣದಲ್ಲಿ ಒಂದರಿಂದ ಹತ್ತನೆಯ ತರಗತಿವರೆಗಿನ 'ಮಿಲಿಂದ ಶಾಲೆ' ಇದೆ. ಪಕ್ಕದಲ್ಲಿ ನಿರಂತರವಾಗಿ ಸ್ವ-ಉದ್ಯೋಗ ತರಬೇತಿ ಶಿಬಿರ ನಡೆಯುತ್ತದೆ. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಸಾಮಾನ್ಯ ಮನುಷ್ಯನಿಗೆ ಕಾನೂನು ಶಿಕ್ಷಣ, ಸಮಾಜ ಮತ್ತು ಸಂಸ್ಕೃತಿ, ಗ್ರಾಮೀಣ ಉದ್ಯೋಗ ಮುಂತಾದ ವಿಷಯಗಳಲ್ಲಿ ದೂರ ಶಿಕ್ಷಣ ನೀಡಲು ಧಾಮ ಸಿದ್ಧತೆ ಮಾಡಿಕೊಂಡಿದೆ. ಕಳೆದ ಆರು ವರ್ಷಗಳಿಂದ ದುರ್ಬಲ ವರ್ಗಗಳಿಗೆ ಧ್ವನಿ ಒದಗಿಸಲು ಇಂದೂಧರ ಹೊನ್ನಾಪುರ ಅವರ ಸಂಪಾದಕತ್ವದಲ್ಲಿ 'ಸಂವಾದ' ಎಂಬ ತಿಂಗಳ ಪತ್ರಿಕೆ ಪ್ರಕಟಿಸುತ್ತಿರುವ 'ಸ್ಫೂರ್ತಿಧಾಮ' ಎರಡು ವರ್ಷಗಳಿಂದ 'ಬೋಧಿವೃಕ್ಷ' ಮತ್ತು 'ಬೋಧಿವರ್ಧನ' ಎಂಬ ಪ್ರತಿಷ್ಠಿತ ಪ್ರಶಸ್ತಿಗಳನ್ನೂ ಕೊಡುತ್ತಿದೆ.

ಎಲ್ಲವನ್ನೂ ಕೇಳಿಸಿಕೊಂಡ ಮೇಲೆ 'ಇದಕ್ಕೆಲ್ಲ ಹಣ ಎಲ್ಲಿಂದ ಬರುತ್ತದೆ' ಎಂಬ ಮೂಲ ಪ್ರಶ್ನೆಗೆ ಬಂದೆ. ಮರಿಸ್ವಾಮಿ ಮುಗುಳು ನಕ್ಕರು. 'ದುರ್ಬಲ ವರ್ಗದಲ್ಲಿ

ದಾನಿಗಳು ಎಲ್ಲಿ ಇದ್ದಾರೆ? ಎಲ್ಲದಕ್ಕೂ ಸರ್ಕಾರದ ಮುಂದೆ ಕೈಯೊಡ್ಡಬೇಕು. ಸರ್ಕಾರದಿಂದ ಹಣ ಕೇಳುವುದು ನಮ್ಮ ಹಕ್ಕು. ಆದರೆ, ನನ್ನ ಅಭಿಮಾನವನ್ನು ಅಡವಿಟ್ಟು ಆ ಕೆಲಸ ಮಾಡುವುದು ನನ್ನಿಂದ ಆಗದು' ಎಂದರು.

ಮರಿಸ್ವಾಮಿ ಮತ್ತು ಅವರ ಗೆಳೆಯರು ಕಂಡುದು ದೊಡ್ಡ ಕನಸು. ಖಂಡಿತ ಈ ಸಂಸ್ಥೆ ಬರೀ ದಲಿತ ವರ್ಗದವರಿಗೆ ಅಲ್ಲ. ಎಲ್ಲ ದುರ್ಬಲ ವರ್ಗದ ಜನರನ್ನು, ಮಹಿಳೆಯರನ್ನು, ಬಡವರನ್ನು ಸಂಘಟಿಸುವ, ಉದ್ಧರಿಸುವ ಕನಸು ಕಂಡಿದ್ದ ಅಂಬೇಡ್ಕರ್ ಈಗ ಸೀಮಿತ ಸಂಕೋಲೆಯಲ್ಲಿ ಸಿಲುಕಿ ಕೊಂಡಿದ್ದಾರೆ. 'ಅಂಬೇಡ್ಕರ್ ಎಂದರೆ ದಲಿತರ ನಾಯಕ' ಎಂದೇ ಈಗ ಜನರ ಭಾವನೆ. ಅದೇ ಕಾರಣಕ್ಕೆ ಒಂದಿಷ್ಟು ಉದಾಸೀನ ಕೂಡ. ಅಂಬೇಡ್ಕರ್ ತಮ್ಮ ಕೊನೆಯ ಸಂದೇಶದಲ್ಲಿ, ತಾವು ಇದುವರೆಗೆ ಎಳೆದು ತಂದ 'ಸಮಾನತೆಯ, ಸ್ವಾತಂತ್ರ್ಯದ, ಬಿಡುಗಡೆಯ ಯಾತ್ರೆಯನ್ನು ಮುಂದಕ್ಕೆ ಕೊಂಡು ಹೋಗಬೇಕು. ಮುಂದಕ್ಕೆ ತೆಗೆದುಕೊಂಡು ಹೋಗಲು ಆಗದೇ ಇದ್ದರೆ ಕೊನೆಯ ಪಕ್ಷ ಹಿಂದಕ್ಕಾದರೂ ಎಳೆಯಬಾರದು' ಎಂದಿದ್ದರು. ಯಾತ್ರೆ ಹೆಚ್ಚೂ ಕಡಿಮೆ ನಿಂತಲ್ಲಿಯೇ ನಿಂತಿದೆ. ಅದರ ಉದ್ದೇಶವೂ ದಾರಿ ತಪ್ಪಿದೆ. ಈ ಯಾತ್ರೆಯನ್ನು ಮತ್ತೆ ಮುಂದಕ್ಕೆ ಒಯ್ಯುವ ಸಣ್ಣ ಪ್ರಯತ್ನ 'ಸ್ಫೂರ್ತಿಧಾಮ'.

ಮೊನ್ನೆಯಷ್ಟೇ ಮತ್ತೆ ಅಂಬೇಡ್ಕರ್ ಜಯಂತಿ ಆಗಿದೆ. ಗ್ರಾಮ ಪಂಚಾಯ್ತಿ ಚುನಾವಣೆ ಮೇಲೆ ಕಣ್ಣು ಇಟ್ಟಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹತ್ತು ಹಲವು ರಾಜಕೀಯ ಘೋಷಣೆ ಮಾಡಿದ್ದಾರೆ. ಊರಿಗೊಂದು ಜಗಜೀವನರಾಂ ಭವನ ಕಟ್ಟುವ ಭರವಸೆ ಕೊಟ್ಟಿದ್ದಾರೆ. ಅದಕ್ಕೆ ಅವರು ಹಣ ಎಲ್ಲಿಂದ ತರುತ್ತಾರೆ ಎಂದು ಗೊತ್ತಿಲ್ಲ. ಪಂಚಾಯ್ತಿ ಚುನಾವಣೆ ಆದ ನಂತರ ಅವರನ್ನು ಹಿಡಿದು ಕೇಳುವವರು ಯಾರು ಎಂಬುದೂ ಗೊತ್ತಿಲ್ಲ. ಆದರೆ, 'ಸ್ಫೂರ್ತಿಧಾಮ'ದಂಥ ಸಂಸ್ಥೆಗಳನ್ನು ನಡೆಸುವವರ ಮನಸ್ಸಿನಲ್ಲಿ ಬೊಕ್ಕಸದ ಹಣದ ಸಮಾನ ಹಂಚಿಕೆ ಆಗುತ್ತಿಲ್ಲ ಎಂಬ ಅಸಮಾಧಾನ ಇದೆ. ಯಡಿಯೂರಪ್ಪ, ಬಜೆಟ್ಟಿನಲ್ಲಿ 'ಸ್ಥಾಪಿತ'ರಿಗೇ ಕೋಟಿಗಟ್ಟಲೆ ಹಣ ಹಂಚಿದ್ದಾರೆ. ಅವರೂ ಸಂಕೋಚವಿಲ್ಲದೆ ತೆಗೆದುಕೊಂಡಿದ್ದಾರೆ. ರಾಜ್ಯದಲ್ಲಿ ಬೌದ್ಧ, ಪಾರ್ಸಿಯಂಥ ಅನೇಕ ಸಣ್ಣ ಪುಟ್ಟ ಸಮುದಾಯಗಳು ಇವೆ. ಅವುಗಳಿಗೆ ಹಣ ಕೇಳಬೇಕು ಎಂದು ಗೊತ್ತಿಲ್ಲ. ಕೇಳಿದರೂ ಅದಕ್ಕೆ ಶಕ್ತಿ ತುಂಬುವ ಜನಸಂಖ್ಯಾ ಬಲ ಇಲ್ಲ. ಸರ್ಕಾರದಿಂದ ಹಣ ಕೇಳಲು ಸಂಕೋಚ ಪಡುವವರೂ ಈ ಸಮಾಜದಲ್ಲಿ ಇದ್ದಾರೆ. ಅವರು ತಣ್ಣಗೆ ತಮ್ಮ ಕೆಲಸವನ್ನು ತಮ್ಮ ಕೈಲಾದ ಮಟ್ಟಿಗೆ ಮಾಡಿಕೊಂಡು ಹೊರಟಿದ್ದಾರೆ. ಅವರ ಸಹಾಯಕ್ಕೂ ಬರುವುದು, ಆ ಮೂಲಕ ಒಟ್ಟು ಸಮಾಜವನ್ನು ಅಂದವಾಗಿ ಕಟ್ಟುವುದು ಸರ್ಕಾರದ ಹೊಣೆಯಲ್ಲವೇ? ಸರ್ಕಾರ ಕೊಡುವ ಹಣ ದೊಡ್ಡದಲ್ಲ, ಅದಕ್ಕೆ ಹೃದಯ ದೊಡ್ಡದು ಇರಬೇಕು. ಆ ಹೃದಯದಲ್ಲಿ ಎಲ್ಲರನ್ನೂ ಒಳಗೊಳ್ಳುವ ದೊಡ್ಡ ಮನಸ್ಸು ಇರಬೇಕು. ಇದನ್ನೆಲ್ಲ ಯಾರಿಗೆ ಹೇಳುವುದು? ಯಾರು ಕೇಳುತ್ತಾರೆ?

■

# ಯಾರು ಹಿತವರು ಈ ಮೂವರೊಳಗೆ...

ಕಾಂಗ್ರೆಸ್ ಪಕ್ಷವೇ ಹಾಗೆ. ಅದು ಬಲು ಜಡ. ಈ ಜಡತ್ವಕ್ಕೆ ಕಾರಣ. ಆ ಪಕ್ಷಕ್ಕೆ ಆಗಿರುವ ವಯಸ್ಸು ಇರಬಹುದು, ಅದಕ್ಕೆ ಇರುವ ರಾಷ್ಟ್ರಮಟ್ಟದ ವ್ಯಾಪ್ತಿ ಇರಬಹುದು ಅಥವಾ/ಮತ್ತು ವಿಪರೀತ ಕೇಂದ್ರೀಕೃತವಾದ ಅಧಿಕಾರ ಇರಬಹುದು. ಕರ್ನಾಟಕದಲ್ಲಿ ಪಕ್ಷ ಸತತವಾಗಿ ಸೋಲು ಅಪ್ಪಿದರೂ ರಾಷ್ಟ್ರೀಯ ಕಾಂಗ್ರೆಸ್ ಮುಖಂಡರು 'ಜಪ್ಪಯ್ಯ' ಅಂದಿರಲಿಲ್ಲ. ಎಲ್ಲದಕ್ಕೂ ಕಾಲ ಕೂಡಿ ಬರಬೇಕು ಎನ್ನುವ ಹಾಗೆ ಈಗ ಕರ್ನಾಟಕ ಕಾಂಗ್ರೆಸ್‌ಗೆ ಕಾಯಕಲ್ಪ ಮಾಡುವ ಕಾಲ ಕೂಡಿ ಬಂದಂತೆ ಕಾಣುತ್ತದೆ. ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆಯಲ್ಲಿ ಪಕ್ಷಕ್ಕೆ ಆದ ಮುಖಭಂಗ ಎ.ಐ.ಸಿ.ಸಿ.ಯ ನಾಯಕರನ್ನು ತಲ್ಲಣಗೊಳಿಸಿದೆ. ಹೀಗೇ ಸುಮ್ಮನಿದ್ದರೆ ಪಕ್ಷ 'ಪ್ಯಾಕ್ ಆಫ್' ಆಗಿಬಿಡುವ ಕಾಲ ದೂರವಿಲ್ಲ ಎಂದೂ ಅನಿಸಿದಂತಿದೆ. ಬಹುಶಃ ಅದಕ್ಕೇ ಕೆ.ಪಿ.ಸಿ.ಸಿ. ಅಧ್ಯಕ್ಷ ಆರ್.ವಿ. ದೇಶಪಾಂಡೆ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಕರೆಸಿ ಎ.ಐ.ಸಿ.ಸಿ. ಮುಖಂಡರು ಕರ್ನಾಟಕ ಕಾಂಗ್ರೆಸ್‌ನ ವಿದ್ಯಮಾನಗಳ ಮಾಹಿತಿ

ಪಡೆದಿದ್ದಾರೆ. ಹಾಗೆ ನೋಡಿದರೆ ಕಳೆದ ಲೋಕಸಭೆ ಚುನಾವಣೆಯಲ್ಲಿ ಆದ ಪರಾಜಯದಿಂದಲೇ ಇಲ್ಲಿ ನಾಯಕತ್ವ ಬದಲಾಗಬೇಕಿತ್ತು. ಎಂದಿನಂತೆ ನಿರ್ಧಾರ ವನ್ನು ಎ.ಐ.ಸಿ.ಸಿ. ಮುಂದಕ್ಕೆ ಹಾಕಿತು. ಬಿಬಿಎಂ.ಪಿ ಚುನಾವಣೆ ಆದ ಕೂಡಲೇ ಕೆಲವರ ತಲೆ ಉರುಳಬೇಕಿತ್ತು.

ಗ್ರಾಮ ಪಂಚಾಯ್ತಿ ಚುನಾವಣೆ ಬಾಗಿಲಲ್ಲೇ ಇರುವ ಕಾರಣ ಈಗ ಏನಾದರೂ ಬದಲಾವಣೆ ಮಾಡಿದರೆ ಅಷ್ಟು ಇಷ್ಟು ಸೀಟುಗಳು ಬರುವುದಕ್ಕೂ ಅಡ್ಡಿಯಾಗಬಹುದು ಎಂದು ಮತ್ತೆ ನಿರ್ಧಾರ ಮುಂದಕ್ಕೆ ಹೋಗಿದೆ. ಜೂನ್-ಜುಲೈ ತಿಂಗಳಲ್ಲಿ ಪಕ್ಷದ ಸಾಂಸ್ಥಿಕ ಚುನಾವಣೆಗಳು ನಡೆಯಲಿದ್ದು ಆಗ ಕರ್ನಾಟಕಕ್ಕೆ ಹೊಸ ಕಾಂಗ್ರೆಸ್ ಅಧ್ಯಕ್ಷರು ಬರಲಿದ್ದಾರೆ. ಅವರು ಯಾರು ಎಂಬುದೇ ಈಗ ಕುತೂಹಲ.

ಈಗಿನ ಮಾಹಿತಿ ಪ್ರಕಾರ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ನಾಲ್ವರ ಹೆಸರುಗಳು ಚಾಲ್ತಿಯಲ್ಲಿ ಇವೆ. ಅವರು, ವಿಧಾನ ಪರಿಷತ್ತಿನ ಹಾಲಿ ಸಭಾಪತಿ ವೀರಣ್ಣ ಮತ್ತಿಕಟ್ಟಿ, ಮಾಜಿ ಸಚಿವರಾದ ಎಚ್.ಕೆ.ಪಾಟೀಲ ಮತ್ತು ಡಾ.ಜಿ.ಪರಮೇಶ್ವರ್ ಹಾಗೂ ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಬಿ.ಕೆ. ಹರಿಪ್ರಸಾದ್, ಹರಿಪ್ರಸಾದ್ ಅವರಿಗೆ ಎ.ಐ.ಸಿ.ಸಿ.ಯಲ್ಲಿಯೇ ಸಾಕಷ್ಟು ಕೆಲಸ ಇರುವುದರಿಂದ ಅವರನ್ನು ಆ ಜವಾಬ್ದಾರಿಯಿಂದ ಬಿಡುಗಡೆ ಮಾಡುವುದು ಕಷ್ಟ. ಉಳಿದವರು ಮೂರು ಜನ, ಅವರಲ್ಲಿ ಯಾರು ಹಿತವರು ಎಂಬುದೇ ಈಗ ಕಾಂಗ್ರೆಸ್ಸಿಗೆ ತಲೆ ಬಿಸಿ ಮಾಡಿರುವ ಸಂಗತಿ. ಮತ್ತಿಕಟ್ಟಿ ಲಿಂಗಾಯತರಾದರೆ, ಪಾಟೀಲರು ರೆಡ್ಡಿ ಸಮುದಾಯದವರು. ಪರಮೇಶ್ವರ್‌ರದು ಪರಿಶಿಷ್ಟ ಜಾತಿ. ರಾಜ್ಯದ ಎರಡು ದೊಡ್ಡ ಸಮುದಾಯಗಳು ಕಾಂಗ್ರೆಸ್ ಕೈ ಬಿಟ್ಟಿರುವುದರಿಂದ ಅವರ ಒಲವು ಗಳಿಸುವುದು ಪಕ್ಷದ ಮುಂದಿರುವ ದೊಡ್ಡ ಸವಾಲು. ಲಿಂಗಾಯತರು ಈಗ ಪೂರ್ತಿಯಾಗಿ ಬಿ.ಜೆ.ಪಿ. ಪರ ನಿಂತಿದ್ದರೆ, ಒಕ್ಕಲಿಗರು ದೇವೇಗೌಡ-ಕುಮಾರಸ್ವಾಮಿ ಜತೆಗಿದ್ದಾರೆ. ಈ ಎರಡೂ ನಿರ್ಣಾಯಕ ವಾದ ದೊಡ್ಡ ಸಮುದಾಯಗಳನ್ನು ಬಿಟ್ಟು ಪಕ್ಷವನ್ನು ಅಧಿಕಾರಕ್ಕೆ ತರುವುದು ಕಷ್ಟ. ದೇವರಾಜ ಅರಸು ಕೂಡ ಲಿಂಗಾಯತರವನ್ನು ಬಿಟ್ಟು, ಒಕ್ಕಲಿಗರನ್ನು ಹಿಡಿದುಕೊಂಡು ಅಧಿಕಾರಕ್ಕೆ ಬಂದಿದ್ದರು. ರಾಮಕೃಷ್ಣ ಹೆಗಡೆ ಬ್ರಾಹ್ಮಣರಾಗಿದ್ದರೂ ಲಿಂಗಾಯತರ ಪ್ರಶ್ನಾತೀತ ನಾಯಕರಾಗಿದ್ದರು. ಅವರು ಮತ್ತು ದೇವೇಗೌಡರು ಕೈ ಜೋಡಿಸಿದಾಗ ಅದು ರಾಜ್ಯದಲ್ಲಿ 'ಡೆಡ್ಲಿ ಕಾಂಬಿನೇಷನ್' ಅನಿಸಿತ್ತು. 1985 ಮತ್ತು 1994ರಲ್ಲಿ ಈ 'ಕಾಂಬಿನೇಷನ್ನೇ' ಜನತಾ, ಜನತಾದಳ ಸರ್ಕಾರ ಅಧಿಕಾರಕ್ಕೆ ಬರಲು ಕಾರಣವಾಗಿತ್ತು. ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಟ್ವೆಂಟಿ-ಟ್ವೆಂಟಿ 'ಮ್ಯಾಚನ್ನು' ಮುಂದುವರಿಸಿ ಜತೆಯಾಗಿ ಚುನಾವಣೆ ಎದುರಿಸಿದ್ದರೂ ಕಾಂಗ್ರೆಸ್‌ಗೆ ಕಷ್ಟವೇ ಇತ್ತು.

ವೀರಣ್ಣ ಮತ್ತಿಕಟ್ಟಿ ಅವರ ಹೆಸರು ಕೆಪಿಸಿಸಿ ಅಧ್ಯಕ್ಷತೆಗೆ ಕೇಳಿ ಬರುತ್ತಿರಲು ಲಿಂಗಾಯತ ಸಮುದಾಯವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಬೇಕು ಎಂಬ ಇರಾದೆಯೇ ಕಾರಣ. ಆದರೆ, ಮತ್ತಿಕಟ್ಟಿಯವರಲ್ಲಿ ಪಕ್ಷವನ್ನು ಮುನ್ನಡೆಸುವ ಆರೋಗ್ಯ ಮತ್ತು ಯೌವನ ಎರಡೂ ಇಲ್ಲ. ತೀರಾ ಈಚಿನವರೆಗೆ ಪಕ್ಷದಲ್ಲಿ ಇದ್ದ ವಿ. ಸೋಮಣ್ಣ ಮತ್ತು ಪ್ರಭಾಕರ ಕೋರೆಯವರಂಥ ಲಿಂಗಾಯತ ಮುಖಂಡರೂ ಪಕ್ಷವನ್ನು ತೊರೆದು

ಬಿಜೆಪಿ ತೆಕ್ಕೆಗೆ ಹೋಗಿದ್ದಾರೆ. ಹೀಗಾಗಿ, ಎಚ್.ಕೆ.ಪಾಟೀಲ ಅಥವಾ ಡಾ.ಜಿ. ಪರಮೇಶ್ವರ್ ಅವರಲ್ಲಿ ಒಬ್ಬರನ್ನು ಅಧ್ಯಕ್ಷ ಹುದ್ದೆಗೆ ಕೂಡಿಸುವ ಲೆಕ್ಕಾಚಾರ ಕಾಣುತ್ತಿದೆ. ಅಂತಿಮವಾಗಿ ಸೋನಿಯಾ ಗಾಂಧಿ ಅವರು ಯಾವ ದಾಳ ಉರುಳಿಸುತ್ತಾರೆ ಎಂಬುದನ್ನು ಊಹಿಸುವುದು ಕಷ್ಟ.

ದೇವೇಗೌಡರ ಜತೆಗಿರುವ ಒಕ್ಕಲಿಗ ಸಮುದಾಯವನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಡಿ.ಕೆ.ಶಿವಕುಮಾರ್ ಅವರಿಗೆ ಕಾರ್ಯಾಧ್ಯಕ್ಷ ಪಟ್ಟ ಕಟ್ಟಿದರೂ ಅದು ಫಲ ನೀಡಲಿಲ್ಲ. 'ಪಕ್ಷದ ಅಧ್ಯಕ್ಷರಾಗಿ ಬ್ರಾಹ್ಮಣರಾದ ದೇಶಪಾಂಡೆ ಅವರನ್ನು ಕೂಡ್ರಿಸಿರುವಾಗ ಒಕ್ಕಲಿಗರು ನನ್ನನ್ನು ಹೇಗೆ ಬೆಂಬಲಿಸಲು ಸಾಧ್ಯ' ಎಂದು ಶಿವಕುಮಾರ್ ಪಕ್ಷದ ಹೈಕಮಾಂಡ್ ಮುಂದೆ ತಮ್ಮ ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ ಎನ್ನಲಾಗಿದೆ. ಈಗ, 'ಪಕ್ಷದಲ್ಲಿ ಎರಡು ಅಧಿಕಾರ ಕೇಂದ್ರಗಳು ಇರುವುದು ಸರಿಯಲ್ಲ, ಅದು ಫಲ ನೀಡುವುದೂ ಇಲ್ಲ' ಎಂದು ಹೈಕಮಾಂಡಿಗೆ ಮನವರಿಕೆಯಾದಂತೆ ಕಾಣುತ್ತದೆ. ಸರಿಯೋ ತಪ್ಪೋ ಏಕಚಕ್ರಾಧಿಪತ್ಯವೇ ಇರಬೇಕು!

ಕೆ.ಪಿ.ಸಿ.ಸಿ. ಅಧ್ಯಕ್ಷರ ಜತೆಗೆ ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಬೈರೇಗೌಡರೂ ಅಧಿಕಾರ ಕಳೆದುಕೊಳ್ಳಬಹುದು ಎಂಬ ವದಂತಿ ಕಾಂಗ್ರೆಸ್ಸಿನಲ್ಲಿ ಕೇಳಿ ಬರುತ್ತಿದೆ. ಕೃಷ್ಣ ಬೈರೇಗೌಡರು ರಾಹುಲ್ ಗಾಂಧಿಯವರಿಗೆ ಅತ್ಯಂತ ನಿಕಟವಾಗಿದ್ದವರು. ಇಂಗ್ಲಿಷ್ ಭಾಷೆ, ವಿದೇಶದ ಓದು, ಯೌವನ ಎಲ್ಲವೂ ಕೃಷ್ಣ ಬೈರೇಗೌಡರ ಪರವಾಗಿ ಇದ್ದುವು. ಆದರೆ, ಬಿಬಿಎಂಪಿ ಚುನಾವಣೆಯಲ್ಲಿ, ಅವರು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಹೀನಾಯವಾಗಿ ಸೋತಿರುವುದು, ಕೇಂದ್ರ ಸಚಿವ ಕೆ.ಎಚ್. ಮುನಿಯಪ್ಪ ಅವರ ಜತೆಗೆ ಸಂಬಂಧ ಹಳಸಿರುವುದು ಕೃಷ್ಣ ಬೈರೇಗೌಡರ ಕುರ್ಚಿಯನ್ನೂ ಅಲ್ಲಾಡಿಸತೊಡಗಿದೆ. ಅವರಿಗೆ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗದ ವಿರೋಧಿ ಎಂಬ ಪಟ್ಟವನ್ನೂ 'ಮೂಲ ಕಾಂಗ್ರೆಸ್ಸಿಗ'ರು ಕಟ್ಟಿದ್ದಾರೆ. ರಾಹುಲ್ ಗಾಂಧಿ ಕರೆತಂದಿದ್ದ ಈ ನೀಲಿ ಕಣ್ಣಿನ ಹುಡುಗನ ಜಾಗಕ್ಕೆ ಇನ್ನೂ ಯಾರ ಹೆಸರೂ ಕೇಳಿ ಬರುತ್ತಿಲ್ಲ.

ಮೂಲ ಕಾಂಗ್ರೆಸ್ಸಿಗರು ಬರೀ ದೇಶಪಾಂಡೆ, ಶಿವಕುಮಾರ್ ಮತ್ತು ಕೃಷ್ಣ ಬೈರೇಗೌಡ ವಿರುದ್ಧ ಮಾತ್ರವಲ್ಲ, ಸಿದ್ದರಾಮಯ್ಯ ಅವರ ವಿರುದ್ಧವೂ ಹಲ್ಲು ಮಸೆಯುತ್ತಿದ್ದಾರೆ. 'ಬಿಬಿಎಂಪಿ ಚುನಾವಣೆಯಲ್ಲಿ 26 ಮಂದಿ ಕುರುಬರಿಗೆ ಟಿಕೆಟ್ ಕೊಟ್ಟರೂ ಗೆದ್ದವರು ಎಂಟು ಮಂದಿ ಮಾತ್ರ. ಅದರಲ್ಲೂ ವಿಜಯನಗರ–ಗೋವಿಂದರಾಜನಗರ ಎರಡೂ ವಿಧಾನಸಭಾ ಕ್ಷೇತ್ರಗಳ 17 ವಾರ್ಡ್‌ಗಳಲ್ಲಿ ಎಂಟು ಮಂದಿ ಕುರುಬರಿಗೆ ಟಿಕೆಟ್ ಕೊಟ್ಟಿದ್ದರೂ ಗೆದ್ದವರು ಇಬ್ಬರು ಮಾತ್ರ' ಎಂಬ ಅಂಕಿ ಅಂಶಗಳು ಹೈಕಮಾಂಡ್ ಕಿವಿಗೆ ತಲುಪಿವೆ. ತಿಳಿದೋ ತಿಳಿಯದೆಯೋ, ಪರಿಸ್ಥಿತಿಯ ಅನಿವಾರ್ಯ ತೆಯಿಂದಲೋ ಇಷ್ಟು ಮಂದಿ ವಲಸಿಗರಿಗೆ ಮಣೆ ಹಾಕಿ ಮೂಲ ಕಾಂಗ್ರೆಸ್ಸಿಗರನ್ನು ಅನಾಥ ಮಾಡಿದ್ದು ತಪ್ಪು ಎಂದು ಹೈಕಮಾಂಡಿಗೂ ಮನವರಿಕೆಯಾ ದಂತಿದೆ. ಆದರೆ, ಈ ಚಕ್ರವ್ಯೂಹದಿಂದ ಹೊರಗೆ ಬರುವುದು ಹೇಗೆ ಎಂದು ತಿಳಿಯುತ್ತಿಲ್ಲ.

ಜನತಾದಳ(ಎಸ್) ಜತೆ ಮೈತ್ರಿ ಮಾಡಿಕೊಂಡರೆ ಮುಂದೆ ಅನುಕೂಲ

ಆಗಬಹುದು ಎಂದು ಅನಿಸಿದರೂ ಅದಕ್ಕೆ ಶಿವಕುಮಾರ್ ಮತ್ತು ಸಿದ್ದರಾಮಯ್ಯ ತೀವ್ರ ವಿರೋಧವಾಗಿದ್ದಾರೆ. ದೇಶಪಾಂಡೆಯವರು ಮುಂದಿನ ಜೂನ್‌ನಲ್ಲಿ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸುವ ಒಲವು ಹೊಂದಿರುವುದರಿಂದ ಅವರು ಮೈತ್ರಿಯ ಪರವಾಗಿ ಇದ್ದಾರೆ. ಆಸ್ಕರ್ ಫರ್ನಾಂಡಿಸ್ ಮತ್ತು ಬಿ.ಕೆ.ಹರಿಪ್ರಸಾದ್ ಅವರೂ ಮೈತ್ರಿಯ ಪರ ಒಲವು ಹೊಂದಿರುವ ಹೈಕಮಾಂಡ್ ಮಟ್ಟದ ನಾಯಕರು. ಆದರೆ, ಅವರು ಕೂಡ ಮತ್ತೆ ರಾಜ್ಯಸಭೆಗೆ ಟಿಕೆಟ್ ಕೇಳಬೇಕಿರುವುದರಿಂದ ಅವರ ಮೇಲೆ 'ಸ್ವಾರ್ಥ'ದ ಆರೋಪ ಬಂದು ಇಬ್ಬರೂ ಸುಮ್ಮನಾಗಿದ್ದಾರೆ. ಜನತಾದಳ(ಎಸ್) ಬೆಂಬಲ ಇಲ್ಲದಿದ್ದರೆ ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಒಂದು ಸೀಟು ಮಾತ್ರ ಸಿಗುತ್ತದೆ. ಎರಡು ಸೀಟುಗಳಲ್ಲಿ ಬಿಜೆಪಿ ಗೆಲ್ಲುತ್ತದೆ. ಇದೇ ಆಸುಪಾಸಿನಲ್ಲಿ ವಿಧಾನಸಭೆಯಿಂದ ವಿಧಾನ ಪರಿಷತ್ತಿನ ನಾಲ್ಕು ಸೀಟುಗಳಿಗೆ ನಡೆಯುವ ಚುನಾವಣೆಯಲ್ಲಿ ಜನತಾದಳ(ಎಸ್)ಕ್ಕೆ ಎರಡು ಸೀಟು ಬಿಟ್ಟು ರಾಜ್ಯಸಭೆ ಚುನಾವಣೆಯಲ್ಲಿ ಅದರ ಬೆಂಬಲ ಕೇಳಿ ಎರಡೂ ಸೀಟುಗಳನ್ನಾದರೂ ಉಳಿಸಿಕೊಳ್ಳಬಹುದು ಎಂಬ ಚಿಂತನೆ ಕಾಂಗ್ರೆಸ್ ವಲಯದಲ್ಲಿ ಇದೆ. ಕಾಂಗ್ರೆಸ್ಸಿಗೆ ಹರಕತ್ತು ಇರುವುದರಿಂದ ಅವರೇ ನಮ್ಮ ಬಳಿ ಬರಲಿ ಎಂದು ದಳದ ಮುಖಂಡರು ಬಿಗುಮಾನದಲ್ಲಿಯೇ ಇದ್ದಾರೆ.

ಕಾಂಗ್ರೆಸ್‌ನಂಥ ರಾಷ್ಟ್ರೀಯ ಪಕ್ಷಕ್ಕೆ ವಿಧಾನಪರಿಷತ್ತು, ರಾಜ್ಯಸಭೆಯ ಚುನಾವಣೆಗಳು ಸಣ್ಣ ಪುಟ್ಟ ಸವಾಲುಗಳು. ಇಂಥ ಸಣ್ಣ ಪುಟ್ಟ ಗೆಲುವುಗಳು ತರುವ ಸಂಭ್ರಮ ತಾತ್ಕಾಲಿಕವಾದುದು, ಬಹುತೇಕ ವ್ಯಕ್ತಿ ಕೇಂದ್ರಿತವಾದುದು. ಏಕೆಂದರೆ ರಾಜ್ಯಸಭೆಗೆ ಆಯ್ಕೆಯಾದವರು ಪಕ್ಷದ ಸಂಘಟನೆಗೆ, ಶಕ್ತಿವರ್ಧನೆಗೆ ಕೊಟ್ಟ ಕಾಣಿಕೆ ಬಹಳ ದೊಡ್ಡದೇನಲ್ಲ. ಕುಸಿದು ಹೋಗಿರುವ ಪಕ್ಷದ ಬುನಾದಿಯನ್ನು ಮತ್ತೆ ಭದ್ರವಾಗಿ ಕಟ್ಟುವುದೇ ದೊಡ್ಡ ಸವಾಲು. ಜೂನ್-ಜುಲೈ ತಿಂಗಳಲ್ಲಿ ಕೆ.ಪಿ.ಸಿ.ಸಿ. ಮಟ್ಟದಲ್ಲಿ ಆಗುವ ಸಮಗ್ರ ಬದಲಾವಣೆಯ ಹಿಂದೆ ಈ ಸವಾಲಿಗೆ ಉತ್ತರ ಕಂಡುಕೊಳ್ಳುವ ಉದ್ದೇಶ ಇದೆ. ಆ ಉದ್ದೇಶದಲ್ಲಿ ಎಷ್ಟರ ಮಟ್ಟಿನ ಯಶಸ್ಸು ಸಿಗುತ್ತದೆ ಎಂಬುದು ಅಧ್ಯಕ್ಷ ಹುದ್ದೆಗೆ ಆಯ್ಕೆಯಾಗುವ ನಾಯಕನ ಮೇಲೆ ನಿಂತಿದೆ. ಚೆಂಡು ಹೈಕಮಾಂಡ್ ಅಂಗಳದಲ್ಲಿಯೇ ಇದೆ.

■

# ಪಂಚಾಯ್ತಿ ಚುನಾವಣೆಯೂ... ಗ್ರಾಮ ಸುಧಾರಣೆಯೂ...

ಇವು ಆತಂಕದ ದಿನಗಳು. ಐದು ವರ್ಷಗಳ ನಂತರ ರಾಜ್ಯದಲ್ಲಿ ಮತ್ತೆ ಗ್ರಾಮ ಪಂಚಾಯ್ತಿ ಚುನಾವಣೆ ನಡೆಯುತ್ತಿದೆ. ಬೇರು ಮಟ್ಟದಲ್ಲಿ ಪ್ರಜಾಪ್ರಭುತ್ವವನ್ನು ತಳವೂರಿಸಲು ನಡೆಯುವ ಅನನ್ಯ ಪ್ರಯತ್ನ ಇದು. ತಮ್ಮ ಊರಿನ ಅಭಿವೃದ್ಧಿಯ ಕನಸುಗಳನ್ನು ತಾವೇ ಕಂಡು ಅದನ್ನು ತಾವೇ ಸಾಕಾರಗೊಳಿಸಲು ಇದಕ್ಕಿಂತ ಅತ್ಯುತ್ತಮವಾದ ವ್ಯವಸ್ಥೆ ಇನ್ನೊಂದು ಇರಲಿಕ್ಕಿಲ್ಲ. ಆದರೆ, ಪಂಚಾಯ್ತಿ ಚುನಾವಣೆ ನಡೆಯುತ್ತಿರುವ ರೀತಿ ನೋಡಿದರೆ ದಿಗಿಲಾಗುತ್ತದೆ. ಕಳವಳವಾಗುತ್ತದೆ. ರಾಜಕೀಯದ ಕೆಟ್ಟ ಗಾಳಿ ಹಳ್ಳಿಗಳನ್ನು ಪ್ರವೇಶಿಸಬಾರದು ಎಂದೇ ಗ್ರಾಮ ಪಂಚಾಯ್ತಿ ಚುನಾವಣೆ ಗಳನ್ನು ಪಕ್ಷರಹಿತವಾಗಿ ನಡೆಸಲು ನಿರ್ಧರಿಸಲಾಯಿತು. ಈ ಕೆಟ್ಟ ಗಾಳಿ ಈಗ ಯಾವ ಹಳ್ಳಿಯನ್ನು ಪ್ರವೇಶಿಸಿಲ್ಲ? ರಾಜಕೀಯವನ್ನು ಬಿಟ್ಟು ಇರುವುದು ಕಷ್ಟ ಸಾಧ್ಯ. ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ರಾಜಕೀಯವನ್ನು ದೂರ ಇಟ್ಟರೂ ತಾಲ್ಲೂಕು ಪಂಚಾಯ್ತಿ ಚುನಾವಣೆ ಬಂದಾಗ ಹಳ್ಳಿಗಳನ್ನು ಪಕ್ಷ ರಾಜಕೀಯ ಪ್ರವೇಶಿಸಿಯೇ ಬಿಡುತ್ತದೆ. ಹಳ್ಳಿಗಳಿಗೆ ರಾಜಕೀಯ

ಪ್ರವೇಶಕ್ಕಿಂತ ದೊಡ್ಡ ದುರಂತ ಎಂದರೆ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಹಣದ ಹೊಳೆಯೇ ಹರಿಯುತ್ತಿರುವುದು.

ಹಿಂದೆಯೂ ಹೀಗೆ ಆಗಿತ್ತೇ ಎಂದು ಸ್ವಲ್ಪ ತಲೆ ತುರಿಸಿಕೊಂಡರೆ ಈ ಪ್ರಮಾಣದಲ್ಲಿ ಹಣದ ಮೇಲಾಟ ನಡೆದುದು ನೆನಪಿಗೆ ಬರುವುದಿಲ್ಲ. ಕೇವಲ ಐದು ವರ್ಷಗಳಲ್ಲಿ ಇಷ್ಟೆಲ್ಲ ಬದಲಾವಣೆ ಹೇಗೆ ಆಯಿತು? ರಾಜ್ಯದಲ್ಲಿ ನಡೆದ 2008ರ ವಿಧಾನಸಭೆ ಚುನಾವಣೆ ಒಟ್ಟು ಚುನಾವಣೆ ಪ್ರಕ್ರಿಯೆಯ ದಿಕ್ಕನ್ನೇ ಬದಲಿಸಿ ಬಿಟ್ಟಿದೆ. ಹಣವಿದ್ದವರು, ಹಣಕ್ಕಾಗಿ, ಹಣದಿಂದ ಚುನಾವಣೆ ಎದುರಿಸುವುದು ಈಗಿನ ಪ್ರಜಾಪ್ರಭುತ್ವದ ಹೊಸ ವ್ಯಾಖ್ಯಾನ ಎನ್ನುವಂತೆ ಆಗಿದೆ. ಮಾನವಂತರು ಈಗ ಚುನಾವಣೆ ಎದುರಿಸುವುದು ಕಷ್ಟ. ಎದುರಿಸಿ ಗೆಲ್ಲುವುದು ಇನ್ನೂ ಕಷ್ಟ. ಎಲ್ಲಿಯೋ ಕೆಲವು ಅಪವಾದ ಇದ್ದಾವು. 2008ರ ವಿಧಾನಸಭೆ ಚುನಾವಣೆ ಫಲಿತಾಂಶ ಬಂದು ದಣಿವಾರಿಸಿಕೊಳ್ಳುವುದಕ್ಕಿಂತ ಮುಂಚೆಯೇ 2009ರ ಲೋಕಸಭೆ ಚುನಾವಣೆಗಳೂ ಬಂದುವು. ಅಲ್ಲಿಯೂ ಇದೇ ಪುನರಾವರ್ತನೆ ಆಯಿತು. ಈಗ ಗ್ರಾಮ ಪಂಚಾಯ್ತಿ ಚುನಾವಣೆಗಳು ಕೂಡ 'ಬಂಡವಾಳ ಹೂಡಿಕೆಗೆ ಒಳ್ಳೆಯ ಅವಕಾಶ' ಎಂಬಂತೆ ಬಿಂಬಿತವಾಗಿವೆ. ಹಣ ಬಿತ್ತಿ ಹಣ ತೆಗೆಯಲು ಈಗ ಚುನಾವಣೆಗಿಂತ ಒಳ್ಳೆಯ ದಾರಿ ಯಾವುದಿದೆ?

ಪಂಚಾಯ್ತಿ ರಾಜ್ ವ್ಯವಸ್ಥೆಯ ಕನಸು ಕಂಡವರು ಇದು ಹಳೆಯ ಜಮೀನ್ದಾರಿ ಪದ್ಧತಿಗೆ, ಗೌಡರ, ಕುಲಕರ್ಣಿಗಳ, ಪಟೇಲರ 'ರಾಜ್ಯಭಾರ'ಕ್ಕೆ ಪರ್ಯಾಯ ವ್ಯವಸ್ಥೆ ಎಂದುಕೊಂಡಿದ್ದರು. ಯಾರು ಬೇಕಾದರೂ ಆಯ್ಕೆಯಾಗಿ ಪಂಚಾಯ್ತಿ ಕಟ್ಟೆಯಲ್ಲಿ ಕುಳಿತುಕೊಳ್ಳಬಹುದಿತ್ತು. ಚುನಾವಣೆಯಲ್ಲಿ ಹಣದ ವಹಿವಾಟು ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿದ್ದಂತೆ ಆ ಕನಸು ಕಮರುತ್ತಿದೆ. ಈಗ ಪಂಚಾಯ್ತಿ ಕಟ್ಟೆಯಲ್ಲಿ ಯಾರು ಬೇಕಾದರೂ ಕುಳಿತುಕೊಳ್ಳಲು ಸಾಧ್ಯವಿಲ್ಲ. ಹಣವಿದ್ದವರು ಮಾತ್ರ ಕುಳಿತುಕೊಳ್ಳಬಹುದು ಎಂದಾದರೆ ಮತ್ತೆ ಜಮೀನ್ದಾರಿ ಪದ್ಧತಿ ಹಿಂಬಾಗಿಲಿನಿಂದ ಪ್ರವೇಶ ಮಾಡಿದಂತೆಯೇ ಅಲ್ಲವೇ?

ಇದರ ಹೊಣೆ ಯಾರು ಹೊರಬೇಕು? ರಾಜ್ಯ ಸರ್ಕಾರವೇ ಮೊದಲ ಆರೋಪಿ ಎನಿಸುತ್ತದೆ. ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಫಲಿತಾಂಶ ಹೊರಗೆ ಬರುತ್ತಿದ್ದಂತೆಯೇ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ಅವರ ಪಕ್ಷದ ಮುಖಂಡರು ರಾಜ್ಯದಾದ್ಯಂತ 'ವಿಜಯ ಸಂಕಲ್ಪ ಯಾತ್ರೆ' ಕೈಗೊಂಡರು. ಅದು ಅತ್ಯಂತ ಚಾಣಾಕ್ಷ ರಾಜಕೀಯ ನಡೆ ಆಗಿರಬಹುದು. ಆದರೆ, ಪಂಚಾಯ್ತಿ ಮಟ್ಟದ ಚುನಾವಣೆಯಲ್ಲಿ ಯಾವುದೇ ಪಕ್ಷ ತಾನು ವಿಜಯಿ ಎಂದು ಹೇಳಿಕೊಳ್ಳಲು ಅವಕಾಶವಿಲ್ಲ. ಏಕೆಂದರೆ ಇದು ಪಕ್ಷರಹಿತ ಚುನಾವಣೆ. ಪಕ್ಷರಹಿತ ಚುನಾವಣೆಗೆ 'ವಿಜಯ ಸಂಕಲ್ಪ ಯಾತ್ರೆ' ಹೊರಡುವುದು ಎಂದರೆ ಏನರ್ಥ? ಯಡಿಯೂರಪ್ಪ ಯಾತ್ರೆ ಹೊರಟರು ಎಂದು ಅವರ ಹಿಂದೆ ದೇಶಪಾಂಡೆ, ಅವರ ಹಿಂದೆ ಕುಮಾರಸ್ವಾಮಿ ಅವರೂ ಬಿಸಿಲಿನಲ್ಲಿ ಬೆವರು ಹರಿಸಿದರು. 'ಇದು ಪಕ್ಷರಹಿತ ಚುನಾವಣೆ. ನಾವು ಯಾರೂ ಪ್ರಚಾರ ಮಾಡುವುದು ಬೇಡ. ಜನರು ತಮ್ಮ ಗ್ರಾಮಗಳ ಉದ್ಧಾರಕ್ಕಾಗಿ ತಮಗೆ ಬೇಕಾದವರನ್ನು ಆರಿಸಿಕೊಳ್ಳಲಿ' ಎಂದು ಒಬ್ಬರೂ ಹೇಳಲಿಲ್ಲ.

ಚುನಾವಣೆ ಪ್ರಚಾರವೇ ಒಂದು ಪ್ರತಿಷ್ಠೆಯಾದಾಗ ಅದಕ್ಕೆ ಪೂರಕವಾದ ಹಣದ ಪೂರೈಕೆ ತನ್ನಿಂದ ತಾನೇ ಆಗುತ್ತದೆ. ಸರ್ಕಾರ ನಡೆಸುವ ಪಕ್ಷದಲ್ಲಿ ಇರುವಷ್ಟು ಬಂಡವಾಳ, ಸಂಪನ್ಮೂಲ ವಿರೋಧ ಪಕ್ಷಗಳಲ್ಲಿ ಇಲ್ಲ. ಅದರ ಅರ್ಥ ಸ್ಪಷ್ಟ.

ಈಗ ಇದೆಲ್ಲ ತಪ್ಪು ಎಂದು ಹೇಳುವವರು ಇಲ್ಲದಾಗಿದೆ. ಯಾರಾದರೂ 'ಇದು ತಪ್ಪು' ಎಂದು ಹೇಳಿದರೂ ಅವರ ಮಾತು ಕೇಳುವವರು ಯಾರೂ ಇಲ್ಲ. 'ಅಧಿಕಾರವನ್ನು ಹಿಡಿಯಬೇಕು, ಎಷ್ಟು ಖರ್ಚಾದರೂ ಮಾಡಿ ಹಿಡಿಯಬೇಕು' ಎಂಬ ಪಾಠ ಮೇಲಿನಿಂದಲೇ ಸಿಕ್ಕರೆ ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ ಎಂದಂತೆಯೇ ಆಗುತ್ತದೆ. 'ಗ್ರಾಮ ಪಂಚಾಯ್ತಿಗಳಲ್ಲಿ ನಾಲ್ಕೈದು ಲಕ್ಷ ಹಣ ಇರುತ್ತದೆ. ಅದಕ್ಕೆಲ್ಲ ಏಕಿಷ್ಟು ಬಡಿದಾಟ' ಎಂದುಕೊಂಡರೆ ಅದಕ್ಕಿಂತ ಮೂರ್ಖತನ ಮತ್ತೊಂದಿಲ್ಲ. ಕೇಂದ್ರ ಸರ್ಕಾರದ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಒಂದು ಗ್ರಾಮ ಪಂಚಾಯ್ತಿಗೆ 80ರಿಂದ 90 ಲಕ್ಷ ರೂಪಾಯಿ ಅನುದಾನ ಬರುತ್ತದೆ. ಕಳೆದ ವರ್ಷ ಈ ಯೋಜನೆಯಡಿ ಕರ್ನಾಟಕಕ್ಕೆ 2,400 ಕೋಟಿ ರೂಪಾಯಿ ಅನುದಾನ ಬಂದಿತ್ತು. ಇದೆಲ್ಲ ಗ್ರಾಮ ಪಂಚಾಯ್ತಿಗಳಿಗೇ ಸಿಗುವ ಅನುದಾನ. ಈ ವರ್ಷ ಈ ಮೊತ್ತ 4,500 ಕೋಟಿ ರೂಪಾಯಿ ಆಗುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಜಗದೀಶ ಶೆಟ್ಟರ್ ಅವರೇ ಹೇಳಿದ್ದಾರೆ. ಇಂದಿರಾ ಆವಾಸ್ ಮುಂತಾದ ಯೋಜನೆಗಳೂ ಸೇರಿ ಒಂದು ವರ್ಷಕ್ಕೆ ಒಂದು ಪಂಚಾಯ್ತಿಗೆ ಎರಡರಿಂದ ಎರಡೂವರೆ ಕೋಟಿ ರೂಪಾಯಿ ಅನುದಾನ ಸಿಗುತ್ತದೆ. ಗೊತ್ತಾಯಿತಲ್ಲ? ಹಾಸನ ಜಿಲ್ಲೆಯ ಪಂಚಾಯ್ತಿ ಚುನಾವಣೆಯಲ್ಲಿ ಒಟ್ಟು ಅಭ್ಯರ್ಥಿಗಳ ಪೈಕಿ ಶೇ 60ರಷ್ಟು ಮಂದಿ ಗುತ್ತಿಗೆದಾರರೇ ಏಕೆ ಇದ್ದಾರೆ ಎಂದು!

ಇದೆಲ್ಲ ಒಂದು ಪ್ರಕ್ರಿಯೆ. ಜನರಿಗೂ ಹಣದಿಂದ, ಹಣಕ್ಕಾಗಿ ಮತ್ತು ಹಣವಿದ್ದವರು ನಡೆಸುವ ಚುನಾವಣೆ ಸಾಕು ಎನಿಸಬಹುದು. ಅಥವಾ ಪಂಚಾಯ್ತಿ ಮಟ್ಟದ ಗ್ರಾಮಸಭೆಗಳ ಮೂಲಕ ಇಂಥವರ ಅಟ್ಟಹಾಸವನ್ನು ಮೊಳಕೆಯಲ್ಲಿಯೇ ಚಿವುಟಬಹುದು. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಶಕ್ತಿ ತುಂಬುವ ಸಂವಿಧಾನದ 73ನೇ ತಿದ್ದುಪಡಿ ಮಂಡಿಸುವಾಗ ಆಗಿನ ಪ್ರಧಾನಿ ರಾಜೀವ ಗಾಂಧಿಯವರಿಗೆ ಮುಂದೆ ಹೀಗೆಲ್ಲ ಆಗಬಹುದು ಎಂದು ಅನಿಸಿತ್ತೋ ಏನೋ? ಬಹುಶಃ ಅದಕ್ಕೇ ಅವರು ಕಾನೂನಿನಲ್ಲಿಯೇ ಗ್ರಾಮಸಭೆಗಳ ಮಹತ್ವವನ್ನು ಸಾರಿದರು. ಈಗ ಗ್ರಾಮಸಭೆ ಗಳ ದೊಡ್ಡ ಶತ್ರು ವಿಧಾನಸಭೆ ಎಂದರೆ ಯಾರಿಗಾದರೂ ಅಚ್ಚರಿಯಾಗಬಹುದು. ವಿಧಾನಸಭೆಯ ಸದಸ್ಯರಿಗೆ ಗ್ರಾಮಸಭೆಗಳು ಸಶಕ್ತವಾಗಿ ಕಾರ್ಯ ನಿರ್ವಹಿಸುವುದು ಬೇಡವಾಗಿದೆ. ತಳಮಟ್ಟದಲ್ಲಿ ಕೂಡ ತಮ್ಮದೇ ಮಾತು ನಡೆಯಬೇಕು. ತಮ್ಮ ಚೇಲಾಗಳ ನಿರ್ಣಯಗಳೇ ಅಂಗೀಕಾರ ವಾಗಬೇಕು ಎಂಬುದೇ ಅವರ ಹಟ.

ತಮ್ಮ ಊರಿಗೆ ಏನು ಬೇಕು ಎಂದು ನಿರ್ಧರಿಸುವುದು ಹಳ್ಳಿಗಳ ಜನರಿಗೆ ಕಷ್ಟವೇನೂ ಅಲ್ಲ. ಇರಲು ಒಂದು ಮನೆ, ಕುಡಿಯಲು ನೀರು, ಮಕ್ಕಳಿಗೆ ಶಾಲೆ, ಆರೋಗ್ಯ ಪರೀಕ್ಷೆಗೆ ಆಸ್ಪತ್ರೆ, ಸುಗಮ ಸಂಚಾರಕ್ಕೆ ರಸ್ತೆ... ಇಷ್ಟಿದ್ದರೆ ಅವರಿಗೆ ಸಾಕು. ನಿರಂತರ ವಿದ್ಯುತ್, ಒಳಚರಂಡಿ, ಉದ್ಯಾನವೆಲ್ಲ ಅವರಿಗೆ ದೊಡ್ಡ ಕನಸುಗಳು. ಆದರೆ,

ಅದು ಅಸಾಧ್ಯ ಎಂದಲ್ಲ, ಗದಗ ಜಿಲ್ಲೆಯ ಹುಲಕೋಟಿ ಪಂಚಾಯ್ತಿ ಮಾಡಿರುವ ಸಾಧನೆಯೇ ಅದಕ್ಕೆ ದೊಡ್ಡ ಉದಾಹರಣೆ. ಉದ್ಯೋಗ ಖಾತರಿ ಯೋಜನೆಯಡಿ ಬರುವ ದುಡ್ಡನ್ನು ಸಮರ್ಪಕವಾಗಿ ಬಳಸಿಕೊಂಡರೆ ಆಯಾ ಗ್ರಾಮಗಳನ್ನು ಸ್ವಯಂಸಂಪೂರ್ಣವಾಗಿಯೇ ಕಟ್ಟಬಹುದು. ವರ್ಷದಲ್ಲಿ ಎರಡು ಸಾರಿ ಕಡ್ಡಾಯವಾಗಿ ಗ್ರಾಮಸಭೆಗಳನ್ನು ನಡೆಸಿ ಅಲ್ಲಿ ತಮ್ಮ ಊರಿಗೆ ಏನಾಗಬೇಕು ಎಂದು ತೆಗೆದುಕೊಳ್ಳುವ ನಿರ್ಣಯಗಳನ್ನು ವಿಡಿಯೊ ಚಿತ್ರೀಕರಣ ಮಾಡುವ ವ್ಯವಸ್ಥೆ ಯಾದರೆ, ಗ್ರಾಮ ಮಟ್ಟದಲ್ಲಿ ಖರ್ಚಾಗುವ ಹಣದ ವಿವರಗಳನ್ನು ಕನಿಷ್ಠ ಪಕ್ಷ ತಾಲ್ಲೂಕು ಮಟ್ಟದಲ್ಲಿ ವೆಬ್‌ಸೈಟ್‌ಗಳಲ್ಲಿ ಹಾಕುವ ವ್ಯವಸ್ಥೆಯಾದರೆ ಅದಕ್ಕಿಂತ ದೊಡ್ಡ ನಿಯಂತ್ರಕ ವ್ಯವಸ್ಥೆ ಮತ್ತೊಂದು ಇರಲಾರದು. ಗ್ರಾಮಸಭೆಗಳಲ್ಲಿ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಡುವುದು ಇನ್ನೊಂದು ಪರೋಕ್ಷ ನಿಯಂತ್ರಕ ವ್ಯವಸ್ಥೆ.

ಇದನ್ನೆಲ್ಲ ಮಾಡಲು ಸರ್ಕಾರಕ್ಕೆ ಇಚ್ಛಾಶಕ್ತಿ ಇರಬೇಕು. ಗ್ರಾಮೀಣಾಭಿವೃದ್ಧಿ ಸಚಿವ ಜಗದೀಶ್ ಶೆಟ್ಟರ್ ಅವರಿಗೂ ಈ ಎಲ್ಲ ಆತಂಕಗಳು ಇದ್ದಂತಿವೆ. ಬಹುಶಃ ಅದಕ್ಕಾಗಿಯೇ ಪಂಚಾಯ್ತಿ ರಾಜ್ ವ್ಯವಸ್ಥೆ ಮೇಲೆ ಓಂಬುಡ್ಸಮನ್ ನೇಮಕದ ಮಾತು ಅವರು ಆಡಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಪ್ರಕ್ರಿಯೆಯನ್ನೂ ಆರಂಭಿಸಿ ದ್ದಾರೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಥಾರಿಟಿ ಎನಿಸಿರುವ ಮಾಜಿ ಶಾಸಕ ಡಿ.ಆರ್. ಪಾಟೀಲರಂಥವರನ್ನು ಕರೆಸಿ ಮುಂದೆ ಏನು ಮಾಡಬೇಕು ಎಂದು ಚರ್ಚೆ ಮಾಡಿದ್ದಾರೆ. ಅದು ಒಳ್ಳೆಯ ಬೆಳವಣಿಗೆ. ಶೆಟ್ಟರ್ ಅವರಿಗೆ ಒಳ್ಳೆಯ ಖಾತೆ ಸಿಕ್ಕಿದೆ. ಮುಖ್ಯಮಂತ್ರಿ ಆಗುವ ಅವರ ಕನಸಿಗಿಂತ ಗ್ರಾಮ ಸ್ವರಾಜ್ ಕಲ್ಪನೆಯ ಯಶಸ್ವಿ ಅನುಷ್ಠಾನ ದೊಡ್ಡ ಕನಸು. ನಮ್ಮ ರಾಜ್ಯದ ಎಲ್ಲ ಗ್ರಾಮಗಳು ಸ್ವಯಂ ಪರಿಪೂರ್ಣ ಆದರೆ, ಸರ್ಕಾರದ ಮೇಲಿನ ದೊಡ್ಡ ಹೊರೆ ಕಡಿಮೆ ಆಗುತ್ತದೆ. ಹಳ್ಳಿಗರ ಜೀವನದ ಮಟ್ಟ ಎತ್ತರಗೊಳ್ಳುತ್ತದೆ. ಇದಕ್ಕಿಂತ, ನನಸಾಗಬೇಕಾದ ದೊಡ್ಡ ಕನಸು ಇನ್ನೇನು ಇದ್ದೀತು?

ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ದೇಶದಲ್ಲಿಯೇ ಮೊದಲ ಸಲ ಜಾರಿಗೆ ತಂದು ಹೆಸರು ಮಾಡಿದ ಕರ್ನಾಟಕ, ಅದರಲ್ಲಿ ಯಶಸ್ಸು ಪಡೆದ ರಾಜ್ಯವೂ ಹೌದು. 'ಪಂಚಾಯತ್ ಸಬಲೀಕರಣ ಮತ್ತು ಹೊಣೆಗಾರಿಕೆ ಪ್ರೋತ್ಸಾಹ ಯೋಜನೆ'ಯಡಿ ಮೊನ್ನೆ ರಾಜ್ಯ ಸರ್ಕಾರಕ್ಕೆ 2.5 ಕೋಟಿ ರೂಪಾಯಿ ಬಹುಮಾನವನ್ನು ಪ್ರಧಾನಿ ಕೊಟ್ಟಿದ್ದಾರೆ. ಅದಕ್ಕಿಂತ, ನಿಜವಾದ ಅರ್ಥದಲ್ಲಿ 'ಸಬಲೀಕರಣಗೊಂಡ' ಜನರು ಕೊಡುವ ಬಹುಮಾನ ದೊಡ್ಡದು. ಇದುವರೆಗೆ ಗ್ರಾಮೀಣಾಭಿವೃದ್ಧಿ ಸಚಿವರಾಗಿ ಕೆಲಸ ಮಾಡಿದವರು ಎಷ್ಟೋ ಜನರು. ಜನರ ಮನಸ್ಸಿನಲ್ಲಿ ಉಳಿದವರು ಅಬ್ದುಲ್ ನಜೀರ್‌ಸಾಬ್ ಮಾತ್ರ. ಇದು ಶೆಟ್ಟರ್ ಮುಂದಿರುವ ಸವಾಲು.

■

# ಜನಪ್ರತಿನಿಧಿಗಳ ಗದ್ದಲ ಮತ್ತು ಮತದಾರನ ಮೌನ

ನನಗೆ ಆಸೆಯಿತ್ತು ಒಮ್ಮೆ ಸಂಸತ್ ಅಧಿವೇಶನ ನೋಡಿ ಬರಬೇಕು ಎಂದು. ಕೆಲವು ತಿಂಗಳ ಹಿಂದೆ ನನ್ನ ಸಂಪಾದಕರನ್ನು ಕೇಳಿದೆ, 'ಹೋಗಿ ಬರಲೇ' ಎಂದು. 'ಹೋಗಿ, ಆದರೆ ಬಜೆಟ್ ದಿನ ನೀವು ಅಲ್ಲಿ ಇರುವುದು ಸೂಕ್ತ. ಉಳಿದ ಯಾವ ದಿನ ಕಲಾಪ ನಡೆಯುತ್ತದೆ ಎಂದು ಹೇಳುವುದು ಕಷ್ಟ. ಈಗ ಸಂಸತ್ ನಡೆಯುತ್ತಿರುವ ರೀತಿ ನೋಡಿದರೆ!' ಎಂದರು. ಹಾಲಿ ಲೋಕಸಭೆಯ ಅಧಿವೇಶನ ನೋಡಿದರೆ ಅವರ ಮಾತು ಸಂಪೂರ್ಣ ನಿಜವಾಗಿದೆ. ಯಾರಿಗೂ ಗ್ಯಾರಂಟಿಯಿಲ್ಲ, ಇಂದು ಸಂಸತ್ ಅಧಿವೇಶನ ಪೂರ್ಣ ಕಾಲದವರೆಗೆ ನಡೆಯುತ್ತದೆಯೇ ಇಲ್ಲವೇ ಎಂದು.

ಮೊನ್ನೆ ಹಿರಿಯ ಸದಸ್ಯರಾದ ಅನಂತಕುಮಾರ್ ಮತ್ತು ಲಾಲು ಪ್ರಸಾದ್ ಮಧ್ಯೆ ನಡೆದುದು ಸಣ್ಣ ವಾಗ್ವಾದ. ಅಷ್ಟಕ್ಕೇ ಸದನ ಮುಂದೆ ಹೋಗಬೇಕಿರಲಿಲ್ಲ. ಅನಂತಕುಮಾರ್ ಅವರ ಅಭಿಪ್ರಾಯ ಒಪ್ಪುವುದು ಬಿಡುವುದು ಬೇರೆ ವಿಚಾರ. ಆದರೆ, ಸದನದಲ್ಲಿ ತಮಗೆ ಅನಿಸಿದ್ದನ್ನು ಹೇಳಲು ಅವರಿಗೆ ಹಕ್ಕಿದೆ. ಅದಕ್ಕೆ ಲಾಲು ಅಷ್ಟು ಉದ್ವಿಗ್ನಗೊಳ್ಳಬೇಕಾದ ಅಗತ್ಯವಿರಲಿಲ್ಲ. ಅನಂತ್ ಮಾತನಾಡಿದ ಮೇಲೆ ತಮ್ಮ ಅಭಿಪ್ರಾಯವನ್ನು

ಸಾಕಷ್ಟು ಸಮರ್ಥವಾಗಿಯೇ ಮಂಡಿಸಬಹುದಿತ್ತು. ತಮ್ಮ ಮಾತಿಗೆ ಲಾಲು ಏನೋ ಕೊಂಕು ನುಡಿದರೆ ಅನಂತ್ ಕೂಡ ಅಷ್ಟು ಉಗ್ರರಾಗಿ 'ನೀವು ರಾಷ್ಟ್ರ ದ್ರೋಹಿ' ಎನ್ನಬೇಕಿರಲಿಲ್ಲ.

ಸಂಸತ್ತು ಮಾತಿನ ಮನೆ. ಆದರೆ, ಈಗ ಅದು ಕುಸ್ತಿಯಾಟದ ಗರಡಿ ಮನೆ ಎನ್ನುವಂತೆ ಆಗಿದೆ. ಯಾರಿಗೂ ಸಹನೆಯಿಲ್ಲ. ಇನ್ನೊಬ್ಬರ ಮಾತನ್ನು ತಾಳ್ಮೆಯಿಂದ ಕೇಳಬೇಕು ಎಂಬ ಕನಿಷ್ಠ ಸೌಜನ್ಯವೂ ಇಲ್ಲ. ಒಂದು ಮಾತು ಹೆಚ್ಚೊ ಕಡಿಮೆಯಾದರೂ ಸಭಾಧ್ಯಕ್ಷರ ಪೀಠದ ಮುಂಭಾಗಕ್ಕೇ ಸದಸ್ಯರು ಸೀದಾ ನುಗ್ಗಿ ಬಂದು ಬಿಡುತ್ತಾರೆ. ಅಲ್ಲಿಗೆ ಸದನದ 'ಆರ್ಡರ್' ಹೊರಟು ಹೋಗುತ್ತದೆ. ನಂತರ ಕಲಾಪವನ್ನು ಮುಂದುವರಿಸಲು ಸಾಧ್ಯವಾಗುವುದಿಲ್ಲ. ಸಭಾಧ್ಯಕ್ಷರು ಕಲಾಪವನ್ನು ಮರುದಿನಕ್ಕೆ ಮುಂದೂಡಿ ಎದ್ದು ಹೊರಟು ಹೋಗುತ್ತಾರೆ.

ಈ ಸಾರಿಯ ಅಧಿವೇಶನದಲ್ಲಿ ಬರೀ ಗುಲ್ಲೇ ಗುಲ್ಲು. ತರೂರ್ ಪ್ರಕರಣ, ಐ.ಪಿ.ಎಲ್ ವಿವಾದ, ಟೆಲಿಕಾಂ ಹಗರಣ ಒಂದಾದ ನಂತರ ಒಂದು ವಿವಾದ ಬಂದು ಕಲಾಪ ನೆಟ್ಟಗೆ ನಡೆದ ದಿನವೇ ಇಲ್ಲ. ಲೋಕಸಭೆಯ ಸಭಾಧ್ಯಕ್ಷರ ಪೀಠದಲ್ಲಿ ಮೊದಲ ಬಾರಿಗೆ ಮಹಿಳೆಯೊಬ್ಬರು ಕುಳಿತುಕೊಂಡಿದ್ದಾರೆ. ನಮ್ಮ ಸಂಸದರು ಹೆಣ್ಣು ಮಕ್ಕಳಿಗಾದರೂ ಒಂದಿಷ್ಟು ಹೆದರಿ ಮರ್ಯಾದೆಯಿಂದ ನಡೆದು ಕೊಂಡಾರು ಎಂಬ ನಿರೀಕ್ಷೆಯೂ ಹುಸಿಯಾಗಿದೆ. 'ನಾನು ಮಹಿಳೆಯಾದರೇನು, ಹೇಗೆ ಕಲಾಪ ನಡೆಸುತ್ತೇನೆ ನೀವೇ ನೋಡುವಿರಂತೆ, ನನಗೂ 25 ವರ್ಷಗಳ ಸಂಸದೀಯ ಅನುಭವವಿದೆ' ಎಂದಿದ್ದ ಮೀರಾ ಕುಮಾರ್ ಒಬ್ಬ ಸಫಲ ಸ್ಪೀಕರ್ ಎಂದು ಹೇಳುವ ಸ್ಥಿತಿ ಈಗ ಇಲ್ಲ. ಸೋಮನಾಥ ಚಟರ್ಜಿಯಂಥ ಅನುಭವಿಯೇ ಹಣ್ಣುಗಾಯಿ ನೀರುಗಾಯಿ ಆಗಿ ಹೋದರು. ಮೀರಾ ಅವರಂಥ ಕೀರಲು ದನಿಯ ಮಹಿಳೆಯ ಪಾಡು ಯಾರಿಗೂ ಬೇಡ.

ಸಂಸತ್ತಿನಲ್ಲಿ ಕಲಾಪಕ್ಕೆ ಅಡ್ಡಿಯೆಂಬುದು ನಿತ್ಯದ ಕರ್ಮ. ಆದರೆ, ಯಾವ ಕಾರಣಕ್ಕೆ, ಯಾವ ರೀತಿಯಲ್ಲಿ ಸದನ ಮುಂದಕ್ಕೆ ಹೋಗುತ್ತದೆ ಎಂಬುದು ಒಂದೇ ಕುತೂಹಲದ ಸಂಗತಿ. ಪ್ರಜಾಸತ್ತೆ ಎಂದ ಮೇಲೆ ಬರೀ ಘನಗಂಭೀರ ಚರ್ಚೆ ಮಾತ್ರ ನಡೆಯಬೇಕು ಎಂದು ಬಯಸುವುದು ತಪ್ಪು. ನಮ್ಮ ಸಂಸತ್ತು ನಮ್ಮ ಸಮಾಜದ ಪ್ರತೀಕ. ಹೊರಗೆ ಇರುವ ಜನರ ಪ್ರತಿನಿಧಿಗಳೇ ಒಳಗೂ ಇರುತ್ತಾರೆ. ದಿನಕಳೆದಂತೆ ಸಂಸತ್ತಿನ ಪ್ರಾತಿನಿಧಿಕ ಸ್ವರೂಪ ಬದಲಾಗುತ್ತ ಹೋಗುವುದು ಸಹಜ. ಅದು ಕಲಾಪದಲ್ಲೂ ವ್ಯಕ್ತವಾಗುತ್ತದೆ. ಆಗೀಗ ಕಲಾಪದಲ್ಲಿ ಗದ್ದಲ, ಪ್ರತಿಭಟನೆ, ಧರಣಿ, ಸಭಾತ್ಯಾಗ ಇರಬೇಕು. ಆದರೆ, ಸಂಸತ್ತಿನ ಎಲ್ಲ ಕಲಾಪಕ್ಕೂ ಗದ್ದಲ, ಅಡೆತಡೆ ಅನ್ವಯವಾಗುತ್ತಿರುವುದು ಚಿಂತೆಗೆ ಕಾರಣ. ಪ್ರಶ್ನೋತ್ತರ ಪ್ರತಿದಿನದ ಕಲಾಪದ ಮಹತ್ವದ ಅವಧಿ. ಆದರೆ, ಕಳೆದ ಅಧಿವೇಶನದಲ್ಲಿ ಪ್ರಶ್ನೆ ಕೇಳಿದ 28 ಸದಸ್ಯರು ಗೈರು ಹಾಜರಾಗಿದ್ದರು. ಪ್ರಶ್ನೋತ್ತರದ ಅವಧಿಯಲ್ಲಿ ಪ್ರಧಾನಿಯೂ ಸೇರಿದಂತೆ ಎಲ್ಲ ಸಚಿವರನ್ನು 'ಪಾಟಿ ಸವಾಲಿ'ಗೆ ಒಳಪಡಿಸಲು ಸದಸ್ಯರಿಗೆ ಅವಕಾಶ ಇರುತ್ತದೆ. ಅಂಥ ಒಂದು ಅವಕಾಶ ಸದಸ್ಯರಿಗೇ ಉಪಯುಕ್ತ ಅನಿಸಲಿಲ್ಲ. ಲೋಕಸಭೆ, ರಾಜ್ಯಸಭೆಗಳು, ವಿಧಾನಸಭೆ,

ವಿಧಾನಪರಿಷತ್ತುಗಳು ಮೂಲತಃ ಶಾಸನ ಸಭೆಗಳು. ಇಲ್ಲಿ ಶಾಸನ ರಚನೆಯೇ ಮುಖ್ಯ ಕೆಲಸ. ಆದರೆ, ವಿಧಾನಸಭೆಯೇ ಇರಲಿ, ಲೋಕಸಭೆಯೇ ಇರಲಿ ಯಾವ ಮಸೂದೆ ಮೇಲೆ ಘನವಾದ ಚರ್ಚೆ ನಡೆಯುತ್ತದೆ? ಯಾರಿಗಾದರೂ ನೆನಪು ಇದೆಯೇ? ಗೋಹತ್ಯೆ ನಿಷೇಧದಂಥ ಮಸೂದೆ ಮೇಲಿನ ಚರ್ಚೆ ಕೂಡ ಗದ್ದಲದಲ್ಲಿಯೇ ಮುಗಿದು ಹೋಗುತ್ತದೆ. ಕರ್ನಾಟಕದಲ್ಲಿ ಬಜೆಟ್ ಮಸೂದೆಗೇ ಅನುಮೋದನೆ ಸಿಗುವುದು ಮಧ್ಯರಾತ್ರಿ ಕಳೆದ ಮೇಲೇ ಅಲ್ಲವೇ?

ಕಲಾಪ ಹೀಗೆ ಹಾಳಾಗುತ್ತಿರುವುದಕ್ಕೆ ಮಾಧ್ಯಮಗಳೂ ಕಾರಣ. ಮಾಧ್ಯಮಗಳಿಗೆ ಗಲಾಟೆ, ಗದ್ದಲ, ಬಿರುಮಾತುಗಳ ವಿನಿಮಯ, ಹೊಡೆದಾಟ ಇದೇ ಹೆಚ್ಚು 'ಜ್ಯೂಸಿ' ಎನಿಸುತ್ತದೆ. ಸಭಾಧ್ಯಕ್ಷರು ಕಲಾಪದ ಕಡತದಿಂದ ತೆಗೆದು ಹಾಕಿದ ಶಬ್ದಗಳನ್ನು ವರದಿ ಮಾಡುವುದರಲ್ಲಿಯೂ ಮಾಧ್ಯಮಗಳಿಗೆ ಯಾವುದೇ ಸಂಕೋಚ ಇಲ್ಲ. ಅನಂತಕುಮಾರ್, ಲಾಲು ಅವರನ್ನು ಉದ್ದೇಶಿಸಿ ಬಳಸಿದ ಪದವನ್ನು ಕಡತದಿಂದ ತೆಗೆದು ಹಾಕಲು (ಎಕ್ಸಪಂಜ್) ಸಭಾಧ್ಯಕ್ಷರು ಆದೇಶಿಸಿದ್ದರು. ಆದರೆ, ಆ ಪದ ಎಲ್ಲ ಮಾಧ್ಯಮಗಳಲ್ಲಿ ಪ್ರಸಾರ, ಪ್ರಕಟವಾಯಿತು. ಕಲಾಪದ ನೇರ ಪ್ರಸಾರಕ್ಕೆ ಅವಕಾಶ ಇರುವಾಗ ಮುದ್ರಣ ಮಾಧ್ಯಮಗಳು ಮಡಿವಂತಿಕೆ ಬಳಸುವುದು ಅನೇಕ ಸಾರಿ ಅರ್ಥಹೀನ ಅನಿಸಬಹುದು. ಹೀಗೆ ಕಲಾಪದಿಂದ ತೆಗೆದು ಹಾಕಿದ ಪದ ಅಥವಾ ವಾಕ್ಯವನ್ನು ಬಳಸಿದ ಮಾಧ್ಯಮಗಳ ವಿರುದ್ಧ ಲೋಕಸಭೆ ಅಥವಾ ವಿಧಾನಸಭೆಯ ಕಾರ್ಯಾಲಯ ಯಾವುದೇ ಕ್ರಮ ತೆಗೆದುಕೊಂಡ ನಿದರ್ಶನವೂ ಇಲ್ಲ. ಹಾಗೆ ನೋಡಿದರೆ 'ಎಕ್ಸ್‌ಪಂಜ್'ಗೆ ಈಗ ಅರ್ಥ ಉಳಿದಿದೆಯೇ ಎಂಬ ಪ್ರಶ್ನೆಯೂ ಏಳಬಹುದು. ಲಾಲು ಪ್ರಸಾದ್ 'ನಿನಗೆ ಬಾರಿಸುತ್ತೇನೆ' ಎಂದು ಅನಂತ್‌ಕುಮಾರ್ ಕಡೆ ನುಗ್ಗಿ ಬರುವುದನ್ನು ತೋರಿಸಿ 'ಬಾರಿಸುತ್ತೇನೆ' ಎಂಬುದನ್ನು 'ಎಕ್ಸ್‌ಪಂಜ್' ಮಾಡಿದರೆ ಏನು ಅರ್ಥ?

ಸದನದ ಕಲಾಪವನ್ನು ಶಿಸ್ತಿಗೆ ಒಳಪಡಿಸಲು ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದಲ್ಲ. ಕಲಾಪ ನಿಯಮಗಳನ್ನು ರೂಪಿಸಿದ ಎಂ.ಎನ್.ಕೌಲ್ ಮತ್ತು ಶಕಧರ್ ಅವರ ಪುಸ್ತಕಕ್ಕೆ ಈಗ ತಿದ್ದುಪಡಿ ಬಂದಿದೆ. ಸಭಾಧ್ಯಕ್ಷರ ಮುಂದಿನ ಅಂಗಳಕ್ಕೆ ಬರುವ, ಕಲಾಪಕ್ಕೆ ಅಡ್ಡಿಪಡಿಸುವ ಒಬ್ಬ ಸದಸ್ಯನನ್ನು ಸಭಾಧ್ಯಕ್ಷರು ಐದು ಸಾರಿ ಹೆಸರಿಸಿದರೆ ಆತ ಅಮಾನತು ಆದಂತೆ, ಆತ ಯಾವುದೇ ಭತ್ಯೆಗೆ ಅರ್ಹನಲ್ಲ ಎಂಬ ನಿಯಮ ಈಗ ಚಾಲ್ತಿಯಲ್ಲಿ ಇದೆ. ಆದರೆ ಅದರ ಬಳಕೆ ಆಗಿಲ್ಲ. ಸದಸ್ಯರು ಗಲಾಟೆ ಮಾಡುವುದು ಪ್ರಚಾರದ ಉದ್ದೇಶದಿಂದ ಎಂಬುದು ಈಗ ರಹಸ್ಯವಾಗಿಯೇನೂ ಉಳಿದಿಲ್ಲ. ಅವರಿಗೆ ಪ್ರಚಾರ ಸಿಗಬಾರದು ಎಂದೇ ಸಭಾಧ್ಯಕ್ಷರು 'ಯಾವ ಮಾತೂ ದಾಖಲೆಗೆ ಹೋಗುವುದಿಲ್ಲ' ಎಂದು ಪ್ರಕಟಿಸುತ್ತಾರೆ. ಆದರೆ, ಸದಸ್ಯರ ಮುಂದಿನ ಮೈಕ್‌ಗಳು ಆಫ್ ಆಗುವುದಿಲ್ಲ. ದೃಶ್ಯ ಪ್ರಸಾರ ನಿಲ್ಲುವುದಿಲ್ಲ. ಅಲ್ಲಿಗೆ ಸದಸ್ಯರ ಉದ್ದೇಶ ಈಡೇರಿರುತ್ತದೆ.

ರಾಜ್ಯ ವಿಧಾನಸಭೆಯ ಅಧ್ಯಕ್ಷರ ಚುನಾವಣೆ ನಡೆದುದು ನಟ ವಿಷ್ಣುವರ್ಧನ್ ನಿಧನರಾದ ದಿನ, ವಿರೋಧ ಪಕ್ಷದವರ ಆಕ್ಷೇಪದ ನಡುವೆಯೂ ಸರ್ಕಾರ ಅಧ್ಯಕ್ಷರ

ಚುನಾವಣೆ ನಡೆಸಲು ಮುಂದಾದಾಗ ಜೆ.ಡಿ.(ಎಸ್)ನ ಜಮೀರ್ ಅಹ್ಮದ್ ಮುಂತಾದವರು ಮಾಡಿದ ಗಲಾಟೆ ಲಾಂಛನಾಸ್ಪದ. ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಲು ಶಾಸಕ ಹೇಮಚಂದ್ರ ಸಾಗರ್ ನೇತೃತ್ವದಲ್ಲಿ ಸದನ ಸಮಿತಿ ರಚಿಸಲಾಗಿತ್ತು. ಸಮಿತಿ ಏನು ನಿರ್ಣಯ ತೆಗೆದುಕೊಂಡಿತು ಎಂದು ಇದುವರೆಗೆ ಯಾರಿಗೂ ಗೊತ್ತಿಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆಯಾಗಿದ್ದರೆ ಮುಂದೆ ಅದು ಹಲವರಿಗೆ ಪಾಠವಾಗಬಹುದಿತ್ತೇನೋ? ಸದನದ ಕಲಾಪ ಮಟ್ಟ ಸುಧಾರಿಸುವ ಇರಾದೆಯಿಂದ ಮಾಧ್ಯಮದ ಹಿರಿಯರಿಗೆ ಪತ್ರ ಬರೆದಿದ್ದ ಸಂಸದೀಯ ಸಚಿವ ಸುರೇಶಕುಮಾರ್ 'ಇದು ಆಗದ ಕೆಲಸ' ಎಂದು ಸುಮ್ಮನಿದ್ದಾರೆಯೇ?

ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ ಎಂಬಂತೆ ಮೊನ್ನೆ ಬೆಂಗಳೂರು ಮಹಾನಗರ ಪಾಲಿಕೆಯ ಮೊದಲ ದಿನದ ಕಲಾಪವೂ ಗದ್ದಲದಲ್ಲಿಯೇ ಕಳೆದು ಹೋಯಿತು. ಕಾಂಗ್ರೆಸ್ ಸದಸ್ಯರ ಗಂಟಲ ಸಾಮರ್ಥ್ಯ ಅಂದು ಬೆಳಕಿಗೆ ಬಂತು ಅಷ್ಟೇ. ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಗದ್ದಲ ಮಾಡಿ ಪರಿಹಾರ ಕಂಡು ಕೊಳ್ಳಲು ಸಾಧ್ಯ ಇದೆಯೇ? ಈಗಲೂ ನಗರದ ಅನೇಕ ಬಡಾವಣೆಗಳು ಐದ್ಯೆದು ದಿನಗಳಿಂದ ನೀರು ಇಲ್ಲದೆ ತತ್ತರಿಸುತ್ತಿವೆಯಲ್ಲ? ಕಾಂಗ್ರೆಸ್ ಸದಸ್ಯರು ಏನು ಮಾಡುತ್ತಿದ್ದಾರೆ? ಜನ ಎಷ್ಟೊಂದು ಆಸೆ, ನಿರೀಕ್ಷೆಯಿಂದ ಪಾಲಿಕೆಯ ಸದಸ್ಯರನ್ನು ಆರಿಸಿದ್ದರು. ಕಾಂಗ್ರೆಸ್ ಸದಸ್ಯರೇ ಚುನಾವಣೆ ನಡೆಯಬೇಕು ಎಂದು ಕೋರ್ಟುಗಳಿಗೆ ಅಲೆದಾಡಿದ್ದರು. ಈಗ ಅವರು ಕಲಾಪದಲ್ಲಿ ಪಾಲುಗೊಂಡು ಸಮಸ್ಯೆಗಳಿಗೆ ಒಂದೊಂದಾಗಿ ಪರಿಹಾರ ಕಂಡು ಹಿಡಿಯಬೇಕಿತ್ತಲ್ಲ? ಹೀಗೆಲ್ಲ ಪ್ರಶ್ನೆ ಕೇಳುವುದರಲ್ಲಿ ಅರ್ಥವೇ ಇಲ್ಲ ಎನಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಅತ್ಯಂತ ಕೆಳಹಂತದ ಜನಪ್ರತಿನಿಧಿ ಸಭೆಯಾದ ಗ್ರಾಮ ಪಂಚಾಯ್ತಿಯಿಂದ ಹಿಡಿದು ಅತ್ಯಂತ ಉನ್ನತವಾದ ಲೋಕಸಭೆಯ ಪ್ರತಿನಿಧಿಗಳ ವರೆಗೆ ಅವರು ಆಯ್ಕೆಯಾದ ನಂತರ ಅವರಿಗೆ ತರಬೇತಿ ನೀಡುವ ಪ್ರಯತ್ನ ಎಂದಾದರೂ ನಡೆದ ಉದಾಹರಣೆ ನನಗೆ ನೆನಪಿಲ್ಲ. ನಡೆದಿದ್ದರೆ ಅದು ಫಲ ಕೊಟ್ಟಿಲ್ಲ ಎಂದು ಅರ್ಥ. ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ತರಬೇತಿ ನೀಡುವ ಎರಡು ಸಂಸ್ಥೆಗಳು ಕರ್ನಾಟಕದಲ್ಲಿ ಇವೆ. ಒಂದು ಸಂಸ್ಥೆ ಬೆಳಗಾವಿಯ ಭಾಗ್ಯನಗರದಲ್ಲಿ ಇದೆ. ಅನೇಕ ವರ್ಷಗಳ ಹಿಂದೆ ನಾನು ಆ ಸಂಸ್ಥೆಗೆ ಹೋಗಿದ್ದಾಗ ನಮ್ಮ ಸಂಸ್ಥೆಯ ನೆರವನ್ನು ಯಾರೂ ಪಡೆಯುತ್ತಿಲ್ಲ ಎಂದು ಅದರ ಮುಖ್ಯಸ್ಥರು ನನ್ನ ಮುಂದೆ ಗೋಳು ತೋಡಿಕೊಂಡಿದ್ದರು. ಮೈಸೂರಿನ ಅಬ್ದುಲ್ ನಜೀರ್‌ಸಾಬ್ ಸಂಸ್ಥೆಯಲ್ಲಿಯೂ ಈ ತರಬೇತಿ ನೀಡಬಹುದು. ಇಲ್ಲವಾದರೆ, ಈಗಲೇ ಜನಪ್ರತಿನಿಧಿಗಳ ಬಗ್ಗೆ ನಂಬಿಕೆ ಕಳೆದುಕೊಂಡು ಶೇ 50ರಷ್ಟು ಜನರು ಮತದಾನ ಪ್ರಕ್ರಿಯೆಯಿಂದ ಹೊರಗೆ ಉಳಿಯುತ್ತಿರುವಾಗ ಈ ಸಂಖ್ಯೆ ಮತ್ತೂ ಹೆಚ್ಚಾಗಬಹುದು. ನಮ್ಮ ಪ್ರತಿನಿಧಿಗಳು ಕಲಾಪದಲ್ಲಿ ಮಾಡುವ ಗದ್ದಲಕ್ಕಿಂತ ಮತದಾರನ ಮೌನ ಹೆಚ್ಚು ಆತಂಕಕಾರಿಯಾದುದು.

■

# ಅಲ್ಲಿರುವುದು ನಮ್ಮನೆ, ರಾಜ್ಯಸಭೆಯಲ್ಲಿ ಸುಮ್ಮನೆ...

ಮತ್ತೆ ರಾಜ್ಯಸಭೆ ಚುನಾವಣೆ ಹೊಸ್ತಿಲಿಗೆ ಬಂದಿದೆ. ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಲು ಆಡಳಿತಾರೂಢ ಬಿಜೆಪಿ, ಆರ್‌ಎಸ್‌ಎಸ್ ಕಚೇರಿ ಮಾತ್ರ ಸಾಲದು ಎಂದು ರೆಸಾರ್ಟ್‌ನಲ್ಲೂ ಸಭೆ ನಡೆಸಿದೆ, ಕಾಂಗ್ರೆಸ್ ಎಂದಿನಂತೆ ಕೊನೆಯ ಗಳಿಗೆವರೆಗೆ ಅಭ್ಯರ್ಥಿಗಳ ಹೆಸರು ಪ್ರಕಟಿಸಲು ನಿಧಾನ ಮಾಡಲಿದೆ. ಒಂದು ಸೀಟನ್ನು ಗೆಲ್ಲುವಷ್ಟೂ ಸದಸ್ಯ ಬಲವಿಲ್ಲದ ಜೆ.ಡಿ.(ಎಸ್) ಲಾಭ ನಷ್ಟದ ಲೆಕ್ಕ ಹಾಕುತ್ತಿದೆ. ಆಯಾ ಪಕ್ಷಗಳಿಗೆ ಇರುವ ಸದಸ್ಯ ಬಲವನ್ನು ಲೆಕ್ಕ ಹಾಕಿದರೆ ಬಿಜೆಪಿಗೆ ಎರಡು, ಕಾಂಗ್ರೆಸ್‌ಗೆ ಒಂದು ಸೀಟು ಗೆಲ್ಲಲು ಏನೇನೂ ಕಷ್ಟವಿಲ್ಲ. ನಾಲ್ಕನೇ ಸೀಟು ಗೆಲ್ಲಲು ಯಾರಿಗೂ ಸ್ವಂತ ಸಾಮರ್ಥ್ಯವಿಲ್ಲ. ಈ ಸೀಟು ಗೆಲ್ಲಲು ಒಂದೋ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಹೊಂದಾಣಿಕೆ ಮಾಡಿಕೊಳ್ಳಬೇಕು. ಇಲ್ಲವಾದರೆ ಹಣವಂತ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿ ಮತ ಕೊಳ್ಳೆ ಹೊಡೆಯಲು ಅನುಕೂಲ ಕಲ್ಪಿಸಬೇಕು. ಕಣಕ್ಕೆ ಇಳಿಯಲು ತನಗೆ ಅವಕಾಶ ಸಿಕ್ಕೀತೇ ಎಂದು ಹಣವಂತ ಅಭ್ಯರ್ಥಿ ಈಗಾಗಲೇ ತೆರೆಯ ಮರೆಯಲ್ಲಿ ಗೇನಿಸುತ್ತಿದ್ದಾನೆ; ಒಬ್ಬಿಬ್ಬರು ಉದ್ಯಮಿಗಳ

ಹೆಸರುಗಳೂ ಚಾಲ್ತಿಯಲ್ಲಿ ಇವೆ. ಈ ನಾಲ್ಕನೇ ಅಭ್ಯರ್ಥಿ ಕಾಂಗ್ರೆಸ್‌ನ ಹಣವಂತನೇ ಆಗಿರಬಹುದು ಎಂಬ ಗುಲ್ಲೂ ಹಬ್ಬಿದೆ.

ಹೀಗೆಲ್ಲ ಆಗುತ್ತಿರುವುದು ಕರ್ನಾಟಕದಲ್ಲಿ ಇದೇ ಮೊದಲು ಅಲ್ಲ. ಭಾರತ ದಲ್ಲಿಯೂ ಮೊದಲು ಅಲ್ಲ. ಸಂವಿಧಾನ ನಿರ್ಮಾತೃಗಳು ರಾಜ್ಯಸಭೆಯ ಪರಿಕಲ್ಪನೆ ಯನ್ನು ಜಾರಿಗೆ ತಂದಾಗ ಹೀಗೆಲ್ಲ ಆಗುತ್ತದೆ ಎಂದು ಖಂಡಿತ ಅಂದುಕೊಂಡಿರ ಲಿಲ್ಲ. ಜನರಿಂದ ನೇರವಾಗಿ ಆಯ್ಕೆಯಾದವರ ಸದನವಾದ ಲೋಕಸಭೆ ಒಕ್ಕೂಟ ವ್ಯವಸ್ಥೆಯ ಆಧಾರ ಸ್ತಂಭಗಳಾದ ರಾಜ್ಯಗಳ ಹಿತವನ್ನು ಕಾಪಾಡಲಿಕ್ಕಿಲ್ಲ ಎಂಬ ಅನುಮಾನದಿಂದ ರಾಜ್ಯಸಭೆಯನ್ನು ಅಸ್ತಿತ್ವಕ್ಕೆ ತಂದರು. ಅಂತಲೇ ಈ ಸದನಕ್ಕೆ ಕೌನ್ಸಿಲ್ ಆಫ್ ಸ್ಟೇಟ್ಸ್ ಎಂದೂ ಕರೆದರು. ಈ ಸದನದಲ್ಲಿ ಎಲ್ಲ ರಾಜ್ಯಗಳ ಜನಸಂಖ್ಯೆಯನ್ನು ಆಧರಿಸಿ ಇಂತಿಷ್ಟು ಸದಸ್ಯರು ವಿಧಾನಸಭೆಗಳ ಮೂಲಕ ರಾಜ್ಯಸಭೆಗೆ ಆಯ್ಕೆಯಾಗಬೇಕು ಎಂಬ ಮಾನದಂಡವನ್ನೂ ನಿಗದಿ ಮಾಡಿದರು. ಈಗ 250 ಸದಸ್ಯ ಬಲದ ರಾಜ್ಯಸಭೆಯಲ್ಲಿ 238 ಮಂದಿ ವಿಧಾನಸಭೆಯಿಂದ ಆಯ್ಕೆಯಾಗುತ್ತಾರೆ. ಉಳಿದ 12 ಸ್ಥಾನಗಳಿಗೆ ವಿವಿಧ ಕ್ಷೇತ್ರಗಳ ಪರಿಣತರನ್ನು ನಾಮಕರಣ ಮಾಡಲಾಗುತ್ತದೆ.

2003ರಲ್ಲಿ ಆಗಿನ ಎನ್.ಡಿ.ಎ. ಸರ್ಕಾರ ಜನತಾ ಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ತರುವವರೆಗೆ ಆಯಾ ರಾಜ್ಯಗಳ ಮೂಲ ನಿವಾಸಿಗಳೇ ರಾಜ್ಯಸಭೆಗೆ ಆಯ್ಕೆಯಾಗ ಬೇಕಿತ್ತು ಹಾಗೂ ರಹಸ್ಯ ಮತದಾನದ ಮೂಲಕ ಅವರನ್ನು ಆಯ್ಕೆ ಮಾಡಲಾಗುತ್ತಿತ್ತು. ಹಾಗೆಂದು ಆಗಲೂ ಬೇರೆ ರಾಜ್ಯದವರು ಇನ್ನೊಂದು ರಾಜ್ಯಕ್ಕೆ ಬಂದು ಚುನಾವಣೆ ಯಲ್ಲಿ ಸ್ಪರ್ಧಿಸುತ್ತಿರಲಿಲ್ಲ ಎಂದು ಅಲ್ಲ. ಕರ್ನಾಟಕದಲ್ಲಿ 80ರ ದಶಕದಲ್ಲಿಯೇ ರಾಮ್ ಜೇಠ್ಮಲಾನಿಯವರಂಥ ಪ್ರಸಿದ್ಧ ವಕೀಲರು ರಾಜ್ಯಸಭೆಗೆ ಚುನಾಯಿತರಾಗಿದ್ದರು. ಆ ಪರಂಪರೆಯನ್ನು ಹಾಕಿದವರು ರಾಮಕೃಷ್ಣ ಹೆಗಡೆಯವರು ತಮ್ಮ ಎರಡನೆ ಅವಧಿಯ ಮುಖ್ಯಮಂತ್ರಿಗಿರಿಯಲ್ಲಿ ಹಲವು ಹಗರಣಗಳಲ್ಲಿ ಸಿಲುಕಿದ್ದ ಹೆಗಡೆಯವರು ಅವುಗಳ ವಿಚಾರಣೆಗೆ ಅತಿ ಹೆಚ್ಚು ನ್ಯಾಯಾಂಗ ಆಯೋಗಗಳನ್ನೂ ನೇಮಿಸಿದವರು. ಆ ಎಲ್ಲ ಆಯೋಗಗಳ ಮುಂದೆ ಹೆಗಡೆಯವರ ಪರವಾಗಿ ಜೇಠ್ಮಲಾನಿಯವರೇ ವಾದಿಸುತ್ತಿದ್ದರು. ಕರ್ನಾಟಕದವರಲ್ಲದ ಜೇಠ್ಮಲಾನಿಯವರು ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ಸ್ಪರ್ಧಿಸುವಾಗ ಸ್ಥಳೀಯ ವೃತ್ತ ಪತ್ರಿಕೆಯೊಂದರ ಅತಿಥಿ ಗೃಹವನ್ನು ತಮ್ಮ ವಾಸಸ್ಥಳ ಎಂದು ನಮೂದಿಸಿ ಪ್ರಮಾಣಪತ್ರ ಸಲ್ಲಿಸಿದ್ದರು.

ಆಯ್ಕೆಯಾಗಿ ಹೋದ ಜೇಠ್ಮಲಾನಿ ಕರ್ನಾಟಕದ ಪರವಾಗಿ ಮಾತನಾಡಿದ್ದು ಯಾರಿಗೂ ನೆನಪಿಲ್ಲ. ಜೇಠ್ಮಲಾನಿ ಆಯ್ಕೆಯನ್ನು ತೀವ್ರವಾಗಿ ಖಂಡಿಸಿದ್ದ ಎಚ್.ಡಿ. ದೇವೇಗೌಡರು, ತಮಿಳುನಾಡಿನ ಎಂ.ಎ.ಎಂ. ರಾಮಸ್ವಾಮಿ ಎಂಬ ಕುದುರೆ ಮಾಲೀಕರನ್ನು ಆರು ವರ್ಷಗಳ ಹಿಂದೆ ರಾಜ್ಯಸಭೆಗೆ ಕಳುಹಿಸಿಬಿಟ್ಟರು. ರಾಮಸ್ವಾಮಿ ಯವರು ರಾಜ್ಯಸಭೆಯ ಕಲಾಪಕ್ಕೆ ಹೋದರೋ ಬಿಟ್ಟರೋ ತಿಳಿಯದು. ಹೋದರೂ ಕರ್ನಾಟಕದ ಪರವಾಗಿಯಂತೂ ಅವರು ಮಾತನಾಡಿದ್ದು ಯಾರಿಗೂ ನೆನಪಿಲ್ಲ.

ಎಲ್ಲರಿಗಿಂತ ಭಿನ್ನ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿಯೂ ಇಂಥ 'ದ್ರೋಹ ಚಿಂತನೆ'ಯಲ್ಲಿ ಹಿಂದೆ ಬಿದ್ದಿಲ್ಲ. ಆ ಪಕ್ಷದ ರಾಷ್ಟ್ರೀಯ ಧುರೀಣ ವೆಂಕಯ್ಯ ನಾಯ್ಡು ಇದೀಗ ಮೂರನೇ ಸಾರಿ ಕರ್ನಾಟಕದಿಂದಲೇ ರಾಜ್ಯಸಭೆಗೆ ಆಯ್ಕೆಯಾಗಲು ಸಿದ್ಧರಾಗಿದ್ದಾರೆ. ಅವರ ಬಗ್ಗೆ ಪಕ್ಷದ ಒಳಗಡೆ ಎಷ್ಟೇ ಅಸಮಾಧಾನವಿದ್ದರೂ ಅವರೇ ಅಭ್ಯರ್ಥಿಯಾಗುವುದು, ಆಯ್ಕೆಯಾಗುವುದು ಶತಃಸಿದ್ಧ. ವೆಂಕಯ್ಯ ನಾಯ್ಡು ಇರುವುದು ದೆಹಲಿಯಲ್ಲಿ. ಅವರ ಮನೆ ಇರುವುದು ಚೆನ್ನೈನಲ್ಲಿ. ಅವರು ಹುಟ್ಟಿದ ರಾಜ್ಯ ಆಂಧ್ರಪ್ರದೇಶ. ಆಯ್ಕೆಯಾಗುವುದು ಕರ್ನಾಟಕದಿಂದ! 'ವೆಂಕಯ್ಯ ನಾಯ್ಡು ಅವರೇ, ಕರ್ನಾಟಕದ ಪರವಾಗಿ ಎಂದಾದರೂ ನೀವು ಮಾತನಾಡಿದ್ದೀರಾ' ಎಂದು ಯಾರಾದರೂ ಕೇಳಿದರೆ, 'ನಾನು ಎಲ್ಲ ಅರ್ಥದಲ್ಲಿ ರಾಷ್ಟ್ರೀಯ ನಾಯಕ' ಎಂದು ಅವರು ಬೀಗುತ್ತಾರೆ. ಪ್ರಶ್ನೆ ಕೇಳಿದವರು ತೆಪ್ಪಗಾಗುತ್ತಾರೆ!

ಬರೀ ವೆಂಕಯ್ಯ ನಾಯ್ಡು ಮಾತ್ರವಲ್ಲ, ಪ್ರಧಾನಿ ಡಾ. ಮನಮೋಹನ್ ಸಿಂಗ್ ಅಸ್ಸಾಂನಿಂದ, ಈ ಹಿಂದೆ ಪ್ರಣವ್ ಮುಖರ್ಜಿ ಅವರು ಗುಜರಾತ್‌ನಿಂದ, ಎಸ್.ಆರ್. ಬೊಮ್ಮಾಯಿಯವರು ಒರಿಸ್ಸಾ (ಈಗಿನ ಒಡಿಶಾ)ನಿಂದ ಸತ್ಯವಲ್ಲದ ವಾಸಸ್ಥಳ ದಾಖಲೆ ಕೊಟ್ಟೇ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಇದೀಗ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಜತೆಗೆ ಹೊಂದಾಣಿಕೆಯಾದರೆ ಮೂಲತಃ ಉತ್ತರ ಪ್ರದೇಶದ, ದೆಹಲಿಯಲ್ಲಿ ಹಾಲಿ ವಾಸವಾಗಿರುವ ಡ್ಯಾನಿಶ್ ಅಲಿ ಜೆ.ಡಿ.(ಎಸ್)ನ ಅಭ್ಯರ್ಥಿಯಾಗಿ ರಾಜ್ಯಸಭೆಗೆ ಆಯ್ಕೆಯಾಗಬಹುದು. 'ಹೀಗೆ ಆಯಾ ರಾಜ್ಯದ ರಹವಾಸಿಗಳು ಅಲ್ಲದವರು ರಾಜ್ಯಸಭೆಗೆ ಆಯ್ಕೆಯಾಗಬಾರದು. ಅದು ಸಂವಿಧಾನದ ಆಶಯಕ್ಕೆ ಅಪಚಾರ' ಎಂದು ಖ್ಯಾತ ಪತ್ರಕರ್ತ ಕುಲದೀಪ್ ನಯ್ಯರ್ ಸುಪ್ರೀಂ ಕೋರ್ಟಿನ ಮೊರೆ ಹೋಗಿದ್ದರು. ಅವರ ವಾದ ಬಿದ್ದು ಹೋಯಿತು. ಯಾರು ಎಲ್ಲಿಂದ ಬೇಕಾದರೂ ಆಯ್ಕೆಯಾಗಬಹುದು ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿತು.

ಆದರೆ, ನಯ್ಯರ್ ವಾದ ಅರ್ಥಪೂರ್ಣವಾಗಿತ್ತು. ಅವರೂ ಸಂವಿಧಾನವನ್ನೇ ಉಲ್ಲೇಖಿಸಿ ವಾದ ಮಾಡಿದ್ದರು. 'ಲೋಕಸಭೆಗೆ ಅಖಿಲ ಭಾರತ ವ್ಯಕ್ತಿತ್ವವಿದೆ. ಅನೇಕ ಸಾರಿ ರಾಜ್ಯಗಳಲ್ಲಿ ನಡೆದ ಘಟನೆಗಳ ಬಗ್ಗೆ ಚರ್ಚೆ ಮಾಡಲು ಅಲ್ಲಿ ಅವಕಾಶ ಸಿಗುವುದಿಲ್ಲ. ಆದರೆ, ರಾಜ್ಯಸಭೆ ರಾಜ್ಯಗಳ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೇ ಇರುವ ಒಂದು ವೇದಿಕೆ. ಅಲ್ಲಿ ಆಯಾ ರಾಜ್ಯಗಳಿಂದಲೇ ಬಂದ ಪ್ರತಿನಿಧಿಗಳು ಆ ವಿಷಯ ಚರ್ಚಿಸಬಹುದು. ಒಬ್ಬ ಸದಸ್ಯ ಆ ರಾಜ್ಯದವನು ಆಗಿರಬೇಕಿಲ್ಲ ಎಂದರೆ ಆತನಿಗೆ ಒಂದು, ಆ ರಾಜ್ಯದ ವಿಷಯದ ಅರಿವು ಇರುವುದಿಲ್ಲ. ಎರಡನೆಯದು ಮತ್ತು ಬಹುಮುಖ್ಯವಾದುದು ಆತನಿಗೆ ಆ ರಾಜ್ಯದ ಬಗ್ಗೆ ಬದ್ಧತೆಯೇ ಇರುವುದಿಲ್ಲ' ಎಂಬುದು ಅವರ ವಾದವಾಗಿತ್ತು. ವೆಂಕಯ್ಯ ನಾಯ್ಡು, ಕೃಷ್ಣಾ ನದಿ ವಿವಾದ ಕುರಿತು ಏಕೆ ಮಾತನಾಡುತ್ತಾರೆ? ಕಾವೇರಿ ವಿವಾದದಲ್ಲಿ ಎಂ.ಎ.ಎಂ. ರಾಮಸ್ವಾಮಿ ಕರ್ನಾಟಕದ ಪರ ಇರಲು ಹೇಗೆ ಸಾಧ್ಯ? ಈಗ ರಾಜ್ಯಸಭೆ ಎಂಬುದು ರಾಜ್ಯಗಳಿಗೆ ಸೇರದ ಸದಸ್ಯರ ಸಭೆಯಾಗಿ ಮಾರ್ಪಟ್ಟಿದೆ, ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ

ಸಂವಿಧಾನದ ಮೂಲ ಆಶಯಕ್ಕೇ ಕೊಡಲಿ ಪೆಟ್ಟು ಬಿದ್ದಿದೆ.

ರಾಜ್ಯಸಭೆ ಚುನಾವಣೆಯ ಇನ್ನೊಂದು ದೊಡ್ಡ ರೋಗ ಹಣದ ಹಾವಳಿ. ಅವಿರೋಧ ಆಯ್ಕೆ ಸಂದರ್ಭ ಬಿಟ್ಟರೆ ಉಳಿದ ಎಲ್ಲ ಸಮಯದಲ್ಲಿಯೂ ಹಣದ ಪಾತ್ರ ಇದ್ದೇ ಇತ್ತು. ಆದರೆ, ಇದು ದೊಡ್ಡ ಹಗರಣವಾಗಿ ಮಾರ್ಪಟ್ಟುದು 2002ರ ಮಾರ್ಚ್‌ನಲ್ಲಿ ನಡೆದ ಚುನಾವಣೆಯಲ್ಲಿ. ಆಗ ಉದ್ಯಮಿ ವಿಜಯ್ ಮಲ್ಯ ನಾಲ್ಕನೇ ಅಭ್ಯರ್ಥಿಯಾಗಿ ಕಾಂಗ್ರೆಸ್ ಬೆಂಬಲದ ಜತೆಗೆ ಕರ್ನಾಟಕದ ವಿಧಾನಸಭೆಯಿಂದ ಸ್ಪರ್ಧಿಸಿದ್ದರು. ನಾಲ್ಕು ಸ್ಥಾನಗಳ ಪೈಕಿ ಒಂದರಲ್ಲಿ ಮಾತ್ರ ಗೆಲ್ಲಬಹುದಿದ್ದ ಬಿಜೆಪಿ, ಡಿ.ಕೆ. ತಾರಾದೇವಿ ಅವರನ್ನು ಕಣಕ್ಕೆ ಇಳಿಸಿತ್ತು. ತಾರಾದೇವಿ ಅವರಿಗೆ ನಾಲ್ಕು ಮತಗಳ ಕೊರತೆಯಿತ್ತು. ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದ ಪಕ್ಷದ ಒಬ್ಬ ಅಭ್ಯರ್ಥಿಗೆ ನಾಲ್ಕು ಮತಗಳ ಕೊರತೆ 'ನೀಗಿಸಿಕೊಳ್ಳುವುದು' ಕಷ್ಟವಾಗಬಾರದಿತ್ತು. ಬಿಜೆಪಿ ಕೂಡ ಹಾಗೆಯೇ ಅಂದುಕೊಂಡಿತ್ತು. ಮಲ್ಯ ಅವರ ರಂಗಪ್ರವೇಶ ಎಲ್ಲ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿತು. ಅವರ ಪರವಾಗಿ ನಿಗದಿಯಾಗಿದ್ದಕ್ಕಿಂತ ಹೆಚ್ಚು ಕಾಂಗ್ರೆಸ್ ಮತಗಳು ಬಂದುವು. ಜೆ.ಡಿ. (ಎಸ್)ನವರು ಮಲ್ಯ ಅವರಿಗೇ ಮತ ಹಾಕಿದರು. ಅದೆಲ್ಲಕ್ಕಿಂತ ಹೆಚ್ಚಾಗಿ ಶಿಸ್ತಿನ ಪಕ್ಷ ಬಿಜೆಪಿಯಲ್ಲಿಯೇ ಅಡ್ಡ ಮತದಾನವಾಯಿತು. ಮಲ್ಯ ಗೆದ್ದರು ಎಂದು ಈ ಕಡೆ ಘೋಷಿಸುತ್ತಿದ್ದಂತೆಯೇ ಆ ಕಡೆ, ಅನಂತ ಕುಮಾರ್, ವೆಂಕಯ್ಯ ಪತ್ರಿಕಾಗೋಷ್ಠಿ ಮಾಡಿ ತಮ್ಮ ಪಕ್ಷದ ಆರು ಮಂದಿ ಸದಸ್ಯರನ್ನು ಉಚ್ಚಾಟನೆ ಮಾಡಿದರು. ಉಚ್ಚಾಟಿತರು ಮಲ್ಯ ಅವರಿಂದ ದುಡ್ಡು ತೆಗೆದುಕೊಂಡರು ಎಂದು ಆರೋಪಿಸಿದರು. ಮಲ್ಯ ತಾವು ಯಾರಿಗೂ ದುಡ್ಡು ಕೊಟ್ಟಿಲ್ಲ ಎಂದು ಆರಂಭದಲ್ಲಿ ಹೇಳಿದರೂ ಸಂದರ್ಶನವೊಂದರಲ್ಲಿ ತಮಗೆ 'ಪರಿಗಣನೆ'ಗಾಗಿ ಮತಗಳು ಬಂದುವು ಎಂದು ಒಪ್ಪಿಕೊಂಡರು. ಏನು 'ಪರಿಗಣನೆ' ಎಂದು ಅವರು ಬಿಡಿಸಿ ಹೇಳದಿದ್ದರೂ ಎಷ್ಟು ಲಕ್ಷ ಹಣ ಯಾರಿಗೆ ಸಂದಿತು ಎಂಬುದು ಅಂಥ ರಹಸ್ಯವಾಗಿಯೇನೂ ಇರಲಿಲ್ಲ. ಸರಿ, ಮಲ್ಯ ಎಷ್ಟೇ ಆಗಲಿ ಕರ್ನಾಟಕದವರು. ಹಾಗೆಂದು ಅವರು ಒಂದು ದಿನವಾದರೂ ಕರ್ನಾಟಕದ ಪರವಾಗಿ ಬಾಯಿ ಬಿಟ್ಟರೇ? ತಾರಾದೇವಿ ಗೆದ್ದು ಹೋಗಿದ್ದರೆ ಕರ್ನಾಟಕದ ಪರವಾಗಿ ಮಾತನಾಡುತ್ತಿದ್ದರು ಅಲ್ಲವೇ? ಎಂ.ಎ.ಎಂ. ರಾಮಸ್ವಾಮಿ ಅವರಿಗೆ ಜಾಗ ಬಿಟ್ಟು ಕೊಟ್ಟ ಹಾಸನದ ಎಚ್.ಕೆ. ಜವರೇಗೌಡರು ರಾಜ್ಯಸಭೆಯಲ್ಲಿ ಕರ್ನಾಟಕದ ಧ್ವನಿಯಾಗಿದ್ದರು ಅಲ್ಲವೇ?

ರಾಜ್ಯಸಭೆ ಚುನಾವಣೆ ಅವಿರೋಧವಾಗಿ ನಡೆದರೆ ನಮಗೆ ನಷ್ಟ ಎಂದು ಶಾಸಕರು ಲೆಕ್ಕ ಹಾಕುವ ಸ್ಥಿತಿ ಈಗ ಬಂದಿದೆ. ಪಕ್ಷೇತರರಿಗಂತೂ ಆಗ ಹಬ್ಬ, ಭಾರಿ ಬೆಲೆ... ಕಾರು, ಬಂಗಲೆ, ಸೈಟು, ಹಣ ಇತ್ಯಾದಿ ಆಮಿಷಗಳು ಸಾಲು ಸಾಲಾಗಿ ಅವರ ಮುಂದೆ ಥಕಥೈ ಎಂದು ಕುಣಿಯುತ್ತವೆ. 'ನಾವೂ ಎಲ್ಲರ ಹಾಗೆ ಹುಲ್ಲು ತಿನ್ನುವ ಮನುಷ್ಯರಲ್ಲವೇ?' 'ಹಿಂದೆ ಯಾರೂ ಹಣ ಮಾಡಿಲ್ಲವೇ' ಎಂದು ಅವರು ಕೇಳಿದರೆ ಏನು ಹೇಳುವುದು?

ಇದಕ್ಕೆ ಉತ್ತರವಾಗಿ 'ಮುಕ್ತ ಮತದಾನ'ದ ವ್ಯವಸ್ಥೆಯೂ ಈಗ ಜಾರಿಯಲ್ಲಿ ಇದೆ.

ಅದು ಕೂಡ 2003ರಲ್ಲಿ ಬಂದ ತಿದ್ದುಪಡಿ, ಯಾರ ಮೇಲೆ ಪಕ್ಷದ ವಿಪ್ ಇದೆಯೋ ಅವರು ಆಯಾ ಪಕ್ಷದ ಪ್ರತಿನಿಧಿಗೆ ತೋರಿಸಿ ತಮ್ಮ ಮತ ಚಲಾಯಿಸಬೇಕು. ಪಕ್ಷೇತರರಿಗೆ ಇದು ಅನ್ವಯಿಸುವುದಿಲ್ಲ. ಅನೇಕ ಸಾರಿ ಅವರ ಮತಗಳೇ ನಿರ್ಣಾಯಕವಾಗಿರುತ್ತವೆ. ಈ ಸಾರಿಯೂ ಹಾಗೆಯೇ ಆಗುವ ಲಕ್ಷಣವಿದೆ. ಇನ್ನೂ ಅಪಾಯ ಎಂದರೆ ಉದ್ಯಮಿಯೊಬ್ಬರು ಕಾಂಗ್ರೆಸ್ ಮತ್ತು ಜೆ.ಡಿ.(ಎಸ್)ನ ಸರ್ವಸಮ್ಮತ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯುವ ಸುದ್ದಿಯೂ ಇದೆ. ಅದು ಇನ್ನೂ ಏಕೆ ಅಪಾಯ ಎಂದರೆ ಅವರು ಮತದಾರ ಸದಸ್ಯರನ್ನು ಅಲ್ಲ, ಪಕ್ಷಗಳನ್ನೇ ಕೊಂಡುಕೊಂಡು ಬಿಡುತ್ತಾರೆ! ಬಿಜೆಪಿ–ಜೆ.ಡಿ(ಎಸ್)ನ ಅಭ್ಯರ್ಥಿಯಾಗಿ ಈಗ ಅಂಥ ಒಬ್ಬರು ರಾಜ್ಯಸಭೆಯಲ್ಲಿ ಇಲ್ಲವೇ? ರಾಜಕೀಯ ಎಂಬುದು ಎಲ್ಲಿಗೆ ಬಂತು ನೋಡಿ. ■

# ಯಡಿಯೂರಪ್ಪ ಸರ್ಕಾರ ಜಸ್ಟ್ ಪಾಸ್!

ಯಡಿಯೂರಪ್ಪನವರಿಗೂ ಈಗ ಅಚ್ಚರಿ ಅನಿಸುತ್ತಿರಬಹುದು, ತಮ್ಮ ಸರ್ಕಾರಕ್ಕೆ ಎರಡು ವರ್ಷಗಳು ಮುಗಿದು ಹೋದುವಲ್ಲ ಎಂದು. ಇನ್ನು ಮೂರು ವರ್ಷಗಳನ್ನು ಹೆಚ್ಚಿನ ಆತಂಕವಿಲ್ಲದೆ ಮುಗಿಸಬಹುದು ಎಂಬ ವಿಶ್ವಾಸವೂ ಅವರಲ್ಲಿ ಇರಬಹುದು.

ಎರಡು ವರ್ಷಗಳ ಹಿಂದೆ ವಿಧಾನಸಭೆ ಚುನಾವಣೆ ನಡೆದಾಗ ರಾಜ್ಯದಲ್ಲಿ, ಅದೂ ದಕ್ಷಿಣ ಭಾರತದಲ್ಲಿ, ಮೊದಲ ಬಿಜೆಪಿ ಸರ್ಕಾರ ಬರಬಹುದು ಎಂಬ ವಿಶ್ವಾಸ ಯಾರಲ್ಲಿಯೂ ಇರಲಿಲ್ಲ. ಅದು ಬಿಜೆಪಿ ಪರವಾಗಿ ಬಿದ್ದ ಮತವೇ ಅಥವಾ ಬಿಜೆಪಿಗೆ ಕೈಕೊಟ್ಟ ಜೆ.ಡಿ(ಎಸ್)ಗೆ ಪಾಠ ಕಲಿಸಲು ಬಿದ್ದ ಮತವೇ ಎಂದು ಕೇಳಿದರೆ ಎರಡನೇ ಕಾರಣವೇ ಗಟ್ಟಿಯಾಗಿ ನಿಲ್ಲುತ್ತದೆ. ವಿಧಾನಸಭೆ ಚುನಾವಣೆಯ ಗೆಲುವು ಸ್ಪಷ್ಟ ಜನಾದೇಶವಲ್ಲ ಎಂದುಕೊಂಡರೂ ನಂತರ ನಡೆದ ಅನೇಕ ಚುನಾವಣೆಗಳಲ್ಲಿನ ಜನಾದೇಶ ಬಿಜೆಪಿ ಪರವಾಗಿಯೇ ಇತ್ತು. ಲೋಕಸಭೆ ಚುನಾವಣೆಯಲ್ಲೂ ಜನರು ಯಡಿಯೂರಪ್ಪ ಅವರಿಗೇ ಮತ ಹಾಕಿದರು. ಇಡೀ ದೇಶ ಬೇರೆ ದಿಕ್ಕಿನಲ್ಲಿ ಯೋಚನೆ

ಮಾಡಿದ್ದರೂ ಕರ್ನಾಟಕದ ಜನ, 'ವಿಶ್ವಾಸ ದ್ರೋಹ'ಕ್ಕೆ ಒಳಗಾದ ಮನುಷ್ಯನ ಪರ ನಿಂತರು. ನಡುವೆ ನಡೆದ ಉಪಚುನಾವಣೆಗಳ ಕಥೆ, ಅದಕ್ಕೆ ಬಳಸಿದ 'ಆಪರೇಷನ್ ಕಮಲ'ದಂಥ ಅಪ್ರಜಾಸತ್ತಾತ್ಮಕ ಕ್ರಮಗಳ ಇತಿಹಾಸ ಗೊತ್ತೇ ಇದೆ.

ಮಧ್ಯದಲ್ಲಿ ಯಡಿಯೂರಪ್ಪ ಅವರು ತಮ್ಮ ಕುರ್ಚಿ ಕಳೆದುಕೊಂಡೇ ಬಿಡುತ್ತಾರೆ ಎನ್ನುವಂಥ ಭಿನ್ನಮತದ ಬಿರುಗಾಳಿ ರೆಡ್ಡಿ ಸೋದರರ ನೇತೃತ್ವದಲ್ಲಿ ಬೀಸಿದರೂ ಹೈಕಮಾಂಡ್ ರೂಪಿಸಿದ ಖಾಜಿ ನ್ಯಾಯದಿಂದ ಮುಖ್ಯಮಂತ್ರಿ ತಮ್ಮ ಅಧಿಕಾರ ಉಳಿಸಿಕೊಂಡರು. ಅಷ್ಟೇನು ಭರವಸೆ ಹುಟ್ಟಿಸದ, ಹೊಸ ಆಲೋಚನೆಗಳು ಇಲ್ಲದ ಅಧಿಕಾರ, ಭಿನ್ನಮತ, ಭ್ರಷ್ಟಾಚಾರ ಮುಂತಾದ ಉಣಾ ಅಂಶಗಳ ನಡುವೆಯೂ ಬಿಬಿಎಂಪಿ ಚುನಾವಣೆಯಲ್ಲಿ ಬಿಜೆಪಿಗೆ ಸಿಕ್ಕ ಗೆಲುವು ಅದ್ವಿತಿಯ ವಾದುದು.

ಸತತವಾಗಿ ನಡೆದ ಚುನಾವಣೆಗಳಲ್ಲಿ ನಿರಂತರವಾಗಿ ಸಿಕ್ಕ ಗೆಲುವು ಯಡಿಯೂರಪ್ಪ ಬೀಗುವಂತೆ ಮಾಡಿದೆ. ವಿರೋಧ ಪಕ್ಷಗಳು ನಿರ್ವಿಣ್ಣವಾಗಿವೆ. ಯಡಿಯೂರಪ್ಪ ಅವರ ವಿರುದ್ಧ ತೊಡೆ ತಟ್ಟಿದ್ದ ರೆಡ್ಡಿ ಸೋದರರು, 'ಆ ಕಡೆ ಕೋರ್ಟ್ ಕೇಸ್‌ಗಳು, ಈ ಕಡೆ ರಾಜ್ಯಪಾಲರ ನೋಟಿಸುಗಳ ಮಧ್ಯೆ ಅಧಿಕಾರ ಉಳಿದರೆ ಸಾಕು' ಎಂದು ಮೆತ್ತಗಾಗಿದ್ದಾರೆ. ಯಡಿಯೂರಪ್ಪ ಅವರ ಕುರ್ಚಿಗೆ ಈಗ ಯಾವ ಧಕ್ಕೆಯೂ ಇಲ್ಲ. ಅವರು ಪಕ್ಷದ ಏಕಮೇವಾದ್ವಿತಿಯ ನಾಯಕ. ಅವರ ಬೆಂಬಲಕ್ಕೆ ಬಹು ದೊಡ್ಡ ಸಮಾಜ ನಿಂತಿದೆ. ಯಾರಾದರೂ ತುಟಿ ಪಿಟಕ್ ಎಂದರೂ 'ಬಾಯಿ ಮುಚ್ಚಿಕೊಂಡು ಇರು' ಎಂದು ತಾಕೀತು ಮಾಡುವ ಮಠಾಧೀಶರು ಇದ್ದಾರೆ!

ಯಡಿಯೂರಪ್ಪನವರೇ ಹೇಳಿಕೊಳ್ಳುವ ಹಾಗೆ ಭಾಗ್ಯಲಕ್ಷ್ಮಿಯಂಥ ಕೆಲವು ಒಳ್ಳೆಯ ಯೋಜನೆಗಳನ್ನು ಈ ಸರ್ಕಾರ ರೂಪಿಸಿರಬಹುದು; ಬೆಂಗಳೂರಿನಲ್ಲಿ ಹಿಂದೆ ಕಂಡು ಕೇಳಿ ಅರಿಯದ 'ಅಭಿವೃದ್ಧಿ'ಯೂ ಆಗಿರಬಹುದು. ಆದರೆ, ಈ ಸರ್ಕಾರ ಮಂಡಿಸಿದ ಬಜೆಟ್‌ಗಳನ್ನು ನೋಡಿದರೆ ಅದಕ್ಕೆ ಸಮಗ್ರ ಅಭಿವೃದ್ಧಿಯ ಒಂದು ದೃಷ್ಟಿಕೋನ ಇದೆ ಎಂದು ಅನಿಸುವುದಿಲ್ಲ. ಬೊಕ್ಕಸದ ಹಣವನ್ನು ಎಲ್ಲರಿಗೂ ಒಂದಿಷ್ಟು ಹಂಚಿಬಿಟ್ಟರೆ ಜನ ಖುಷಿಯಾಗಬಹುದು ಎಂಬ ಭಾವನೆಯೇ ಅಲ್ಲಿ ಎದ್ದು ಕಾಣುತ್ತದೆ. ವೈಯಕ್ತಿಕ ಲಾಭದಾಸೆಯ ಇಂದಿನ ದಿನಗಳಲ್ಲಿ ಹೀಗೆ ಹಣ ಹಂಚುವುದನ್ನು ಜನ ಇಷ್ಟಪಟ್ಟರೂ ಪಡಬಹುದು. ಆದರೆ, ಸರ್ಕಾರಕ್ಕೆ ಒಂದು ಹೊಣೆ ಎಂದು ಇರುವುದಿಲ್ಲವೇ? ಅದಕ್ಕೆ, ಜನರ ಸಣ್ಣಪುಟ್ಟ ಆಸೆಗಳು ಮುಖ್ಯವೇ ಅಥವಾ ಒಟ್ಟು ರಾಜ್ಯವನ್ನು ಪ್ರಗತಿಯ ಹಾದಿಯಲ್ಲಿ ತೆಗೆದುಕೊಂಡು ಹೋಗಿ ಇಡೀ ರಾಷ್ಟ್ರ ಮೆಚ್ಚುವ ಹಾಗೆ ನಿಲ್ಲಿಸುವುದು ಮುಖ್ಯವೇ?

ಯಡಿಯೂರಪ್ಪನವರ ಇನ್ನೊಂದು ದೊಡ್ಡ ಸಮಸ್ಯೆ ಎಂದರೆ ಅವರ ಅನುಮಾನದ ಸ್ವಭಾವ. ಅವರು ತಮ್ಮ ಎಡಗೈಯನ್ನೇ ನಂಬುವಂತೆ ಕಾಣುವುದಿಲ್ಲ. ನಾಯಕನಾದವನು, ಒಂದು ತಂಡವನ್ನು ಮುನ್ನಡೆಸಬೇಕಾದವನು ತನ್ನ ಜತೆಗೆ ಇರುವವರನ್ನು ನಂಬಬೇಕಾಗುತ್ತದೆ; ಅವರಿಗೆ ಆಗಾಗ ಬೆನ್ನು ತಟ್ಟಿ ಮೆಚ್ಚುಗೆಯ ನೋಟ ಬೀರಬೇಕಾಗುತ್ತದೆ. ರಾಜ್ಯ ಸಂಪುಟದ ಯಾವ ಮಂತ್ರಿಯಾದರೂ ವರದಿಗಾರರನ್ನು ಕರೆದು ಇದುವರೆಗೆ ತನ್ನ ಖಾತೆಯಲ್ಲಿ ಇಂತಿಂಥ ಸಾಧನೆಯಾಗಿದೆ ಎಂದು

ಹೇಳಿ ಕೊಂಡಿದ್ದಾನೆಯೇ? ಹೇಳಿ ಮುಖ್ಯಮಂತ್ರಿಯ ಕೆಂಗಣ್ಣಿಗೆ ಏಕೆ ಬೀಳುವುದು ಎಂದು ಅವರು ಹೆದರಿದರೆ ಹೇಗೆ? ಹಾಗೆಂದು ಅಶಿಸ್ತಿನಿಂದ ನಡೆದುಕೊಂಡ, ಭ್ರಷ್ಟಾತಿಭ್ರಷ್ಟ ಸಚಿವರಿಗೆ ಮುಖ್ಯಮಂತ್ರಿಯಾದವರು, 'ಏನಯ್ಯ ಎಷ್ಟೊಂದು ಹಣ ತಿನ್ನುತ್ತಿ?' ಎಂದು ಎಚ್ಚರಿಸಿದ್ದಾರೆಯೇ?

ಸೋಜಿಗ ಎಂದರೆ, ಈ ಸಂಪುಟದ ಕಾರ್ಯ ವೈಖರಿಯ ಪರಾಮರ್ಶೆಯೇ ಆಗಿಲ್ಲ. ಕಾಂಗ್ರೆಸ್ ಸರ್ಕಾರ ಇದ್ದಾಗ ರಾಜ್ಯ ಉಸ್ತುವಾರಿಯ ಎಐಸಿಸಿ ಪ್ರತಿನಿಧಿ ಬಂದು ಈ ಕೆಲಸ ಮಾಡುತ್ತಿದ್ದರು. ಆತ ಎಲ್ಲಿ ಮೇಡಂ ಮುಂದೆ ತಮ್ಮ ಬಗ್ಗೆ ಇಲ್ಲದ್ದನ್ನು, ಸಲ್ಲದ್ದನ್ನು ಹೇಳಿಯಾರು ಎಂದು ಸಚಿವರು ಶಾಲಾ ಮಕ್ಕಳ ಹಾಗೆ ತಮ್ಮ ಖಾತೆಯ ಸಾಧನೆಗಳನ್ನು ಪಟ್ಟಿ ಮಾಡಿಕೊಂಡು ಹೋಗಿ ವರದಿ ಒಪ್ಪಿಸುತ್ತಿದ್ದರು. ಈ ಕೆಲಸವನ್ನು ಬಿಜೆಪಿಯ ರಾಷ್ಟ್ರೀಯ ನಾಯಕರು ಏಕೆ ಮಾಡಲಿಲ್ಲ? 'ದಕ್ಷಿಣ ಭಾರತ ದಲ್ಲಿ ಬಿಜೆಪಿ ಖಾತೆ ತೆರೆದಿದೆ. ಈ ಸರ್ಕಾರವನ್ನು ಉಳಿಸಿಕೊಳ್ಳೋಣ, ಮಾದರಿ ಯಾಗಿ ಆಡಳಿತ ಕೊಡೋಣ' ಎಂದು ಅವರು ಎಂದಾದರೂ ಹೇಳಿದ್ದಾರೆಯೇ? ಯಾರಿಗಾದರೂ ಕಿವಿ ಹಿಂಡಿದ್ದಾರೆಯೇ? ಎಲ್ಲಿ ಹೇಳುತ್ತಾರೆ? ರಾಷ್ಟ್ರ ಮಟ್ಟದ ಬಿಜೆಪಿಯಲ್ಲಿ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ.

ಯಡಿಯೂರಪ್ಪ ಕೂಡ ದೇವೇಗೌಡರ ಹಾಗೆ 24 ಗಂಟೆ ರಾಜಕಾರಣಿ. ನೆಲಮಟ್ಟದ ಪುರಸಭೆಯ ಸದಸ್ಯ ಸ್ಥಾನದಿಂದ ಮುಖ್ಯಮಂತ್ರಿಯ ಗಾದಿಯವರೆಗೆ ಏರಿ ಬಂದವರು. ಜನರ ಕಷ್ಟ ಅವರಿಗೆ ಗೊತ್ತಿದೆ. ಅವರಿಗೆ ಏನು ಬೇಕು ಎಂಬುದೂ ಗೊತ್ತಿದೆ. ಆದರೆ, ಅದನ್ನು ಹೇಗೆ ಜಾರಿಗೆ ತರಬೇಕು ಎಂಬ ದೃಷ್ಟಾರನ ಕಣ್ಣು ಇಲ್ಲ. ಅವರಿಗೆ ಮಾರ್ಗದರ್ಶನ ಮಾಡುವವರೂ ಯಾರೂ ಇಲ್ಲ. ಮಾಡುವ ಧೈರ್ಯವೂ ಇಲ್ಲ.

ಯಡಿಯೂರಪ್ಪ ಅವರಿಗೆ ಸತತ ಧಾವಂತ, ಅತೃಪ್ತಿ. ಒಂದು ನಾಟಕ ನೋಡಿ, ಸಂಗೀತ ಕೇಳಿ ಅವರು ಹೊತ್ತು ಕಳೆದುದು ಯಾರಿಗೂ ಗೊತ್ತಿಲ್ಲ. ನಿರಂತರ ಪ್ರವಾಸ. ಒಂದೇ ದಿನ ಮೂರು ಜಿಲ್ಲೆಗೆ ಹೋಗಿ ಬರಲೂ ಅವರು ಸಿದ್ಧ. 'ವಿಧಾನ ಸೌಧದಲ್ಲಿ ಕುಳಿತು ಇಂದು ಮುಖ್ಯಮಂತ್ರಿ ಬರೀ ಕಡತ ನೋಡುತ್ತಾರೆ, ಯಾರನ್ನೂ ನೋಡುವುದಿಲ್ಲ' ಎಂಬ ಪ್ರಕಟಣೆ ಹೊರಬಿದ್ದುದು ನೆನಪಿಲ್ಲ. ಮುಖ್ಯಮಂತ್ರಿಯೇ ವಿಧಾನಸೌಧದಲ್ಲಿ ಕುಳಿತುಕೊಳ್ಳದೇ ಇದ್ದರೆ ಮಂತ್ರಿಗಳು ಏಕೆ ಕುಳಿತುಕೊಳ್ಳುತ್ತಾರೆ? 'ಕುಳಿತು ನಾವು ನಿರ್ಧಾರ ಮಾಡುವುದು ಏನಿದೆ? ಎಲ್ಲವನ್ನೂ ಮುಖ್ಯಮಂತ್ರಿಗಳೇ ನೋಡಿಕೊಳ್ಳುತ್ತಾರಲ್ಲ?' ಎಂದು ಅವರು ಕೈ ಚೆಲ್ಲಿ ಕುಳಿತುಕೊಂಡಿದ್ದಾರೆ. ವಿಧಾನ ಸೌಧವನ್ನು ಈ ಸರ್ಕಾರದ ಸಚಿವರಷ್ಟು ತಾತ್ಸಾರ ಮಾಡಿದ ಸಚಿವರು ಯಾವ ಸರ್ಕಾರದಲ್ಲಿಯೂ ಇರಲಿಲ್ಲ.

ಒಂದು ರಾಜ್ಯ ಸರ್ಕಾರದ ಆಡಳಿತವನ್ನು ಒಬ್ಬ ಮುಖ್ಯಮಂತ್ರಿ ಅಥವಾ ಅವರ ಮನೆಯ ಸದಸ್ಯರು ನೋಡಿಕೊಳ್ಳುವುದು ಒಳ್ಳೆಯದಲ್ಲ. ಯಾವುದೇ ಅಧಿಕಾರ ಇಷ್ಟು ವಿಶೃಂಖಲವಾಗಿರಬಾರದು. ಸರ್ಕಾರದ ಮುಖ್ಯ ಕಾರ್ಯದರ್ಶಿಯೇ 'ಯಾವ ಸಚಿವರೂ ವಿಧಾನಸೌಧದ ಕಡೆ ಮುಖವನ್ನೇ ಹಾಕದೇ ಇದ್ದರೆ ಆಡಳಿತ ನಡೆಸುವುದು

ಹೇಗೆ' ಎಂದು ಅಸಮಾಧಾನ ವ್ಯಕ್ತಪಡಿಸಿದ ಮಾತು ಈ ಸರ್ಕಾರದಲ್ಲಿ ಮಾತ್ರ ಕೇಳಿಬಂತು.

ರಾಮಕೃಷ್ಣ ಹೆಗಡೆ, ಜೆ.ಎಚ್.ಪಟೇಲರು ತಮ್ಮ ಸಂಪುಟದ ಸಹೋದ್ಯೋಗಿ ಗಳಿಗೆ ಮುಕ್ತ ಸ್ವಾತಂತ್ರ್ಯ ಕೊಟ್ಟಿದ್ದರು. ಭಿನ್ನಾಭಿಪ್ರಾಯವನ್ನು ಸಹಿಸುತ್ತಿದ್ದರು. ಹಾಗಾಗಿ ಅನೇಕ ನಾಯಕರು ಅಲ್ಲಿ ಬೆಳೆದು ಬಂದರು. ಯಡಿಯೂರಪ್ಪ ಬಿಟ್ಟರೆ ಅವರ ಸರ್ಕಾರದಲ್ಲಿ ನಾಯಕತ್ವದ ವರ್ಚಸ್ಸಿನ ಸಚಿವರು ಯಾರು ಇದ್ದಾರೆ? ಬರೀ ನೆರಳುಗಳು ಇದ್ದಾವೆ. ತಮ್ಮ ಖಾತೆಯನ್ನು ಚೆನ್ನಾಗಿಯೇ ನಿರ್ವಹಿಸುತ್ತಿದ್ದ ಶೋಭಾ ಕರಂದ್ಲಾಜೆಯವರನ್ನು ತೆಗೆದು ರೇಣುಕಾಚಾರ್ಯ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡು ಯಡಿಯೂರಪ್ಪ ಯಾವ ಸಂದೇಶ ನೀಡಿದರು? ಬಂಗಾರಪ್ಪ ಅವರನ್ನು ಹಣಿಯಲು ಕರೆತಂದಿದ್ದ ಹಾಲಪ್ಪ ಪಕ್ಷಕ್ಕೆ ಕೊಟ್ಟುದು ಹಾಲಾಹಲವಲ್ಲದೆ ಮತ್ತೇನು?

ಇದೆಲ್ಲದರಿಂದ ಏನಾಗಿದೆ ಎಂದರೆ, ಏನು ಮಾಡಿದರೆ ಏನು ಎಂಬ ನಿರಾಶೆ, ಯಥಾಸ್ಥಿತಿವಾದ. ಹೇಗೂ ಸರ್ಕಾರ ನಡೆದಿದೆಯಲ್ಲ ಎಂಬ ನಿರುಮ್ಮಳತೆ ವಿಜೃಂಭಿಸುತ್ತಿದೆ. ಕೇವಲ ಎರಡೇ ವರ್ಷಗಳ ಆಡಳಿತದಲ್ಲಿಯೇ ಇಂಥ ನಿರುಮ್ಮಳತೆ, ಯಥಾಸ್ಥಿತಿವಾದ ಕಾಣಿಸಿಕೊಂಡರೆ ಇನ್ನೂ ಮೂರು ವರ್ಷಗಳಲ್ಲಿ ಸಚಿವರ ಮನಃಸ್ಥಿತಿ ಏನಾಗಬಹುದು? ಜಡತ್ವ ಬಂದು ಬಿಡುವುದಿಲ್ಲವೇ?

ಮುಖ್ಯಮಂತ್ರಿಯಾದವನು ಒಂದು ತಂಡ ಕಟ್ಟಿಕೊಂಡು ಹೊಸ, ಹೊಸ ಆಲೋಚನೆಗಳಿಗೆ, ಐಡಿಯಾಗಳಿಗೆ ಹಾತೊರೆದರೆ ಸಚಿವರಿಗೂ ಏನಾದರೂ ಮಾಡೋಣ ಎನಿಸಬಹುದು. ಈಗ ಆ ಮುತುವರ್ಜಿಯೇ ಬೇಡ ಎಂಬ ನಿರ್ಲಿಪ್ತತೆ ಬಂದಿದೆ. ನೌಕರಶಾಹಿಗೆ ಯಾವಾಗಲೂ ಜಡತ್ವ ಕಾಡುತ್ತಲೇ ಇರುತ್ತದೆ. ಅದು ಯಥಾಸ್ಥಿತಿವಾದದ ಪರವಾಗಿಯೇ ಇರುತ್ತದೆ. ಬದಲಾವಣೆಯನ್ನು ಶಾಸಕಾಂಗವೇ ತರಬೇಕು, ಬಯಸಬೇಕು. ಅದು ಈಗ ಕಾಣುತ್ತಿಲ್ಲ. ಜತೆಗೆ ನೌಕರಶಾಹಿಯನ್ನು ಅಧೀರಗೊಳಿಸುವ ನಿರಂತರ ವರ್ಗಾವಣೆ ಒಂದು ಪಿಡುಗಾಗಿ, ಭ್ರಷ್ಟ ವ್ಯವಸ್ಥೆಯಾಗಿ ಪರಿವರ್ತನೆಯಾಗಿದೆ.

ಈಗಿನ ಸರ್ಕಾರದಲ್ಲಿ ನಡೆದಷ್ಟು ಭ್ರಷ್ಟಾಚಾರ ಹಿಂದೆ ಯಾವ ಸರ್ಕಾರ ದಲ್ಲಿಯೂ ನಡೆದಿರಲಿಲ್ಲ ಎಂದು ಬಿಜೆಪಿಯ ಕಾರ್ಯಕರ್ತರೇ ಮರುಗುತ್ತಾರೆ. 'ಮರುಗಿ ಪ್ರಯೋಜನವಿಲ್ಲ; ನಾವೂ ಸ್ವಲ್ಪ ಕೈ ಹೊಲಸು ಮಾಡಿಕೊಳ್ಳೋಣ' ಎಂದು ಅವರೂ ಭ್ರಷ್ಟ ಹಾದಿಯಲ್ಲಿ ನಡೆದರೆ ಅದು ಯಾರ ತಪ್ಪು?

ಯಡಿಯೂರಪ್ಪ ಸರ್ಕಾರ ಮಾಡುತ್ತಿರುವ ಇನ್ನೊಂದು ತಪ್ಪು ಪಕ್ಷದ ಹೊರಗಿನವರನ್ನು ಕರೆತಂದು ಮಣೆ ಹಾಕುತ್ತಿರುವುದು. ಸರ್ಕಾರ ರಚನೆ ಮಾಡಲು ಪೂರ್ಣ ಜನಾದೇಶವಿಲ್ಲದ ಕಾರಣ ಪಕ್ಷೇತರರ ಬೆಂಬಲದಿಂದ ಸರ್ಕಾರ ರಚಿಸಿದ್ದು, ಆದರೂ ಸರ್ಕಾರ ಅಸ್ಥಿರಗೊಳಿಸಲು ವಿರೋಧ ಪಕ್ಷಗಳು ಹುನ್ನಾರ ನಡೆಸಿವೆ ಎಂದು ಆಪರೇಷನ್ ಕಮಲಕ್ಕೆ ಕೈ ಹಾಕಿದ್ದನ್ನು ಸಮರ್ಥಿಸಬಹುದು. ಒಪ್ಪಿಕೊಳ್ಳಲೂಬಹುದು. ಆದರೆ, ಅದು ಒಂದು ನಿರಂತರ ಪ್ರಕ್ರಿಯೆ ಎನ್ನುವಂತೆ ವರ್ಷದುದ್ದಕ್ಕೂ ನಡೆದು ಬಿಟ್ಟರೆ ಅದು ನಾಯಕತ್ವದ ದಿವಾಳಿತನ ಎನ್ನದೆ ವಿಧಿಯಿಲ್ಲ. ಉದ್ದಕ್ಕೂ

ಹೊರಗಿನವರನ್ನು ಕರೆದುಕೊಂಡು ಬಂದು ಅವರಿಗೆ ಅಧಿಕಾರ ಕೊಡುತ್ತ ಹೋದರೆ ನಾಳೆ ಅವರು ಬೇರೆ ಕಡೆ ಅಧಿಕಾರ ಸಿಕ್ಕರೆ ಅತ್ತ ಹೋಗುವುದಿಲ್ಲ ಎಂಬ ಗ್ಯಾರಂಟಿಯೇನು? ಇಷ್ಟು ವರ್ಷ ಪಕ್ಷದಲ್ಲಿ ಎಂದಾದರೂ ಅಧಿಕಾರ ಸಿಕ್ಕೀತು ಎಂದು ದುಡಿದವರು ಬರೀ ಗೆಣಸು ಕೆರೆಯುತ್ತ ಕೂಡ್ರಬೇಕೇ?

ಅಧಿಕಾರ ಎಂಬುದು ಒಂದು ಅವಕಾಶ, ಒಂದು ಸವಾಲು. ಯಡಿಯೂರಪ್ಪ ಅವರ ಸರ್ಕಾರ ಎದುರಿಸಿದ ದೊಡ್ಡ ಸವಾಲು, ಉತ್ತರ ಕರ್ನಾಟಕದ 12–14 ಜಿಲ್ಲೆಗಳಲ್ಲಿ ಸಾವಿರಾರು ಕುಟುಂಬಗಳು ಪ್ರವಾಹಕ್ಕೆ ಸಿಲುಕಿ ನೆಲೆ ಕಳೆದುಕೊಂಡು ಒಂದು ವರ್ಷವಾದರೂ ಇನ್ನೂ ತಗಡಿನ ಟೆಂಟ್‌ಗಳಲ್ಲಿಯೇ ವಾಸವಾಗಿರುವುದು. ಅವರಿಗೆ ಪುನರ್ವಸತಿ ಕಲ್ಪಿಸಲು ಮುಖ್ಯಮಂತ್ರಿ ಒಬ್ಬ ಮಂತ್ರಿಯನ್ನು ಇದುವರೆಗೆ 'ಸಮನ್ವಯ ಸಚಿವ' ಎಂದು ಏಕೆ ನೇಮಿಸಲಿಲ್ಲ? ಅಲ್ಲಿನ ಜನರ ಕಷ್ಟ ಯಡಿಯೂರಪ್ಪನವರ ಎದೆಯ ಮೇಲಿನ ಬಂಡೆಕಲ್ಲಾಗಬೇಕಿತ್ತು. ಈ ಜನರ ಸಂಕಷ್ಟ ನಿವಾರಣೆ ಒಂದು ಅವಕಾಶ ಎಂದು ಅವರು ಭಾವಿಸಬೇಕಿತ್ತು. ಸಾರ್ವಜನಿಕರಿಂದ, ಮಠಮಾನ್ಯಗಳಿಂದ ಬಂದ ದುಡ್ಡನ್ನಾದರೂ ಖರ್ಚು ಮಾಡಲು ಇದ್ದ ಅಡಚಣೆ ಗಳನ್ನು ನಿವಾರಿಸಬೇಕಿತ್ತು. ಆ ಜನರು ತಮ್ಮ ಕಷ್ಟ ನಿರಂತರ ಎಂದು ಅಂದುಕೊಳ್ಳ ಬಾರದು. ಅವರಿಗೆ ಬಾಯಿಯಿಲ್ಲ. ಬಾಯಿ ಮಾಡಲು ರಟ್ಟೆಯಲ್ಲಿ ಶಕ್ತಿಯೂ ಇಲ್ಲ.

ಎಚ್.ಡಿ. ಕುಮಾರಸ್ವಾಮಿ ಏಕೋ ಏನೋ ಈ ಸರ್ಕಾರದ ಸಚಿವರಿಗೆ ಒದೆಯಿರಿ ಎಂದಿದ್ದಾರೆ. ಅದು ಸದಭಿರುಚಿ ಅಲ್ಲದೇ ಇರಬಹುದು. ಆದರೆ, ಜನರೂ ಹಾಗೆ ಯೋಚಿಸುವ ಮೊದಲು ಯಡಿಯೂರಪ್ಪ ಎಚ್ಚೆತ್ತುಕೊಳ್ಳಬೇಕು. ಸಮೃದ್ಧ ಕರ್ನಾಟಕದ ಕನಸನ್ನು ಅವರು ಕಾಣಬೇಕು. ಯಡಿಯೂರಪ್ಪ ಕಳೆದ ಎರಡು ವರ್ಷಗಳಲ್ಲಿ ಗಳಿಸಿದ ಅಂಕಗಳು ಜಸ್ಟ್ ಪಾಸ್ ಆಗುವಷ್ಟು. ಅಷ್ಟೇ ಸಾಕೇ?

■

# ಸಾವಿನಲ್ಲೂ ವ್ಯತ್ಯಾಸ; ಇಲ್ಲ ಎನ್ನುವುದು ಹೇಗೆ?

ಸಾವೇ ಹಾಗೆ, ಅದು ನಿರ್ದಯಿ. ಅದಕ್ಕೆ ಹೆಣ್ಣು-ಗಂಡು, ಮಕ್ಕಳು-ಮುದುಕರು, ವಿಮಾನ-ಬಸ್ ಇಂಥ ಯಾವ ವ್ಯತ್ಯಾಸವೂ ಗೊತ್ತಿಲ್ಲ. ದುಬೈಗೆ ಬದುಕು ಅರಸಿ ಹೋದ 158 ಜನ ಸುಟ್ಟು ಕರಕಲಾದ ದಾರುಣ ಘಟನೆ ಮರೆತು ಹೋಗುವ ಮುನ್ನವೇ ಸುರಪುರ ಬಸ್‌ನಲ್ಲಿದ್ದ 30 ಜನ ಬಡವರೂ ಸುಟ್ಟು ಕರಕಲಾಗಿ ಹೋಗಿದ್ದಾರೆ. ವ್ಯತ್ಯಾಸ ಒಂದೇ ಎಂದರೆ, ಮಂಗಳೂರು ಬಜ್ಪೆ ವಿಮಾನ ನಿಲ್ದಾಣದಲ್ಲಿ ಸತ್ತವರು ದುಬೈನಲ್ಲಿ ಹೊಟ್ಟೆಪಾಡು ಅರಸಿ ಹೋದವರು. ಚಳ್ಳಕೆರೆ ಬಳಿ ಸತ್ತವರು ಬೆಂಗಳೂರಿನಲ್ಲಿ ಕೂಲಿ ನಾಲಿ ಮಾಡಿ ಹೊಟ್ಟೆ ತುಂಬಿಕೊಳ್ಳಲು ಬರುವವರು. ದುಬೈಗೆ ದುಡಿಯಲು ಹೋದವರು ಒಂದಿಷ್ಟು ದುಡ್ಡು ಕಾಸು, ಚಿನ್ನ ಮಾಡಿಕೊಂಡಿರಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ ಚಿತ್ರವನ್ನೂ, ಶಕ್ತಿಯನ್ನೂ ಬದಲಿಸಿರಬಹುದು. ಸುರಪುರದ ಮಂದಿ ತಾವೂ ಉದ್ಧಾರವಾಗಲಿಲ್ಲ. ತಮ್ಮ ಮನೆಯನ್ನೂ ಉದ್ಧರಿಸಲಿಲ್ಲ. ತಲೆಮಾರಿನಿಂದ ಅವರು ಹೀಗೆಯೇ ಗುಳೆ ಬರುತ್ತಲೇ ಇದ್ದಾರೆ. ಮುಂದೆಯೂ ಹೋಗುತ್ತಲೇ ಇರುತ್ತಾರೆ. ಇದು ಬರೀ ಸುರಪುರದ ಸಮಸ್ಯೆಯಲ್ಲ. ಇಡೀ ಉತ್ತರ

ಕರ್ನಾಟಕದ ಸಮಸ್ಯೆ. ಉತ್ತರ ಕರ್ನಾಟಕದಲ್ಲಿ ಗುಲ್ಬರ್ಗಾ ವಿಭಾಗದ ಎಲ್ಲ ಜಿಲ್ಲೆಗಳ ತಾಲ್ಲೂಕುಗಳ ಸಮಸ್ಯೆ. ಬೆಳಗಾವಿ ವಿಭಾಗದಲ್ಲಿ ವಿಜಾಪುರ, ಬಾಗಲಕೋಟೆ ಜಿಲ್ಲೆಗಳ ಸಮಸ್ಯೆ. ವ್ಯತ್ಯಾಸ ಎಂದರೆ ವಿಜಾಪುರ, ಬಾಗಲಕೋಟೆ ಜಿಲ್ಲೆಯ ಜನರು ಗೋವಾ, ಮುಂಬೈಗೆ ವಲಸೆ ಹೋದರೆ, ಗುಲ್ಬರ್ಗಾ ವಿಭಾಗದ ಜನರು ಬೆಂಗಳೂರು ಕಡೆ ಬರುತ್ತಾರೆ. ಬೆಂಗಳೂರಿನಲ್ಲಿ ಇಂಥ ವಲಸಿಗರ ಗುಲ್ಬರ್ಗಾ ಕಾಲೊನಿಯೇ ನಿರ್ಮಾಣವಾಗಿದೆ.

ಸುರಪುರ ಒಂದು ಕಾಲದಲ್ಲಿ ಬರಡು ತಾಲ್ಲೂಕಾಗಿತ್ತು. ನೀರಾವರಿ ಇರಲೇ ಇಲ್ಲ. ಈಗ ಅಲ್ಲಿ ಕೃಷ್ಣೆ ಹರಿಯುತ್ತಿದ್ದಾಳೆ. ಆರು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿ ಆಗಿದೆ. ಆದರೆ, ಭೂಮಿ ಕನ್ನಡಿಗರ ಕೈ ತಪ್ಪಿ ಹೋಗಿದೆ. ಪಕ್ಕದ ಆಂಧ್ರದ ಶ್ರೀಮಂತರು ಜಮೀನು ಖರೀದಿಸಿ ಭತ್ತ ಬೆಳೆಯುತ್ತಿದ್ದಾರೆ. ಸ್ಥಳೀಯರಿಗೆ ಒಂದು ಎಕರೆ, ಎರಡು ಎಕರೆ ಭೂಮಿ ಇದೆ. ಅಲ್ಲಿ ಸಾಗುವಳಿ ಮಾಡುವುದು ಲಾಭಕರವಲ್ಲ. ವರ್ಷಕ್ಕೊಂದು ಮಕ್ಕಳೂ ಹುಟ್ಟಿ ಸಂಸಾರ ಬೆಳೆಯುತ್ತದೆ. ಸ್ವಂತ ಜಮೀನಿನಲ್ಲಿ ಬೆಳೆ ಬೆಳೆಯುವುದೂ ಒಂದೇ, ಇನ್ನೊಬ್ಬರ ಜಮೀನಿನಲ್ಲಿ ಹೋಗಿ ದುಡಿಯುವುದೂ ಒಂದೇ. ಹೊಟ್ಟೆ ಮಾತ್ರ ತುಂಬುವುದಿಲ್ಲ. ಬೆಂಗಳೂರು ಕಡೆಯ ದಾರಿಯೊಂದೇ ಬದುಕಿಗೆ ದಾರಿ. ಇವರಿಗೆ ವಲಸೆ ಆಯ್ಕೆಯಲ್ಲ. ಅನಿವಾರ್ಯವಾದುದು. 'ಜೀವನ ಮಟ್ಟ ಸುಧಾರಿಸಿ ಕೊಳ್ಳಬೇಕು, ದುಡ್ಡು ಮಾಡಿ ಮನೆಗೂ ಕಳುಹಿಸಬೇಕು' ಎಂದು ದುಬೈಗೆ ಹೋದವರಲ್ಲ ಇವರು. ಹೇಗಾದರೂ ಮಾಡಿ ಎರಡು ಹೊತ್ತು ಹೊಟ್ಟೆ ಹೊರೆದರೆ ಸಾಕು ಎಂದು ಹೊರಟವರು. ಇವರಿಗೆ ಬೆಂಗಳೂರಿನಲ್ಲಿ ಸಿಗುವ ಕೂಲಿಯಾದರೂ ಎಷ್ಟು? ದಿನಕ್ಕೆ 175 ರೂಪಾಯಿ. ಅಬ್ಬಬ್ಬಾ ಎಂದರೆ 200 ರೂಪಾಯಿ. ರಾತ್ರಿ ಹಗಲು ದುಡಿದರೆ ಇನ್ನೊಂದಿಷ್ಟು ಹೆಚ್ಚು ಸಿಕ್ಕೀತು. ಅಷ್ಟೆ. ದೇಹ ಶ್ರಮದ ಕಿಮ್ಮತ್ತು ಯಾವಾಗಲೂ ಕಡಿಮೆಯೆ. ಈ ಚಿಕ್ಕ ಆಸೆಯೇ ಅವರನ್ನು ಜವರಾಯನ ಮನೆಗೂ ಕಳುಹಿಸಿ ಬಿಡುತ್ತದೆ.

ಗುಲ್ಬರ್ಗಾ ವಿಭಾಗದ ತಾಲ್ಲೂಕು ಕೇಂದ್ರಗಳಿಂದ ಪ್ರತಿ ಶನಿವಾರ ಹೆಚ್ಚುವರಿ ಬಸ್‌ಗಳು ಬೆಂಗಳೂರಿಗೆ ಹೊರಡುತ್ತವೆ. ಅನೇಕ ಸಾರಿ, ಒಂದೇ ಊರಿನಿಂದ ಎರಡು ಮೂರು ಬಸ್‌ಗಳನ್ನು ಹೆಚ್ಚುವರಿಯಾಗಿ ಬಿಡುತ್ತಾರೆ. ಆ ಬಸ್‌ಗಳಲ್ಲಿ ಪ್ರಯಾಣಿಸುವವ ರೆಲ್ಲ ಕೂಲಿ ಕೆಲಸಗಾರರೇ ಆಗಿರುತ್ತಾರೆ. ಭಾನುವಾರ ಅವರಿಗೆ ಬೆಂಗಳೂರಿನಲ್ಲಿ ಪಗಾರದ ದಿನ. ಮತ್ತೆ ಸೋಮವಾರದಿಂದ ಎಂದಿನಂತೆ ಕಲ್ಲು, ಸಿಮೆಂಟ್ ಹೊತ್ತು ಹೆರವರ ಬಂಗಲೆ ಕಟ್ಟುವ ಕೆಲಸಕ್ಕೆ ತಲೆ ಕೊಡಬೇಕು. ಊರಿನಲ್ಲಿ ಮದುವೆ, ಸಾವು ಮುಂತಾಗಿ ಏನಾದರೂ ಅನಿವಾರ್ಯ ಇದ್ದರೆ ಮಾತ್ರ ಊರಿಗೆ ಬರುವ ಕೂಲಿಕಾರರು ಮತ್ತೆ ಬೆಂಗಳೂರು ಕಡೆಯೇ ಮುಖ ಮಾಡುತ್ತಾರೆ.

ಇವರು ಹೇಗೂ ಕೂಲಿ ಮಾಡಿಯೇ ಹೊಟ್ಟೆ ಹೊರೆಯಬೇಕು. ಹುಟ್ಟಿದ ಊರಿನಲ್ಲಿ ಕೆಲಸ ಸಿಕ್ಕರೆ ಅಲ್ಲಿಯೇ ಇರಬಹುದಿತ್ತು. ಬೆಂಗಳೂರಿನ ಹಂಗಿನ ಶೆಡ್ಡಿಗಿಂತ, ಹುಟ್ಟಿದೂರಿನ ಮಣ್ಣಿನ ಮನೆ ಎಷ್ಟೋ ವಾಸಿ. ವಯಸ್ಸಾದ ಅವ್ವ, ಅಪ್ಪನ ಜತೆಗೂ ಇರಬಹುದಿತ್ತು. ಮಕ್ಕಳನ್ನು ಶಾಲೆಗೆ ಕಳುಹಿಸಬಹುದಿತ್ತು. ತಂದೆಯಿಂದ

ಬಂದ ಒಂದು ಅಥವಾ ಎರಡು ಎಕರೆ ಜಮೀನಿನಲ್ಲಿ ಕುಟುಂಬಕ್ಕೆ ಆಗುವಷ್ಟಾದರೂ ಬೆಳೆ ಬೆಳೆಯಬಹುದಿತ್ತು. ಊರಿನಲ್ಲಿ ಇದ್ದರೆ, ಉದ್ಯೋಗ ಖಾತರಿ ಯೋಜನೆಯಡಿ ಕನಿಷ್ಠ ನೂರು ದಿನಕ್ಕೆ ಆಗುವಷ್ಟು ಮಾತ್ರ ಕೆಲಸ ಸಿಗುತ್ತದೆ. ಉಳಿದ 265 ದಿನಹೊಟ್ಟೆ ಹೊರೆಯುವುದು ಹೇಗೆ? ಕೆಲಸವಾದರೂ ಸಿಗುತ್ತದೆ ಎಂಬ ಗ್ಯಾರಂಟಿಯೂ ಇಲ್ಲ. ಇದು ಈಗಾಗಲೇ ಉತ್ತರ ಕರ್ನಾಟಕದಲ್ಲಿ ಪೂರ್ಣ ವಿಫಲವಾದ ಯೋಜನೆ. ಅದಕ್ಕೂ ರಾಜಕಾರಣಿಗಳೇ ಕಾರಣ. ಊರಿನ ಮುಖಂಡರೇ ಹೊಣೆ. ಖೊಟ್ಟಿ ಹೆಸರುಗಳಲ್ಲಿ ಜಾಬ್ ಕಾರ್ಡ್ ಮಾಡಿ ಕೂಲಿ ಹಣವನ್ನೆಲ್ಲ ಅವರೇ ಹೊಡೆದುಕೊಳ್ಳುತ್ತಾರೆ. ಇವರ ಜತೆಗೆ ಬ್ಯಾಂಕುಗಳು, ವ್ಯವಸಾಯ ಸೇವಾ ಸಂಸ್ಥೆಗಳೂ ಷಾಮೀಲು. ಅಂತಲೇ ಹಣ ಪಾವತಿ ರಸೀತಿಗಳ ಮೇಲೆ ಬರೀ ಹೆಬ್ಬೆಟ್ಟಿನ ಗುರುತೇ ಜಾಸ್ತಿ. ಯಾರು ಹೆಬ್ಬೆಟ್ಟು ಒತ್ತುತ್ತಾರೆ. ಯಾರು ಹಣ ತೆಗೆದುಕೊಳ್ಳುತ್ತಾರೆ ಎಂದು ಹೇಳುವುದು ದುಸ್ತರ. ಕರ್ನಾಟಕಕ್ಕೆ ಈ ಯೋಜನೆಯಡಿ ಕಳೆದ ವರ್ಷ 2,800 ಕೋಟಿ ರೂಪಾಯಿಗಳಷ್ಟು ಹಣ ಬಂದಿದೆ. ಅದೆಲ್ಲ ಹಳ್ಳಿಗರಿಗೆ ತಲುಪಿದ್ದರೆ ವಲಸೆಯ ಪ್ರಮಾಣ ಒಂದಿಷ್ಟಾದರೂ ಕಡಿಮೆ ಆಗುತ್ತಿತ್ತು; ಬೀದಿ ಹೆಣವಾಗುವುದೂ ತಪ್ಪುತ್ತಿತ್ತು.

ಇದಕ್ಕೆಲ್ಲ ಯಾರನ್ನು ದೂರೋಣ? ಉತ್ತರ ಕರ್ನಾಟಕ ಮೂವರು ಮುಖ್ಯಮಂತ್ರಿಗಳನ್ನು ಕೊಟ್ಟ ಪ್ರದೇಶ. ಅದರಲ್ಲಿ ಇಬ್ಬರು ಗುಲ್ಬರ್ಗಾ ವಿಭಾಗದಿಂದಲೇ ಬಂದವರು. ಅವರನ್ನು ಬಿಟ್ಟರೂ ಆ ಭಾಗದಲ್ಲಿ ರಾಜಕೀಯ ಘಟಾನುಘಟಿ ಗಳಿಗೇನೂ ಲೆಕ್ಕವಿಲ್ಲ. ಅವರಿಗೆ ಈ ಭಾಗದ ಅಭಿವೃದ್ಧಿಯ ಕನಸೇ ಇರಲಿಲ್ಲವೇ? ಬಂದ ದುಡ್ಡಾದರೂ ಎಲ್ಲಿ ಹೋಯಿತು? ಇಷ್ಟು ವರ್ಷವಾದರೂ ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚು ದಿನಗೂಲಿ ಜನ (ಶೇ 40) ಈ ಭಾಗದಲ್ಲಿಯೇ ಇದ್ದಾರೆ. ಇವರ ಪ್ರಮಾಣ ರಾಜ್ಯದ ಇತರ ಭಾಗದಲ್ಲಿ ಕೇವಲ ಶೇ 27 ರಷ್ಟು. ಇಡೀ ಉತ್ತರ ಕರ್ನಾಟಕದಲ್ಲಿ ಶಾಲೆಗೆ ಸೇರದ ಮಕ್ಕಳ ಪ್ರಮಾಣ ಶೇ 67 ಕ್ಕೂ ಹೆಚ್ಚು. ಆರಂಭದ ಶಿಕ್ಷಣವನ್ನೇ ಪಡೆಯದ ಈ ಮಕ್ಕಳು ಜೀವನವಿಡೀ ಕೂಲಿಕಾರರಾಗಿಯೇ ಬದುಕು ಸಾಗಿಸ ಬೇಕಾಗುತ್ತದೆ. ಅವರಿಗೂ ಅಪ್ಪ ಹಾಕಿದ ಆಲದ ಮರವೇ ಉರುಳು. ಅದು ಬೆಂಗಳೂರಿನ ಗಾರೆ ಕೆಲಸ! ಗೋವಾದಲ್ಲಿ ಬಂದರು ಕೆಲಸ.

ಅನಕ್ಷರತೆ ಇರುವಲ್ಲಿ ಭ್ರಷ್ಟಾಚಾರ ಹೆಚ್ಚು. ಅಲ್ಲಿ ಜನ ಪ್ರತಿಭಟನೆಯ ದನಿಯನ್ನೇ ಕಳೆದುಕೊಂಡಿರುತ್ತಾರೆ. ಅಧಿಕಾರಿಗಳು, ರಾಜಕಾರಣಿಗಳು ಷಾಮೀಲಾಗಿ ಬಡವರ ಕೂಲಿಯ ದುಡ್ಡನ್ನು ಲೂಟಿ ಹೊಡೆಯುತ್ತಿದ್ದರೂ ಒಬ್ಬರೂ ಚಕಾರ ಎತ್ತದೆ, 'ಇದು ನಮ್ಮ ಹಣೆಬರಹ' ಎಂದು ಗೋವಾ, ಮುಂಬೈ, ಬೆಂಗಳೂರು ಕಡೆಗೆ ಹೊರಟು ಬಿಡುತ್ತಾರೆ. ದುರಂತ ಎಂದರೆ ಚುನಾವಣೆ ಬಂದಾಗ ಇವರೇ ಬಂದು ದುಡ್ಡು ಕೊಟ್ಟವರಿಗೆ ಮತ ಒತ್ತಿ ಮತ್ತೆ ಬಂದ ನಗರದ ದಾರಿ ಹಿಡಿಯುತ್ತಾರೆ. ತಮ್ಮ ಇಡೀ ಜೀವನವನ್ನು ಕೆಲಸ ಕೊಡಿಸುವ ಕಂಟ್ರಾಕ್ಟ್‌ದಾರನಿಗೆ ಒತ್ತೆ ಇಟ್ಟು ಬಿಡುತ್ತಾರೆ.

ಆಯ್ಕೆಯ ದುಬೈ ವಲಸೆ, ಅನಿವಾರ್ಯದ ಬೆಂಗಳೂರು ವಲಸೆಯ ನಡುವೆ ವ್ಯತ್ಯಾಸವಿದೆ. ದಕ್ಷಿಣ ಕನ್ನಡ ಜಿಲ್ಲೆಯ ಜನರು ಜಾಣರು. ಉತ್ತರ ಕರ್ನಾಟಕದ ಜನ

ದಡ್ಡರು. ದಕ್ಷಿಣ ಕನ್ನಡದ ಜನರೂ ದೊಡ್ಡ ಕೆಲಸಗಳಿಗೆ ವಲಸೆ ಹೋಗಲಿಕ್ಕಿಲ್ಲ. ಆದರೆ, ಅವರು ಕೊನೆಯ ಪಕ್ಷ ವಿಮಾನದಲ್ಲಿ ಹೋಗುತ್ತಾರೆ. ಉತ್ತರ ಕರ್ನಾಟಕದ ವಲಸಿಗಳು ಕೆಂಪು, ಆರ್ಡಿನರಿ ಬಸ್ಸುಗಳಲ್ಲಿ ಪ್ರಯಾಣಿಸುತ್ತಾರೆ. ವಿಮಾನದಲ್ಲಿ ಸಾವು ಬಂದರೆ ಕನಿಷ್ಠ 72 ಲಕ್ಷ ಪರಿಹಾರ ಸಿಗುತ್ತದೆ. ಬಸ್ಸಿನಲ್ಲಿ ಸಾವು ಕಾದಿದ್ದರೆ ಎರಡು ಲಕ್ಷ ಪರಿಹಾರ ಸಿಗುತ್ತದೆ. ಬದುಕಿನಲ್ಲಿ ಮಾತ್ರವಲ್ಲ ಸಾವಿನಲ್ಲಿಯೂ ವ್ಯತ್ಯಾಸ ಇರುತ್ತದೆ. ಇಲ್ಲ ಎನ್ನುವುದು ಹೇಗೆ?

■

# ಆತ್ಮಹತ್ಯೆಗೆ ಯತ್ನಿಸಲು ಕಾಂಗ್ರೆಸ್ಸಿಗೆ ಹೊತ್ತು ಗೊತ್ತು ಬೇಡವೇ!

ಯಡಿಯೂರಪ್ಪ ನಗುತ್ತಿರಬಹುದು. ಅವರು ನಗಲು ಒಂದಲ್ಲ ಹಲವು ಕಾರಣಗಳು ಇವೆ. ಜಾಗತಿಕ ಬಂಡವಾಳದಾರರ ಮೇಳಕ್ಕೆ ಎಲ್ಲರ ನಿರೀಕ್ಷೆ ಮೀರಿ ಯಶಸ್ಸು ಸಿಕ್ಕಿದೆ. ಅಷ್ಟೊಂದು ಮಂದಿ ಉದ್ಯಮಿಗಳನ್ನು ಒಂದೇ ವೇದಿಕೆಯಲ್ಲಿ ತಂದು ಕೂಡಿಸುವುದೇ ದೊಡ್ಡ ಸಾಹಸ. ಅವರೆಲ್ಲ ಸೇರಿ ರಾಜ್ಯದಲ್ಲಿ ಹೂಡಿಕೆ ಮಾಡಲು ನಿರ್ಧರಿಸಿರುವ ಮೊತ್ತವೂ ಸಣ್ಣದಲ್ಲ. ಇಂಥ ಮೇಳ ಈಚಿನ ವರ್ಷಗಳಲ್ಲಿ ಯಾವ ರಾಜ್ಯದಲ್ಲಿಯೂ ನಡೆದ ಉದಾಹರಣೆ ಇಲ್ಲ. ಕೇಂದ್ರ ಸಚಿವ ಸುಬೋಧಕಾಂತ ಸಹಾಯ್ ಅವರ ಮಾತುಗಳನ್ನು ಉಲ್ಲೇಖಿಸಬಹುದಾದರೆ ಪ್ರಧಾನಿ ಕೂಡ ಮೇಳದ ಬಗ್ಗೆ ಬೆರಗಾಗಿದ್ದಾರೆ; ಇದು ಬೇರೆ ರಾಜ್ಯಗಳಲ್ಲಿ ಅನುಸರಿಸ ಬೇಕಾದ ಮಾದರಿ ಎಂದಿದ್ದಾರೆ. ಯಡಿಯೂರಪ್ಪ ಇನ್ನಷ್ಟು ಕಾಲ ಮೇಳದ ಗುಂಗಿನಲ್ಲಿಯೇ ಬೀಗುತ್ತಿರಲು ಇಷ್ಟು ಸಾಕು. ಹೌದು, ಎಲ್ಲ ಗುಳ್ಳೆಗಳು ಒಡೆದು ಹೋಗುತ್ತವೆ. ಮೇಳವೂ ಒಂದು ಗುಳ್ಳೆ ಎನ್ನುವವರೂ ಇದ್ದಾರು. ಅವರು ಕೂಡ ಈ ಗುಳ್ಳೆ ಒಡೆದು ಹೋಗುವುದನ್ನು ಕಾಣಲು ಒಂದಿಷ್ಟು ಕಾಲ ಕಾಯಬೇಕಾಗುತ್ತದೆ.

ಯಡಿಯೂರಪ್ಪ ಬೀಗಲು ಇನ್ನೊಂದು ಕಾರಣವಿದೆ. ರಾಜ್ಯದಲ್ಲಿ ಇಂದು, ನಾಳೆ ಬಿಜೆಪಿ ಆತ್ಮಹತ್ಯೆ ಮಾಡಿಕೊಂಡು ಬಿಡುತ್ತದೆ ಎಂದು ಕಾಂಗ್ರೆಸ್ಸಿಗರು ಲೆಕ್ಕ ಹಾಕುತ್ತಿದ್ದರು. ಅದಕ್ಕೆ ತಕ್ಕಂತೆ ಆಗೀಗ ಯಡಿಯೂರಪ್ಪನವರಿಗೆ ರೆಡ್ಡಿ ಸೋದರರು, ರೇಣುಕಾಚಾರ್ಯರಂಥವರು ಗುಟುರು ಹಾಕುತ್ತಿದ್ದರು. ಆದರೆ, ಮೊನ್ನೆ ಹೊರಗೆ ಬಿದ್ದ ನೆರೆ ಪರಿಹಾರ ಹಣ ದುರುಪಯೋಗದ ಸುದ್ದಿ ಆತ್ಮಹತ್ಯೆ ಮಾಡಿಕೊಳ್ಳಲು ಕಾಂಗ್ರೆಸ್ಸಿಗರೇ ತರಾತುರಿಯಲ್ಲಿ ಇದ್ದಾರೆ ಎಂಬುದನ್ನು ತೋರಿಸಿಕೊಟ್ಟಿದೆ. ವಾಸ್ತವವಾಗಿ ಈ ಹಗರಣವನ್ನು ಬಿಜೆಪಿ ಬಯಲಿಗೆ ತರಬೇಕಿತ್ತು. ಈಗ ಅದನ್ನು ಕಾಂಗ್ರೆಸ್ಸಿಗರೇ ಬಯಲಿಗೆ ಹಾಕಿ ಇಡೀ ಪಕ್ಷವನ್ನು ಬೆತ್ತಲು ಮಾಡಿದ್ದಾರೆ ಎಂಬುದರಲ್ಲಿ ಯಾರಿಗೇನೂ ಅನುಮಾನವಿಲ್ಲ. ಕೆಪಿ.ಸಿ.ಸಿ. ಅಧ್ಯಕ್ಷ ಆರ್.ವಿ. ದೇಶಪಾಂಡೆಯವರಿಗೆ ಇದರ ಹಿಂದೆ ಯಾರು ಇದ್ದಾರೆ ಎಂಬುದೂ ಗೊತ್ತಿದೆ. ಹೆಸರು ಹೇಳಲು ಅವರು ಏಕೋ ಹಿಂದೇಟು ಹಾಕುತ್ತಿದ್ದಾರೆ. ಅವರಿಗೆ ಏನು ಭಯ ಎಂದು ಗೊತ್ತಿಲ್ಲ.

ಈ ಸುದ್ದಿಯನ್ನು ದೆಹಲಿಯಲ್ಲಿ ಪತ್ರಿಕೆಗಳಿಗೆ ಕೊಟ್ಟುದರಲ್ಲಿಯೂ ಸಂಚು ಇದೆ. ಸುದ್ದಿ ಕೊಟ್ಟವರು ಕರ್ನಾಟಕದ ರಾಜ್ಯಮಟ್ಟದ ನಾಯಕರು ಎಂಬುದು ಗೊತ್ತಾಗಬಾರದು. ಆರೋಪ ಬಂದರೆ ದೆಹಲಿಯ ನಾಯಕರ ಮೇಲೆ ಬರಲಿ ಎಂಬ ಸಂಚು ಅದು. ದೇಶಪಾಂಡೆಯವರು ಈ ಸಾರಿ ರಾಜ್ಯಸಭೆಗೆ ಸ್ಪರ್ಧಿಸಲಿದ್ದಾರೆ ಎಂಬುದು ಅಂಥ ರಹಸ್ಯವೇನೂ ಆಗಿರಲಿಲ್ಲ. ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸುವ ಕೊನೆಯ ದಿನವೇ ಈ ಸುದ್ದಿ ಪತ್ರಿಕೆಗಳಲ್ಲಿ ಬಂದುದನ್ನು ನೋಡಿದರೆ ಅವರಿಗೆ ಟಿಕೆಟ್ ಸಿಗುವುದನ್ನು ತಪ್ಪಿಸುವುದು ಇಲ್ಲವೇ ಅಕಸ್ಮಾತ್ತಾಗಿ ಟಿಕೆಟ್ ಸಿಕ್ಕು ಸ್ಪರ್ಧಿಸಿದರೂ ಅವರ ಹೆಸರಿಗೆ ಕಳಂಕ ಹಚ್ಚುವುದು ಈ ಸಂಚಿನ ಹಿಂದೆ ಇದ್ದ ಕಾಂಗ್ರೆಸ್ಸಿಗರ ಹುನ್ನಾರವಾಗಿತ್ತು. ದೆಹಲಿಯಿಂದ ಈ ಸುದ್ದಿ ಬಿತ್ತರವಾದರೆ, ಅದರ ಆರೋಪ ದೆಹಲಿಯಲ್ಲಿನ ಇನ್ನೊಬ್ಬ ಟಿಕೆಟ್ ಆಕಾಂಕ್ಷಿಗೆ ಅಂಟಿಕೊಳ್ಳಬೇಕು ಎಂಬುದು ಈ ಹುನ್ನಾರದ ಮತ್ತೊಂದು ಕವಲು. 'ನನ್ನ ಎರಡು ಕಣ್ಣು ಹೋದರೂ ಪರವಾಗಿಲ್ಲ ನನ್ನ ಸವತಿಯ ಒಂದು ಕಣ್ಣು ಹೋಗಲಿ' ಎಂದು ಲೆಕ್ಕ ಹಾಕಿದಂತಿದೆ ಇದು.

ಈ ಹಗರಣ ಹೊರಗೆ ಬಂದು ಬರೀ ದೇಶಪಾಂಡೆಯವರ ವರ್ಚಸ್ಸಿಗೆ ಏಟು ಬಿತ್ತೇ? ಇಡೀ ಕಾಂಗ್ರೆಸ್ ಪಕ್ಷಕ್ಕೇ ಅವಮಾನವಾಯಿತು. ದೇಶಪಾಂಡೆಯವರು ಪತ್ರಿಕೆಗಳಲ್ಲಿ ಲೇಖನ ಬರೆದು ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ಪ್ರಯತ್ನಿಸುವ ಬದಲು ರಾಜೀನಾಮೆ ಕೊಟ್ಟು ಬಿಡಬೇಕಿತ್ತು. ಆಗ ಅದರ ಹೊಣೆ ಅವರ ಮೇಲೆ ಮಾತ್ರ ಬರುತ್ತಿತ್ತು. ಮುಂದೆ ತನಿಖೆ, ಮಣ್ಣು, ಮಸಿ ಎಂದು ಕಣ್ಣು ಒರೆಸುವ ಕೆಲಸಗಳನ್ನು ಮಾಡಬಹುದಿತ್ತು. ಈಗಲೂ ತನಿಖೆ, ಮಣ್ಣು ಮಸಿ ಎನ್ನುವಂತೆಯೇ ನಡೆಯುವ ಸಾಧ್ಯತೆಯಿದೆ. ನಿವೃತ್ತ ನ್ಯಾಯಮೂರ್ತಿ, ಮಾಜಿ ಸಂಸದ ಎನ್.ವೈ. ಹನುಮಂತಪ್ಪ ಅವರ ಸಮಿತಿಗೆ ಕೊಟ್ಟ ಕಾರ್ಯ ಷರತ್ತುಗಳನ್ನು ನೋಡಿದರೇ ಸಾಕು ಸತ್ಯ ಹೊರಗೆ ಬರುವುದಿಲ್ಲ ಎಂದು ಗೊತ್ತಾಗುತ್ತದೆ. ಈ ಹಗರಣ ಹೊರಗೆ ಬಿದ್ದುದರಿಂದ ಆದ ಕೆಟ್ಟ ಪರಿಣಾಮ ಎಂದರೆ ಉತ್ತರ ಕರ್ನಾಟಕದ ಸಂತ್ರಸ್ತರ ನೆರವಿಗೆ ಬರಲು ವಿಫಲವಾದ ರಾಜ್ಯ ಸರ್ಕಾರವನ್ನು ಬರುವ ಅಧಿವೇಶನದಲ್ಲಿ ತರಾಟೆಗೆ

ತೆಗೆದುಕೊಳ್ಳುವ ನೈತಿಕತೆಯನ್ನೇ ಅಧಿಕೃತ ವಿರೋಧ ಪಕ್ಷ ಕಳೆದುಕೊಂಡು ಬಿಟ್ಟಿತು. ಆ ನೈತಿಕ ಶಕ್ತಿಯನ್ನು ದೇಶಪಾಂಡೆಯವ ರಾಜೀನಾಮೆ ತಕ್ಕಮಟ್ಟಿಗೆ ತುಂಬಿ ಕೊಡಬಹುದಿತ್ತು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ಲಾಗಾಯ್ತಿನಿಂದ ಕಾಂಗ್ರೆಸ್ ಪಕ್ಷ ಕಷ್ಟದ ದಿನಗಳನ್ನು ದೂಡುತ್ತಿದೆ. ಸತತ ಸೋಲುಗಳನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಹೊರಟಿರುವ ದೇಶಪಾಂಡೆಯವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಅಗತ್ಯವೂ ಅಲ್ಲ, ಅನಿವಾರ್ಯವೂ ಅಲ್ಲ. ದುರಂತ ನೋಡಿ, ಅವರ ಜಾಗಕ್ಕೆ ಯಾರನ್ನು ತರಬೇಕು ಎಂಬ ಪ್ರಶ್ನೆ ಹೈಕಮಾಂಡ್ ಮುಂದೆ ಬೃಹದಾಕಾರವಾಗಿ ಬೆಳೆದು ನಿಂತಿದೆ. ಮೊನ್ನೆ ಕಾಂಗ್ರೆಸ್ ಮುಖಂಡರೊಬ್ಬರ ಜತೆ ಮಾತನಾಡುತ್ತಿದ್ದೆ. ಕೆಪಿಸಿಸಿ ಅಧ್ಯಕ್ಷ ಹುದ್ದೆಗೆ ಯಾರನ್ನು ತರಬಹುದು ಎಂದು ಅವರು ನನ್ನನ್ನು ಕೇಳುತ್ತಿದ್ದರು! ನಾನೂ ಅವರೂ ಹಲವು ಹೆಸರುಗಳನ್ನು ಚರ್ಚಿಸುತ್ತ ಅವರೆಲ್ಲರ ಮೈನಸ್ ಅಂಶಗಳನ್ನೇ ಹೆಚ್ಚು ಚರ್ಚೆ ಮಾಡಿದೆವು. ಕೆಲವು ಮೈನಸ್ ಅಂಶಗಳು ಅವರ ವ್ಯಕ್ತಿತ್ವದಲ್ಲಿಯೇ ಇದ್ದುವು, ಇನ್ನು ಕೆಲವು ಅಂಶಗಳು ಅವರಿಗೆ ಪಕ್ಷದೊಳಗೇ ಇದ್ದ ಅಡ್ಡಿಗಳಾಗಿದ್ದುವು. ಕೊನೆಗೆ ಅವರು ಹೋಗುವಾಗ ನಗುತ್ತ ಹೇಳಿದರು: 'ಕಾಂಗ್ರೆಸ್ ಪಕ್ಷವನ್ನು ಪುನಶ್ಚೇತನಗೊಳಿಸಲು ನಿಮ್ಮಿಂದ ಏನೂ ಸಹಾಯವಾಗಲಿಲ್ಲ!' ಎಂದು. ಅದು ನನ್ನ ಕೆಲಸವಾಗಿರಲಿಲ್ಲ. ಕಾಂಗ್ರೆಸ್ಸಿನಲ್ಲಿಯೇ ಅಷ್ಟೊಂದು ವೈರುಧ್ಯಗಳು ಇದ್ದರೆ, ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗದೇ ಇದ್ದರೆ ಯಾರೇನು ಮಾಡಲು ಸಾಧ್ಯ?

ಬಲಗುಂದಿರುವ ಕಾಂಗ್ರೆಸ್ಸಿಗೆ ಚೇತರಿಸಿಕೊಳ್ಳಲು ನಿಜಕ್ಕೂ ಆಸಕ್ತಿಯಿದ್ದರೆ ಜೆ.ಡಿ(ಎಸ್) ಜತೆಗೆ ಹೊಂದಾಣಿಕೆ ಮಾಡಿಕೊಳ್ಳಬಹುದಿತ್ತು. ರಾಜ್ಯಸಭೆ ಚುನಾವಣೆ ಅದಕ್ಕೆ ಒಂದು ಅವಕಾಶವನ್ನೂ ಒದಗಿಸಿತ್ತು. ಆದರೆ, ಹಣದ ಆಸೆಗೆ ಬಿದ್ದ ಜೆ.ಡಿ(ಎಸ್) ಬೇಡಿಕೆಗಳನ್ನು ಈಡೇರಿಸಲು ಕಾಂಗ್ರೆಸ್ ನಾಯಕರು ಹಿಂದೇಟು ಹಾಕಿದರು. 'ಜಾತ್ಯತೀತ ಶಕ್ತಿಗಳನ್ನು ಒಗ್ಗೂಡಿಸಲು' ಆಸಕ್ತರಾಗಿರುವ ದೇವೇಗೌಡರು ಅಥವಾ ಕುಮಾರಸ್ವಾಮಿ ಕಾಂಗ್ರೆಸ್ ಅಭ್ಯರ್ಥಿ ಯಾರಾಗಿರಬೇಕು ಎಂಬುದನ್ನೂ ತಾವೇ ನಿರ್ಧರಿಸಬಾರದಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಂತು ಸೋತ ಕುಪೇಂದ್ರರೆಡ್ಡಿ ಎಂಬ ಕೋಟ್ಯಧೀಶ ಭೂಮಾಲೀಕ ನನ್ನು ದೆಹಲಿಗೆ ಕರೆದುಕೊಂಡು ಹೋಗಿ ಅವರಿಗೆ ಟಿಕೆಟ್ ಕೊಡಿ ಎಂದು ಕುಮಾರ ಸ್ವಾಮಿ ಶಿಫಾರಸು ಮಾಡಬಾರದಿತ್ತು. ಜೆ.ಡಿ(ಎಸ್)ನ ಈ ಹಟಮಾರಿತನದಿಂದ ವಿಧಾನಪರಿಷತ್ತಿನ ಒಂದು ಸ್ಥಾನ ಅದಕ್ಕೆ ನಷ್ಟವಾಯಿತು. ಈ ಪಕ್ಷದ ನಾಯಕರಿಗೆ ಕುಪೇಂದ್ರರೆಡ್ಡಿಯವರ ಅಥವಾ ಈಗ ಉದ್ಯಮಿ ವಿಜಯ ಮಲ್ಯ ಅವರ ಹಣದ ಮೇಲೆ ಕಣ್ಣು ಎಂದು ಯಾರಾದರೂ ಅಂದುಕೊಂಡರೆ ಅವರು ಏನು ಸಮಜಾಯಿಷಿ ಕೊಡುತ್ತಾರೆ? ಹೇಗಾದರೂ ಆಗಲಿ ಕಾಂಗ್ರೆಸ್ ಮತ್ತು ಜೆ.ಡಿ(ಎಸ್)ನವರು ಹೊಡೆ ದಾಡಿಕೊಂಡೇ ಇರುವುದು ಯಡಿಯೂರಪ್ಪನವರಿಗೆ ಬೇಕು. ಇವರು ನಡೆದುಕೊಳ್ಳು ತ್ತಿರುವ ರೀತಿಯೂ 'ರೋಗಿ ಬಯಸಿದ್ದೂ ಹಾಲೂ ಅನ್ನ, ವೈದ್ಯರು ಹೇಳಿದ್ದೂ

ಅದನ್ನೇ' ಎನ್ನುವಂತಿದೆ. ಯಡಿಯೂರಪ್ಪ ನಗುತ್ತಿರಲು ಇದು ಇನ್ನೊಂದು ಕಾರಣ!

ಆದರೆ, ಸ್ವಲ್ಪ ಇತಿಹಾಸದ ನೆನಪು ಇರುವವರಿಗೆ ವಿಜಯ ಮಲ್ಯ ಅವರನ್ನು ಬೆಂಬಲಿಸಲು ನಿರ್ಧರಿಸುವುದು ಬಿಜೆಪಿಗೆ ಮುಜುಗರದ ಸಂಗತಿ. ಮೂರು ವಾರಗಳ ಹಿಂದೆ ಇದೇ ಅಂಕಣದಲ್ಲಿ ಬರೆದ ಹಾಗೆ, 2002ನೇ ಇಸವಿಯಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ಮಲ್ಯ ಅವರು ಬಿಜೆಪಿಯನ್ನು ಅಕ್ಷರಶಃ ಒಡೆದು, ಪಕ್ಷದ ಅಧಿಕೃತ ಅಭ್ಯರ್ಥಿ ಡಿ.ಕೆ.ತಾರಾದೇವಿಯವರನ್ನು ಸೋಲಿಸಿ ರಾಜ್ಯಸಭೆ ಪ್ರವೇಶಿಸಿದ್ದರು. ಕರ್ನಾಟಕದಲ್ಲಿ ಇತಿಹಾಸ ಮತ್ತೆ ಮತ್ತೆ ವಿಚಿತ್ರ ರೀತಿಯಲ್ಲಿ ಮರುಕಳಿಸುತ್ತಲೇ ಇರುತ್ತದೆ. ಮಲ್ಯ ಅವರನ್ನು ಬೆಂಬಲಿಸಬೇಕಾದಂಥ ಸ್ಥಿತಿ ಕೇವಲ ಎಂಟು ವರ್ಷಗಳಲ್ಲಿ ಬಿಜೆಪಿಗೆ ಬರಬಹುದು ಎಂದು 2002ರಲ್ಲಿ ಯಾರಾದರೂ ಹೇಳಿದ್ದರೆ ಆಗ ಕೇಂದ್ರ ಸಚಿವರಾಗಿದ್ದ ವೆಂಕಯ್ಯ ನಾಯ್ಡು, ಅನಂತಕುಮಾರ್‌ಗೆ ಎಷ್ಟು ಸಿಟ್ಟು ಬರುತ್ತಿತ್ತೋ ಗೊತ್ತಿಲ್ಲ. ರಾಜ್ಯ ಬಿಜೆಪಿಯಲ್ಲಿ ಕಳೆದ ಎಂಟು ವರ್ಷಗಳಲ್ಲಿ ಆಗಿರುವ ಬೆಳವಣಿಗೆ, ಬದಲಾವಣೆ, ವಲಸೆ ನೋಡಿದರೆ ಅಷ್ಟೆಲ್ಲ ಸೂಕ್ಷ್ಮತೆ ಅವರಲ್ಲಿ ಉಳಿದಿದೆ ಎಂದು ಅನಿಸುವುದಿಲ್ಲ. ಬಿಜೆಪಿಯನ್ನು ಹರಾಜು ಹಾಕಿದವರು ಪಕ್ಷಕ್ಕೆ ಬಂದು, ಟಿಕೆಟ್ ಪಡೆದು ಸಂಸದರಾಗಿ, ಶಾಸಕರಾಗಿ, ಸಚಿವರಾಗಿ ಮಿಂಚುತ್ತಿರುವಾಗ ಮಲ್ಯ ಸೃಷ್ಟಿಸಿದ ಇಕ್ಕಟ್ಟು ಯಾರಿಗೆ ನೆನಪು ಇರುತ್ತದೆ ಎಂದು ಕೇಳುವವರು ಬಿಜೆಪಿಯಲ್ಲಿಯೇ ಸಾಕಷ್ಟು ಜನರಿದ್ದಾರೆ!

ರಾಜಕೀಯವರೇ ಹಾಗೆ. ರಾಮಕೃಷ್ಣ ಹೆಗಡೆ ಜೀವಂತವಾಗಿ ಇರುವವರೆಗೆ ಮಲ್ಯ, ದೇವೇಗೌಡರ ಮನೆಯ ಹತ್ತಿರವೂ ಸುಳಿಯುತ್ತಿರಲಿಲ್ಲ! ಮಲ್ಯ ಏನಿದ್ದರೂ ಹೆಗಡೆಯವರ ಮಾನಸಪುತ್ರ. ಕಾಲ ಬದಲಾಗಿದೆ. ಮಲ್ಯ ಈಗ ಗೌಡರಿಗೆ ಹತ್ತಿರವಾಗಿದ್ದಾರೆ. ನಾಲ್ಕನೇ ಅಭ್ಯರ್ಥಿ ಯಾವ ಪಕ್ಷದಿಂದ ಗೆಲ್ಲಬೇಕಿದ್ದರೂ 'ಕುದುರೆ ವ್ಯಾಪಾರ' ಅನಿವಾರ್ಯ ಎಂದುಕೊಂಡೇ ಗೌಡರು, ಡೇನಿಶ್ ಅಲಿ ಅವರನ್ನು ಕೈಬಿಟ್ಟು ಕುದುರೆ ವ್ಯಾಪಾರದಲ್ಲಿ ನಿಸ್ಸೀಮರಾದ ಮಲ್ಯ ಅವರಿಗೆ ಬೆಂಬಲ ಸೂಚಿಸಿರಬಹುದು. 'ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ' ಎಂಬುದೇ ರಾಜ್ಯಸಭೆ ಚುನಾವಣೆಯ ಒಟ್ಟು ಪಾಠ; ಮಥಿತಾರ್ಥ.

■

# ಆತ್ಮಸಾಕ್ಷಿಯ ಕತ್ತಲೆಗೆ ಕನ್ನಡಿ ಹಿಡಿದ ಚಿತ್ರಗಳು... ಪಾತ್ರಗಳು...

ಆಕೆ ಹತ್ತು ಮಕ್ಕಳನ್ನು ಹೆತ್ತ ಮಹಾತಾಯಿ. ಎಲ್ಲ ಮಕ್ಕಳನ್ನೂ ಸಮಾನವಾಗಿ ಪ್ರೀತಿಸಿದವಳು, ಕಷ್ಟಪಟ್ಟು ಬೆಳೆಸಿದವಳು. ಅವರ ಎಲ್ಲ ಅಂಗಗಳನ್ನು ಕೈಯಿಂದಲೇ ತೊಳೆದವಳು. ಈಗ ಅವಳಿಗೆ ವಯಸ್ಸಾಗಿದೆ. ಮಕ್ಕಳು 'ಸೆಟ್ಲ್' ಆಗಿದ್ದಾರೆ. ಹೆಂಡಿರು ಬಂದಿದ್ದಾರೆ. ಅವರಿಗೆ ಮಕ್ಕಳೂ ಆಗಿವೆ. ಆದರೆ, ತಾಯಿ ಭಾರವಾಗಿದ್ದಾಳೆ. ಯಾರ ಮನೆಯಲ್ಲಿ ಎಷ್ಟು ದಿನ ತಾಯಿ ಇರಬಹುದು ಎಂದು ಲೆಕ್ಕ ಹಾಕುತ್ತಿದ್ದಾರೆ. ಒಬ್ಬೊಬ್ಬ ಮಗನ ಸರದಿಯ ಹಂಗಿನ ಅನ್ನಕ್ಕಿಂತ ವೃದ್ಧಾಶ್ರಮವೇ ಲೇಸು ಎಂದು ತಾಯಿ ಮನೆ ಬಿಟ್ಟು ಹೊರಟು ಹೋಗಿದ್ದಾಳೆ. ಇದು ಬರೀ ತಾಯಿಯ ಕಥೆಯಲ್ಲ, ಇನ್ನೊಂದು ಕುಟುಂಬದಲ್ಲಿ ತಂದೆಯ ಕಥೆಯೂ ಹೌದು. ಮಗದೊಂದು ಕುಟುಂಬದಲ್ಲಿ ತಂದೆ–ತಾಯಿಯರಿಬ್ಬರ ಕಥೆಯೂ ಹೌದು.

ನಾವು ಚಿಕ್ಕವರಿದ್ದಾಗ ಅಮೆರಿಕೆಯಲ್ಲಿ, ಇಂಗ್ಲೆಂಡಿನಲ್ಲಿ ಹೀಗೆಲ್ಲ ಆಗುತ್ತದೆ ಎಂದು ಕೇಳಿದ್ದೆವು. ಅಲ್ಲಿ ಹೆತ್ತ ತಂದೆ ತಾಯಿಯರನ್ನು ಮಕ್ಕಳು ತಮಗೆ 18 ವರ್ಷವಾಗುತ್ತಲೇ ಹೊರಗೆ ಹಾಕುತ್ತಾರೆ ಅಥವಾ ತಾವೇ ಹೊರಗೆ ಹೊರಟು

ಹೋಗುತ್ತಾರೆ ಎಂಬುದು ನಾವು ಕೇಳಿದ್ದ ಕಥೆ. ಅದು ನಮ್ಮ ಮನೆಯ ಕಥೆಯೇ ಆಗಬಹುದು ಎಂದು ಎಂದೂ ಅಂದುಕೊಂಡಿರಲಿಲ್ಲ. ಹೀಗೇಕಾಯಿತು? ಇದು ಒಂದು ಅರ್ಥದಲ್ಲಿ ಗಹನ ಪ್ರಶ್ನೆ. ಇನ್ನೊಂದು ಅರ್ಥದಲ್ಲಿ ಅಲ್ಲ. ಕುಟುಂಬದ ಸ್ವರೂಪವೇ ಈಗ ಬದಲಾಗಿ ಹೋಗಿದೆ. ಗಂಡ, ಹೆಂಡತಿ ಮತ್ತು ಒಂದು ಮಗು ಇದ್ದರೆ ಸಾಕು ಎನ್ನುವಂಥ ಸಂಕುಚಿತ ಕುಟುಂಬ ವ್ಯವಸ್ಥೆ ಈಗಿನದು. 'ಹತ್ತು ಮಕ್ಕಳನ್ನು ಹೆತ್ತು ಸಾಕು ಎಂದು ನಿಮಗೆ ಹೇಳಿದವರಾರು' ಎಂದು ತಂದೆ ತಾಯಿಯರನ್ನೇ ಕೇಳುವ ಕಾಲ ಇದು.

ಆ ಕಾಲ ಒಂದಿತ್ತು, ದಿವ್ಯ ತಾನಾಗಿತ್ತು. ಒಂದು ಕುಟುಂಬ ಎಂದರೆ ಅದು ಅವಿಭಕ್ತ ಕುಟುಂಬವೇ ಆಗಿರುತ್ತಿತ್ತು. ಗಂಡ-ಹೆಂಡತಿ, ಅತ್ತೆ-ಮಾವ, ಮಕ್ಕಳು, ಮೊಮ್ಮಕ್ಕಳು ಎಲ್ಲ ಕೂಡಿ ಇರುತ್ತಿದ್ದರು. ಮೊಮ್ಮಕ್ಕಳು ಅಜ್ಜ-ಅಜ್ಜಿಯರ ತೊಡೆಗಳ ಮೇಲೆ ಬೆಳೆಯುತ್ತಿದ್ದರು. ಅವರು ಹೇಳುವ ಕಥೆಗಳನ್ನು ಕೇಳುತ್ತಿದ್ದರು. ಒಂದು ಕ್ಷಣ ಅಜ್ಜ-ಅಜ್ಜಿ ಕಾಣದಿದ್ದರೆ 'ಎಲ್ಲಿ ಅಜ್ಜ, ಅಜ್ಜಿ' ಎಂದು ಕೇಳುತ್ತಿದ್ದರು. 'ಅಜ್ಜನ ಕೋಲಿದು ನನ್ನಯ ಕುದುರೆ' ಎಂದು ತಾತನ ಕೋಲನ್ನು ಕಾಲುಗಳ ಮಧ್ಯೆ ಇಟ್ಟುಕೊಂಡು ಆಟವಾಡುತ್ತಿದ್ದರು. ಈಗ ಇಂಥ ಕುಟುಂಬ ವ್ಯವಸ್ಥೆಯೇ ನಾಶವಾಗಿದೆ. ಸಂಪರ್ಕ ಕೊಂಡಿ ಕಡಿದು ಹೋಗಿದೆ. ಮನೆಯಲ್ಲಿ ಮಾತು ಕಡಿಮೆಯಾಗಿವೆ. ದುಸುಮುಸು ಜಾಸ್ತಿಯಾಗಿದೆ. ಹೊರಗಿನಿಂದ ಬಂದ ಹೆಂಡತಿಗೆ ಗಂಡನ ಅಪ್ಪ-ಅವ್ವ ಭಾರ ಎನಿಸುತ್ತಿದ್ದಾರೆ. ಈಚೀಚಿಗೆ ಮಗನಿಗೂ ಹಾಗೆಯೇ ಅನಿಸುತ್ತಿದೆ. 'ಅವ್ವ ಸರಿಯಿಲ್ಲ, ಸುಮ್ಮನೆ ಎಲ್ಲದರಲ್ಲಿಯೂ ತಲೆ ಹಾಕುತ್ತಾಳೆ. ಅಪ್ಪನಿಗೆ ಸಿಟ್ಟು ಬಹಳ. ಅಡ್ಜಸ್ಟ್ ಮಾಡಿಕೊಂಡು ಹೋಗಬೇಕು' ಎನ್ನುತ್ತಾನೆ.

'ಇದೇ ಮಗನಿಗೇ ಅಲ್ಲವೇ ನಾನು ಕೈ ಹಿಡಿದು ನಡೆಸಿದ್ದು, ಹೆಗಲ ಮೇಲೆ ಕೂಡ್ರಿಸಿಕೊಂಡು ಜಾತ್ರೆಯಲ್ಲಿ ತೇರು ತೋರಿಸಿದ್ದು. ಕಾಲೇಜಿಗೆ ಲಕ್ಷಗಟ್ಟಲೆ ಪಿ.ಎಫ್ ದುಡ್ಡು ತೆಗೆದು ಕಟ್ಟಿದ್ದು' ಎಂದು ಅಪ್ಪನಿಗೆ ಬೇಸರ. ಅವ್ವನಿಗೆ ಅತ್ತ ಮಗ, ಇತ್ತ ಗಂಡ. ಯಾರಿಗೆ ಏನು ಹೇಳಬೇಕು? 'ನಮ್ಮ ಕೊನೆಗಾಲದಲ್ಲಿ ಮಗ ತನ್ನ ಹೆಗಲ ಮೇಲೆ ನಮ್ಮನ್ನು ಕೂಡ್ರಿಸಿಕೊಂಡು ನಡೆಯಬೇಕಿಲ್ಲ. ಕೊನೆಯ ಪಕ್ಷ ಕೈ ಹಿಡಿದು ನಡೆಸಬಹುದಲ್ಲ? ನಮ್ಮ ಎರಡು ಹೊಟ್ಟೆಗಳು ಅವನಿಗೆ ಅಷ್ಟು ಹೊರೆಯಾದವೇ? ನಮ್ಮ ಬೇಡಿಕೆಗಳು ಹೆಚ್ಚೇನೂ ಇಲ್ಲವಲ್ಲ? ನಮ್ಮ ಇಂದು, ಮಗನ ನಾಳೆಯಲ್ಲವೇ? ಅವನಿಗೂ ಅವನ ಮಕ್ಕಳು ಹೀಗೆಯೇ ಹೇಳುತ್ತಾರೆಯೇ' ಎಂದು ಒಳಗೊಳಗೇ ಕೊರಗುತ್ತಾಳೆ. ಮೌನವಾಗಿ ಕಣ್ಣೀರು ಹಾಕುತ್ತಾಳೆ.

'ನಾವು ಮಗನಿಗೆ ಏಣಿ ಆದೆವೆ? ಜೀವನದಲ್ಲಿ ಭದ್ರವಾಗುವವರೆಗೆ ನಮ್ಮ ಬೆನ್ನ ಮೇಲೆಯೇ ಕಾಲಿಟ್ಟು ಹತ್ತಿದ ಮಗ ಏಣಿಯನ್ನು ಒದ್ದು ಬಿಟ್ಟನೇ? ನಮ್ಮ ಜತೆ ಒಂದು ದಿನ ಕುಳಿತು ಪ್ರೀತಿಯಿಂದ ಮಾತನಾಡಲು ಆತನಿಗೆ ಏನು ಕಷ್ಟ? ಅಷ್ಟೂ ಸಮಯ ಅವನ ಬಳಿ ಇಲ್ಲವೇ? ಮೊನ್ನೆ ಹೆಂಡತಿಗೆ ಚಿನ್ನದ ಬಳೆ ತಂದು ಗುಟ್ಟಾಗಿ ಕೊಟ್ಟ. ನನ್ನ ಮುಂದೆಯೇ ಕೊಡಬಹುದಿತ್ತಲ್ಲ? ನಿನ್ನ ಎರಡು ಬಳೆ ಕರಗಿಸಿ ಅವನಿಗೆ ಸರ ಮಾಡಿಸಿದ್ದೆನಲ್ಲ? ಮರೆತು ಬಿಟ್ಟನೇ ಆತ' ಎಂದು ಅಪ್ಪ ಕೇಳುತ್ತಾನೆ. ಮತ್ತೆ ಅವ್ವ

ಕಣ್ಣೀರಾಗುತ್ತಾಳೆ... ಹೌದು ಇದೆಲ್ಲ ಗೋಳಿನ ಕಥೆ. ಗೊತ್ತಿರುವ ಕಥೆ. ಕೊನೆಯಿಲ್ಲದ ಕಥೆ. ನನಗೆ ಇದೆಲ್ಲ ನೆನಪಾದುದು ಗೆಳೆಯ ಕೆ.ವೆಂಕಟೇಶ್ ಮೊನ್ನೆ ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಏರ್ಪಡಿಸಿದ್ದ ಛಾಯಾಚಿತ್ರ ಪ್ರದರ್ಶನ ನೋಡುತ್ತ ಹೋದಂತೆ.

ಪರಿಷತ್ತಿನ ಒಂದು ವಿಶಾಲ ಕೊಠಡಿಯ ಎಲ್ಲ ನಾಲ್ಕು ಗೋಡೆಗಳನ್ನು ಆವರಿಸಿದ್ದ 42 ಚಿತ್ರಗಳು ಮನೆಯ ನಾಲ್ಕು ಗೋಡೆಗಳ ನಡುವೆ ನಡೆದ ಇಂಥ ಕರುಳು ಕಿವುಚುವ ಎಲ್ಲ ಘಟನೆಗಳಿಗೆ ಸಾಕ್ಷ್ಯ ಹೇಳುತ್ತಿದ್ದಂತಿತ್ತು. ಆ ಚಿತ್ರಗಳಲ್ಲಿ ಇದ್ದವರೆಲ್ಲ ಇಂಥ ಮಕ್ಕಳ ಸಹವಾಸ ಬೇಡ ಎಂದು ವೃದ್ಧಾಶ್ರಮಗಳಲ್ಲಿ ಆಸರೆ ಪಡೆದವರು. ಅಥವಾ ಹೆತ್ತ ಮಕ್ಕಳೇ ಕರೆತಂದು ಇಲ್ಲಿ ಬಿಟ್ಟು ಹೋದವರು. 'ತಿಂಗಳಿಗೆ ಇಂತಿಷ್ಟು ಹಣ ಕೊಡುತ್ತೇವೆ. ಇವರನ್ನು ನೋಡಿಕೊಳ್ಳಿ, ಅಕಸ್ಮಾತ್ ಸತ್ತು ಹೋದರೆ ಮಾತ್ರ ನನಗೆ ಫೋನ್ ಮಾಡಿ' ಎಂದು ನಂಬರ್ ಕೊಟ್ಟವರ ಪಾಲಕರು. ಎಲ್ಲರ ಮುಖದ ಮೇಲೆ ಹಣ್ಣು ಹಣ್ಣು ಗೆರೆಗಳು. ಗೆರೆಗಳ ನಡುವೆ ಎದ್ದು ಕಾಣುವ ದುಃಖ. 'ಎಂಥ ಮಕ್ಕಳನ್ನು ಹಡೆದೆವಲ್ಲ' ಎಂಬ ವಿಷಾದ. ಕೆಲವರು ಕಾಣದ ದೇವರಿಗೆ ಕೈ ಮುಗಿಯುತ್ತ 'ಈ ಬದುಕ ಮುಗಿಸು ಪ್ರಭುವೇ?' ಎಂದು ಪ್ರಾರ್ಥಿಸುವವರು, ಇನ್ನು ಕೆಲವರು ತಲೆಯ ಮೇಲೆ ಕೈ ಹೊತ್ತು ಕುಳಿತವರು. ಮತ್ತೆ ಕೆಲವರು ಆಕಾಶದತ್ತ ದೃಷ್ಟಿ ನೆಟ್ಟವರು.

ಚಿತ್ರಗಳನ್ನು ನೋಡುತ್ತ ಹೋದೆ. ಎಲ್ಲ ಕಪ್ಪು ಬಿಳುಪಿನ ಚಿತ್ರಗಳು. ಸಂಜೆಗಣ್ಣಿನ ಹಿನ್ನೋಟಕ್ಕೆ ಕಪ್ಪು ಬಿಳುಪಲ್ಲದೇ ಹೊಂದುವ ಬೇರೆ ಬಣ್ಣ ಎಲ್ಲಾದರೂ ಉಂಟೇ? ಈ ವೃದ್ಧಾಶ್ರಮ ಎಂಬುದೂ ಒಂದು ಇಲ್ಲದಿದ್ದರೆ ಏನಾಗುತ್ತಿತ್ತು ಎಂದು ಗಾಬರಿಯಾಯಿತು. ವೆಂಕಟೇಶ್ ಹೇಳುತ್ತ ಹೋದರು. 'ಬೆಂಗಳೂರು ಒಂದರಲ್ಲಿಯೇ 30ಕ್ಕಿಂತ ಹೆಚ್ಚು ನೋಂದಾಯಿತ ವೃದ್ಧಾಶ್ರಮಗಳು ಇವೆ. ನೋಂದಾವಣೆಯಾಗದವು ಇನ್ನೆಷ್ಟೋ ಇವೆ. ಇವುಗಳ ಸಂಖ್ಯೆ ಬೆಳೆಯುತ್ತಲೇ ಇದೆ. ಬೆಂಗಳೂರಿನ ಕತ್ತಲ ಮುಖ ಇದು. ರಾಜ್ಯದಾದ್ಯಂತ ಇವುಗಳ ಸಂಖ್ಯೆ 250. ನಾನು ಎರಡೋ ಮೂರೋ ವೃದ್ಧಾಶ್ರಮಕ್ಕೆ ಹೋದಾಗಲೇ ಇಷ್ಟು ಕಥೆಗಳು, ಚಿತ್ರಗಳು ಸಿಕ್ಕವು. ಎಲ್ಲ ಕಡೆಯೂ ಇದೇ ಕಥೆ, ಇದೇ ಚಿತ್ರ. ಇಲ್ಲಿದ್ದವರ ಮಕ್ಕಳು ಯಾರು ಎಂದು ಒಂದೆರಡು ಹೆಸರು ಹೇಳಿದರೆ ನೀವು ಬೆಚ್ಚಿ ಬೀಳುತ್ತೀರಿ' ಎಂದು ಧ್ವನಿ ಕಿರಿದು ಮಾಡಿದರು!

ಸಾಲಾಗಿ ಇದ್ದ ಚಿತ್ರಗಳಲ್ಲಿ ಕೊನೆಯ ಮೂರು ಚಿತ್ರಗಳಲ್ಲಿ ಬೆಳಕು ಕಿರಿದಾಗುತ್ತ, ಕತ್ತಲೆ ವಿಸ್ತಾರವಾಗುತ್ತ ಹೋಗಿತ್ತು. 'ಪಾತ್ರ'ಗಳ ಮುಖ ಕಾಣದಷ್ಟು ಚಿಕ್ಕದಾಗುತ್ತ ಹೋಗಿತ್ತು. ಏಕೆ ಹೀಗೆ ಎಂದು ಕೇಳುವ ಪ್ರಮೇಯವೇ ಇರಲಿಲ್ಲ. ಮನೆಯಲ್ಲದ ಮನೆಯಲ್ಲಿ, ಬದುಕಲ್ಲದ ಬದುಕಲ್ಲಿ ಕತ್ತಲೆ ವಿಸ್ತಾರವಾಗದೇ ಬೆಳಕು ವಿಸ್ತಾರವಾಗುತ್ತ ಹೋಗುತ್ತದೆಯೇ?... ನಮ್ಮ ಆತ್ಮಸಾಕ್ಷಿಯ ಕತ್ತಲೆಗೆ ಕನ್ನಡಿ (ಲೆನ್ಸ್) ಹಿಡಿದ ವೆಂಕಟೇಶ್‌ಗೆ ಕೃತಜ್ಞತೆ ತುಂಬಿದ ನಮಸ್ಕಾರಗಳು.

■

# ಹೆಗ್ಡೆ ರಾಜೀನಾಮೆ ಸರಿಯೇ? ತಪ್ಪೇ? ಉತ್ತರ ಕೊಡೋರು ಯಾರು?

ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದು ಸರಿಯೇ? ತಪ್ಪೇ? ತಪ್ಪು ಎನ್ನುವವರು ಬಹಳ ಜನ. ಸರಿ ಎನ್ನುವವರೂ ಒಬ್ಬರು ಇಬ್ಬರು ಇದ್ದಾರೆ. ಸರಿ ಎಂದವರಲ್ಲಿ ಸುಪ್ರೀಂ ಕೋರ್ಟಿನ ಇಬ್ಬರು ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು ಸೇರಿದ್ದಾರೆ. ಹೆಗ್ಡೆ ಅವರಿಗೆ ಇದು ಕೃತಜ್ಞತೆಯಿಲ್ಲದ, ಅರ್ಥವಿಲ್ಲದ, ಪ್ರಯೋಜನವಿಲ್ಲದ ಕೆಲಸ ಅನಿಸಿರಬೇಕು. ಆದರೆ, ಸರ್ಕಾರದಲ್ಲಿನ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಏಕಪಕ್ಷೀಯ ನಿರ್ಧಾರಗಳ ವಿರುದ್ಧ ಕ್ರಮ ತೆಗೆದುಕೊಂಡು ಆಡಳಿತದಲ್ಲಿ ಸುಧಾರಣೆ ತರಲು ಹುಟ್ಟಿಕೊಂಡ ಸಂಸ್ಥೆ ಇದು. ಮೊರಾರ್ಜಿ ದೇಸಾಯಿಯವರು 1966ರಷ್ಟು ಹಿಂದೆ ಕೇಂದ್ರದಲ್ಲಿ ಆಡಳಿತ ಸುಧಾರಣೆ ಆಯೋಗದ ಅಧ್ಯಕ್ಷರಾಗಿದ್ದಾಗ ಭ್ರಷ್ಟಾಚಾರ ತಡೆ ದಳಗಳಿಂದ ನಿರೀಕ್ಷಿತ ಕೆಲಸ ಅಥವಾ ಪರಿಣಾಮ ಆಗುತ್ತಿಲ್ಲ ಎಂದು ಕಂಡುಕೊಂಡು ಮಾಡಿದ ಶಿಫಾರಸಿನ ಫಲವಾಗಿ ಈ ಸಂಸ್ಥೆ ರೂಪು ತಾಳಿತು. ಅಂದರೆ, ಈ ಸಂಸ್ಥೆಯ ಸ್ಥಾಪನೆಯ ಹಿಂದೆ ಆಡಳಿತವನ್ನು ಸುಧಾರಿಸಿ, ಬಿಗಿಗೊಳಿಸಿ ಜನರಿಗೆ

ಒಳಿತು ಮಾಡುವ ಉದ್ದೇಶವಿತ್ತು. ಆದರೆ, ಕರ್ನಾಟಕದ ಮಟ್ಟಿಗೆ ಲೋಕಾಯುಕ್ತ ಸದಾ ವಿವಾದದ ಗೂಡು. ಸ್ಥಾಪನೆಯಾದ ಲಾಗಾಯ್ತಿನಿಂದಲೂ ಈ ಬಾಲಗ್ರಹ ಇದಕ್ಕೆ ಅಂಟಿಕೊಂಡೇ ಬಂದಿದೆ.

ರಾಜ್ಯದಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದ ಮೊದಲ ಕಾಂಗ್ರೆಸ್ಸೇತರ ಸರ್ಕಾರ ಲೋಕಾಯುಕ್ತ ಸಂಸ್ಥೆಯನ್ನು ಹುಟ್ಟಿ ಹಾಕಿತು. ಹೆಗಡೆ ಅವರಿಗೆ ಹೊಸದನ್ನು ಮಾಡುವ ಹುರುಪು ಇತ್ತು. ಆರಂಭದಲ್ಲಿ ಅವರು ಸರಿ ಹೆಜ್ಜೆಗಳನ್ನೇ ಇಡುತ್ತಿದ್ದರು. ಯಾವಾಗ ಅವರಿಗೆ ಪ್ರಧಾನಿ ಹುದ್ದೆ ಮೇಲೆ ಕಣ್ಣು ಬಿತ್ತೋ, (ಅಥವಾ ಅವರ ಬೆಂಬಲಕ್ಕೆ ಸದಾ ನಿಂತಿದ್ದ ಕೆಲವರು ವಂದಿಮಾಗಧ ಮಾಧ್ಯಮ ಸ್ನೇಹಿತರು ಆ ಹುಳುವನ್ನು ಅವರ ತಲೆಗೆ ಬಿಟ್ಟರೋ!) ಆಗ ಅವರ ಆಡಳಿತ ಹಾದಿ ತಪ್ಪಿತು. ಹಗರಣಗಳ ಸರಮಾಲೆ ಅವರ ಕೊರಳನ್ನು ಸುತ್ತಿಕೊಂಡಿತು. ಲೋಕಾಯುಕ್ತ ಸಂಸ್ಥೆಯನ್ನು ಸ್ಥಾಪಿಸುವ ಸಂದರ್ಭದಲ್ಲಿ ಕೊಟ್ಟಿದ್ದ, ಮುಖ್ಯಮಂತ್ರಿ ವಿರುದ್ಧ ಕೂಡ, ಸ್ವಪ್ರೇರಣೆಯಿಂದ ಪ್ರಕರಣ ದಾಖಲಿಸುವ ಅಧಿಕಾರವನ್ನು ಹೆಗಡೆ ಕೇವಲ ಒಂದು ವರ್ಷದಲ್ಲಿ ವಾಪಸು ತೆಗೆದುಕೊಂಡರು. ಮೊದಲ ನಿರ್ಧಾರವನ್ನು ತುತ್ತೂರಿ ಊದುತ್ತ ಮಾಡಿದ್ದರು. ಎರಡನೇ ನಿರ್ಧಾರವನ್ನು ಸದ್ದುಗದ್ದಲವಿಲ್ಲದೆ ಮಾಡಿದರು!

ಕರ್ನಾಟಕದ ಲೋಕಾಯುಕ್ತರಾಗಿ ಮೊದಲು ನೇಮಕ ಗೊಂಡವರು ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಎ.ಡಿ. ಕೋಶಲ್. ಅವರು ಸುಷ್ಮಾ ಸ್ವರಾಜ್ ಅವರ ಮಾವನ ತಮ್ಮ. ಆಗ ಇದ್ದ ಉಪಲೋಕಾಯುಕ್ತರು ನ್ಯಾಯಮೂರ್ತಿ ಎಸ್.ಸಿ. ಮಿತ್ತಲ್. ಕೋಶಲ್ ನೇಮಕ ಆಗಿ ಬರುತ್ತಿದ್ದಂತೆಯೇ ಅವರಿಗೆ 'ಹೆಗಡೆ ಮನುಷ್ಯ' ಎಂಬ ಅಭಿದಾನವನ್ನು ಆಗಿನ ಬೆಂಕಿ ಚೆಂಡು ಎ.ಕೆ. ಸುಬ್ಬಯ್ಯ ಕೊಟ್ಟುಬಿಟ್ಟರು. ಕೋಶಲ್ ಕೂಡ ತಮ್ಮ ಅಧಿಕಾರವನ್ನು ಆರಂಭದಲ್ಲಿ ಚಲಾಯಿಸಲೇ ಇಲ್ಲ. ಬೆಂಗಳೂರಿನ ಎನ್.ಜಿ.ಇ.ಎಫ್. ಕಾರ್ಖಾನೆಯ ಷೇರುಗಳನ್ನು ಜರ್ಮನಿಯ ಎ.ಇ.ಜಿ. ಕಂಪೆನಿಗೆ ಮಾರುವ ಸಂಬಂಧ ಆಗ ದೊಡ್ಡ ವಿವಾದವೇ ಹುಟ್ಟಿಕೊಂಡಿತ್ತು. ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯರಾಗಿದ್ದ ಕೆ.ಎನ್. ನಾಗೇಗೌಡ ಈ ಹಗರಣ ವನ್ನು ಬಯಲಿಗೆ ಎಳೆದು ದೊಡ್ಡ ಸುದ್ದಿ ಮಾಡಿದರು. 'ಸ್ಟೇಟ್ಸ್‌ಮನ್' ಪತ್ರಿಕೆಯಲ್ಲಿ ಈ ಹಗರಣ ವರದಿಯಾಯಿತು. ಕೇಂದ್ರದ ಗದ್ದುಗೆ ಮೇಲೆ ಕಣ್ಣು ಇಟ್ಟಿದ್ದ ಹೆಗಡೆ ಅವರಿಗೆ ಇದು ದೊಡ್ಡ ಇರಿಸು ಮುರಿಸು. ಆ ಪತ್ರಿಕೆಯ ವರದಿಯನ್ನೇ ಅವರು ಲೋಕಾಯುಕ್ತಕ್ಕೆ ಕಳುಹಿಸಿ ತನಿಖೆ ಮಾಡುವಂತೆ ಕೋರಿದರು.

ಹಗರಣವನ್ನು ಬಯಲಿಗೆ ಎಳೆದ ನಾಗೇಗೌಡರು ತಮ್ಮ ಮುಂದೆ ಬಂದು ಸಾಕ್ಷ್ಯ ಹೇಳುವಂತೆ ಕೋಶಲ್ ನೋಟಿಸ್ ಜಾರಿ ಮಾಡಿದರು. 'ಹೆಗಡೆ ಮನುಷ್ಯ'ನ ಮುಂದೆ ತಾವೇನು ಸಾಕ್ಷ್ಯ ಹೇಳುವುದು ಎಂದು ನಾಗೇಗೌಡ ಹೋಗಲೇ ಇಲ್ಲ. ಸಿಟ್ಟಿಗೆದ್ದ ಕೋಶಲ್, 'ಸರ್ಕಾರಿ ಅಧಿಕಾರಿ ಮುಂದೆ ಸಾಕ್ಷ್ಯ ಹೇಳಲು ನಿರಾಕರಿಸಿದ ಆರೋಪ'ದ ಮೇಲೆ ನಾಗೇಗೌಡರ ವಿರುದ್ಧ ಬೆಂಗಳೂರಿನ ಮೇಯೊಹಾಲ್‌ನ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದರು. ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಯಾಗಿ ನಿವೃತ್ತರಾಗಿದ್ದ ಕೋಶಲ್ ಖುದ್ದಾಗಿ

ಬಂದು ನ್ಯಾಯದಾನ ವ್ಯವಸ್ಥೆಯಲ್ಲಿ ಅತ್ಯಂತ ಕೆಳಹಂತದ ಮ್ಯಾಜಿಸ್ಟ್ರೇಟ್ ಕೋರ್ಟಿನ ಕಟಕಟೆಯಲ್ಲಿ ನಿಂತು ನಾಗೇಗೌಡರ ವಿರುದ್ಧ ಸಾಕ್ಷ್ಯ ನುಡಿದರು. ಅವರ ಪರವಾಗಿ ಅದೇ ನ್ಯಾಯಾಲಯದ ಸರ್ಕಾರಿ ವಕೀಲರು ವಾದಿಸಿದರು. ನಾಗೇಗೌಡರ ಪರವಾಗಿ ಪ್ರೊ.ಎಂ.ಆರ್. ಜನಾರ್ದನ್ ಎಂಬ ಅತ್ಯಂತ ಹಿರಿಯ ವಕೀಲ ವಾದಿಸಿದರು. ಮುಂದೆ ಜನಾರ್ದನ್, ಅಡ್ವೊಕೇಟ್ ಜನರಲ್ ಆದರು. ಜನಾರ್ದನ್ ವಾದ ಕೇಳಿದ ನನ್ನಂಥ ಕಿರಿಯ ವರದಿಗಾರರು ಬೆಕ್ಕಸ ಬೆರಗಾಗಿದ್ದರು; ಅವರದು ಅಂಥ ವಾದ ವೈಖರಿ. ಆದರೆ, ಮ್ಯಾಜಿಸ್ಟ್ರೇಟ್‌ರು ನಾಗೇಗೌಡರಿಗೆ ಎರಡು ವರ್ಷ ಶಿಕ್ಷೆ ವಿಧಿಸಿದರಾದರೂ, 'ಇದು ಮೊದಲ ಅಪರಾಧ' ಎಂದು ಮನ್ನಿಸಿದರು (ಆಗ ನಾಗೇಗೌಡರಿಗೆ ಕಾನೂನು ಸಲಹೆ ಕೊಡುತ್ತಿದ್ದವರು ಈಗ ಮುಖ್ಯಮಂತ್ರಿಗಳ ಕಾನೂನು ಕಾರ್ಯದರ್ಶಿಯಾಗಿರುವ ವಕೀಲ ಕೆ. ದಿವಾಕರ್). ಕೋಶಲ್ ಅವರು ಅತ್ತ 'ಸ್ಟೇಟ್ಸ್‌ಮನ್' ಪತ್ರಿಕೆಯಲ್ಲಿ ಇದ್ದ ಆರೋಪಗಳಲ್ಲಿ ಹುರುಳು ಇಲ್ಲ ಎಂದು ತೀರ್ಪು ನೀಡಿದರು. ಅದೇ ಕೊನೆ, ಮತ್ತೊಬ್ಬ ಮುಖ್ಯಮಂತ್ರಿಯ ವಿರುದ್ಧ ಲೋಕಾಯುಕ್ತರಿಗೆ ದೂರು ಸಲ್ಲಿಕೆಯಾಗಲಿಲ್ಲ.

ವೀರೇಂದ್ರ ಪಾಟೀಲರು 1989ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭರ್ಜರಿ ಜಯ ತಂದುಕೊಟ್ಟು ಮುಖ್ಯಮಂತ್ರಿಯಾದ ನಂತರ ಆಡಳಿತದಲ್ಲಿ ಬಿಗಿ ತರಲು ಸಾಕಷ್ಟು ಹೆಣಗಿದರು. ಆಗ, ಎ.ಜೆ.ಆನಂದನ್ ಎಂಬ ಅತ್ಯಂತ ಪ್ರಾಮಾಣಿಕ ಅಧಿಕಾರಿ ಲೋಕಾಯುಕ್ತದ ಐ.ಜಿ.ಪಿ. ಆಗಿದ್ದರು. ಆ ಕಾಲದಲ್ಲಿಯೇ ರಾಜ್ಯದಲ್ಲಿ ಮೊದಲ ಬಾರಿಗೆ ಮೂವರು ಹಿರಿಯ ಐ.ಎ.ಎಸ್. ಮತ್ತು ಇಬ್ಬರು ಐ.ಪಿ.ಎಸ್. ಅಧಿಕಾರಿಗಳ ಮನೆ–ಕಚೇರಿಗಳ ಮೇಲೆ ದಾಳಿ ನಡೆಯಿತು. ಒಬ್ಬ ಐ.ಎ.ಎಸ್. ಅಧಿಕಾರಿಯ ಮನೆಯ ಮೇಲೆ ನಡೆದ ದಾಳಿಯ ಅವಧಿ ಸತತ 27 ಗಂಟೆಗಳು. ಅವರು ಮುಂದೆ ಸರ್ಕಾರದ ಮುಖ್ಯ ಕಾರ್ಯದರ್ಶಿಯಾದರು. ನಂತರ ಸಚಿವರೂ ಆದರು. ಇನ್ನೊಬ್ಬ ಐ.ಎ.ಎಸ್. ಅಧಿಕಾರಿಯೂ ನಂತರ ಮುಖ್ಯ ಕಾರ್ಯದರ್ಶಿಯಾದರು. ಈ ಎರಡೂ ಬೆಳವಣಿಗೆ ನಡೆದುದು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿಯೇ. ದುರಂತ ಎಂದರೆ 'ಭ್ರಷ್ಟ'ರ ವಿರುದ್ಧ ನಡೆದ ದಾಳಿಯ ನೇತೃತ್ವ ವಹಿಸಿದ್ದ ಆನಂದನ್ ಅವರಿಗೆ ನಿವೃತ್ತರಾಗುವವರೆಗೂ ಒಳ್ಳೆಯ ಹುದ್ದೆ ಸಿಗಲೇ ಇಲ್ಲ!

ಸಂತೋಷ ಹೆಗ್ಡೆಯವರು ಹೇಳಿದ ಹಾಗೆ ಲೋಕಾಯುಕ್ತ ಸಂತೋಷದ ಸುದ್ದಿಗಳನ್ನು ಕೊಡಲು ಇರುವ ಸಂಸ್ಥೆಯಲ್ಲ. ಯಾರು ಬಂದರೂ ಮುಂದೆಯೂ ಅದೇ ಕೆಲಸ ಮಾಡಬೇಕಾಗುತ್ತದೆ. ಕೋಶಲ್ ಅವರ ಕಾಲದಲ್ಲಿ ಹಾಗೂ ಹೀಗೂ ನಡೆದು ಹೋಯಿತು. ಅವರ ನಂತರ ಬಂದ ರವೀಂದ್ರನಾಥ ಪೈನೆ ಅವರಾಗಲೀ, ಎಸ್.ಎ. ಹಕೀಂ ಅವರಾಗಲೀ ಲೋಕಾಯುಕ್ತ ಸಂಸ್ಥೆಯೆಂಬುದು ಒಂದು ಇದೆ ಎಂಬುದನ್ನು ಗೊತ್ತು ಮಾಡಲೂ ಪ್ರಯತ್ನ ಪಡಲಿಲ್ಲ. ಹಕೀಂ ಅವರ ಉತ್ತರಾಧಿಕಾರಿಯಾಗಿ ಎನ್. ವೆಂಕಟಾಚಲ ಅವರು ನೇಮಕ ಆಗುವುದಕ್ಕೂ ರಾಜ್ಯದಲ್ಲಿ ಟಿ.ವಿ. ವಾಹಿನಿಗಳ ಸಂಖ್ಯೆ ಹೆಚ್ಚುವುದಕ್ಕೂ ತಾಳೆಯಾಯಿತು. ವೆಂಕಟಾಚಲ ಸ್ವತಃ ದೊಡ್ಡ ಸುದ್ದಿಯಾದರು. ಆದರೆ 'ಅವರು ಮಾಡಿದ್ದೆಲ್ಲ ಅವರಿಗೆ

ಇಲ್ಲದ ಅಧಿಕಾರ ಚಲಾಯಿಸಿ' ಎಂದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳು ಅಭಿಪ್ರಾಯಪಟ್ಟವು. ಆ ತಪ್ಪನ್ನು ಸಂತೋಷ ಹೆಗ್ಡೆಯವರು ಮಾಡಲಿಲ್ಲ. ಅವರು ಮಾಡಿದ ದಾಳಿ, ಬೀಸಿದ ಬಲೆಗಳು ಈಚಿನ ಇತಿಹಾಸದ ಭಾಗಗಳು. ಈಗ ಅವರು ರಾಜೀನಾಮೆ ಕೊಟ್ಟಿದ್ದಾರೆ.

ಹೆಗ್ಡೆಯವರು ರಾಜೀನಾಮೆ ಕೊಡಲು ಆಯ್ದ ದಿನ ರಾಜ್ಯ ಸರ್ಕಾರಕ್ಕೆ ಪ್ರಶಸ್ತವಾದುದೇನೂ ಅಲ್ಲ. 'ಸಾಧನಾ ಸಮಾವೇಶ'ಕ್ಕೆ ಅತ್ತ ಸಿದ್ಧತೆ ಮಾಡಿಕೊಳ್ಳುತ್ತಿದ್ದಾಗ ಇತ್ತ ಹೆಗ್ಡೆಯವರು ರಾಜೀನಾಮೆ ಕೊಟ್ಟುದು, ಅದಕ್ಕೆ ದೇಶ ಮಟ್ಟದಲ್ಲಿ ಭಾರಿ ಪ್ರಚಾರ ಸಿಕ್ಕುದು ಬಿಜೆಪಿ ಸರ್ಕಾರವನ್ನು ಕಂಗಾಲು ಮಾಡಿದೆ. ಯಡಿಯೂರಪ್ಪನವರು 'ಸಾಧನಾ ಸಮಾವೇಶ'ದಲ್ಲಿ ವಿರೋಧ ಪಕ್ಷಗಳ ವಿರುದ್ಧ ಹರಿಹಾಯ್ದು ಭಾವುಕ ರಾದುದು, ಕಣ್ಣೀರು ಹಾಕಿದ್ದು ನಿಜವಾಗಿಯೂ ವಿರೋಧ ಪಕ್ಷಗಳ ಬಗೆಗಿನ ಅಸಮಾಧಾನದಿಂದಲೇ ಅಥವಾ ಹೆಗ್ಡೆಯವರ ರಾಜೀನಾಮೆ ಸೃಷ್ಟಿಸಿದ ಬಿಕ್ಕಟ್ಟಿ ನಿಂದಲೇ? ಒಳ ಜಗಳದಲ್ಲಿ ಮೈ ಮರೆತಿರುವ ಕಾಂಗ್ರೆಸ್ಸಾಗಲೀ, ಬಲಗುಂದಿರುವ ಜೆ.ಡಿ.(ಎಸ್) ಆಗಲಿ ಸರ್ಕಾರಕ್ಕೆ ಕೊಡಬೇಕಾದ ಕಾಟಕೊಟ್ಟಿಲ್ಲ ಎಂಬುದೇ ಜನರಲ್ಲಿ ಇರುವ ನೈಜ ಭಾವನೆ. ಹಾಗೆ ನೋಡಿದರೆ ವಿರೋಧ ಪಕ್ಷಗಳ ಕೆಲಸವನ್ನು ರಾಜ್ಯಪಾಲರೇ ಮಾಡುತ್ತಿದ್ದಾರೆ ಎಂದೂ ಕೆಲವರು 'ಕುಹಕ'ವಾಡುತ್ತಿದ್ದರು! ಯಡಿಯೂರಪ್ಪನವರು ಈ ವಿವಾದವನ್ನು ಅನಗತ್ಯವಾಗಿ ಮೈ ಮೇಲೆ ಎಳೆದುಕೊಂಡಿ ದ್ದಾರೆ. ಅವರ ಸರ್ಕಾರದ 'ಅನಿರ್ಧಾರ ಗುಣವೇ' ಅವರಿಗೆ ಮುಳುವಾಗಿದೆ. ಉಪ ಲೋಕಾಯುಕ್ತರ ನೇಮಕದಲ್ಲಿ ಕಾಂಗ್ರೆಸ್ ಕೂಡ ವಿಳಂಬ ಮಾಡಿತ್ತು ಎಂಬುದು ಎಂಥ ಸಮರ್ಥನೆ? ಎಲ್ಲ ಸರ್ಕಾರಗಳಿಗೂ ಹಿಂದಿನ ಸರ್ಕಾರಗಳು ಮಾಡಿದ ತಪ್ಪುಗಳು ಹೇಗೆ ಸಮರ್ಥನೆಯಾಗುತ್ತವೆ? ಏಕೆ ಆಗುತ್ತವೆ? ಈ 'ಅನಿರ್ಧಾರ ಗುಣ'ಕ್ಕೆ ಬರೀ ಶಾಸಕಾಂಗ ಕಾರಣವೇ? ಅಥವಾ ಕಾರ್ಯಾಂಗವೂ ಕಾರಣವೇ? ಹೆಗ್ಡೆಯವರು ಹೇಳುವ ಹಾಗೆ ಶಾಸಕಾಂಗದ ಮೇಲೆ ಸವಾರಿ ಮಾಡುವ ಕಾರ್ಯಾಂಗ ಕಾರಣವಾಗಿರಬೇಕು. ಅಥವಾ ಎರಡೂ ಕಾರಣ ಎಂಬುದೇ ಸರಿಯಾದ ವಿವರಣೆ.

ಯಾವ ರಾಜಕಾರಣಿಗೂ ಲೋಕಾಯುಕ್ತ ಬೇಕಾದ ಸಂಸ್ಥೆಯಲ್ಲ. ಬಹುತೇಕ ಅಧಿಕಾರಿಗಳದೂ ಅದೇ ಕಥೆ. 89ರಲ್ಲಿ ಮುಖ್ಯಮಂತ್ರಿಯಾದ ನಂತರ ವೀರೇಂದ್ರ ಪಾಟೀಲರು ತಮ್ಮ ಆಸ್ತಿಪಾಸ್ತಿ ಘೋಷಿಸಿದ್ದರು. ತಮ್ಮ ಸಂಪುಟದ ಸಹೋದ್ಯೋಗಿ ಗಳೂ ತಮ್ಮನ್ನು ಅನುಸರಿಸುತ್ತಾರೆ ಎಂದೂ ಅವರು ಹೇಳಿದ್ದರು. ಯಾವ ಸಹೋದ್ಯೋಗಿಯೂ ಆ ಕೆಲಸ ಮಾಡಲಿಲ್ಲ. ಮುಂದೆ ಆ ಪರಂಪರೆಯೇ ಮರೆತು ಹೋಯಿತು. ಲೋಕಾಯುಕ್ತ ಸಂಸ್ಥೆ ಅಸ್ತಿತ್ವಕ್ಕೆ ಬಂದು ಸರಿಯಾಗಿ 24 ವರ್ಷ ಗಳಾಗಿವೆ. ಈ ಅವಧಿಯಲ್ಲಿ ಒಬ್ಬ ಶಾಸಕ ಅಥವಾ ಒಂದು ಪಕ್ಷ ಲೋಕಾಯುಕ್ತಕ್ಕೆ ಪರಮಾಧಿಕಾರ ಹೋಗಲಿ ಅದು ಕೇಳಿದ ಅಧಿಕಾರಗಳನ್ನು ಕೊಡಬೇಕು ಎಂದು ವಿಧಾನಸಭೆಯಲ್ಲಿ ಖಾಸಗಿ ಮಸೂದೆ ಮಂಡಿಸಿದ ಉದಾಹರಣೆಯಿಲ್ಲ. ಆ ಪಕ್ಷ, ಈ ಪಕ್ಷ ಎಂದು ಅಲ್ಲ. ಲೋಕಾಯುಕ್ತರ ವಿಚಾರದಲ್ಲಿ ಯಾವ ಪಕ್ಷಗಳೂ ಪ್ರಾಮಾಣಿಕ

ವಾಗಿಲ್ಲ. ಅವರು ಅಧಿಕಾರದಲ್ಲಿ ಇದ್ದಾಗ ಇವರು, ಇವರು ಅಧಿಕಾರದಲ್ಲಿ ಇದ್ದಾಗ ಅವರು ಗೂಬೆ ಕೂರಿಸುವ ಕೆಲಸ ಮಾತ್ರ ಮಾಡುತ್ತಾರೆ. ಅಧಿಕಾರದಲ್ಲಿ ಇದ್ದಾಗ ಇಬ್ಬರ ನಡೆಯ ಮಧ್ಯೆಯೂ ಅಂಥ ವ್ಯತ್ಯಾಸವೇನೂ ಇರುವುದಿಲ್ಲ ಎಂಬುದನ್ನು ಈ 24 ವರ್ಷಗಳ ಇತಿಹಾಸ ಸಾಬೀತು ಮಾಡಿದೆ. ಹಾಗಾದರೆ, ನೈಜ ಅಧಿಕಾರವಿಲ್ಲದ ಒಂದು ಹುದ್ದೆಗೆ ಹೆಗ್ಡೆಯವರು ರಾಜೀನಾಮೆ ಕೊಟ್ಟುದು ಸರಿಯೇ? ತಪ್ಪೇ? ಉತ್ತರ ಕೊಡಬೇಕಾದವರು ಯಾರು?

■

# ಉದಾರಿ ಹಳ್ಳಿಗ ಆಸೆಬುರುಕ ಏಕಾದ?

ನಮ್ಮ ಹಳ್ಳಿಗಳ ಜನ ಇಷ್ಟು ಕೆಟ್ಟು ಹೋಗಿದ್ದಾರೆ ಎಂದು ನನಗೆ ಅನಿಸಿರಲಿಲ್ಲ. ಅವರು ಕಷ್ಟಪಟ್ಟವರು, ನಗರದ ಜನರಿಗಿಂತ ಹೆಚ್ಚು ವಿವೇಕಿಗಳು, ಕಳ್ಳಿನವರು, ಯಾವುದೇ ಸೌಕರ್ಯಗಳು ಇಲ್ಲದೆ ಜೀವನ ಮಾಡಿದವರು. ನೀರು ತರಲು ಮೈಲುಗಟ್ಟಲೆ ನಡೆದವರು. ರಸ್ತೆ, ಬಸ್ ಇಲ್ಲದಿದ್ದರೂ ಗೊಣಗದೆ ಚಕ್ಕಡಿ ಬಂಡಿ ಗಳಲ್ಲಿಯೇ ಊರು ಊರು ಸುತ್ತಿದವರು. ಮಕ್ಕಳಿಗೆ ಯಾವಾಗಲೋ ಬಂದು ಪಾಠ ಮಾಡಿದ ಶಿಕ್ಷಕನನ್ನು ಸಹಿಸಿದವರು. ಆರೋಗ್ಯ ಸೇವೆ ಎಂದರೆ ಏನು ಎಂದು ತಿಳಿಯದವರು...

ಅವರಿಗೆಲ್ಲ ಏನಾಗಿದೆ? ತಮ್ಮ ಹಳ್ಳಿಯ ಪಂಚಾಯಿತಿ ಚುನಾವಣೆಗೇ ಅವರು ಏಕೆ ಇಷ್ಟು ಕಿತ್ತಾಡುತ್ತಿದ್ದಾರೆ? ಸದಸ್ಯರ ಅಪಹರಣಕ್ಕೆ ಹೊಡೆದಾಟಕ್ಕೆ, ಕಲ್ಲು ತೂರಾಟಕ್ಕೆ ಏಕೆ ಇಳಿಯುತ್ತಿದ್ದಾರೆ? ಇವರ ಊರಿನ ಚುನಾವಣೆಯ ಗಲಾಟೆ ನಿಯಂತ್ರಿಸಲು ಪೊಲೀಸರು ಬಂದು ಇವರ ಊರಿನ ಜನರನ್ನೇ ಲಾಠಿಯಿಂದ ಏಕೆ ಹೊಡೆಯಬೇಕು?

ಕೇವಲ ಐದು ವರ್ಷಗಳ ಹಿಂದೆ ನಡೆದ ಗ್ರಾಮ ಪಂಚಾಯಿತಿ ಚುನಾವಣೆಗೆ ನಿಲ್ಲುವವರೂ ಇರಲಿಲ್ಲ. 'ಊರಿನ

ಉಸಾಬರಿ ನಮಗೇಕೆ ಬೇಕು' ಎಂದು ಹಳ್ಳಿಗರು ತಮ್ಮ ಹೊಲ, ಮನೆ ಮಾಡಿಕೊಂಡು ಇದ್ದರು. 'ಹೊಲ ಮನೆ ಇರದೇ ಇದ್ದರೂ ನಮ್ಮ ಮನೆಯಲ್ಲಿ ನಾವು ತಣ್ಣಗೆ ಇದ್ದರೆ ಆಯಿತು' ಎಂದು ಕೊಂಡಿದ್ದರು. ಈಗ ಇದ್ದಕಿದ್ದಂತೆ ಬದಲಾವಣೆ ಏಕಾಯಿತು? ಕಾರಣ ಬಹಳ ನಿಗೂಢವೇನೂ ಆಗಿಲ್ಲ. ಗ್ರಾಮ ಪಂಚಾಯಿತಿಗಳಿಗೆ ಕೇಂದ್ರದ ಹಣ ಹರಿದು ಬರುತ್ತಿರುವುದೇ ಮೂಲತಃ ಉದಾರಿಯಾದ ನಮ್ಮ ಹಳ್ಳಿಗನನ್ನು ಆಸೆಬುರುಕನನ್ನಾಗಿ ಮಾಡಿದೆ. ದುಡಿದು ಮರ್ಯಾದೆಯಿಂದ ಜೀವನ ಮಾಡುವುದು ಸಾಧ್ಯವಿಲ್ಲ ಎಂದೋ ಏನೋ ನಾವೂ ಹಣ ಕಬಳಿಸಿದರಾಯಿತು ಎಂದು ಅವರು ಅಂದುಕೊಳ್ಳುತ್ತಿದ್ದಾರೆಯೇ? ಹಣದ ಆಸೆ ಅವರನ್ನು ಎಲ್ಲಿಗೆ ತಂದು ಮುಟ್ಟಿಸಿತು ಎಂದರೆ ಅಣ್ಣನ ವಿರುದ್ಧ ತಮ್ಮ, ತಾಯಿಯ ವಿರುದ್ಧ ಮಗ, ಎಂದಿನಂತೆ ಅತ್ತೆಯ ವಿರುದ್ಧ ಸೊಸೆ ಅಥವಾ ಉಲ್ಟಾ ಹೀಗೆ ಮನೆ ಮನೆಯಲ್ಲಿಯೇ ಹುರಿಯಾಳುಗಳು ಹುಟ್ಟಿಕೊಂಡರು. ಇವರಲ್ಲಿ ಗೆದ್ದವರು ಯಾರು? ಸೋತವರು ಯಾರು?

ಶ್ರವಣಬೆಳಗೊಳದ ಎಸ್.ಪಿ.ಜೈನ್ ವಸತಿಗೃಹದ ಮುಂದೆ ಎರಡು ವಾರಗಳ ಹಿಂದೆ ನಸುಕಿನಲ್ಲಿ ಚಹಾ ಕುಡಿಯುತ್ತ ಕುಳಿತಿದ್ದೆ. ಪಕ್ಕದ ಬೆಂಚಿನ ಮೇಲೆ ಹಳ್ಳಿಗನೊಬ್ಬ ಬಂದು ಕುಳಿತುಕೊಂಡ. ಒರಟು ಮಂಜರಪಾಟ್ ಬಟ್ಟೆಯ ತುಂಬು ತೋಳಿನ ಬನಿಯನ್ ಮತ್ತು ತುಂಡು ಧೋತ್ರ ಮಾತ್ರ ತೊಟ್ಟಿದ್ದ 60ರ ಆಸುಪಾಸಿನ ಆ ವ್ಯಕ್ತಿ ಸಕ್ಕರೆ ಜಾಸ್ತಿ ಹಾಕಿ ಚಹ ಕೊಡಲು ಹೇಳಿದರು. ನಾನು ಸಕ್ಕರೆ ಇಲ್ಲದ ಚಹ ಕುಡಿಯುತ್ತ ಕುಳಿತಿದ್ದೆ. ಅವರನ್ನು ಮಾತಿಗೆಳೆಯಬೇಕು ಎಂದು ಸುಮ್ಮನೆ, 'ಸಕ್ಕರೆ ಜಾಸ್ತಿ ಏಕೆ? ಪಾನಕ ಇದ್ದಂತೆ ಇರುತ್ತದೆ' ಎಂದು ನಗೆಯಾಡಿದೆ. 'ನಿಮಗ ನೂರೆಂಟ ರೋಗ. ನಮಗೇನ್ರೀ? ನಾವು ಸಕ್ಕರೀನೂ ಜಾಸ್ತಿ ತಿಂತೀವಿ. ಖಾರಾನೂ ತಿಂತೀವಿ. ನಿಮಗ ಎರಡ ರೊಟ್ಟಿ ತಿನ್ನಾಕಾಗೂದಿಲ್ಲ. ನಾವ ಹತ್ತ ರೊಟ್ಟಿ ತಿಂತೀವಿ. ಅನ್ನ-ಪನ್ನ ತಿಂದ್ರ ಮೈಗೆ ಆಗೂದಿಲ್ಲ' ಎಂದು ಅವರೇ ನನಗೆ ತಿರುಗೇಟು ಕೊಟ್ಟರು.

ಅವರು ಹಾನಗಲ್ ತಾಲ್ಲೂಕಿನವರು. ತಮ್ಮ ತಾಲ್ಲೂಕಿನ ಗ್ರಾಮ ಪಂಚಾಯಿತಿ ಸದಸ್ಯರನ್ನೆಲ್ಲ ಕೂಡಿ ಹಾಕಿಕೊಂಡು 'ತೀರ್ಥಯಾತ್ರೆ'ಗೆ ಬಂದಿದ್ದರು. 'ಇವರಿಗೆಲ್ಲ ಹೋಟೆಲ್ ಊಟ ಕೊಡಿಸಿ ಸಾಕಾಗಿ ಹೋಯಿತು. ಈಗ ನಾವೇ ಭಾಂಡೆ ತೆಗೆದುಕೊಂಡು ಅನ್ನ-ಸಾರು ಮಾಡಿ ಬಡಿಸುತ್ತಿದ್ದೇವೆ. ಊರು ಬಿಟ್ಟು ಹತ್ತು ದಿನ ಆಯಿತು. ಚುನಾವಣೆ ದಿನ ನಿರ್ಧಾರ ಆದ ಮೇಲೆ ನಮ್ಮ ಲೀಡರು ಫೋನ್ ಮಾಡುತ್ತಾರೆ. ಆಮೇಲೆ ಊರಿಗೆ ಹೋಗುತ್ತೇವೆ. ಇಲ್ಲದಿದ್ದರೆ ಯಾತ್ರೆ ಮುಂದು ವರಿಯುತ್ತದೆ' ಎಂದು ಆ ಅಜ್ಜ ಹೇಳಿದ. ಇದು ಒಂದು ಹಾನಗಲ್ಲಿನ ಕಥೆಯಲ್ಲ. ಬಹುತೇಕ ಇಡೀ ರಾಜ್ಯದಲ್ಲಿ ಇದೇ ಕಥೆ. ಒಂದೋ 'ತೀರ್ಥಯಾತ್ರೆ', ಇಲ್ಲವಾದರೆ ಅಪಹರಣ. ಎರಡಕ್ಕೂ ಆಮಿಷವೊಂದೇ ಮೂಲ. ಯಾತ್ರೆ ಜತೆಗೆ ಏನಿಲ್ಲವೆಂದರೂ ತಲಾ 15,000 ದಿಂದ 20,000 ರೂಪಾಯಿ ಹಣ. ಹಣ ಕೊಟ್ಟವರ ಪರವಾಗಿ ಮತ ಹಾಕಿದರೆ ಸೈ, ಇಲ್ಲವಾದರೆ ಪರಿಣಾಮ ಎದುರಿಸಬೇಕು.

ಎಲ್ಲದಕ್ಕೂ ಮೂಲ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಗೆ ಹರಿದು ಬರುವ ದುಡ್ಡು. ಇದು ಹಳ್ಳಿಯ ಜನರಿಗೆ ಕನಿಷ್ಠ

ನೂರು ದಿನ ಕೆಲಸದ ಖಾತ್ರಿ ಕೊಡುವ ಜತೆಗೆ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಜಲಾನಯನ ಪ್ರದೇಶ ಅಭಿವೃದ್ಧಿ, ರಸ್ತೆ ನಿರ್ಮಾಣ, ಮಣ್ಣು ಸಂರಕ್ಷಣೆ, ಕುಡಿಯುವ ನೀರು, ಕೆರೆಗಳ ಹೂಳು ಎತ್ತುವುದು ಇತ್ಯಾದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನೆರವಾಗುತ್ತದೆ. ಇದೆಲ್ಲ ಅವರ ಊರಿನ ಏಳಿಗೆಗೇ ಇರುವ ಹಣ. ಈಗಾಗಲೇ ರಾಜ್ಯದ ಹಲವು ಕಡೆಗಳಲ್ಲಿ ಶುದ್ಧ ಕುಡಿಯುವ ನೀರು ಸಿಗದೆ ವಾಂತಿ ಭೇದಿ, ಕಾಲರಾ ಪ್ರಕರಣಗಳು ವರದಿಯಾಗುತ್ತಿವೆ. ಅನೇಕ ಹಳ್ಳಿಗಳ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಪ್ರಮಾಣ ಜಾಸ್ತಿಯಾಗಿ ಅದರ ದುಷ್ಪರಿಣಾಮಗಳೂ ಕಂಡು ಬರುತ್ತಿವೆ. ಅದೇ ನೀರನ್ನೇ ಅಲ್ಲವೇ ಗ್ರಾಮ ಪಂಚಾಯಿತಿ ಸದಸ್ಯರೂ, ಅಧ್ಯಕ್ಷರೂ ಕುಡಿಯುವುದು. ಕನಿಷ್ಠ ತಮ್ಮ ಹಳ್ಳಿಗೆ ಸರಿಯಾದ ಕುಡಿಯುವ ನೀರಿನ ಪೂರೈಕೆಯನ್ನಾದರೂ ಮಾಡಬೇಕು ಎಂದು ಅವರಿಗೆ ಅನಿಸುವುದಿಲ್ಲವೇ?

ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎನ್ನುತ್ತಾರೆ. ನಮ್ಮ ಹಳ್ಳಿಯ ಜನ ಭ್ರಷ್ಟರಾಗಲು, ರಾಜಕಾರಣಿಗಳು ಕೊಡುವ ಬಿಡಿಗಾಸಿಗೆ ಕೈ ಚಾಚಲು ಯಾರು ಕಾರಣ? ಶಾಸಕರು, ಸಚಿವರು ಕಾರಣವೇ? ತಮ್ಮ ಜತೆಗೇ ಬೆಳೆದ ಒಬ್ಬ ವ್ಯಕ್ತಿ ಶಾಸಕನಾಗುತ್ತಿದ್ದಂತೆಯೇ ಕೋಟ್ಯಧೀಶನಾಗುವುದು ಅವರಿಗೆ ಮಾದರಿ ಎನಿಸಿತೇ? ರಾಜಕಾರಣ ಎನ್ನುವುದು ಬರೀ ದುಡ್ಡು ಮಾಡುವ ಒಂದು ದಂಧೆಯಾಯಿತೇ?

ರಾಜೀವ ಗಾಂಧಿಯವರು ಸಂವಿಧಾನಕ್ಕೆ ತಿದ್ದುಪಡಿ ತಂದು ಪಂಚಾಯಿತಿ ಮತ್ತು ಪುರಸಭೆಯಂಥ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವ ದಿಟ್ಟ ಹೆಜ್ಜೆಯಿಟ್ಟರು. ನೇರವಾಗಿ ಈ ಸಂಸ್ಥೆಗಳಿಗೇ ಕೇಂದ್ರದಿಂದ ಹಣ ಬಿಡುಗಡೆ ಮಾಡುವ ಕ್ರಮ ತೆಗೆದುಕೊಂಡರು. ಅದರ ಫಲವಾಗಿಯೇ ಈಗ ಉದ್ಯೋಗ ಖಾತ್ರಿ ಯೋಜನೆಯಡಿ ಗ್ರಾಮ ಪಂಚಾಯಿತಿಗಳಿಗೇ ನೇರವಾಗಿ ದುಡ್ಡು ಬರುತ್ತಿದೆ. ಆದರೆ, ಅವರು ಪ್ರಧಾನಿಯಾಗಿದ್ದಾಗಲೇ, ಕೇಂದ್ರದಿಂದ ಬಿಡುಗಡೆಯಾಗುವ ಹತ್ತು ರೂಪಾಯಿಗಳಲ್ಲಿ ಒಂದು ರೂಪಾಯಿ ಮಾತ್ರ ಗ್ರಾಮ ತಲುಪುತ್ತಿದೆ ಎಂದಿದ್ದರು. ಆಗ ದುಡ್ಡು ಅನೇಕ ದಾರಿಗಳಲ್ಲಿ ಹರಿದು ಬರುತ್ತಿತ್ತು. ಉದ್ದಕ್ಕೂ ಎಂಜಲು ಕಾಸಿಗೆ ನಾಲಿಗೆಗಳು ಚಾಚಿಕೊಂಡೇ ಇರುತ್ತಿದ್ದುವು. ಈಗ?

ಈಗ ನೋಡಿ, ಮೊನ್ನೆ ಮೊನ್ನೆ ಮಣಿಶಂಕರ್ ಅಯ್ಯರ್ ಬೆಂಗಳೂರಿಗೆ ಬಂದಿದ್ದರು. ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಅವರು ಒಬ್ಬ ಅಥಾರಿಟಿ. ಅವರು ಹೇಳಿದ್ದರು 'ಪಂಚಾಯಿತಿಗಳಿಗೆ ಬರುವ ಹಣದಲ್ಲಿ ಶೇ 85 ರಷ್ಟು ಸೋರಿಕೆ ಯಾಗುತ್ತಿದೆ. ಕೇವಲ ಶೇ 15 ರಷ್ಟು ಹಣ ಮಾತ್ರ ಅಭಿವೃದ್ಧಿಗೆ ಬಳಕೆಯಾಗುತ್ತಿದೆ' ರಾಜೀವ ಗಾಂಧಿ ಕಾಲದಲ್ಲಿ ಹಣ ಹಲವು ಹಂತದಲ್ಲಿ ಸೋರಿಕೆಯಾಗುತ್ತಿತ್ತು. ಅದನ್ನು ತಪ್ಪಿಸಿ ನೇರವಾಗಿ ಹಣ ನೀಡಿದರೂ ಸೋರಿಕೆ ಮುಂದುವರಿದಿದೆ. ಇದರಿಂದ ಆದ ಕೆಟ್ಟ ಪರಿಣಾಮ ಎಂದರೆ ಕೇವಲ 20 ರೂಪಾಯಿಗೆ ಕೂಲಿ ಮಾಡಿ ಬದುಕುವವರ ಸಂಖ್ಯೆ 83 ಕೋಟಿಗೆ ಏರಿದೆ. ಮುಕ್ಕಾಲು ಪಾಲು ಗರ್ಭಿಣಿಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಶೇ 47 ರಷ್ಟು ಮಕ್ಕಳು ಪೌಷ್ಟಿಕಾಂಶಗಳು ಇಲ್ಲದೆ ಬದುಕುತ್ತಿವೆ. ಮಾನವ ಸಂಪನ್ಮೂಲ ಅಭಿವೃದ್ಧಿ ಪಟ್ಟಿಯಲ್ಲಿ ನಮ್ಮ ದೇಶದ್ದು ಈಗಲೂ 134 ನೇ

ಸ್ಥಾನ. ಕಳೆದ 16 ವರ್ಷಗಳಿಂದ ನಾವು ಈ ಸ್ಥಾನದಿಂದ ಮೇಲೆ ಏರಲು ಆಗಲೇ ಇಲ್ಲ!

ಹಿಂದೆ ನಮ್ಮ ಮನೆ-ಅಂಗಡಿಗಳಲ್ಲಿ ಸುಭಾಷ್, ಗಾಂಧಿ, ವಲ್ಲಭಭಾಯಿ, ನೆಹರೂ, ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಚಿತ್ರಗಳನ್ನು ಹಾಕುತ್ತಿದ್ದೆವು. ಅವು ಬರೀ ಚಿತ್ರಗಳಾಗಿರಲಿಲ್ಲ. ಮಾದರಿಗಳಾಗಿದ್ದವು. ದಾರಿದೀಪ ಎನಿಸಿದ್ದುವು. ನಾಯಕತ್ವ ಎನ್ನುವುದು ರಾಜಕೀಯ ಕ್ಷೇತ್ರದಿಂದಲೇ ಹುಟ್ಟಿಕೊಳ್ಳುತ್ತದೆ. ಈಗ ಇರುವ ಯಾವ ನಾಯಕರ ಚಿತ್ರಗಳನ್ನು ನಾವು ನಮ್ಮ ಮನೆಗಳಲ್ಲಿ, ಅಂಗಡಿಗಳಲ್ಲಿ ಹಾಕಿಕೊಳ್ಳಲು ಸಾಧ್ಯ? ಮಾದರಿಗಳೇ ಇಲ್ಲದ ಒಂದು ರಾಜಕೀಯ ವ್ಯವಸ್ಥೆ ಈಗಿನಂಥ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಸೃಷ್ಟಿಸಲು ಸಾಧ್ಯ. ವಿಧಾನಸೌಧ ಮಟ್ಟದ ರಾಜಕೀಯ ಆಡಳಿತವನ್ನೇ ನೋಡಿ. ಅಲ್ಲಿ ಜಾತಿ ಮತ್ತು ಹಣ ಮಾತ್ರ ಚಲಾವಣೆಯಾಗುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ ಹಣ ಮತ್ತು ಜಾತಿ ಮಾತ್ರ ಚಾಲ್ತಿಯಲ್ಲಿ ಇರುತ್ತದೆ. ಈ ಎರಡರ ಬೆಂಬಲ ಇಲ್ಲದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಹಿಂದೆಯೂ ಭ್ರಷ್ಟಾಚಾರ ಇರಲಿಲ್ಲ ಎಂದು ಅಲ್ಲ. ಈಗಿನಷ್ಟು ಸಣ್ಣತನದಲ್ಲಿ ಇರಲಿಲ್ಲ. ನೂರು ಕೊಟ್ಟರೂ ಆಯಿತು ಎನ್ನುವಂತಾದರೆ ಅವನು ಎಂಥ ರಾಜಕೀಯ ನಾಯಕ?

ದುರಂತ ಎಂದರೆ ನಾವು ಕೆಟ್ಟದ್ದನ್ನು ಬೇಗ ಕಲಿಯುತ್ತೇವೆ. ಒಳ್ಳೆಯದನ್ನು ಕಲಿಯಲು ಹಿಂದೇಟು ಹಾಕುತ್ತೇವೆ. ಗ್ರಾಮ ಪಂಚಾಯಿತಿಗಳಿಗೆ ವಿಧಾನಸೌಧವೇ 'ಕೆಟ್ಟ ಮಾದರಿ' ಒದಗಿಸಿದೆ. ಬೆಂಗಳೂರಿನಲ್ಲಿ ಬಹುತೇಕ ಶಾಸಕರು ಲೂಟಿಯನ್ನೇ ಕಾಯಕ ಮಾಡಿಕೊಂಡಿರುವಾಗ ಅಥವಾ ಇಲ್ಲಿ ಲೂಟಿ ಹೊಡೆದುದು ಸಾಲದು ಎಂದು ಅವರೇ ಪಂಚಾಯಿತಿ ಮಟ್ಟದಲ್ಲೂ ನಿಯಂತ್ರಣ ಸೂತ್ರಗಳನ್ನು ಹಿಡಿದು ಕೊಂಡಾಗ ವ್ಯವಸ್ಥೆಯನ್ನು ಸರಿಪಡಿಸುವವರು ಯಾರು? ಮನೆಯ ಯಜಮಾನ ಸರಿ ಇದ್ದರೆ ಇತರ ಸದಸ್ಯರೂ ಸರಿ ಇರುತ್ತಾರೆ. ಮೇಲು ಹಂತದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ತಪ್ಪು ಮಾಡಿದವರಿಗೆ ಶಿಕ್ಷೆಯಾದರೆ ಕೆಳ ಹಂತದ ಭ್ರಷ್ಟಾಚಾರಿಗಳಿಗೆ ಭಯ ಹುಟ್ಟುತ್ತದೆ. ಲೋಕಾಯುಕ್ತ ಸಂತೋಷ ಹೆಗ್ಡೆ ಬಹುಶಃ ಇದನ್ನೇ ಹೇಳುತ್ತಿದ್ದಾರೆ. ಅವರು ಎತ್ತಿದ ಪ್ರಶ್ನೆಗಳಿಗೆ ರಾಜ್ಯ ಸರ್ಕಾರ, ಆಡಳಿತ ಸೂತ್ರ ಹಿಡಿದಿರುವ ಬಿಜೆಪಿ ಆರಂಭದಲ್ಲಿ ಉತ್ತರ ಕಂಡುಕೊಳ್ಳುವ ಬದಲು ನೆಪಗಳನ್ನು ಹುಡುಕಿತು. ಅದು ಪ್ರಯೋಜನ ಆಗದು, ಇನ್ನಷ್ಟು ಮುಖಭಂಗವೇ ಆಗುತ್ತದೆ ಎಂದು ಅನಿಸಿದಾಗ, ರಾಷ್ಟ್ರಮಟ್ಟದ ಬಿಜೆಪಿ ಮುಖಂಡರೂ ಮೌನ ಮುರಿದು ಮಧ್ಯಪ್ರವೇಶ ಮಾಡಿದ್ದರಿಂದ ರಾಜ್ಯ ಸರ್ಕಾರ ಉತ್ತರ ಹುಡುಕುವ ಭರವಸೆ ನೀಡಿದೆ. ಹೆಗ್ಡೆಯವರು ರಾಜೀನಾಮೆಯನ್ನೂ ವಾಪಸು ಪಡೆದಿದ್ದಾರೆ. ಇನ್ನು ಮುಂದೆ ಲೋಕಾಯುಕ್ತ ಸಂಸ್ಥೆಗೆ ಇನ್ನಷ್ಟು ಹಲ್ಲುಗಳು ಸಿಕ್ಕರೆ. ಅದು ಕಚ್ಚೀತು ಎಂಬ ಭಯ ಹುಟ್ಟೀತು. ಅದು ಸುರಂಗದ ಕೊನೆಯಲ್ಲಿನ ಭರವಸೆಯ ಬೆಳಕು.

■

# ಮುಳ್ಳು ಬೇಲಿಗಳ ನಡುವೆ ಹೂವು ಅರಳುವುದು ಹೀಗೆ...

ಹೀಗೆಲ್ಲ ಬರೆಯುವುದು ರೊಮ್ಯಾಂಟಿಕ್ ಅನಿಸಬಹುದು. ಪಾಕಿಸ್ತಾನ ಮತ್ತು ಭಾರತದ ನಡುವಿನ ಸಂಬಂಧಗಳ 'ವಾಸ್ತವ' ಸ್ಥಿತಿಯ ಅರಿವು ಇಲ್ಲದ್ದು ಅನಿಸ ಬಹುದು. ಆದರೆ, ಮೊನ್ನೆ ಪಾಕಿಸ್ತಾನದಿಂದ ಬಂದಿದ್ದ ಹತ್ತು ಹನ್ನೊಂದು ಜನ ಪತ್ರಕರ್ತ ಗೆಳೆಯರ ಜತೆಗೆ ಮಾತನಾಡಿದಾಗ ನನಗೆ ಹಾಗೆ ಅನಿಸಲಿಲ್ಲ. ಅವರ ಜತೆಗೆ ಮಾತನಾಡುತ್ತ ನಾನು ರೊಮ್ಯಾಂಟಿಕ್ ಆದೆನೇ ಅಥವಾ ಅವರೇ ಭಾರತದ ಬಗ್ಗೆ ಅಷ್ಟು ರೊಮ್ಯಾಂಟಿಕ್ ಆಗಿ ಬಂದುದರಿಂದ ನಾನು ಪ್ರಭಾವಿತನಾದೆನೇ ಹೇಳುವುದು ಕಷ್ಟ.

ಭಾರತದ ವಿದೇಶಾಂಗ ಸಚಿವಾಲಯದ ಅತಿಥಿಗಳಾಗಿ ಈ ಮಾಧ್ಯಮ ಸ್ನೇಹಿತರು ಬೆಂಗಳೂರಿಗೆ ಬಂದಿದ್ದರು. ಅವರು ನಮ್ಮ ಕಚೇರಿಗೂ ಬಂದಿದ್ದರು. ಅದು ದಕ್ಷಿಣ ಭಾರತಕ್ಕೆ ಅವರು ನೀಡಿದ ಮೊದಲ ಭೇಟಿ. ಅವರಿಗೆಲ್ಲ ಅನಿಸತೊಡಗಿತ್ತು, 'ಪಾಕಿಸ್ತಾನದ ಬಗ್ಗೆ ಉತ್ತರ ಭಾರತದಲ್ಲಿ ಇರುವಷ್ಟು ತೀವ್ರ ಭಾವನೆ, ಕಟು ವಿರೋಧ ದಕ್ಷಿಣ ಭಾರತದಲ್ಲಿ ಇಲ್ಲ' ಎಂದು. ಅವರು ನಮ್ಮ ಕಚೇರಿಗೆ ಬಂದುದು 'ಭಾರತ್ ಬಂದ್' ದಿನ. ಬೆಂಗಳೂರಿನಲ್ಲಿ

ಟ್ರಾಫಿಕ್ಕೇ ಇರಲಿಲ್ಲ. 60ರ ದಶಕದ ಬೆಂಗಳೂರು ನೋಡಿದಂತೆ ನಮಗೇ ಅನಿಸುತ್ತಿತ್ತು. ಇಲ್ಲಿನ ರಸ್ತೆಗಳಲ್ಲಿ ನಿತ್ಯ ನಾವು ಅನುಭವಿಸುವ ಗೋಳು ಅವರ ಅನುಭವಕ್ಕೆ ಬಂದಿರಲಿಲ್ಲ. ಅವರು ಸಂಚರಿಸಿದ ರಸ್ತೆಗಳು ಚೆನ್ನಾಗಿ ಇದ್ದುವೋ ಅಥವಾ ಮೆಟ್ರೊ ಕಾಮಗಾರಿ ನಡೆದ ರಸ್ತೆಗಳಲ್ಲಿ ಮಾತ್ರ ಅವರು ಸಂಚರಿಸಿದರೋ ಗೊತ್ತಿಲ್ಲ. ಆದರೆ, ಇಲ್ಲಿನ ಮೂಲ ಸೌಕರ್ಯ ಅವರಲ್ಲಿ ಬೆರಗು ಮೂಡಿಸಿತ್ತು. 'ಅಭಿವೃದ್ಧಿ', 'ಬೆಳವಣಿಗೆ' ಕಣ್ಣು ಕುಕ್ಕಿಸಿತ್ತು.

ಪಾಕಿಸ್ತಾನದ ಗೆಳೆಯರು ಬಂದಿದ್ದಾರೆ ಎಂದರೆ ಮಾತು ಎರಡೂ ರಾಷ್ಟ್ರಗಳ ಸಂಬಂಧ ವೃದ್ಧಿಯ ಕಡೆ ತಾನೇ ಹೊರಳುವುದು? ನಮ್ಮ ಮಾತುಕತೆಯೂ ಅತ್ತಲೇ ತಿರುಗಿತು. 'ಎರಡೂ ದೇಶಗಳು ಸ್ನೇಹದಿಂದ ಇರಲು ಏನು ಅಡ್ಡಿ?' '1965ರ ಯುದ್ಧಕ್ಕಿಂತ ಮುಂಚೆ ವ್ಯಾಪಾರ ವಹಿವಾಟು ಮಾಡಿಕೊಂಡ ಹಾಗೆಯೇ ಈಗಲೂ ಇರಬಹುದಲ್ಲ?' 'ಭಾರತದಲ್ಲಿ ಮುಸ್ಲಿಮರ ಸ್ಥಿತಿಗತಿ ಹೇಗಿದೆ?' 'ಪಾಕಿಸ್ತಾನದಲ್ಲಿ ಮುಸ್ಲೀಮೇತರರು ಸುರಕ್ಷಿತವೇ?' 'ಅಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಹೋಗುತ್ತಾರೆಯೇ? ಮುಕ್ತವಾಗಿ ಅಡ್ಡಾಡುತ್ತಾರೆಯೇ' 'ಎರಡೂ ದೇಶಗಳು ರಾಜಕೀಯವಾಗಿ ತಮ್ಮ ವೈಮನಸ್ಯ ಬಗೆಹರಿಸಿಕೊಳ್ಳುವ ವರೆಗೆ ಉಳಿದುದೆಲ್ಲ ಬಕ್ವಾಸ್ ಅಲ್ಲವೇ?'... ನಮ್ಮ ಪ್ರಶ್ನೆಗಳಿಗೂ ಲೆಕ್ಕವಿರಲಿಲ್ಲ. ಅವರ ಪ್ರಶ್ನೆಗಳಿಗೂ ಮಿತಿಯಿರಲಿಲ್ಲ. ಕಚೇರಿಯಲ್ಲಿ ಮಾತು ಮುಗಿಯಲೇ ಇಲ್ಲ. ಸಂಜೆ ಬೆಂಗಳೂರು ಕ್ಲಬ್‌ನಲ್ಲಿ ಸೇರಿದಾಗಲೂ ಅದೇ ಮಾತು. 'ನಾವು ಗೆಳೆಯರಾಗುವುದು ಹೇಗೆ?' ಎಂಬುದೇ ವಸ್ತು. ನನಗೆ ನಿಬ್ಬೆರಗಾಗಿ ಹೋಯಿತು. 'ಇವರೆಲ್ಲ ಎಷ್ಟು ಒಳ್ಳೆಯ ಜನ? ಎಷ್ಟು ಮುಕ್ತವಾಗಿ ಮಾತನಾಡುತ್ತಾರೆ. ತಮ್ಮ ದೇಶದ ಗುಟ್ಟು (ದಾವೂದ್ ನಮ್ಮಲ್ಲಿಯೇ ಇದ್ದಾನೆ!)ಗಳನ್ನು ಬಿಟ್ಟು ಕೊಡುತ್ತಾರೆ. ಕ್ರಿಟಿಕಲ್ ಆಗಿ ಮಾತನಾಡುತ್ತಾರೆ' ಎಂದುಕೊಂಡೆ. ಹಾಗೆಂದು ಅವರು ಅಮಾಯಕರಾಗಿರಲಿಲ್ಲ. 'ನಾವು ಸ್ನೇಹಿತರಾಗಲು ಇರುವ ಅಡ್ಡಿಗಳೇನು? ಯಾರು ಅಡ್ಡಿ' ಎಂದೂ ಅವರಿಗೆ ಗೊತ್ತಿತ್ತು.

'ಮುಸ್ಲೀಮರು ಭಾರತದಲ್ಲಿ ಸುಖವಾಗಿದ್ದಾರೆ' ಎಂದು ನಮ್ಮಲ್ಲಿ ಒಬ್ಬರು ಹೇಳಿದಾಗ ಅವರು ನಂಬಲಿಲ್ಲ. ಅವರ ಮನಸ್ಸಿನಲ್ಲಿ ಗೋಧ್ರಾ ಘಟನೆ ಇನ್ನೂ ಹಸಿಯಾಗಿಯೇ ಇತ್ತು. (ಆದರೂ ಬೆಂಗಳೂರಿನಲ್ಲಿ ಅಲ್ಲಲ್ಲಿ 'ಕುರ್ ಆನ್ ಅರ್ಥವರಿಯಲು ನಿಮಗೆ ಆಸಕ್ತಿಯೇ? ಉಚಿತ ಪ್ರತಿಗಳಿಗೆ ಸಂಪರ್ಕಿಸಿ' ಎಂಬ ಪ್ರಚಾರ ಫಲಕಗಳು ಅಷ್ಟು ದೊಡ್ಡದಾಗಿ ಪ್ರದರ್ಶಿತಗೊಳ್ಳುತ್ತಿರುವುದು ಅವರಲ್ಲಿ ಅಚ್ಚರಿ ಮೂಡಿಸಿತ್ತು. ಒಬ್ಬರು ಅದರ ಚಿತ್ರವನ್ನು ತೆಗೆದು ತಮ್ಮ ಊರಿನಲ್ಲಿ ತೋರಿಸಲು ನಿರ್ಧರಿಸಿದ್ದರು) ತಮ್ಮ ದೇಶದಲ್ಲಿಯೂ ಮುಸ್ಲಿಮೇತರರ ಸ್ಥಿತಿ ಅಷ್ಟೇನು ಚೆನ್ನಾಗಿಲ್ಲ ಎಂದು ಒಪ್ಪಿಕೊಳ್ಳಲು ಅವರಿಗೆ ಹಿಂಜರಿಕೆಯೇನೂ ಇರಲಿಲ್ಲ. ಅವರಲ್ಲೇ ಒಬ್ಬರು 'ಚೆನ್ನಾಗಿದ್ದಾರಲ್ಲ?' ಎಂದು ಹೇಳಿದ್ದಕ್ಕೆ ಜತೆಗಿದ್ದ ಹಿರಿಯ ಮಹಿಳೆಯೊಬ್ಬರು ಅದನ್ನು ಒಪ್ಪಲಿಲ್ಲ. 'ಸುಳ್ಳು ಏಕೆ ಹೇಳುವುದು' ಎಂದು ಮೆಲುದನಿಯಲ್ಲಿ ತಮ್ಮವರನ್ನೇ ಗದರಿಸಿದರು. ನಾನು ಸುಮ್ಮನೆ ಕೇಳಿದೆ: '26/11ರ ಘಟನೆಗೆ ಪಾಕಿಸ್ತಾನದಲ್ಲಿ ಏನು ಪ್ರತಿಕ್ರಿಯೆ ಇತ್ತು' ಎಂದು. ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಪತ್ರಿಕೆಯ ರಾಜಕೀಯ ವರದಿಗಾರ ಆಸಿಮ್ ಅವಾನ್

ಹೇಳಿದರು : 'ನನ್ನನ್ನು ನಂಬಿ, ಪಾಕಿಸ್ತಾನದ ಸಾಮಾನ್ಯ ಪ್ರಜೆಗಳಿಗೆಲ್ಲ ಅದು ಆಘಾತದ ದಿನ. ಇದು ಒಳ್ಳೆಯದಲ್ಲ ಎಂದೇ ಅವರು ಹೇಳಿದರು. ಅವರು ಯಾರೂ ಸೆಲೆಬ್ರೇಟ್ ಮಾಡಿದ್ದು ನನಗೆ ಗೊತ್ತಿಲ್ಲ.'

ಹಾಗಾದರೆ ಸಮಸ್ಯೆ ಇರುವುದು ಎಲ್ಲಿ? ಸಮಸ್ಯೆ ಇರುವುದು ಪರಸ್ಪರರ ನಡುವೆ ಇರುವ ಅಪನಂಬಿಕೆಯಲ್ಲಿ. ಭಾರತ ಮತ್ತು ಪಾಕಿಸ್ತಾನ ವಿಭಜನೆಯಾದುದು 1947ರ ಆಗಸ್ಟ್ 15ರ ಮಧ್ಯರಾತ್ರಿಯಲ್ಲಿ. ಅದು ರಾಜಕೀಯ ನಕಾಶೆಯ ವಿಭಜನೆ. ಅದೇನು ರಕ್ತರಹಿತವಾಗಿರಲಿಲ್ಲ. ಆದರೂ 1965ರ ಯುದ್ಧದವರೆಗೆ ಎರಡೂ ದೇಶಗಳ ನಡುವೆ ವ್ಯಾಪಾರ ವಹಿವಾಟಿಗೆ, ಕಳ್ಳ ಸಾಗಣೆಗೆ (!) ಅಡ್ಡಿ ಅಡಚಣೆ ಗಳೇನೂ ಇರಲಿಲ್ಲ. ಯಾವಾಗ ಕಾಶ್ಮೀರದ ನೆಲವನ್ನು ಕಬಳಿಸಲು ಪಾಕಿಸ್ತಾನ 65ರಲ್ಲಿ ಯುದ್ಧ ಮಾಡಿತೋ ಆಗ ಎರಡೂ ದೇಶಗಳ ನಡುವೆ ದೊಡ್ಡ ಗೋಡೆ ನಿರ್ಮಾಣವಾಯಿತು. ಈ ಯುದ್ಧ ಜನರನ್ನು ವಿಭಜಿಸಿ ಬಿಟ್ಟಿತು. ನಂತರ ಬಾಂಗ್ಲಾ ವಿಭಜನೆಯ ಯುದ್ಧ ಆಗಿದೆ. ಕಾರ್ಗಿಲ್ ಸಂಘರ್ಷ ಆಗಿದೆ. 26/11 ಆಗಿದೆ. ಮಧ್ಯೆ 1993ರಲ್ಲಿ ಮುಂಬೈ ಸ್ಫೋಟವಾಗಿದೆ. ಅದರ ರೂವಾರಿ ದಾವೂದ್ ಇಬ್ರಾಹಿಂ ಕರಾಚಿ ಬಳಿ ಎಲ್ಲೋ ಅಡಗಿ ಕುಳಿತಿದ್ದಾನೆ. 26/11ರ ಆರೋಪಿಗಳ ವಿರುದ್ಧದ ಪಾಕಿಸ್ತಾನದ 'ಕ್ರಮ' ಭಾರತಕ್ಕೆ ತೃಪ್ತಿ ತಂದಿಲ್ಲ. ಇವೆಲ್ಲದರ ಮೇಲೆ ಕಾಶ್ಮೀರ ಎಂಬ ಕತ್ತಿ ತೂಗುತ್ತಲೇ ಇದೆ. ಎರಡು ದೇಶಗಳ ನಡುವೆ ಮಾತುಕತೆಗೆ ಇರುವ ಗೋಡೆಗಳು ಒಂದೇ ಎರಡೇ? ಪಾಕಿಸ್ತಾನದ ಸೇನೆ, ಭಯೋತ್ಪಾದಕರು, ಅಮೆರಿಕಾ, ಸೌದಿ ಅರೇಬಿಯಾ... ಪಟ್ಟಿ ಮಾಡುತ್ತಲೇ ಹೋಗಬಹುದು.

ಗೋಡೆಗಳನ್ನು ಕೆಡವಲು ನಡೆದ ಪ್ರಯತ್ನಗಳೂ ಒಂದೆರಡಲ್ಲ. ಅಟಲ ಬಿಹಾರಿ ವಾಜಪೇಯಿ 1977ರಲ್ಲಿ ವಿದೇಶಾಂಗ ಸಚಿವರಾಗಿದ್ದಾಗಲೇ ಅದಕ್ಕೆ ಚಾಲನೆ ನೀಡಿದರು. ಎಷ್ಟೋ ವರ್ಷಗಳ ನಂತರ ಪ್ರಧಾನಿಯಾದ ಮೇಲೆ ಮತ್ತೆ ಅದನ್ನು ಮುಂದುವರಿಸಿದರು. ಪಾಕಿಸ್ತಾನಕ್ಕೆ ಹೋಗಿ ಬಂದರು. ಪಾಕ್ ನೆಲದಲ್ಲಿ ಇಳಿದಾಗ ಅಲ್ಲಿನ ಸೇನಾಧಿಕಾರಿಗಳು ಸೆಲ್ಯೂಟ್ ಹೊಡೆಯದ ಅವಮಾನ ಸಹಿಸಿಕೊಂಡರು. 2004ರಲ್ಲಿ ಭಾರತ ಕ್ರಿಕೆಟ್ ತಂಡ ಪಾಕಿಸ್ತಾನಕ್ಕೆ ಹೋಗಿದ್ದಾಗ 'ಖೇಲ್ ಹೀ ನಹಿ, ದಿಲ್ ಭೀ ಜೀತೆಂ' ಎಂದ ಕವಿಯ ಹಾಗೆ ಕರೆ ಕೊಟ್ಟರು. (ಬಹುಶಃ ಅದಕ್ಕೇ ಇರಬೇಕು, 'ಪ್ರೈಮ್ ಮಿನಿಸ್ಟರ್ ವಾಜಪೇಯಿ ಸಾಬ್' ಎಂದು ಟ್ರಿಬ್ಯೂನ್ ವರದಿಗಾರ ಆಸಿಮ್ ಅವಾನ್ ಈಗಲೂ ಸಂಬೋಧಿಸುತ್ತಿದ್ದರು) ನಮ್ಮ ಕ್ರಿಕೆಟಿಗರು ಪಾಕಿಸ್ತಾನದ ಹೃದಯ ಗೆದ್ದು ಬಂದರು. ಅದೇ ಆಸುಪಾಸಿನಲ್ಲಿ ಬೆಂಗಳೂರಿನ ನಾರಾಯಣ ಹೃದಯಾಲಯಕ್ಕೆ ಹೃದಯ ಶಸ್ತ್ರ ಚಿಕಿತ್ಸೆಗೆ ಬಂದಿದ್ದ ನೂರ್ ಎಂಬ ಬಾಲಕಿ ಬಾರತೀಯರ ಎದೆಗಳಲ್ಲಿ ಪ್ರೀತಿಯ ದೀಪಗಳನ್ನೇ ಬೆಳಗಿಸಿದಳು. ಎಲ್ಲರೂ ಎದೆ ತುಂಬಿ ಆಕೆಯ ಆರೋಗ್ಯಕ್ಕೆ ಹಾರೈಸಿದರು.

'ಹೌದು, ಎರಡೂ ದೇಶಗಳ ಜನರ ಮನಸ್ಸಿನಲ್ಲಿ ಅಂಥ ವಿಷವಿಲ್ಲ. ಕಾಣದ ಕೈಗಳು ವಿಷ ಹಬ್ಬಿಸುತ್ತಿವೆ. ವಾಜಪೇಯಿ-ನವಾಜ್ ಷರೀಫ್ ಹತ್ತಿರ ಬರುತ್ತಿದ್ದಾರೆ ಎನ್ನುತ್ತಿದ್ದಂತೆಯೇ ಮುಷರಫ್, ಕಾರ್ಗಿಲ್ ಸಂಘರ್ಷ ಏರ್ಪಾಡು ಮಾಡುತ್ತಾರೆ.

ಜರ್ದಾರಿ-ಮನಮೋಹನ್ ಹತ್ತಿರ ಬರುತ್ತಿದ್ದಾರೆ ಎನಿಸುತ್ತಿದ್ದಂತೆಯೇ 26/11 ಆಗುತ್ತದೆ. ಜರ್ದಾರಿ ಪ್ರಕಾರ 26/11, ಅವರಿಗೆ ಅಡ್ಡ ಬಂದ 'ಕಾರ್ಗಿಲ್...' ಪಾಕಿಸ್ತಾನದ ಮಾಧ್ಯಮ ಗೆಳೆಯರೇ ಹೇಳುತ್ತ ಹೋದರು. 'ನಮ್ಮದೂ ತಪ್ಪಿದೆ. 26/11 ಆಗುತ್ತಿದ್ದಂತೆಯೇ ಪಾಕಿಸ್ತಾನದಲ್ಲಿ ಉರ್ದು ಪತ್ರಿಕೆಗಳು 'ನಮ್ಮ ವಿರುದ್ಧ ಭಾರತ ಸಮರ ಸಾರುತ್ತದೆ' ಎಂದೇ ಸುದ್ದಿ ಹಬ್ಬಿಸಿದುವು. ಜನರು ಭಯಭೀತರಾದರು. ಎರಡೂ ದೇಶಗಳ ನಡುವೆ ನಾಲ್ಕನೇ ಯುದ್ಧವಾದರೆ ಅದು ಉಪಖಂಡದ ಅಂತ್ಯ ಎಂದೇ ಅವರು ಅಂದುಕೊಂಡರು. ಸೇನೆ, ಅಮೇರಿಕಾ, ಭಯೋತ್ಪಾದಕರು, ಸೌದಿ ಜತೆಗೆ ಮಾಧ್ಯಮಗಳೂ ಜನರನ್ನು ಒಡೆಯಲು, ಕೈ ಜೋಡಿಸಿದುವು...' ಅವರ ಮಾತಿನಲ್ಲಿ ವಿಷಾದ ಇತ್ತು.

ಮತ್ತೆ ಅವರೇ ಹೇಳಿದರು. 'ನಿಮ್ಮ ರಾಜ್ಯದವರೇ ಆದ ಎಸ್.ಎಂ. ಕೃಷ್ಣ ಮುಂದಿನ ವಾರ ಪಾಕಿಸ್ತಾನಕ್ಕೆ ಬರುತ್ತಿದ್ದಾರೆ. ಸಹಜ, ವಿದೇಶಾಂಗ ಇಲಾಖೆ ಹಾಕಿದ ಲಕ್ಷ್ಮಣ ರೇಖೆಯನ್ನು ಅವರು ದಾಟುವುದಿಲ್ಲ. ಅದು ಅನಿವಾರ್ಯ ಇರಬಹುದು. 26/11 ರ ಆರೋಪಿಗಳ ವಿರುದ್ಧ ನಮ್ಮ ದೇಶ ಕ್ರಮ ತೆಗೆದುಕೊಳ್ಳದಿದ್ದಾಗಲೂ ನೀವು ನಮ್ಮ ಜತೆಗೆ ಸ್ನೇಹದ ಹಸ್ತ ಚಾಚಿದರೆ ಬಿಜೆಪಿಯವರು ಕೇಂದ್ರ ಸರ್ಕಾರವನ್ನು ಹುರಿದು ಮುಕ್ಕುತ್ತಾರೆ. ಆದರೂ ಅವರು ಏನಾದರೂ ಹೊಸದನ್ನು ಮಾಡಬೇಕು. ಎರಡೂ ದೇಶಗಳ ನಡುವೆ ಮುಕ್ತ ಸಂಚಾರ ಸಾಧ್ಯವಾಗಬೇಕು. ವೀಸಾ ಕೊಡಲು ಇರುವ ನಿರ್ಬಂಧ ಸಡಿಲವಾಗಬೇಕು. (ಅಜ್ಮಲ್ ಕಸಾಬ್‌ನೇನೂ ವೀಸಾ ತೆಗೆದು ಕೊಂಡು ನಿಮ್ಮ ದೇಶಕ್ಕೆ ಬರಲಿಲ್ಲವಲ್ಲ?!) ಜನರ ನಡುವೆ ವಿಶ್ವಾಸ ಹೆಚ್ಚಿದಷ್ಟು ನಾಯಕರ ಮೇಲೆ ಒತ್ತಡ ಹೆಚ್ಚುತ್ತ ಹೋಗುತ್ತದೆ. 26/11 ರ ವಾರ್ಷಿಕದ ದಿನ ಪಾಕಿಸ್ತಾನದ ಐನೂರು ಮಂದಿಗೆ ಭಾರತದಲ್ಲಿ ಉಚಿತ ಚಿಕಿತ್ಸೆ ಕೊಡುತ್ತೇವೆ ಎಂದು ನೀವು ಹೇಳಿದರೆ ಹೇಗೆ?...' ಅವರ ಮಾತಿನಲ್ಲಿ ಎರಡೂ ದೇಶಗಳ ಸಂಬಂಧ ಸುಧಾರಣೆಯ ಕಾಳಜಿ ಇತ್ತು. ಬೆಂಗಳೂರು ಕ್ಲಬ್ಬಿನ ಮಬ್ಬಿನಲ್ಲಿ, ಮತ್ತಿನಲ್ಲಿ ನಾವೆಲ್ಲ ರೊಮ್ಯಾಂಟಿಕ್ ಆಗಿದ್ದೇವೇ? ಕೃಷ್ಣ ಅವರ ಮುಂದಿರುವ ಕಠೋರ ವಾಸ್ತವಗಳ ಬೆಳಕಿನಲ್ಲಿ ನೋಡಿದಾಗ ಹೌದು ಅನಿಸುತ್ತದೆ. ಆದರೆ, ರೊಮ್ಯಾಂಟಿಕ್ ಆಗಿರದೇ ಇದ್ದರೆ ಏನನ್ನು ತಾನೇ ಮಾಡಲು ಸಾಧ್ಯ? ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ? ಮೋಡ ಕಟ್ಟೀತು ಹೇಗೆ? ಹನಿಯೊಡೆದು ಕೆಳಗಿಳಿದು ನೆಲಕ್ಕೆ ಹಸಿರು ಮೂಡೀತು ಹೇಗೆ?...

■

# 'ಒಂಟಿ' ರೆಡ್ಡಿಗಳಿಗೆ ಬಳ್ಳಾರಿಯಲ್ಲೇ ಕಾಂಗ್ರೆಸ್ ಸೆಡ್ಡು

ಕರ್ನಾಟಕದಲ್ಲಿ ಈಗ ರಣೋತ್ಸಾಹ. ದೀರ್ಘ ನಿದ್ರೆಯಿಂದ ಎಚ್ಚೆತ್ತ ಕುಂಭಕರ್ಣನ ಹಾಗೆ ಕಾಂಗ್ರೆಸ್ ಅಬ್ಬರಿಸ ತೊಡಗಿದೆ. ರಾಜ್ಯದ ಆಡಳಿತ ಪಕ್ಷದ 'ಬೊಕ್ಕಸ'ವನ್ನು ಬಗ್ಗು ಬಡಿಯಲು ಇದಕ್ಕಿಂತ ಒಳ್ಳೆಯ ಕಾಲ ಇರಲಾರದು ಎಂದು ಅದು ಕಂಡುಕೊಂಡಿದೆ. ಪಕ್ಷದಲ್ಲಿ ತಮ್ಮನ್ನು ತಾವು ಸ್ಥಾಪಿಸಿ ಕೊಳ್ಳಲು ವಿಧಾನಸಭೆ ಯಲ್ಲಿ ತೋಳು ತಟ್ಟಿದ್ದ ಸಿದ್ದರಾಮಯ್ಯ ತೊಡೆ ತಟ್ಟುತ್ತ ಇಂದು ಕಣಕ್ಕೇ ಇಳಿದಿದ್ದಾರೆ. ಇಂದಿನಿಂದ 15 ದಿನಗಳ ಕಾಲ ಕಾಂಗ್ರೆಸ್ ಮುಖಂಡರು ಬಳ್ಳಾರಿಗೆ ಪಾದಯಾತ್ರೆ ಮಾಡಲಿದ್ದಾರೆ. ಬಿಜೆಪಿಯ ಅಧಿಕಾರ, ಹಣ ಮತ್ತು ತೋಳ್ಬಲದ ಕೇಂದ್ರವಾಗಿರುವ ಬಳ್ಳಾರಿಯನ್ನೇ ಕಾಂಗ್ರೆಸ್ಸು ತನ್ನ ಅಖಾಡ ಮಾಡಿಕೊಂಡಿರುವುದು ಶತ್ರುವನ್ನು ಶತ್ರು ಪಾಳೆಯದಲ್ಲಿಯೇ ಹಣಿಯಬೇಕು ಎಂಬ ತತ್ವಕ್ಕೆ ಪೂರಕವಾಗಿಯೇ ಇದೆ. ಈ 15 ದಿನಗಳ ಅವಧಿಯಲ್ಲಿ ಕಾಂಗ್ರೆಸ್ ನಾಯಕರು ತಮ್ಮ ಎಲ್ಲ ಪ್ರತಿಷ್ಠೆಯನ್ನು ಬದಿಗಿಟ್ಟು ಪಾದಯಾತ್ರೆಯಲ್ಲಿ ಎಷ್ಟು ಮನಃಪೂರ್ವಕವಾಗಿ ಭಾಗ ವಹಿಸುತ್ತಾರೆ, ಬಿಜೆಪಿ ಅದಕ್ಕೆ ನಂತರ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದು ಕರ್ನಾಟಕದ ಭವಿಷ್ಯದ ರಾಜಕಾರಣ ಸಾಗುವ ದಾರಿಗೆ ಒಂದು ಚಿಕ್ಕ

ದಿಕ್ಸೂಚಿಯಾಗಬಹುದು. ಏಕೆಂದರೆ ಈ ಪಾದ ಯಾತ್ರೆಯ ಹೊಳಹು ಹಾಕಿದವರು ಸಿದ್ದರಾಮಯ್ಯ. ಬಹುಶಃ ಅವರೇ ಯಾತ್ರೆಯ ನಾಯಕರೂ ಆಗಿರುತ್ತಾರೆ. ಅವರ ಜತೆಗೆ ದೇಶಪಾಂಡೆಯವರು ಪಕ್ಷದ ಅಧ್ಯಕ್ಷ ಎಂಬ ಕಾರಣಕ್ಕಾಗಿಯಾದರೂ ಅನಿವಾರ್ಯವಾಗಿ ತೇಕಬೇಕಾಗುತ್ತದೆ. 'ವಲಸಿಗರ ಈ ಸಾಹಸಿಗಳಿಗೆಲ್ಲ, ತಮ್ಮನ್ನೇ ತಾವು ಪ್ರತಿಷ್ಠಾಪಿಸಿಕೊಳ್ಳುವ ಹೊಳಹುಗಳಿಗೆಲ್ಲ ನಾವೆಲ್ಲ ಏಕೆ ಹೈರಾಣಾಗಬೇಕು' ಎಂದು ಮೂಲ ಕಾಂಗ್ರೆಸ್ಸಿಗರು ಅಂದುಕೊಂಡರೆ ಅಷ್ಟರ ಮಟ್ಟಿಗೆ ಯಾತ್ರೆಗೆ ಸೋಲಾಗುತ್ತದೆ. ಈ ಅಪಸ್ವರ ಈಗಾಗಲೇ ಅಲ್ಲಲ್ಲಿ ಕೇಳಿ ಬರುತ್ತಿದೆ.

ಕಾಂಗ್ರೆಸ್ಸಿಗರ ಯಾತ್ರೆಗೆ ಬಿಜೆಪಿಯ ಪ್ರತಿಕ್ರಿಯೆ ಕುತೂಹಲಕಾರಿಯಾಗಿದೆ. ರೆಡ್ಡಿ ಸೋದರರ 'ಜೋಳವಾಳಿ' ಶ್ರೀರಾಮುಲು ಅವರು ಸಿದ್ದರಾಮಯ್ಯನವರ ಪಾದಯಾತ್ರೆಗೆ ವಿರುದ್ಧವಾಗಿ ಯೋಜಿಸಿದ್ದ ಪಾದಯಾತ್ರೆಗೆ ಬಿಜೆಪಿ ಮುಖಂಡರು ತಣ್ಣೀರು ಎರಚಿದ್ದಾರೆ. 'ನಿಮ್ಮ ಪಾದಯಾತ್ರೆಗೆ ಕಾರಣವೇನು' ಎಂಬ ಪ್ರಶ್ನೆ ಕೇಳಿದ್ದಾರೆ. ಇದರ ಹಿಂದೆ ರೆಡ್ಡಿ ಸೋದರರನ್ನು ಒಂಟಿ ಮಾಡುವ ದೊಡ್ಡ ಹುನ್ನಾರ ನಡೆದಂತೆ ಕಾಣುತ್ತದೆ. ಜನಾರ್ದನ ರೆಡ್ಡಿಯವರು ಅಧಿವೇಶನ ಮುಗಿದ ನಂತರ ಏಕಾಂಗಿಯಾಗಿ ಪತ್ರಿಕಾಗೋಷ್ಠಿ ಮಾಡಿದಾಗಲೇ ಅವರು ಒಂಟಿಯಾಗಿದ್ದುದು ಸ್ಪಷ್ಟವಾಗಿತ್ತು. ರೆಡ್ಡಿಯವರು ಪ್ರವಾಸೋದ್ಯಮ ಖಾತೆ ಸಚಿವ. ಅವರು ಮುಖ್ಯಮಂತ್ರಿ ಹೊಂದಿರುವ ಗಣಿ ಖಾತೆಯ ದಾಖಲೆಗಳನ್ನೆಲ್ಲ ಪತ್ರಿಕಾಗೋಷ್ಠಿಯಲ್ಲಿ ಹೇಗೆ ಬಿಡುಗಡೆ ಮಾಡುತ್ತಾರೆ? ಸಿದ್ದರಾಮಯ್ಯ ಅವರ ಪಾದಯಾತ್ರೆಯ ಮುಖ್ಯ ಗುರಿ ತಾವೇ ಎಂಬುದನ್ನು ತಿಳಿದ ಜನಾರ್ದನ ರೆಡ್ಡಿಯವರಿಗೆ ಬೇರೆ ದಾರಿಯಿರಲಿಲ್ಲ. ಈ ಯಾತ್ರೆಯನ್ನು ಅವರು 'ಕೌಂಟರ್' ಮಾಡಲೇ ಬೇಕಿತ್ತು. ಅದಕ್ಕಾಗಿಯೇ ಅವರು, ಗಣಿ ಅಕ್ರಮದಲ್ಲಿ ತೊಡಗಿದ್ದಾರೆ ಎನ್ನಲಾದ 11 ಮಂದಿ ಕಾಂಗ್ರೆಸ್ಸಿಗರ ಪಟ್ಟಿಯನ್ನು ಬಿಡುಗಡೆ ಮಾಡಿ, 'ನೀವೇನು ಸಾಚಾಗಳೇ?' ಎಂಬ ಪ್ರಶ್ನೆ ಹಾಕಿದರು. ಆ ಮೂಲಕ 'ನಿಮ್ಮ ಖಾತೆಯ ದಾಖಲೆಗಳನ್ನೇ ಬಳಸಿಕೊಂಡು ನನ್ನನ್ನು ನಾನು ಸಮರ್ಥಿಸಿ ಕೊಳ್ಳಬಲ್ಲೆ' ಎಂಬ ಸಂದೇಶವನ್ನೂ ಮುಖ್ಯಮಂತ್ರಿಗಳಿಗೆ ಕೊಟ್ಟರು. ಮುಖ್ಯಮಂತ್ರಿ ಒಂದು ಅರ್ಥದಲ್ಲಿ ನಿಶ್ಶಸ್ತ್ರರಾದರು. 'ನಾನು ವಿಧಾನಸಭೆಯಲ್ಲಿ ಹೇಳಿದ್ದನ್ನೇ ರೆಡ್ಡಿಯವರು ಹೇಳಿದ್ದಾರೆ' ಎಂಬ ಸಬೂಬನ್ನು ಕೊಟ್ಟರೇನೋ ನಿಜ. ತಕ್ಷಣದಲ್ಲಿಯೇ, 'ಗಣಿ ಹಗರಣದ ಬಗ್ಗೆ ಲೋಕಾಯುಕ್ತ ವರದಿ ಬರುವವರೆಗೆ ಮೌನ ಮುರಿಯು ವುದಿಲ್ಲ' ಎಂದರು. 'ರೆಡ್ಡಿ ಸೋದರರು ನೂರಕ್ಕೆ ನೂರಾ ಒಂದು ಪರ್ಸೆಂಟ್ ನಿಷ್ಕಳಂಕರು' ಎಂದು ಸರ್ಟಿಫಿಕೇಟ್ ಕೊಟ್ಟುದನ್ನು ಸರಿಪಡಿಸಿಕೊಳ್ಳುವುದು ಅವರಿಗೆ ಬೇಕಿತ್ತು. ಮುಖ್ಯಮಂತ್ರಿ ಮೌನ ತಾಳುವುದು ಅಂದರೆ ರೆಡ್ಡಿ ಸೋದರರನ್ನು ಮತ್ತೆ ಒಂಟಿ ಮಾಡಿದಂತೆಯೇ ಎಂದು ಅರ್ಥ. 'ನಿಮ್ಮ ಹಣೆಬರಹ, ನೀವೇ ನಿಮ್ಮನ್ನು ಸಮರ್ಥಿಸಿಕೊಳ್ಳಿ' ಎಂದೇ ಅಲ್ಲವೇ ಯಡಿಯೂರಪ್ಪ ಹೇಳುತ್ತಿರುವುದು?

ಯಡಿಯೂರಪ್ಪ ಅಷ್ಟಕ್ಕೇ ಸುಮ್ಮನಾದಂತೆ ಕಾಣುವುದಿಲ್ಲ. ಈ ರೇಣುಕಾಚಾರ್ಯ, ಬೇಳೂರು ಗೋಪಾಲಕೃಷ್ಣ ಮುಂತಾದವರೆಲ್ಲ ಇದ್ದಕಿದ್ದಂತೆ 'ನಾವು ರೆಡ್ಡಿಗಳ ಜೊತೆಗೆ ಇಲ್ಲ' ಎಂದು ಏಕೆ ಸ್ಪಷ್ಟನೆ ಕೊಡಬೇಕಿತ್ತು? ಅದಕ್ಕೆ ಏನು ಚಿತಾವಣೆ? ಕಳೆದ ಅಕ್ಟೋಬರ್-ನವೆಂಬರ್‌ನಲ್ಲಿ ಹೈದರಾಬಾದಿನಲ್ಲಿ ರೆಡ್ಡಿ ಸೋದರರ ಒತ್ತೆಯಾಳುಗಳಂತೆ

ಇದ್ದ ಇವರು ಈಗ ಇದ್ದಕಿದ್ದಂತೆ ಇಷ್ಟು ಸ್ವತಂತ್ರರಾದುದು ಹೇಗೆ? ಯಡಿಯೂರಪ್ಪ ಆ ತಿಂಗಳುಗಳಲ್ಲಿ ತಾವು ಅನುಭವಿಸಿದ್ದನ್ನು, ಅಳುವಂತೆ ಮಾಡಿದ್ದನ್ನು ಮರೆತಾರು ಹೇಗೆ? ಕಾಲ ಹೇಗೆ ಬದಲಾಗುತ್ತದೆ ಎಂಬುದು ನಿಜಕ್ಕೂ ವಿಚಿತ್ರ. ತಾವು 'ಅಧಿಕಾರಕ್ಕೆ ತಂದ' ಒಂದು ಪಕ್ಷ ಹೀಗೆ ತಮ್ಮನ್ನು ಇದ್ದಕಿದ್ದಂತೆ ತಬ್ಬಲಿ ಮಾಡೀತು ಎಂದು ರೆಡ್ಡಿ ಸೋದರರು ಅಂದುಕೊಂಡಿದ್ದರೋ ಇಲ್ಲವೋ ತಿಳಿಯದು. ಮುಂದಿನ 15 ದಿನಗಳ ಕಾಲ ಅವರ ತಂತ್ರ, ಪ್ರತಿತಂತ್ರಗಳು ಹೇಗಿರುತ್ತವೆ ಎಂಬುದೂ ಕುತೂಹಲಕಾರಿ. ಆದರೆ, ಜನಾರ್ದನ ರೆಡ್ಡಿಯವರು ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವ 11 ಮಂದಿಯ ಪಟ್ಟಿ ಬಿಡುಗಡೆ ಮಾಡುವ ಮೂಲಕ ಕಾಂಗ್ರೆಸ್ಸಿಗೆ ಸಾಕಷ್ಟು ಇರಿಸುಮುರಿಸು ಮಾಡಿದ್ದಾರೆ ಎಂಬುದು ನಿಜ. ಕಾಕತಾಳೀಯ ಎಂದರೆ, ಮುಂದಿನ 15 ದಿನಗಳ ಪಾದಯಾತ್ರೆಯ 'ಆತಿಥ್ಯ'ದ ಹೊಣೆ ಈ 11 ಮಂದಿಯ ಹೆಗಲಿಗೇ ಬಿದ್ದಿದೆ ಎಂಬ ಸುದ್ದಿ ರಾಜಧಾನಿಯಲ್ಲಿ ಹಬ್ಬಿರುವುದು!

ಸಿದ್ದರಾಮಯ್ಯ ಜತೆಗೆ ದೇಶಪಾಂಡೆಯವರು ಇನ್ನೂ ಹೆಜ್ಜೆ ಹಾಕಲು ಆರಂಭಿಸುವುದಕ್ಕಿಂತ ಮುಂಚೆಯೇ ಅವರ ಸ್ಥಾನಕ್ಕೆ ಲಿಂಗಾಯತರೊಬ್ಬರನ್ನು ತರಬೇಕು ಎಂದು ಆ ಸಮಾಜದ ಘಟಾನುಘಟಿ ಮುಖಂಡರೆಲ್ಲ ಗುರುವಾರ ಏಟ್ರಿಯಾ ಹೋಟೆಲ್‌ನಲ್ಲಿ ಸಭೆ ನಡೆಸಿದ್ದಾರೆ. 'ಈ ಸಭೆ ಈಗ ನಡೆಯಬೇಕಿತ್ತೇ, ಪಾದಯಾತ್ರೆ ಮುಗಿದ ನಂತರ ನಡೆಯಬಹುದಿತ್ತಲ್ಲ, ಇದು ಕಾಂಗ್ರೆಸ್ ಕಾರ್ಯಕರ್ತರಿಗೆ ತಪ್ಪು ಸಂದೇಶ ನೀಡಿದಂತೆ ಆಗಲಿಲ್ಲವೇ? ಅಧ್ಯಕ್ಷರ ಚುನಾವಣೆಗೆ ವೇಳಾಪಟ್ಟಿಯೇನೂ ಪ್ರಕಟವಾಗಿಲ್ಲವಲ್ಲ' ಎಂಬ ಚರ್ಚೆಗಳೂ ರಾಜಧಾನಿಯಲ್ಲಿ ನಡೆದಿವೆ. ಸೋಜಿಗ ಎಂದರೆ ಲಿಂಗಾಯತ ಮುಖಂಡರ ಈ ಸಭೆಯನ್ನು ಏರ್ಪಾಟು ಮಾಡಿದವರು ಮಾಜಿ ಸಮಾಜವಾದಿ ಬಿ.ಆರ್.ಪಾಟೀಲ. ಅವರು ಸಿದ್ದರಾಮಯ್ಯ ನವರ ಆಪ್ತ ಬಗಲುಬಂಟ. ಪಾಟೀಲರಿಗೆ ಲಿಂಗಾಯತರನ್ನು ಒಂದು ಮಾಡಿ ನಾಯಕತ್ವಕ್ಕೆ ಹೋರಾಟ ಮಾಡಬೇಕು ಎಂಬ ಹುಕಿ ಏಕೆ ಬಂತು ಎಂದು ಗೊತ್ತಿಲ್ಲ. ಆದರೆ, ಇಂಥ ಮುಹೂರ್ತಕ್ಕೆ ಕಾದಂತೆ ಇದ್ದ ಲಿಂಗಾಯತರು, 'ಪಕ್ಷದ ಕರ್ಣಧಾರತ್ವ ವನ್ನು ಲಿಂಗಾಯತ ಸಮಾಜಕ್ಕೇ ಕೊಡಬೇಕು. ಮುಂದಿನ ಚುನಾವಣೆಯನ್ನು ನಮ್ಮ ನಾಯಕತ್ವದಲ್ಲಿಯೇ ಎದುರಿಸಬೇಕು' ಎಂದು ಹೈಕಮಾಂಡಿಗೆ ಆಗ್ರಹಿಸಿದ್ದಾರೆ. 'ಚುನಾವಣೆಯ ನಾಯಕತ್ವ ಕೊಡಬೇಕು' ಎಂದರೆ ಏನು ಅರ್ಥ? 'ಮುಂದಿನ ಮುಖ್ಯಮಂತ್ರಿ ನಾವೇ ಆಗಬೇಕು' ಎಂದು ಅಲ್ಲವೇ? ಅದು ಸಿದ್ದರಾಮಯ್ಯ ಅವರಿಗೆ ಪಥ್ಯವೇ? ಒಮ್ಮೊಮ್ಮೆ ನಿಷ್ಠ ಅನುಯಾಯಿಗಳೇ ಇಂಥ ಯಡವಟ್ಟುಗಳನ್ನೂ ಮಾಡಿ ಬಿಡುತ್ತಾರೆ! ಏನು ಮಾಡುವುದು?!

ಏಟ್ರಿಯಾದಲ್ಲಿ ನಡೆದ ಸಭೆಗೆ ಮೂರು ನಾಲ್ಕು ಮಂದಿಯನ್ನು ಬಿಟ್ಟರೆ ಉಳಿದೆಲ್ಲ ನಾಯಕರು ಹಾಜರಾಗಿದ್ದುದನ್ನು ನೋಡಿದರೆ ಆ ಪಕ್ಷದಲ್ಲಿ ಲಿಂಗಾಯತ ಮುಖಂಡರು ಎಂಥ ಅನಾಥಪ್ರಜ್ಞೆ ಅನುಭವಿಸುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ದೇವರಾಜು ಅರಸು ಅವರು ರಾಜಕೀಯ ರಂಗದ ಮಧ್ಯೆ ಕಾಣಿಸಿಕೊಂಡ ದಿನದಿಂದ ಅಂದರೆ ಸುಮಾರು ಮೂರು ದಶಕಗಳಿಗೂ ಹೆಚ್ಚಿನ ಅವಧಿಯಿಂದ ಅವರಿಗೆ ಈ ಅನಾಥಪ್ರಜ್ಞೆ ಕಾಡುತ್ತಿದೆ. ಈ ಮೂರು ದಶಕಗಳಲ್ಲಿ ಒಬ್ಬನೇ ಒಬ್ಬ ಕಾಂಗ್ರೆಸ್ ಮುಖಂಡ ಎಐಸಿಸಿಯ ಪ್ರಧಾನ

ಕಾರ್ಯದರ್ಶಿಯಾಗಲಿಲ್ಲ. ಕಾಂಗ್ರೆಸ್ ಕಾರ್ಯಕಾರಿಣಿಯ ಸದಸ್ಯನೂ ಆಗಲಿಲ್ಲ. ಮೋಟಮ್ಮ ಆ ಹುದ್ದೆಗೆ ಏರಿ ಬಿಟ್ಟರು. ಎಂ.ವಿ.ರಾಜಶೇಖರನ್ ಪ್ರಧಾನಿಗೆ ಎಷ್ಟೇ ಆಪ್ತರಾಗಿದ್ದರೂ ಅವರ ರಾಜ್ಯಸಭೆ ಅವಧಿ ಇನ್ನೇನು ಮುಗಿಯುತ್ತದೆ ಎನ್ನುವಾಗಲೇ ಕೇಂದ್ರ ಸಚಿವ ಹುದ್ದೆಯನ್ನು ಕಳೆದು ಕೊಂಡು ಬಿಟ್ಟರು. ಮೊನ್ನೆ ರಾಜಸಭೆಗೆ ಚುನಾವಣೆ ನಡೆದಾಗ ಲಿಂಗಾಯತರೊಬ್ಬರಿಗೆ ಟಿಕೆಟ್ ಕೊಡಿ ಎಂದು ಲಿಂಗಾಯತ ಮುಖಂಡರೊಬ್ಬರು ಸೋನಿಯಾ ಅವರನ್ನು ಕೇಳಿದರೆ, 'ಬಿ.ಜಯಶ್ರೀ ಅವರನ್ನು ನಾಮಕರಣ ಮಾಡಿದೆಯಲ್ಲ' ಎಂದು ಕಳಿಸಿಬಿಟ್ಟರು. ಇಂಥೆಲ್ಲ ಗಾಯಗಳ ಮೇಲೆ ಬರೆ ಎಳೆದಂತೆ ಕರ್ನಾಟಕದಲ್ಲಿ ಯಾವ ಕಾಂಗ್ರೆಸ್ ಮುಖಂಡರನ್ನೂ ಲಿಂಗಾಯತ ಮಠಾಧೀಶರು 'ಕ್ಯಾರೆ' ಎಂದು ಮಾತನಾಡಿಸುವುದಿಲ್ಲ! ಹೇಗೂ ದೇಶಪಾಂಡೆ ಬದಲಾಗುತ್ತಿದ್ದಾರೆ. ಅವರ ಜಾಗಕ್ಕೆ ನಮ್ಮ ಸಮಾಜದವರು ಏಕೆ ನೇಮಕ ಆಗಬಾರದು ಎಂದು ಅವರು ಕೇಳುತ್ತಿದ್ದರೆ ಅದರಲ್ಲಿ ಅಸಹಜವಾದುದೇನೂ ಇಲ್ಲ. ಎಚ್.ಕೆ.ಪಾಟೀಲ ಮತ್ತು ಎಸ್. ಬಂಗಾರಪ್ಪ ಅವರ ಹೆಸರುಗಳು ಕೆಪಿಸಿಸಿ ಅಧ್ಯಕ್ಷ ಗದ್ದುಗೆಗೆ ಕೇಳಿ ಬರುತ್ತಿರುವಾಗ ತಾವು ಸುಮ್ಮನಿದ್ದರೆ ಕಷ್ಟ ಎಂದೂ ಅವರಿಗೆ ಅನಿಸಿರಬಹುದು. ಏಟ್ರಿಯಾ ಸಭೆಯಲ್ಲಿ ಶಾಮನೂರು ಶಿವಶಂಕರಪ್ಪ, ಎಂ.ವಿ.ರಾಜಶೇಖರನ್, ಡಾ.ಎ.ಬಿ. ಮಾಲಕರೆಡ್ಡಿ, ವೀರಣ್ಣ ಮತ್ತಿಕಟ್ಟಿ, ಎಂ.ಬಿ.ಪಾಟೀಲ, ಸಿ.ಎಸ್.ನಾಡಗೌಡ ಅವರ ಹೆಸರುಗಳು ಅಧ್ಯಕ್ಷ ಹುದ್ದೆಗೆ ಕೇಳಿ ಬಂದಿವೆ.

ಕರ್ನಾಟಕದ ರಾಜಕಾರಣ ಕೆಲವು ದಿನಗಳಿಂದ ಏಕಪಕ್ಷೀಯ ಎನಿಸತೊಡಗಿತ್ತು. ವಿರೋಧ ಪಕ್ಷಗಳ ಧ್ವನಿ ಕೇಳಿಸದಷ್ಟು ಕ್ಷೀಣವಾಗಿತ್ತು. ಪ್ರಜಾಪ್ರಭುತ್ವದ ಆರೋಗ್ಯದ ದೃಷ್ಟಿಯಿಂದ ವಿರೋಧ ಪಕ್ಷಗಳು ಸಕ್ರಿಯವಾಗಿರಬೇಕು. ಈಗಿನ ವ್ಯವಸ್ಥೆಯಲ್ಲಿ ಜನಾದೇಶವೇ ಅಂತಿಮವಾದುದು, ಅದೇ ದೊಡ್ಡದು. ಕಾಂಗ್ರೆಸ್ ಪಕ್ಷ ಬಹುಶಃ ಅದಕ್ಕೇ ಗಣಿ ಹಗರಣವನ್ನು ಜನರ ನಡುವೆ ತೆಗೆದುಕೊಂಡು ಹೊರಟಿದೆ. ಮುಖ್ಯಮಂತ್ರಿ ಯಡಿಯೂರಪ್ಪನವರೇನೋ ಈ ಹಗರಣವನ್ನು ತನಿಖೆ ಮಾಡಲು ಲೋಕಾಯುಕ್ತರಿಗೆ ಕೊಟ್ಟಿದ್ದಾರೆ. ಲೋಕಾಯುಕ್ತರು ಅದನ್ನು ತಾರ್ಕಿಕ ಕೊನೆಯವರೆಗೆ ತೆಗೆದುಕೊಂಡು ಹೋಗುತ್ತಾರೆಯೇ ಎಂಬುದು ದಶಲಕ್ಷ ಡಾಲರ್‌ಗಿಂತ ದೊಡ್ಡ ಪ್ರಶ್ನೆ. ಒಂದು ವಿಶ್ವವಿದ್ಯಾಲಯದ ಒಬ್ಬ ಕುಲಪತಿ ಮಾಡಿದ ಅಕ್ರಮಗಳ ವರದಿ ಬಂದ ನಂತರವೂ ಮೊಕದ್ದಮೆ ಹೂಡಲು ಮೀನಮೇಷ ಎಣಿಸುವಂಥ ವಿಚಿತ್ರ ಕಾಲ ಇದು. ಲೋಕಾ ಯುಕ್ತರು ವರದಿಯನ್ನು ಮಾತ್ರ ಕೊಡಬಹುದು. ಅವರಿಗೆ ಮೊಕದ್ದಮೆ ಹೂಡುವ ಅಧಿಕಾರವೇನೂ ಇಲ್ಲವಲ್ಲ? ಹೂಡಿದರೂ ಒಂದೆರಡು ದಿನಗಳಲ್ಲಿ ತೀರ್ಪು ಬಂದು ತಪ್ಪಿತಸ್ಥರು ಜೈಲಿಗೆ ಹೋಗಿ ಬಿಡುತ್ತಾರೆಯೇ? ನಮ್ಮದು ಜನರಲ್ಲಿ ನಂಬಿಕೆ ಹುಟ್ಟಿಸುವ ಅಪರಾಧ ನ್ಯಾಯ ವ್ಯವಸ್ಥೆಯಲ್ಲ. ಜನಾದೇಶದ ಮುಸುಕಿನಲ್ಲಿ ಎಲ್ಲವೂ ಮುಚ್ಚಿ ಹೋಗುತ್ತವೆ. ಆ ದೂರಗಾಮಿ ಜನಾದೇಶಕ್ಕಾಗಿಯೇ ಕಾಂಗ್ರೆಸ್ಸಿನಲ್ಲಿ ಈಗ ರಣೋತ್ಸಾಹ. ಆದರೆ, ಜೆ.ಡಿ(ಎಸ್) ರಣಾಂಗಣದ ಅಂಚಿಗೆ ಸರಿದುಹೋದಂತೆ ಕಾಣುತ್ತದೆ. ಛಲವಂತ ದೇವೇಗೌಡರು ಸುಮ್ಮನಿರುತ್ತಾರೆಯೇ? ಅವರ ಬತ್ತಳಿಕೆಯಲ್ಲಿ ಯಾವ ಬಾಣಗಳು ಇವೆಯೋ? ■

# ಬೆಂಗಳೂರಿಗೆ ಅಂಟಿದ ಶಾಪಕ್ಕೆ ವಿಮೋಚನೆಯೇ ಇಲ್ಲವೇ?

ಹೀಗೆ ಆಗುತ್ತದೆ ಅಥವಾ ಆಗಬಹುದು ಎಂದು ಯಾರೂ ಎಣಿಸಿರಲಿಲ್ಲ ವೇನೋ? ಬೆಂಗಳೂರಿನ ಬೃಹತ್ ಮಹಾನಗರ ಪಾಲಿಕೆಗೆ ಚುನಾಯಿತ ಪ್ರತಿನಿಧಿಗಳ ಆಡಳಿತ ಬಂದು ಮೂರು ತಿಂಗಳೇ ಆಯಿತು. ಮೂರು ವರ್ಷಗಳಿಗಿಂತ ಹೆಚ್ಚು ಅವಧಿಗೆ ಚುನಾವಣೆ ಆಗದೇ ಇದ್ದಾಗ, ಸರ್ಕಾರ ಕುಂಟುನೆಪ ಕೊಟ್ಟು ಅದನ್ನು ಮುಂದಕ್ಕೆ ಹಾಕಲು ಸತತವಾಗಿ ಪ್ರಯತ್ನಪಟ್ಟಾಗ ಕಾಂಗ್ರೆಸ್ಸಿಗರು ಮತ್ತು ಅವರಿಗಿಂತ ಹೆಚ್ಚಾಗಿ ಮಾಧ್ಯಮಗಳು ಪ್ರಜಾಸತ್ತಾತ್ಮಕವಾದ ಚುನಾಯಿತ ವ್ಯವಸ್ಥೆ ಅಸ್ತಿತ್ವಕ್ಕೆ ತರಲು ನಡೆಸಿದ ಪ್ರಯತ್ನ ಇನ್ನೂ ಎಲ್ಲರ ಮನಸ್ಸಿನಲ್ಲಿ ಹಸಿರಾಗಿದೆ. ಅಂತೂ ಇಂತೂ ಆ ಪ್ರಯತ್ನ ಫಲ ಕೊಟ್ಟು ಚುನಾವಣೆ ನಡೆದು ಪಾಲಿಕೆ ಇತಿಹಾಸದಲ್ಲಿ ಮೊದಲ ಬಾರಿಗೆ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಏನಾದರೂ ಬದಲಾವಣೆ ಕಾಣುತ್ತದೆಯೇ? ದೇಶಕ್ಕೆ ಸ್ವಾತಂತ್ರ್ಯ ಬಂದು 63 ವರ್ಷಗಳಾದ ನಂತರವೂ ಬ್ರಿಟಿಷ್‌ರ ಆಡಳಿತವೇ ಚೆನ್ನಾಗಿತ್ತು ಎನ್ನುವ ಜನ ಇದ್ದಾರೆ. ಬೆಂಗಳೂರು ಪಾಲಿಕೆಯ ಕಥೆಯೂ ಹಾಗೆಯೇ ಇದೆ. ಆಡಳಿತಾಧಿಕಾರಿಗಳ ಆಡಳಿತವೇ ಚೆನ್ನಾಗಿತ್ತು ಎಂದು ಜನರು ಹೇಳುವುದು ಮಾತ್ರ ಬಾಕಿ ಉಳಿದಿದೆ!

ಹೀಗೆ ಏಕೆ ಆಗುತ್ತದೆ? ಜನರಿಗೆ ಉತ್ತರದಾಯಿ ಆಗಬೇಕಾದ, ಹತ್ತಿರ ಎನಿಸಬೇಕಾದ ಒಂದು ವ್ಯವಸ್ಥೆ ವಿಫಲ ಎಂದು ಏಕೆ ಅನಿಸತೊಡಗುತ್ತದೆ? ಇದಕ್ಕೆ ಎರಡೇ ಉದಾಹರಣೆ ಸಾಕು ಎನಿಸುತ್ತದೆ. ಒಂದು, ಸಂಜನಾ ಸಿಂಗ್ ಎಂಬ ಬಾಲಕಿಯ ಬಲಿ ತೆಗೆದು ಕೊಂಡ ಗೋಡೆ ನಿರ್ಮಾಣದ ಕಳಪೆ ಕಾಮಗಾರಿಯಲ್ಲಿ ಒಬ್ಬ ಕಾರ್ಪೊರೇಟರ್ ಆರೋಪಿ ಆಗಿರುವುದು. ಎರಡು, ಅಕ್ರಮ ಕಟ್ಟಡ ನಿರ್ಮಾಣವನ್ನು ಸಕ್ರಮಗೊಳಿಸಲು ಎರಡು ಲಕ್ಷ ರೂಪಾಯಿ ಲಂಚ ತೆಗೆದುಕೊಂಡ ಮತ್ತೊಬ್ಬ ಕಾರ್ಪೊರೇಟರ್ ಕಂಬಿ ಎಣಿಸುತ್ತಿರುವುದು. ಇಬ್ಬರೂ ಕಾಂಗ್ರೆಸ್ಸಿಗರು ಎಂಬುದು ಕಾಕತಾಳೀಯ. ಆದರೆ, ಇಂಥ ಘಟನೆ ನಡೆದಿರುವುದು ಪಾಲಿಕೆಯ ಇತಿಹಾಸದಲ್ಲಿ ಇದೇ ಮೊದಲು. ಪಾಲಿಕೆಗೆ ಚುನಾವಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್‌ವರೆಗೆ ಹೋರಾಟ ನಡೆಸಿದ ಕಾಂಗ್ರೆಸ್ ಪಕ್ಷದ ನೈತಿಕ ಸ್ಥೈರ್ಯವನ್ನು ಈ ಎರಡು ಘಟನೆಗಳು ಉಡುಗಿಸಿಬಿಟ್ಟಂತೆ ಕಾಣುತ್ತದೆ. 'ಪಾಲಿಕೆಯಲ್ಲಿ ಆಡಳಿತಾಧಿಕಾರಿ ಅವಧಿಯಲ್ಲಿ ಅಕ್ರಮಗಳು ನಡೆದುವು, ಅವುಗಳನ್ನೆಲ್ಲ ಬಯಲಿಗೆ ಎಳೆಯುತ್ತೇವೆ' ಎಂದು ಚುನಾವಣೆಗಿಂತ ಮುಂಚೆ ಬೊಬ್ಬೆ ಇಡುತ್ತಿದ್ದ ವಿರೋಧ ಪಕ್ಷಗಳು ಈಗ ಉಸಿರೇ ಎತ್ತದಿರುವುದಕ್ಕೂ ಕಾರಣಗಳು ನಿಗೂಢವಾಗಿವೆ.

ಎಲ್ಲರೂ ಸಾರ್ವಜನಿಕರ ನೆನಪಿನ ಶಕ್ತಿ ಕಡಿಮೆ ಎಂದೇ ನಂಬಿಕೊಂಡಂತೆ ಕಾಣುತ್ತದೆ. ಹಾಗೆಯೇ ನಮ್ಮ ಅಧಿಕಾರದ ಅವಧಿಯೂ ಕಡಿಮೆ ಆಗುತ್ತ ಹೋಗುತ್ತದೆ ಎಂದು ಕನಿಷ್ಠ ಮೇಯರ್ ಆದವರಿಗಾದರೂ ನೆನಪು ಇರಬೇಕು. ಅವರಿಗೆ ನೆನಪು ಇದೆಯೋ ಗೊತ್ತಿಲ್ಲ. 365 ದಿನಗಳ ಅವರ ಅವಧಿಯಲ್ಲಿ ಈಗಾಗಲೇ ನೂರು ದಿನಗಳ ಅವಧಿ ಮುಗಿದು ಹೋಗಿದೆ. ರಜೆಗಳನ್ನು ಕಳೆದರೆ ಅವರಿಗೆ ಈಗ ಉಳಿದಿರುವ ಅವಧಿ 191 ದಿನಗಳ ಅಧಿಕಾರ ಮಾತ್ರ. ಬೆಂಗಳೂರು ಪಾಲಿಕೆ ವ್ಯಾಪ್ತಿಯಲ್ಲಿ 198 ವಾರ್ಡ್‌ಗಳು. 101 ಹಳ್ಳಿಗಳು ಇವೆ. ದಿನಕ್ಕೆ ಒಂದು ವಾರ್ಡಿಗೆ ಭೇಟಿ ಕೊಡಲೂ ಅವರಿಗೆ ಈಗ ವೇಳೆಯಿಲ್ಲ. ವಾರ್ಡುಗಳ ಭೇಟಿ ಮಾಡದೆ, ಅಲ್ಲಿನ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳದೆ ನಗರದ ಅಭಿವೃದ್ಧಿಗೆ ಯೋಜನೆ ರೂಪಿಸಲು ಹೇಗೆ ಸಾಧ್ಯ?

ವಿಧಾನಸೌಧದಲ್ಲಿ ಆಡಳಿತ ಹಿಡಿದುಕೊಂಡ ಪಕ್ಷವೇ ಪಾಲಿಕೆ ಯಲ್ಲಿಯೂ ಇರಲಿ ಎಂದು ಜನರು ಅಧಿಕಾರ ಕೊಟ್ಟಿದ್ದಾರೆ. ಅವರ ನಿರೀಕ್ಷೆ ಈಡೇರಿಸಲು ಆಡಳಿತ ಪಕ್ಷ ಏನು ಮಾಡಿದೆ? ಬೆಂಗಳೂರು ನಗರ ಖಾತೆ ಮುಖ್ಯಮಂತ್ರಿಗಳ ಬಳಿಯೇ ಇದೆ. ಆಡಳಿತ ಪಕ್ಷದವರು ಮುಖ್ಯಮಂತ್ರಿ ಬಳಿಗೆ ಹೋಗಿ ಇಂತಿಂಥ ಯೋಜನೆಗೆ ಇಂತಿಷ್ಟು ದುಡ್ಡು ಕೊಡಿ ಎಂದು ಕೇಳಿದ್ದಾರೆಯೇ? ಮುಖ್ಯಮಂತ್ರಿ ಗಳಾದರೂ ತಮ್ಮ ಪಕ್ಷದ ಸದಸ್ಯರನ್ನು ಕರೆದು ಹೀಗೆ ಹೀಗೆ ಮಾಡಿ ಎಂದು ಹೇಳಿದ್ದಾರೆಯೇ? ಯಾರಿಗೂ ನೆನಪಿಲ್ಲ. ಹೋಗಲಿ ಮತ್ತೆ ಮಳೆಗಾಲ ಬಂದಿದೆ. ಪ್ರತಿ ಸಾರಿ ಮಳೆಗಾಲ ಬಂದಾಗಲೂ ಬೆಂಗಳೂರು ಅನಾಹುತಕ್ಕೆ ಸಾಕ್ಷಿಯಾಗಿದೆ. ಕಳೆದ ಸಾರಿ ಚರಂಡಿಯಲ್ಲಿ ಕೊಚ್ಚಿಕೊಂಡು ಹೋದ ಮಗು ಇದುವರೆಗೂ ಸಿಕ್ಕಿಲ್ಲ. ಭರತ್‌ಲಾಲ್ ಮೀನಾ ಪಾಲಿಕೆಯ ಆಯುಕ್ತರಾಗಿದ್ದಾಗ ಮಳೆ ನೀರು ಚರಂಡಿಗಳ ಹೂಳು ತೆಗೆಯಲು, ದುರಸ್ತಿ ಮಾಡಲು 200 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದರು. ಆ ಕೆಲಸವನ್ನಾದರೂ ಸಾಂಗವಾಗಿ

ನಡೆಸಲು ಚುನಾಯಿತ ಪ್ರತಿನಿಧಿಗಳು ಬಿಡಬೇಕಿತ್ತು. ಪಾಲಿಕೆಯ ಹಣಕಾಸು ಸ್ಥಾಯಿ ಸಮಿತಿಯ ಅಧ್ಯಕ್ಷರು ಈಗ ಹಾಲಿ ಆಯುಕ್ತರಿಗೆ ಪತ್ರ ಬರೆದು ಆ ಹಣ ಖರ್ಚು ಮಾಡಬಾರದು ಎಂದು ಸೂಚಿಸಿದ್ದಾರೆ. ಹಾಗೆ ಸೂಚಿಸಲು ಅವರಿಗೆ ಅಧಿಕಾರ ಇದೆಯೇ ಇಲ್ಲವೇ ಎಂಬುದು ಬೇರೆ ಮಾತು. ಹಾಗೆ ಪತ್ರ ಬರೆಯಲು ಏನು ಕಾರಣ?

ರಸ್ತೆ ಕಸ ಗುಡಿಸುವ ಗುತ್ತಿಗೆ ಅವಧಿ ಮುಗಿದಿದೆ. ಹೊಸದಾಗಿ ಗುತ್ತಿಗೆ ಕರೆದು ಅಂತಿಮಗೊಳಿಸುವವರೆಗೆ ಕಸ ಗುಡಿಸುವ ಕೆಲಸ ಮುಂದುವರಿಯುವಂತೆ ನೋಡಿಕೊಳ್ಳಲು ಮೀನಾ 100 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದರು. ಅದಕ್ಕೆ ಶೇ 5 ರಷ್ಟು ಹೆಚ್ಚುವರಿ ಹಣ ಸೇರಿಸಿ ಕೊಡಬೇಕು ಎಂದು ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಹೆಚ್ಚು ಹಣ ಕೊಡುವಂತೆ ಯಾರು ಕೇಳಿದ್ದರು? ಹೆಚ್ಚು ಹಣ ಕೊಡಲು ಆಡಳಿತ ವರ್ಗಕ್ಕೆ ಏಕೆ ಆಸಕ್ತಿ? ಪಾಲಿಕೆಯಲ್ಲಿ ಎಂಟು ವರ್ಷಗಳ ಹಿಂದೆಯೇ ತುಂಡು ಗುತ್ತಿಗೆ ಕಾಮಗಾರಿ ರದ್ದು ಮಾಡಲಾಗಿತ್ತು. ಈಗ ಮತ್ತೆ ತುಂಡು ಗುತ್ತಿಗೆ ಕೊಡಲು ನಿರ್ಣಯ ಅಂಗೀಕರಿಸಲಾಗಿದೆ. ಆಡಳಿತದಲ್ಲಿ ಪಾರದರ್ಶಕತೆ ತರಲು ಜಾರಿಗೊಳಿಸಲಾಗಿದ್ದ ಎಲೆಕ್ಟ್ರಾನಿಕ್ ಟೆಂಡರಿಂಗ್ ಮತ್ತು ಖರೀದಿ ಪದ್ಧತಿಯನ್ನು ರದ್ದು ಮಾಡಬೇಕು ಎಂದು ಮತ್ತೊಂದು ನಿರ್ಣಯ ಅಂಗೀಕರಿಸಲಾಗಿದೆ. ಏಕೆ? ಕರ್ನಾಟಕ ಮಹಾನಗರ ಪಾಲಿಕೆ ಕಾಯ್ದೆಗೆ ಈಗಿನ ಹಾಗೆ ಎಳ್ಳುನೀರು ಬಿಟ್ಟು ಆಡಳಿತ ನಡೆಸಿದ ಉದಾಹರಣೆ ಹಿಂದೆಂದೂ ಇದ್ದ ಹಾಗೆ ಕಾಣೆ. ಇದು ಬಿಜೆಪಿ ಹಾಕಿಕೊಟ್ಟ ಹೊಸ ಮಾದರಿಯೇ? ಕಾನೂನಿನ ರಕ್ಷಕರಾದ ಆಯುಕ್ತರು ಇಷ್ಟು ಅಸಹಾಯಕರೇ?

ಭಾರತೀಯ ಜನತಾ ಪಕ್ಷ ಒಂದು ಭಿನ್ನ ರಾಜಕೀಯ ಪಕ್ಷ. ಹಾಗೆಂದು ಆ ಪಕ್ಷದ ನಾಯಕರು ಹೇಳಿಕೊಳ್ಳುತ್ತಾರೆ. ಯಾವ ರೀತಿಯಲ್ಲಿ ಇದು ಭಿನ್ನ ಎಂದು ಜನರಿಗೆ ಗೊತ್ತಾಗುವುದು ಹೇಗೆ? ಹಿಂದಿನ ಯಾವ ಮೇಯರ್‌ಗೂ ಮೂರು ಕಾರುಗಳು ಇರಲಿಲ್ಲ. ಹಾಲಿ ಮೇಯರ್ ಎಸ್.ಕೆ.ನಟರಾಜ್ ಅವರಿಗೆ ಮೂರು ಕಾರು ಇವೆ. ಇದೇ ಭಿನ್ನತೆಯೇ? ತಮಗೆ ಮುಂಗಾವಲು ಬೇಕು ಎಂದೂ ಅವರು ಕೇಳಿದ್ದಾರೆ. ಅದು ಸರಳತೆಯೇ? ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ತಮಗೆ ಹಿಂಗಾವಲು, ಮುಂಗಾವಲು ಬೇಡ ಎಂದಿದ್ದರು. ಅದು ಕಾಂಗ್ರೆಸ್ಸೇತರ ಪಕ್ಷ ಕೊಟ್ಟ ಮಾದರಿಯಲ್ಲವೇ? ಅಂಥ ಒಂದು ಪುಟ್ಟ ಮಾದರಿಯನ್ನಾದರೂ ಈಗಿನ ಮೇಯರ್ ಹಾಕುವುದು ಬೇಡವೇ? ಪಾಲಿಕೆಯ ಒಬ್ಬ ಮೇಯರ್‌ಗೆ ಇದುವರೆಗೆ ಮೂವರು ಮಾತ್ರ ಆಪ್ತ ಸಿಬ್ಬಂದಿ ಇರುತ್ತಿದ್ದರು. ನಟರಾಜ್ ಅವರಿಗೆ ಹತ್ತು ಜನ ಇಂಥ ಸಿಬ್ಬಂದಿ ಇದ್ದಾರೆ. ಮೂವರು ಖಾಸಗಿ ಸಿಬ್ಬಂದಿ, ಇನ್ನು ಏಳು ಜನ ಪಾಲಿಕೆಯ ಸಿಬ್ಬಂದಿ. ಇಷ್ಟು ಜನ ಬೇಕೇ? ಏಕೆ?

ಭಿನ್ನ ರಾಜಕೀಯ ಪಕ್ಷದ ಇಂಥ ಆಡಳಿತ ವೈಖರಿಯನ್ನು ಪ್ರಶ್ನಿಸುವ ನೈತಿಕತೆ ಮತ್ತು ಸಿದ್ಧತೆ ಎರಡೂ ವಿರೋಧ ಪಕ್ಷಗಳ ಸದಸ್ಯರಲ್ಲಿ ಇದ್ದಂತೆ ಕಾಣುತ್ತಿಲ್ಲ. ಇದ್ದರೆ ಅದು ಅವರ ಮಾತು ಮತ್ತು ಕ್ರಿಯೆಯಲ್ಲಿ ವ್ಯಕ್ತವಾಗಬೇಕಿತ್ತು. ಇದುವರೆಗೆ ಪಾಲಿಕೆಯ ನಾಲ್ಕು ಸಭೆಗಳು ನಡೆದಿವೆ. ಅದರಲ್ಲಿ ಎರಡು ಸಭೆಗಳಲ್ಲಿ ಗದ್ದಲವೇ ಆಗಿದೆ. ಮೊದಲ

ಸಭೆಯಲ್ಲಿಯೇ ಮೇಯರ್ ಅವರು 15 ದಿನಗಳ ಒಳಗೆ ಬೆಂಗಳೂರು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಭರವಸೆ ಕೊಟ್ಟಿದ್ದರು. ಅದು ಮೂರು ತಿಂಗಳಾದರೂ ಏಕೆ ಆಗಿಲ್ಲ ಎಂದು ಕೇಳುವ ನೆನಪಿನ ಶಕ್ತಿಯೂ ವಿರೋಧ ಪಕ್ಷಗಳಿಗೆ ಇಲ್ಲ. ಅವರು ಎತ್ತುವ ಪ್ರಶ್ನೆಗಳು, ಹಗರಣಗಳು ಅವರವೇ ಅಥವಾ ಆಡಳಿತ ಪಕ್ಷದವರೇ ಕೊಟ್ಟ ಮಾಹಿತಿಗಳೇ ಎಂದೂ ಗೊತ್ತಾಗುವುದಿಲ್ಲ.

ಆಡಳಿತ ಪಕ್ಷಕ್ಕೂ ಇದು ಒಂದು ಅವಕಾಶ ಎಂದು ತಿಳಿಯುತ್ತಿಲ್ಲ. ತಿಳಿದಿದ್ದರೆ ಆ ಪಕ್ಷದ ಎಲ್ಲ ಸದಸ್ಯರು ಸೇರಿಕೊಂಡು ಬೆಂಗಳೂರಿನ ಅಭಿವೃದ್ಧಿಗೆ ಒಂದು ನೀಲನಕ್ಷೆಯನ್ನು ಸಿದ್ಧಪಡಿಸುತ್ತಿದ್ದರು, ಬುನಾದಿ ಹಾಕುತ್ತಿದ್ದರು. ಅಭಿವೃದ್ಧಿಯ ಜತೆಗೆ ಜನರಿಗೆ ಸ್ಪಂದನಶೀಲವಾದ ಆಡಳಿತ ಕೊಡಲೂ ಪ್ರಯತ್ನ ಮಾಡುತ್ತಿದ್ದರು. ಮೂರು ವರ್ಷಗಳ ಆಡಳಿತಾಧಿಕಾರಿಗಳ ಅವಧಿಯಲ್ಲಿ ಇದ್ದಂತೆಯೇ ಅಧಿಕಾರಶಾಹಿ ಈಗಲೂ ಸ್ಪಂದನರಹಿತವಾಗಿ ಕೆಲಸ ಮಾಡುತ್ತಿದೆ. ಅವರು ಹಾಗೆಯೇ ಕಾರ್ಯ ನಿರ್ವಹಿಸುವುದಾದರೆ ಪಾಲಿಕೆಗೆ ಜನಪ್ರತಿನಿಧಿಗಳ ಆಡಳಿತ ಬೇಕಾಗಿಲ್ಲ. ನಗರಾಭಿವೃದ್ಧಿ ಖಾತೆಯ ಸಚಿವ ಸುರೇಶಕುಮಾರ್ ಅವರು ಪಾಲಿಕೆಯ ಸಿಬ್ಬಂದಿಯನ್ನು ಅಂತರ್ ವರ್ಗಾವಣೆ ಮಾಡುವ ಬೆದರಿಕೆ ಹಾಕಿದ್ದರು. ಅದು ಬರೀ ಬೆದರಿಕೆ ಆಗಿಯೇ ಉಳಿದಿದೆ. ಇದ್ದಲ್ಲಿಯೇ ನಿರ್ಭೀತಿಯಿಂದ ಇರುವ ಸಿಬ್ಬಂದಿ ಚುರುಕಾಗುವುದು ಕಷ್ಟ. ಆಡಳಿತಕ್ಕೆ ವೇಗ ಬರುವುದೂ ಕಷ್ಟ. ನನ್ನ ಪರಿಚಯದ ಒಬ್ಬ ಮಹಿಳೆ, ಉಯಿಲು ಬರೆದು ನಿಧನರಾದ ತನ್ನ ತಾಯಿಯ ಆಸ್ತಿಯನ್ನು ತನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು 60 ದಿನಗಳ ಕಾಲ ಪಾಲಿಕೆ ಕಚೇರಿಗೆ ಅಲೆದಾಡಿದರೂ ಕೆಲಸ ಆಗಲೇ ಇಲ್ಲ. ಇದು ನನ್ನ ಗಮನಕ್ಕೆ ಬಂದ ಒಂದು ಉದಾಹರಣೆ ಮಾತ್ರ.

ಬ್ರಿಟನ್‌ನ ಪ್ರಧಾನಿ ತಮ್ಮ ಭಾರತ ಪ್ರವಾಸವನ್ನು ಬೆಂಗಳೂರಿನಿಂದ ಶುರು ಮಾಡುತ್ತಾರೆ. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿನ ಖ್ಯಾತಿಯ ತಾಜಾ ಉದಾಹರಣೆ. ಆದರೆ, ಈ ಖ್ಯಾತಿಗೆ ಪಾಲಿಕೆ ಕೊಟ್ಟ ಕಾಣಿಕೆ ಏನೇನೂ ಇಲ್ಲ. ಬೆಂಗಳೂರನ್ನು ಒಂದು ಮಾದರಿ ನಗರವಾಗಿ ಬೆಳೆಸಲು ಬಿಜೆಪಿ ಯೋಚನೆ ಮಾಡುವುದು ಬೇಡವೇ? ಮುಖ್ಯಮಂತ್ರಿಗಳು ಅಥವಾ ಬೆಂಗಳೂರಿನ ಉಸ್ತುವಾರಿ ವಹಿಸಿಕೊಂಡಿರುವ ಸಚಿವರಿಗೆ ಕನಸುಗಳೇ ಇಲ್ಲವೇ? ಅಥವಾ ಬೆಂಗಳೂರಿಗೆ ಅಂಟಿದ ಶಾಪವೇ ಇದು? ಇದಕ್ಕೆ ವಿಮೋಚನೆಯೇ ಇಲ್ಲವೇ?

■

# ಪಾದಯಾತ್ರೆ, ಸಾಧನಾ ಸಮಾವೇಶದ ನಡುವೆ ಸಂತ್ರಸ್ತನ ನೆನೆಯುತ್ತ....

ಮೊದಲೇ ಹೇಳಿ ಬಿಡುತ್ತೇನೆ ನಾನು ಮಾತಾ ಅಮೃತಾನಂದಮಯಿ ಅವರ ಭಕ್ತನಲ್ಲ. ಅವರನ್ನು ನಾನು ಇದುವರೆಗೆ ನೋಡಿಲ್ಲ. ಅವರು ಕರ್ನಾಟಕದವರಲ್ಲ. ಆದರೆ, ಕರ್ನಾಟಕದಲ್ಲಿ ಕಳೆದ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಬಿದ್ದ ಮಳೆಯಲ್ಲಿ ಮುಳುಗಡೆಯಾದವರಿಗೆ ಮತ್ತೆ 250 ಮನೆ ಕಟ್ಟಿಸಿಕೊಟ್ಟು ನಾವು ನಾಚುವಂತೆ ಮಾಡಿದ್ದಾರೆ. ಧರ್ಮಸ್ಥಳದವರು, ನಿಟ್ಟೆ ಶಿಕ್ಷಣ ಸಂಸ್ಥೆಯವರು ಕಟ್ಟಿಸಿಕೊಟ್ಟ ಕೆಲವು ಮನೆಗಳನ್ನು ಬಿಟ್ಟರೆ ಬೇರೆ ಯಾವ ಮಠ–ಪೀಠಾಧಿಪತಿಗಳು, ದಾನಿಗಳು ಒಂದು ಮನೆಯನ್ನೂ ಕಟ್ಟಿಸಿದ ಉದಾಹರಣೆಯಿಲ್ಲ. ಕಟ್ಟಿಸಿದರೂ ಅವುಗಳನ್ನು ಹಸ್ತಾಂತರ ಮಾಡಿಲ್ಲ. ಮೊದಲ ಕಂತಿನಲ್ಲಿ ಅಮ್ಮನ ಮಠದ ವತಿಯಿಂದ ನೂರು ಮನೆಗಳನ್ನು ಸರ್ಕಾರಕ್ಕೆ ಹಸ್ತಾಂತರ ಮಾಡಿದಾಗ ಮುಖ್ಯಮಂತ್ರಿಗಳು ಮಠಕ್ಕೆ 15 ಎಕರೆ ಜಮೀನು, ಐದು ಕೋಟಿ ರೂಪಾಯಿ ಹಣ ಪ್ರಕಟಿಸಿದ್ದರು. ಇಷ್ಟು ಜಮೀನು, ಹಣ ಕೊಟ್ಟರೆ ಯಾರು ಬೇಕಾದರೂ ಸಂತ್ರಸ್ತರಿಗೆ ಮನೆ ಕಟ್ಟಿಕೊಡಬಹುದು ಎಂಬ ಟೀಕೆ ಕೇಳಿ ಬಂದಿತ್ತು. ಕರ್ನಾಟಕದ ಯಾವ ಮಠಕ್ಕೆ

ಈ ಮುಖ್ಯಮಂತ್ರಿ ಜಮೀನು ಕೊಟ್ಟಿಲ್ಲ? ಹಣ ಕೊಟ್ಟಿಲ್ಲ? ಹಾಗೆಂದು ಅವರೆಲ್ಲ ಸಂತ್ರಸ್ತರಿಗೆ ಮನೆ ಕಟ್ಟಿಕೊಟ್ಟರೇ? ಇಲ್ಲವಲ್ಲ?

ಆ ಮಹಾ ಮಳೆಯಲ್ಲಿ ಎರಡು ಲಕ್ಷ ಮನೆಗಳು ನೆಲಕ್ಕೆ ಉರುಳಿದ್ದುವು. 1.78 ಕೋಟಿ ಜನರು ಸಂತ್ರಸ್ತರಾಗಿದ್ದರು. ಈಗಲೂ ಬಹುತೇಕ ಜನ ಒಂದೋ ಬಿದ್ದ ಮನೆಗಳನ್ನು ರಿಪೇರಿ ಮಾಡಿಕೊಂಡು ವಾಸವಾಗಿದ್ದಾರೆ. ಇಲ್ಲವೇ ಸರ್ಕಾರ ಕಟ್ಟಿಕೊಟ್ಟ ಟಿನ್‌ಶೆಡ್‌ಗಳಲ್ಲಿ ವಾಸವಾಗಿದ್ದಾರೆ. ಅವರು ಬೇಸಿಗೆಯನ್ನು ಬಯಲಿನಲ್ಲಿ, ಮರದ ಕೆಳಗೆ ಮಲಗಿ ಹೇಗೋ ಕಳೆದರು. ಈಗ ಮಳೆಗಾಲ. ಗುಡ್ಡದ ಓರೆಗೆ ಕಟ್ಟಿದ ಶೆಡ್ಡುಗಳಲ್ಲಿ ನೀರು ಹರಿದು ಬರುತ್ತಿದೆ. ಅವರು ಒಳಗೂ ಇರಲಾರರು, ಹೊರಗೂ ಮಲಗಲಾರರು.

ಕಾಂಗ್ರೆಸ್ ಪಕ್ಷದವರು ಅತ್ತ ಬಳ್ಳಾರಿಗೆ ನಾಡ ರಕ್ಷಣೆಗಾಗಿ ಪಾದಯಾತ್ರೆ ಮಾಡುವಾಗ ಬಿಜೆಪಿಯವರು ಅದಕ್ಕೆ ಪ್ರತಿಯಾಗಿ ಸಾಧನಾ ಸಮಾವೇಶ ಮಾಡುವಾಗ ನನಗೆ ನೆನಪಾದವರು ಮುಳುಗಡೆಯಾದ ಈ ಜನ. ಕಾಂಗ್ರೆಸ್ ಮುಖಂಡರ ಪಾದಯಾತ್ರೆಗೆ ಒಂದು ಅರ್ಥ, ಉದ್ದೇಶ ಇರಬಹುದು. 340 ಕಿ.ಮೀ. ದೂರದ ನಡಿಗೆ ನಡೆಯಬೇಕಾದರೆ ದೇಹವನ್ನು ದಂಡಿಸಬೇಕಾಗುತ್ತದೆ. ಮನೆಯ ಸೌಖ್ಯಗಳನ್ನು ತ್ಯಾಗ ಮಾಡಬೇಕಾಗುತ್ತದೆ. ಇದು ಸಿನಿಕತನದ ಕಾಲ. ಇಂಥ ಒಂದು ಕಾಲಘಟ್ಟದಲ್ಲಿ ಸಿದ್ದರಾಮಯ್ಯ, ದೇಶಪಾಂಡೆ, ಶಿವಕುಮಾರ್ ಮುಂತಾದ ನಾಯಕರು ಕಾಲು ನಡಿಗೆಗೆ ಕೈ ಹಾಕಿದ್ದು ದೊಡ್ಡ ಸಾಹಸ. ಈ ಸಾಹಸ ಬಳ್ಳಾರಿಯಲ್ಲಿ ಕೊನೆಗೊಳ್ಳಲಿದೆ. ಅಲ್ಲಿ ರೆಡ್ಡಿಗಳನ್ನು, ಬಿಜೆಪಿಯವರನ್ನು ಕಾಂಗ್ರೆಸ್ಸಿಗರು ಹರಾಜು ಹಾಕುತ್ತಾರೆ. ಅವರು ಆ ಕೆಲಸ ಮಾಡುವುದಕ್ಕಿಂತ ಮುಂಚೆಯೇ ಬಿಜೆಪಿಯವರು ದಾವಣಗೆರೆ, ಗುಲ್ಬರ್ಗಗಳಲ್ಲಿ ಸಾಧನಾ ಸಮಾವೇಶ ಮಾಡಿ ಕಾಂಗ್ರೆಸ್ಸಿಗರ ಹರಾಜು ಹಾಕಿದ್ದಾರೆ. ಬಳ್ಳಾರಿ ಜಿಲ್ಲೆಯ ಹಳ್ಳಿ–ಹಳ್ಳಿಗಳಲ್ಲಿ ರೆಡ್ಡಿ ಸೋದರರು ಸಚಿವ ಶ್ರೀರಾಮುಲು ಅವರನ್ನು ಮುಂದಿಟ್ಟುಕೊಂಡು ಅದೇ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ಸಿನ ಪಾದಯಾತ್ರೆ ಕರ್ನಾಟಕದ ಇತಿಹಾಸದಲ್ಲಿ ಒಂದು ದಾಖಲೆ ಎಂಬುದರಲ್ಲಿ ಅನುಮಾನವಿಲ್ಲ. ರೆಡ್ಡಿಗಳು 'ಬಳ್ಳಾರಿಗೆ ಬನ್ನಿ ಒಂದು ಕೈ ನೋಡುತ್ತೇವೆ' ಎಂದು ಕೊಟ್ಟ ಪಂಥಾಹ್ವಾನವನ್ನು ಕಾಂಗ್ರೆಸ್ ಸ್ವೀಕರಿಸಿ ಈಗ ಪಾದಯಾತ್ರೆ ಮಾಡುತ್ತಿದೆ. ರೆಡ್ಡಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಬಳ್ಳಾರಿಯಲ್ಲಿ ನಿಂತು ಗೆಲ್ಲಿರಿ' ಎಂದು ಸವಾಲು ಹಾಕಿದ್ದಾರೆ. ಅದನ್ನೂ ಸಿದ್ದರಾಮಯ್ಯ, ದೇಶಪಾಂಡೆ ಸ್ವೀಕರಿಸುತ್ತಾರೆಯೇ? ಹಾಗಾದರೆ ಮುಂದೇನು?

ನಮ್ಮ ರಾಜಕೀಯ ಪಕ್ಷಗಳು 'ನೆಗೆಟಿವ್' ಆಗುತ್ತಿವೆ ಎಂದು ಅನಿಸುತ್ತಿದೆ. ಕಾಂಗ್ರೆಸ್ಸಿನ ಪಾದಯಾತ್ರೆಗಿಂತ ಮುಂಚೆ ವಿಧಾನ ಮಂಡಲ ಅಧಿವೇಶನ ನಡೆದಿತ್ತು. ರಾಜ್ಯದ ಜನರು ಅಲ್ಲಿ ಬರೀ ಗಣಿ ಧಣಿಗಳ ಬಗ್ಗೆ ಚರ್ಚೆ ಆಗುತ್ತದೆ ಎಂದು ಅಂದುಕೊಂಡಿರಲಿಲ್ಲ. ಅವರಿಗೆ ನಿತ್ಯ ಕಾಡುವ ಅನೇಕ ಸಮಸ್ಯೆಗಳು ಇದ್ದುವು. ಕನಿಷ್ಠ ಪಕ್ಷ ರಾಜ್ಯದ ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟು ಮಂದಿ ಮುಳುಗಡೆ ಸಂತ್ರಸ್ತರ ಪುನರ್ವಸತಿ ಬಗ್ಗೆ ಗಂಭೀರ ಚರ್ಚೆ ನಡೆಯುತ್ತದೆ, ಸರ್ಕಾರವನ್ನು

ವಿರೋಧ ಪಕ್ಷಗಳು ಇಕ್ಕಟ್ಟಿಗೆ ಸಿಲುಕಿಸುತ್ತವೆ ಎಂದು ಹಲವರು ಅಂದುಕೊಂಡಿದ್ದರು. ಹಾಗೆ ಆಗಲಿಲ್ಲ. ಇಡೀ ಕಲಾಪ ರೆಡ್ಡಿಗಳ ಗದ್ದಲದಲ್ಲಿ ಮುಗಿದು ಹೋಯಿತು. ವಿರೋಧ ಪಕ್ಷಗಳು ಏನು ಸಾಧನೆ ಮಾಡಿದಂತಾಯಿತು? ಸಂತ್ರಸ್ತರ ಸಮಸ್ಯೆ ಪ್ರಸ್ತಾಪಿಸಿದರೆ ತಾನು ಸಂಗ್ರಹಿಸಿದ ಸಂತ್ರಸ್ತರ ದುಡ್ಡಿನ ದುರುಪಯೋಗವನ್ನು ಬಿಜೆಪಿಯವರು ಎತ್ತುತ್ತಾರೆ ಎಂದು ಕಾಂಗ್ರೆಸ್ ಅಳುಕಿತೇ? ಇರಬಹುದು. ಅಂತೂ ಇಂತೂ ಆಗಿದ್ದೇನು ಎಂದರೆ ಜನರ ಕಷ್ಟಕ್ಕೆ ಮಿಡಿಯುವವರು ಯಾರೂ ಇಲ್ಲ ಎನ್ನುವಂತೆ ಆಯಿತು. ತೆಲಗಿ ಹಗರಣವನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಯಡಿಯೂರಪ್ಪ ಆಗ್ರಹಿಸಿದಾಗ ಮುಖ್ಯಮಂತ್ರಿ ಕೃಷ್ಣ ತಾವಾಗಿಯೇ ಏಕೆ ಒಪ್ಪಲಿಲ್ಲ? ಎಲರಿಗೂ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ರಷೀದ್ ಎಂಬ ವಕೀಲರ ಕೊಲೆ ಪ್ರಕರಣವನ್ನು ಸಿಬಿಐಗೆ ವಹಿಸಿ ಅನುಭವಿಸಿದ 'ಯಾತನೆ'ಯದೇ ಕಹಿ ನೆನಪು. ಹೆಚ್ಚೂ ಕಡಿಮೆ ಹೆಗಡೆ ಸರ್ಕಾರದ ಕೊರಳಿಗೇ ಸಿಬಿಐನ ಉರುಳು ಬಂದಿತ್ತು. ಹಾಗೆ ಆದಾಗ ಕೇಂದ್ರ ತನಿಖಾ ಸಂಸ್ಥೆ ಮೇಲೆ ಯಾರಿಗೆ ನಂಬಿಕೆ ಬರುತ್ತದೆ? ಅಂತಿಮ ವಾಗಿ ಆದುದು ಏನು? ರಷೀದ್ ಕೊಲೆ ಪ್ರಕರಣದ ಎಲ್ಲ ಆರೋಪಿಗಳು ಖುಲಾಸೆ ಯಾದರು.

ಹೋಗಲಿ, ಕಾಂಗ್ರೆಸ್ಸಿಗರು 'ನೆಗೆಟಿವ್ ರಾಜಕೀಯ' ಮಾಡುತ್ತಿದ್ದಾರೆ ಎಂದೇ ಅಂದುಕೊಳ್ಳೋಣ. ಬಿಜೆಪಿಯವರು ಏನು ಮಾಡುತ್ತಿದ್ದಾರೆ? ಕೋಟಿಗಟ್ಟಲೆ ಖರ್ಚು ಮಾಡಿ ಅವರು ಯಾವ ಮುಖ ಇಟ್ಟುಕೊಂಡು ಸಾಧನಾ ಸಮಾವೇಶ ಮಾಡುತ್ತಿದ್ದಾರೆ? ಸಾಧನಾ ಸಮಾವೇಶದಲ್ಲಿಯೂ ಯಡಿಯೂರಪ್ಪನವರು ಉಗ್ರ ನರಸಿಂಹನ ಅವತಾರವನ್ನೇ ಏಕೆ ತಾಳುತ್ತಾರೆ? ಸಂಭ್ರಮದಿಂದ ಬೀಗುತ್ತ ತಮ್ಮ ಸರ್ಕಾರ ಮಾಡಿದ ಸಾಧನೆಗಳನ್ನು ಹೇಳಬೇಕಿತ್ತು ಅಲ್ಲವೇ? ಮಾತು ಮಾತಿಗೆ ಕಂಡ ಕಂಡವರ ಮೇಲೆ ಏಕೆ ಸಿಟ್ಟಿಗೆ ಏಳುತ್ತಾರೆ? ಅವರಿಗೆ ಸರ್ಕಾರ ಬೀಳುತ್ತದೆ ಎಂಬ ಅಳುಕು ಯಾಕೆ? ಅವರಲ್ಲದಿದ್ದರೂ ಈಶ್ವರಪ್ಪ, ರೇಣುಕಾಚಾರ್ಯ, ಕಾರಜೋಳ, ಅಶೋಕ ಹೀಗೆ ಸಿಕ್ಕ ಸಿಕ್ಕವರೆಲ್ಲ ಜೆ.ಡಿ (ಎಸ್) ಜತೆಗೆ ಹೊಂದಾಣಿಕೆ ಮಾಡಿಕೊಳ್ಳುವ ಮಾತು ಏಕೆ ಆಡುತ್ತಾರೆ? ಯಾರನ್ನು ಹೆದರಿಸುವುದು ಅವರ ಗುರಿ? ಯಾರನ್ನಾದರೂ ಹೆದರಿಸಲಿ, ಜನರೇನು ಮೂರ್ಖರೇ? ಹೀಗೆ ಹೇಳಿದರೆ ತಾವು ನಗೆಪಾಟಲು ಆಗುತ್ತೇವೆ ಎಂದು ಬಿಜೆಪಿ ನಾಯಕರಿಗೆ ಅರ್ಥವಾಗುವುದಿಲ್ಲವೇ? ಆಯಿತು, ಜೆ.ಡಿ.(ಎಸ್) ಜತೆಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ ಎಂದೇ ಅಂದುಕೊಳ್ಳೋಣ. ಅದನ್ನು ಯಾರು ತೀರ್ಮಾನ ಮಾಡಬೇಕು? ಬಿಜೆಪಿಗೆ ಒಂದು ಹೈಕಮಾಂಡ್ ಎಂದು ಇಲ್ಲವೇ?... ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ತಮ್ಮ ಪಕ್ಷದ ಮೇಲೆ, ಸಚಿವರ ಮೇಲೆ ಯಾವ ಹಿಡಿತವೂ ಇಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. 'ಬಾಯಿಗೆ ಬಂದಂತೆ ಎಲ್ಲರೂ ಏಕೆ ಮಾತನಾಡುತ್ತೀರಿ. ತೆಪ್ಪಗಿರಿ' ಎಂದು ಹೇಳುವ ಧೈರ್ಯ ಅವರಿಗೆ ಇಲ್ಲವೇ? ಈಗ ಜೆ.ಡಿ.(ಎಸ್) ನವರು ಬಿಜೆಪಿಯ ಸಹವಾಸವೇ ಬೇಡ ಎಂದರು. ಯಾರಿಗೆ ಅವಮಾನವಾಯಿತು?

ಯಡಿಯೂರಪ್ಪ ಮುಖ್ಯಮಂತ್ರಿಯಾಗಿ 25 ತಿಂಗಳೇ ಆಯಿತು. ಅವರು

ಮುಖ್ಯಮಂತ್ರಿಯ ಕುರ್ಚಿಯ ಮೇಲೆ ಕುಳಿತು ಎಷ್ಟು ದಿನ ಕೆಲಸ ಮಾಡಿದ್ದಾರೆ ಎಂಬ ಲೆಕ್ಕ ಸಿಕ್ಕರೆ ಒಳ್ಳೆಯದು. ಅವರಿಗೆ ಯಾರೋ ಮಾಟ ಮಾಡಿಸಿರಬೇಕು. ಈ ಮನುಷ್ಯ ಮುಖ್ಯಮಂತ್ರಿಯ ಕುರ್ಚಿಯ ಮೇಲೆ ಕುಳಿತುಕೊಳ್ಳಬಾರದು ಎಂದು! ಕಾಲಿಗೆ ಗಾಲಿ ಕಟ್ಟಿಕೊಂಡವರಂತೆ ದಿನಕ್ಕೊಂದು ಊರು ತಿರುಗುತ್ತ ಇದ್ದರೆ ಆಡಳಿತ ಎಂಬುದು ಏನಾಗುತ್ತದೆ? ಮುಖ್ಯಮಂತ್ರಿಯೇ ವಿಧಾನಸೌಧಕ್ಕೆ ಬರದಿದ್ದರೆ ಬಾಕಿಯವರು ಏಕೆ ಬರುತ್ತಾರೆ? ಅವರೆಲ್ಲ ಆಡಳಿತ ಸೌಧಕ್ಕೆ ಏಕೆ ಬರಬೇಕು ಎಂದರೆ ಅಲ್ಲಿ ಜನರಿಗೆ ಸಂಬಂಧಪಟ್ಟ ಸಂಗತಿಗಳ ತೀರ್ಮಾನ ಆಗುತ್ತದೆ. ಅದಕ್ಕಾಗಿ ಅವರು ಅಲ್ಲಿ ಗಟ್ಟಿಯಾಗಿ ಕುಳಿತುಕೊಂಡು ಕೆಲಸ ಮಾಡಬೇಕು.

ವಿರೋಧ ಪಕ್ಷಗಳಿಗೆ ರಾಜ್ಯದ ಅಭಿವೃದ್ಧಿಯನ್ನು ಸಹಿಸಲು ಆಗುತ್ತಿಲ್ಲ ಎಂಬ ಮುಖ್ಯಮಂತ್ರಿಗಳ ಮಾತನ್ನು ಒಂದು ಕ್ಷಣ ಒಪ್ಪೋಣ. ಅವರು ಕಳೆದ ಫೆಬ್ರುವರಿ ತಿಂಗಳಲ್ಲಿ ರಾಜ್ಯದ ಜನರಿಗೆ ಒಂದು ವಚನ ಕೊಟ್ಟಿದ್ದರು. 'ಮುಂದಿನ ಜೂನ್ ಒಳಗಾಗಿ ಮಳೆ ಸಂತ್ರಸ್ತರಿಗೆ ಮನೆ ನಿರ್ಮಿಸಿ ಕೊಡುತ್ತೇನೆ. ಸಂತ್ರಸ್ತರ ಶೆಡ್‌ಗಳಲ್ಲಿ ವಾಸಿಸುತ್ತೇನೆ' ಎಂದು. ಆ ವಚನವನ್ನು ಹೇಳಿದ ದಿನವೇ ಅವರು ಮರೆತರು ಎನಿಸುತ್ತದೆ. ಸಿದ್ದರಾಮಯ್ಯನವರೂ ಒಂದು ದಿನ ಸಂತ್ರಸ್ತರ ಗೋಳನ್ನು ತೂಕಡಿಸುತ್ತಲೇ ಕೇಳಿಬಂದರು. ಜನರು ಪಾದಯಾತ್ರೆ, ಸಾಧನಾ ಸಮಾವೇಶಗಳಿಂದ ಸಂಭ್ರಮ ಪಡುವುದಿಲ್ಲ ಎಂದು ನನಗೆ ಅನಿಸುತ್ತದೆ. ಏಕೆಂದರೆ ಅದು ಅವರ ನಿತ್ಯದ ಕಷ್ಟವನ್ನು ನೀಗಿಸುವ ಭರವಸೆಯನ್ನು ನೀಡುವುದಿಲ್ಲ. ಸಿದ್ದರಾಮಯ್ಯನವರ ಜತೆಗೆ ಮೊದಲ ದಿನ ಸಾವಿರಾರು ಜನರು ಪಾದಯಾತ್ರೆಯಲ್ಲಿ ಭಾಗವಹಿಸಿರಬಹುದು. ನಡಿಗೆಯ ಕಷ್ಟ ಹೆಚ್ಚಿದಂತೆ ನಾಯಕರೇ ಹಿಂದೆ ಸರಿಯುವಾಗ ಸಾರ್ವಜನಿಕರು ಏಕೆ ಸ್ವಯಂಸ್ಫೂರ್ತಿಯಿಂದ ಭಾಗವಹಿಸುತ್ತಾರೆ? ಬಿಜೆಪಿಯವರ ಸಾಧನಾ ಸಮಾವೇಶ ದಲ್ಲಿಯೂ ಲಕ್ಷಗಟ್ಟಲೆ ಜನ ಭಾಗವಹಿಸಿರಬಹುದು. ಅವರೆಲ್ಲರೂ ಸ್ವಯಂಸ್ಫೂರ್ತಿ ಯಿಂದ ಬಂದವರು ಎಂದು ಹೇಳಿದರೆ ಯಾರಾದರೂ ನಂಬುತ್ತಾರೆಯೇ? ದುರಂತ ಎಂದರೆ ಜನರೇ ಈಗ ಬಾಡಿಗೆಗೆ ಬರಲು ತಯಾರಾಗಿದ್ದಾರೆ.

ನಾನು ಮತ್ತೆ ಮತ್ತೆ ಮುಳುಗಡೆಯಾದ ಜನರ ಪ್ರಸ್ತಾಪ ಮಾಡುವುದು ಅದು ಒಂದು ಸಂಕೇತ ಎಂಬ ಕಾರಣಕ್ಕಾಗಿ, ರಾಜ್ಯದ ಇತಿಹಾಸದಲ್ಲಿ ಇಂಥ ದುರಂತ ಘಟಿಸಿರಲಿಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಜನರು ಮನೆ ಮಠ ಕಳೆದುಕೊಂಡಿರಲಿಲ್ಲ. ಅವರಿಗೆ ಮತ್ತೊಂದು ಮಳೆಗಾಲ ಬರುವ ಒಳಗೆ ನೆಲೆ ಕಲ್ಪಿಸಿದ್ದರೆ ರಾಜ್ಯ ಸರ್ಕಾರಕ್ಕೆ ಕೀರ್ತಿ ಬರುತ್ತಿತ್ತು. ಅದು ಆಗುವಂತೆ ಒತ್ತಡ ಹೇರಿದ್ದರೆ ವಿರೋಧ ಪಕ್ಷಗಳಿಗೂ ಒಂದು ಕೃತಕೃತ್ಯತೆ ಇರುತ್ತಿತ್ತು. ಇದು ದಾನಿಗಳ ನೆರವಿನಿಂದ ಸರ್ಕಾರ ಮಾಡಬೇಕಾದ ಕೆಲಸ ಎಂಬುದೇನೋ ನಿಜ. ಆದರೆ, ಈ ಸರ್ಕಾರದಲ್ಲಿ ಇರುವಂಥ ಶ್ರೀಮಂತರು ಹಿಂದಿನ ಯಾವ ಸರ್ಕಾರದಲ್ಲಿಯೂ ಇರಲಿಲ್ಲ. ರೆಡ್ಡಿ ಸೋದರರ ಸಂಪತ್ತು 50,000 ಕೋಟಿ ಎಂದು ಕೆಲವರು ಹೇಳಿದರೆ ಇನ್ನು ಕೆಲವರು ಒಂದು ಲಕ್ಷ ಕೋಟಿ ಎನ್ನುತ್ತಾರೆ. ಇಷ್ಟು ಸಂಪತ್ತು ಇದ್ದರೂ 'ನಾವೇನು ಸ್ವಂತ ದುಡ್ಡಿನಿಂದ ಮನೆ ಕಟ್ಟಿಸುತ್ತೇವೆ' ಎಂದು ಹೇಳಿರಲಿಲ್ಲ ಎಂಬುದು ಅವರ

ಸಮಜಾಯಿಷಿ. ಸಾಯುವಾಗ ತಾವು ಗಳಿಸಿದ ಸಂಪತನ್ನು ಜತೆಗೆ ತೆಗೆದುಕೊಂಡ ಹೋದ ಯಾರ ಸುದ್ದಿಯನ್ನೂ ನಾವು ಇದುವರೆಗೆ ಬರೆದಿಲ್ಲ. ರೆಡ್ಡಿ ಸೋದರರ ಬಗ್ಗೆ ಯಾರಿಗೂ ಸಹಾನುಭೂತಿಯಿಲ್ಲ. ಅವರು ನಿಸರ್ಗದ ಲೂಟಿಕೋರರು ಎಂಬ ಭಾವನೆಯೇ ದಟ್ಟವಾಗಿದೆ. ಕನಿಷ್ಠ ಅವರಾದರೂ ನಾವು ಒಂದು ಸಾವಿರ ಮನೆಗಳನ್ನು ಕಟ್ಟಿಸಿ ಸಂತ್ರಸ್ತರಿಗೆ ಕೊಡುತ್ತೇವೆ ಎಂದು ಮುಂದೆ ಬರಬೇಕಿತ್ತು. ಹಾಗೆ ಮಾಡಿದ್ದರೆ ವಾಲ್ಮೀಕಿ ಸಮುದಾಯದ ಶ್ರೀರಾಮುಲು ಅವರ ಹಿಂದೆ ನಿಂತುಕೊಂಡು ತಮ್ಮನ್ನು ತಾವು ಸಮರ್ಥಿಸಿಕೊಳ್ಳುವ ಪ್ರಮೇಯ ಅವರಿಗೆ ಬರುತ್ತಿರಲಿಲ್ಲ. ದೇವರ ಬಳಿ ಎಲ್ಲರೂ ನಡೆದುಕೊಂಡೇ ಹೋಗಬೇಕು. (ಪೈದಲ್ ಹೀ ಜಾನಾ ಹೈ ಖುದಾ ಕೆ ಪಾಸ್) ಹೆಲಿಕಾಪ್ಟರ್‌ನಲ್ಲಿ ಅಲ್ಲ! ಅಲ್ಲಿ ಹೋಗಿ ರೆಡ್ಡಿ ಸೋದರರು ಏನು ಹೇಳುತ್ತಾರೆ? ■

# ಭಾವೀ ಪತ್ರಕರ್ತರಿಗೆ ಪ್ರೀತಿಯಿಂದ...

'ಪತ್ರಿಕೋದ್ಯಮವನ್ನು ದೇವರೇ ಕಾಪಾಡಬೇಕು'- ಇದು ನನ್ನ ಸಂಪಾದಕರು ಹತಾಶರಾಗಿ ಹೇಳಿದ ಮಾತು. ನಾನೂ ಅವರೂ ಸುಮಾರು ಮುಕ್ಕಾಲು ಕರ್ನಾಟಕ ವನ್ನು ಪತ್ರಕರ್ತರ ಸಂದರ್ಶನಕ್ಕಾಗಿ ಸುತ್ತಿದ ನಂತರ ಅವರು 'ಸುಸ್ತಾ'ಗಿದ್ದರು. ಸುಸ್ತಾಗಿದ್ದುದು ಅಷ್ಟು ಉದ್ದಕ್ಕೂ ಅವರೇ ಕಾರು ಓಡಿಸಿದ್ದರಿಂದ ಆದ ದೈಹಿಕ ಶ್ರಮದಿಂದ ಅಲ್ಲ; ಬದಲಿಗೆ ನಮ್ಮ ಮುಂದೆ ಸಂದರ್ಶನಕ್ಕೆ ಕುಳಿತ ಬಹುತೇಕ ಅಭ್ಯರ್ಥಿಗಳ 'ಅಜ್ಞಾನ'ದಿಂದ.

ನಮ್ಮ ಸಮಸ್ಯೆ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಷ್ಕರಿಸುವ ಹಂತದಲ್ಲಿಯೇ ಶುರುವಾಯಿತು. ಕೈ ಬರಹದ ಅರ್ಜಿ ಸಲ್ಲಿಸಬೇಕು ಎಂದು ಸಂಪಾದಕರು ಅದಕ್ಕೆ ಸೇರ್ಪಡೆ ಮಾಡಿದ್ದರು. ನಮಗೆ ಬಂದ 250 ಕ್ಕೂ ಹೆಚ್ಚು ಅರ್ಜಿಗಳಲ್ಲಿ ಬಹುತೇಕ ಅರ್ಜಿಗಳು ಇಂಗ್ಲಿಷ್‌ನಲ್ಲಿಯೇ ಇದ್ದುವು. ತಮ್ಮ ಊರಿನ ಟೈಪಿಂಗ್ ಸೆಂಟರ್‌ನಲ್ಲಿ ಸಿಗುವ ಇಂಗ್ಲಿಷ್ ಅರ್ಜಿ ನಮೂನೆಯನ್ನೇ ಅವರೆಲ್ಲ ತುಂಬಿ ಕಳುಹಿಸಿದ್ದರು. ನೌಕರಿಗೆ ಅರ್ಜಿ ಬರೆಯುವುದು ಅಷ್ಟು ಕಷ್ಟವೇ ಎಂದು ನನಗೆ ದಿಗಿಲಾಯಿತು. ಹೆಸರು, ವಿಳಾಸ, ಜನ್ಮ ದಿನಾಂಕ,

ವಿದ್ಯಾರ್ಹತೆ, ಗಳಿಸಿದ ಅಂಕಗಳು ಮತ್ತು ಅನುಭವ (ಇದ್ದರೆ), ಇಷ್ಟು ಬರೆದರೆ ಸಾಕಲ್ಲವೇ? ಇಷ್ಟು ಬರೆದರೆ ಸಾಕು ಎಂದು ಅವರಿಗೆ ಏಕೆ ತಿಳಿಯಲಿಲ್ಲ? ಮೂರು ಪುಟದ ಮುದ್ರಿತ ಇಂಗ್ಲಿಷ್ ಅರ್ಜಿಯಲ್ಲಿ ಆರಂಭದಲ್ಲಿ ಈ ಅಂಶಗಳೇ ಇಲ್ಲ. ಹಾಗಾದರೆ ಅದನ್ನು ತುಂಬುವ ಕಷ್ಟವಾದರೂ ಏಕೆ? ಪತ್ರಿಕೋದ್ಯಮ ಮುಖ್ಯವಾಗಿ ಸಂವಹನ ವೃತ್ತಿ, ಕನ್ನಡದಲ್ಲಿಯೇ ಅರ್ಜಿ ಬರೆಯಬೇಕು ಎಂಬುದನ್ನು ಸಂವಹನ ಮಾಡಲು ನಮಗೆ ಏಕೆ ಸಾಧ್ಯವಾಗಲಿಲ್ಲ ಎಂದು ನಮಗೆ ಚಿಂತೆಯಾಯಿತು. ಸಮಸ್ಯೆ ಇರುವುದು ವಿದ್ಯಾರ್ಥಿಗಳಲ್ಲಿಯೇ? ಅಥವಾ ನಮ್ಮಲ್ಲಿಯೇ?

ಬಂದ ಅರ್ಜಿಗಳನ್ನು ಪರಿಶೀಲಿಸಿ 70 ಜನರಿಗೆ ಪರೀಕ್ಷೆಗೆ ಕರೆದೆವು. ನನ್ನ ಹಿರಿಯ ಸಹೋದ್ಯೋಗಿಯೊಬ್ಬರು ಕಳೆದ ಎರಡು ತಿಂಗಳ ವಿದ್ಯಮಾನ ಆಧರಿಸಿ ಒಂದು ಪ್ರಶ್ನೆ ಪತ್ರಿಕೆ ತಯಾರಿಸಿದ್ದರು. ಎರಡು ತಿಂಗಳ ಪತ್ರಿಕೆಗಳನ್ನು ಓದಿದವರಿಗೆ ಅದು ಕಷ್ಟದ ಪ್ರಶ್ನೆ ಪತ್ರಿಕೆಯಾಗಿರಲಿಲ್ಲ. ಆದರೆ, ಪರೀಕ್ಷೆ ಮುಗಿದು ಉತ್ತರ ಪತ್ರಿಕೆಗಳನ್ನು ನೋಡುವಾಗ ನಮಗೆ ಅನಿಸಿದ್ದು ಬಹುತೇಕ ಅಭ್ಯರ್ಥಿಗಳಿಗೆ ಪ್ರಚಲಿತ ವಿದ್ಯಮಾನಗಳ ಕಡೆಗೆ ಗಮನವಿಲ್ಲ ಎಂಬುದು. ಇಡೀ ದೇಶದಾದ್ಯಂತ ಸುದ್ದಿ ಮಾಡಿದ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಡಿ.ವಿ. ಶೈಲೇಂದ್ರಕುಮಾರ್, ಬಿಹಾರಕ್ಕೆ ಹೋಗಿ ಅಲ್ಲಿಂದ ರಾಜ್ಯಸಭೆಗೆ ಸ್ಪರ್ಧಿಸಿದ ರಾಜ್ಯದ ಉದ್ಯಮಿ ಉದಯ ಗರುಡಾಚಾರ್ ಯಾರು ಎಂಬುದು ಬಹುತೇಕ ಅಭ್ಯರ್ಥಿಗಳಿಗೆ ಗೊತ್ತಿರಲಿಲ್ಲ. ಶೈಲೇಂದ್ರಕುಮಾರ್ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಂದು ಒಬ್ಬರಿಗೆ ಅನಿಸಿದರೆ ಇನ್ನೊಬ್ಬರಿಗೆ ಅವರು ಕರ್ನಾಟಕದ ಮೂವರು ಮುಖ್ಯ ನ್ಯಾಮೂರ್ತಿಗಳಲ್ಲಿ ಒಬ್ಬರು ಎಂದು ಅನಿಸಿತ್ತು. ಒಂದು ರಾಜ್ಯದಲ್ಲಿ ಮೂವರು ಮುಖ್ಯ ನ್ಯಾಯಮೂರ್ತಿಗಳು ಇರುತ್ತಾರೆ ಎಂದು ಅವರು ಗಟ್ಟಿಯಾಗಿ ನಂಬಿದ್ದರು! ಇನ್ನೊಬ್ಬರಿಗೆ ಅವರು ಕರ್ನಾಟಕದಲ್ಲಿಯಂತೂ ಇಲ್ಲ ಇನ್ನೆಲ್ಲಿಯೋ ಇರಬಹುದು ಎಂದು ಅನಿಸಿತ್ತು. ಮತ್ತೊಬ್ಬರಿಗೆ ಅವರು ರಾಜ್ಯದ ಅಡ್ವೊಕೇಟ್ ಜನರಲ್ ಎಂಬ ಅಭಿಪ್ರಾಯ ಇತ್ತು. ಉದಯ ಗರುಡಾಚಾರ್ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಕ್ರೀಡಾ ವರದಿಗಾರ ಎಂದು ಒಬ್ಬರಿಗೆ ಅನಿಸಿದ್ದರೆ ಮತ್ತೊಬ್ಬರಿಗೆ ಗದುಗಿನ ನಾಟಕಕಾರ ಎಂದು ಅನಿಸಿತ್ತು. ಆಶ್ಚರ್ಯ ಎಂದರೆ ಗದುಗಿನಿಂದ ಬಂದ ಅಭ್ಯರ್ಥಿಯೇ ಹಾಗೆ ಭಾವಿಸಿದ್ದರು. ಇನ್ನೊಬ್ಬರು ಉದಯ ಗರುಡಾಚಾರ್ ಅಮೆರಿಕೆಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು ಅಲ್ಲಿಯೇ ಒಂದು ಉದ್ಯಮ ಸ್ಥಾಪಿಸಿದ್ದಾರೆ. ಅಲ್ಲಿ ಅವರು 900 ಜನ ಕನ್ನಡಿಗರಿಗೆ ನೌಕರಿ ಕೊಟ್ಟಿದ್ದಾರೆ ಎಂದು ನಂಬಿದ್ದರು!

ಬಿಪಿಓ ಉದ್ಯಮಕ್ಕೆ ಸಂಬಂಧಿಸಿದಂತೆ 'ಬೆಂಗಳೂರಿನ ಮೇಲೆ ಅವಲಂಬನೆ ಬೇಡ, ಬಫೆಲೊದಲ್ಲಿ ಇಂಥ ಉದ್ಯಮ ಸ್ಥಾಪಿಸಬೇಕು' ಎಂದು ಅಮೆರಿಕೆ ಅಧ್ಯಕ್ಷ ಬರಾಕ್ ಒಬಾಮ ಸೂಚಿಸಿದ್ದರು. ಆ ಸುದ್ದಿಯನ್ನು 'ಬೆಂಗಳೂರು ಸಾಕು– ಬಫೆಲೊ ಬೇಕು' ಎಂಬ ಶೀರ್ಷಿಕೆಯಡಿ ಪ್ರಜಾವಾಣಿ ಪ್ರಕಟಿಸಿತ್ತು. ಈ ಹೇಳಿಕೆಯನ್ನಷ್ಟೆ ಕೊಟ್ಟು ಅದನ್ನು ಹೇಳಿದವರು ಯಾರು ಎಂದು ಪ್ರಶ್ನೆ ಕೇಳಲಾಗಿತ್ತು. ಅದಕ್ಕೆ ಬಂದ ಉತ್ತರ ಚಿದಾನಂದಮೂರ್ತಿ, ವಾಟಾಳ್ ನಾಗರಾಜ್, ಟಿ. ಎ. ನಾರಾಯಣಗೌಡ! ಇವರೆಲ್ಲ

ಕನ್ನಡ ಪರ ವ್ಯಕ್ತಿಗಳು, ಅವರು ಬೆಂಗಳೂರು ಸಾಕು ಎಂದು ಹೇಳಿಯಾರೇ ಎಂಬ ಸಂಶಯವೂ ಅಭ್ಯರ್ಥಿಗಳಿಗೆ ಬಂದಿರಲಿಲ್ಲ. ವಾಟಾಳ್ ನಾಗರಾಜ್ ಈ ಹೇಳಿಕೆ ಕೊಟ್ಟಿರಬಹುದು ಎಂದು ನಿಮಗೆ ಏಕೆ ಅನಿಸಿತು ಎಂದು ಒಬ್ಬ ಅಭ್ಯರ್ಥಿಗೆ ಕೇಳಿದರೆ, 'ವಾಟಾಳರು ಎಮ್ಮೆ, ಕತ್ತೆಗಳ ಮೆರವಣಿಗೆ ಮಾಡುತ್ತಾರಲ್ಲ ಅದಕ್ಕೆ' ಎಂದು ಆಕೆ ಉತ್ತರಿಸಿದರು. ನಗಬೇಕೋ ಅಳಬೇಕೋ ತಿಳಿಯಲಿಲ್ಲ.

ಇವು ಒಂದೆರಡು ಸ್ಯಾಂಪಲ್ ಮಾತ್ರ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳನದಲ್ಲಿ ಹೆಚ್ಚು ಹಣ ತೊಡಗಿಸಿದವರು ಯಾರು ಎಂಬುದು ಒಬ್ಬಿಬ್ಬರಿಗೆ ಮಾತ್ರ ಗೊತ್ತಿತ್ತು. ಆಕೆ ಒಬ್ಬ ಹೆಣ್ಣು ಮಗಳು ಎಂದು ಸುಳಿವು ಕೊಟ್ಟರೂ ಸಂದರ್ಶನದ ವೇಳೆಯಲ್ಲಿ ಉತ್ತರ ಕೊಡಲು ಆಗಲಿಲ್ಲ. ಸೋಜಿಗ ಎಂದರೆ ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನದ ನಡುವೆ ಒಂದು ವಾರದ ಅಂತರವಿತ್ತು. ಆದಾಗ್ಯೂ ತಾವು ಬರೆದ ಅಥವಾ ಅಂದುಕೊಂಡ ಉತ್ತರ ಸರಿಯೇ ತಪ್ಪೇ ಎಂಬುದನ್ನು ತಿಳಿದುಕೊಳ್ಳಲೂ ಬಹುತೇಕ ಅಭ್ಯರ್ಥಿಗಳು ಪ್ರಯತ್ನ ಮಾಡಿರಲಿಲ್ಲ. ಪತ್ರಕರ್ತರು ಆಗಬೇಕು ಎನ್ನುವವರಿಗೆ ಪತ್ರಿಕೆ ಓದುವ ರೂಢಿ ಬೇಡವೇ? ದೈನಂದಿನ ವಿದ್ಯಮಾನ ಓದುವ ಅಗತ್ಯವೇ ಅವರಿಗೆ ಕಾಣುವುದಿಲ್ಲವೇ? ಪಾಟೀಲ ಪುಟ್ಟಪ್ಪನವರು ಆಗಾಗ ಹೇಳುತ್ತಾರೆ; 'ಈಗಿನ ಪತ್ರಕರ್ತರು ತಾವು ಕೆಲಸ ಮಾಡುವ ಪತ್ರಿಕೆಯನ್ನೇ ಓದುವುದಿಲ್ಲ' ಎಂದು. ಅದು ಇಷ್ಟು ನಿಜ ಎಂದು ನನಗೆ ಗೊತ್ತಿರಲಿಲ್ಲ.

ಸಂದರ್ಶನದ ಸಮಯದಲ್ಲಿ ನಾವು ಗಮನಿಸಿದ ಇನ್ನೊಂದು ಸಂಗತಿ ಯಾವ ಅಭ್ಯರ್ಥಿಗೂ ವ್ಯಾಪಕ ಓದಿನ ಹಿನ್ನೆಲೆಯಿಲ್ಲ ಎಂಬುದು. ಬಹುತೇಕ ಅಭ್ಯರ್ಥಿಗಳು ತೇಜಸ್ವಿಯವರ ಮಿಲೇನಿಯಂ ಸರಣಿಯ ಕೆಲವು ಪುಸ್ತಕಗಳನ್ನು, ಕಾರಂತರ 'ಮೂಕಜ್ಜಿಯ ಕನಸ'ನ್ನು ಮಾತ್ರ ಓದಿದ್ದರು. ಕನ್ನಡ ಎಂ.ಎ.ನಲ್ಲಿ ಶೇ69–70ರಷ್ಟು ಅಂಕ ಗಳಿಸಿದವರಿಗೂ ಸಾಹಿತ್ಯದ ಗಂಧ ಗಾಳಿ ಇರಲಿಲ್ಲ. ಕನ್ನಡದ ಎಲ್ಲರೂ ಅಲ್ಲ ಒಬ್ಬ ಪ್ರಮುಖ ಲೇಖಕನನ್ನೂ ಅವರು ಸಮಗ್ರವಾಗಿ ಓದಿರಲಿಲ್ಲ. ಕಥೆ, ಕವನ ಸಂಕಲನ ಪ್ರಕಟಿಸಿದ ಒಬ್ಬಿಬ್ಬರು ಯುವ ಲೇಖಕರೂ ಸಂದರ್ಶನಕ್ಕೆ ಬಂದಿದ್ದರು. ಅವರಲ್ಲಿ ಒಬ್ಬರು ದೀರ್ಘಪ್ರಿಯ. ಪ್ರತಿಯೊಂದು ಶಬ್ದದಲ್ಲಿಯೂ ಬೇಕಿರಲಿ ಬೇಡದಿರಲಿ ದೀರ್ಘಸ್ವರ ಬಳಸಿದ್ದರು. ಅವರಿಗೂ ಸಾಹಿತ್ಯಕ್ಕೂ ಅಷ್ಟಕಷ್ಟೆ. ಸಂದರ್ಶನ ಪ್ರವಾಸ ಮುಗಿಸಿ ಬಂದ ಮೇಲೆ ನನ್ನ ಗುರು ಕಲ್ಬುರ್ಗಿಯವರ ಜತೆಗೆ ಮಾತನಾಡುವ ಅವಕಾಶ ಸಿಕ್ಕಿತ್ತು. 'ನಮಗೆ 60 ಅಂಕ ಕೊಡಲೂ ನೀವೆಷ್ಟು ಜಿಪುಣತನ ಮಾಡುತ್ತಿದ್ದಿರಿ; ಈಗ ಶೇ 69–70 ಅಂಕ ತೆಗೆದುಕೊಂಡವರೂ ಏನನ್ನೂ ಓದಿಲ್ಲವಲ್ಲ' ಎಂದೆ. 'ಈಗ ಗುರುಗಳೇ ಓದುವುದಿಲ್ಲ; ವಿದ್ಯಾರ್ಥಿಗಳು ಎಲ್ಲಿ ಓದುತ್ತಾರೆ' ಎಂದು ಅವರು ನನಗೇ ಪ್ರಶ್ನೆ ಹಾಕಿದರು.

ಪತ್ರಕರ್ತ ಆಗುವುದು ಎಂದರೆ ಓದುವುದು ಮತ್ತು ಬರೆಯುವುದು ಮಾತ್ರ. ಓದು ಕಡಿಮೆ ಆದರೆ ಬರವಣಿಗೆಯೂ ಕಡಿಮೆ ಆಗುತ್ತದೆ. ಅಥವಾ ಬರವಣಿಗೆಗೆ ತೇಜಸ್ಸು ಬರುವುದಿಲ್ಲ. ಡೆಕ್ಕನ್ ಹೆರಾಲ್ಡ್‌ನ ಲಂಡನ್ ವರದಿಗಾರರಾಗಿದ್ದ ಶ್ಯಾಂ ಭಾಟಿಯಾ, 'ಓದಿನ ಸೊಗಸಿಗಾಗಿಯೇ ಜನರು ಪತ್ರಿಕೆ ಓದುತ್ತಾರೆ' ಎಂದಿದ್ದರು. ಆದರೆ, ಈಗ

ನೀವು ಯಾವ ಪತ್ರಿಕೆ ತೆಗೆದುಕೊಂಡರೂ ಓದಿನ ಸೊಗಸು ನೀಡುವ ವರದಿಗಳು ಕಡಿಮೆ. ಜಡತ್ವ ತುಂಬಿದ ವರದಿಗಳೇ ಹೆಚ್ಚು. ಇಂತ–ಇಂಥ, ಇನ್ನು ಇನ್ನೂ ಪದಗಳ ನಡುವಿನ ವ್ಯತ್ಯಾಸ ತಿಳಿಯದವರೇ ಹೆಚ್ಚು. ಈ ವ್ಯತ್ಯಾಸ ತಿಳಿಯುವುದು ಓದಿನಿಂದ, ಭಾಷೆಯ ತಿಳಿವಳಿಕೆಯಿಂದ, ಸುದ್ದಿ ಅಥವಾ ಲೇಖನದಲ್ಲಿನ ಕಾಗುಣಿತ ದೋಷಗಳು ಒಂದು ಹಿಂಸೆ. ಅದು ಹಿಂಸೆ ಎಂದು ಹೇಳಿದರೆ ಹಲವರಿಗೆ ಹಿಂಸೆ ನನ್ನ ವಾರಿಗೆಯವರು ಪತ್ರಿಕೋದ್ಯಮ ವೃತ್ತಿ ಸೇರಿದ್ದು 70–80 ರ ದಶಕದಲ್ಲಿ. ನಾವೆಲ್ಲ ಪತ್ರಿಕೋದ್ಯಮ ಓದಿದವರಲ್ಲ. ಒಂದು ಅರ್ಥದಲ್ಲಿ ನಾವು 'ಹುಟ್ಟು ಪತ್ರಕರ್ತರು'! ಈಗ ವೃತ್ತಿಗೆ ಬರುತ್ತಿರುವವರು ಪತ್ರಕರ್ತರು ಆಗಬೇಕು ಎಂದೇ ಓದಿದವರು. ಆದರೆ, ಅವರು ಪಠ್ಯ ಬಿಟ್ಟು ಬೇರೇನನ್ನೂ ಓದುವಂತೆ ಕಾಣುವುದಿಲ್ಲ. ಓದಬೇಕು ಎಂದೂ ಅವರಿಗೆ ಅನಿಸುತ್ತಿಲ್ಲ. ಅದು ಒಬ್ಬ ಪತ್ರಕರ್ತ ನಾಗುವವನಿಗೆ ಅಗತ್ಯ ಎಂದು ಅವರಿಗೆ ಯಾರೂ ಹೇಳಿಕೊಡುವಂತೆಯೂ ಕಾಣದು. ನಮ್ಮ ಕಾಲದವರಿಗೆ ಹೋಲಿಸಿದರೆ ತರುಣರು ತಾಂತ್ರಿಕವಾಗಿ ಸಿದ್ಧಹಸ್ತರು. ಕಂಪ್ಯೂಟರ್‌ನ ಮೌಸ್ ಮೇಲೆ ಅವರ ಕೈ ವೇಗವಾಗಿ ಸರಿದಾಡುತ್ತದೆ. ಆದರೆ, ವಿವರಗಳ ಕಡೆಗೆ ಗಮನ ಕಡಿಮೆ. ವಿವರಗಳಲ್ಲಿಯೇ ದೇವರು ಇರುವುದು ಎಂದು ಅವರಿಗೆ ತಿಳಿಯುತ್ತಿಲ್ಲ. ಅವರಿಗೆ ಅಷ್ಟೇಕೆ ಅವಸರ?

ಒಬ್ಬ ಪತ್ರಕರ್ತನಿಗೆ ಭಾಷೆ ಕೊಡ್ಡ ಬಂಡವಾಳ. ಭಾಷೆ ಒದಗಿ ಬರುವುದು ಸಾಹಿತ್ಯದ ಓದಿನಿಂದ. ಸಾಹಿತ್ಯದ ಓದು ನಮ್ಮನ್ನು ಮಾನವೀಯವಾಗಿಯೂ ಮಾಡುತ್ತದೆ. ಒಳನೋಟಗಳನ್ನು ಕೊಡುತ್ತದೆ. ಮಾನವೀಯತೆ ಇಲ್ಲದ ಒಬ್ಬ ವ್ಯಕ್ತಿ ಏನನ್ನೂ ಅನುಭವಿಸಲಾರ. ಜನರ ಸಂಕಟವನ್ನು ಓದುಗರಿಗೆ ತಲುಪಿಸಲಾರ. ಹಾಗಿದ್ದರೆ ನಾವು ಪತ್ರಕರ್ತರು ಏಕಾಗಬೇಕು? ಇದು ನೌಕರಿಯಲ್ಲ. ಇದು ಒಂದು ವೃತ್ತಿ. ಅದಕ್ಕಾಗಿಯೇ ಪತ್ರಿಕೋದ್ಯಮ ಇಲ್ಲಿನ ವೃತ್ತಿನಿರತರ ಮೇಲೆ ಹೇರುವ ಹೊಣೆ ದೊಡ್ಡದು. ಇದನ್ನು ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ತಿಳಿಸಿಕೊಡಲು ಆಗುತ್ತಿಲ್ಲ ಎಂದರೆ ಮೊದಲೇ ಪತ್ರಕರ್ತರನ್ನು ಕಂಡರೆ ಆಗದ ಅಧ್ಯಾಪಕರು ಇನ್ನಷ್ಟು ಸಿಡಿಮಿಡಿಗೊಳ್ಳುತ್ತಾರೆ. ವಾಸ್ತವ ಸ್ಥಿತಿ ಮಾತ್ರ ಅವರ ಪರವಾಗಿಲ್ಲ. ಹೋಗಲಿ, ಆ ವ್ಯತ್ಯಾಸವನ್ನು ಹೊಸದಾಗಿ ವೃತ್ತಿಗೆ ಬರುವ ಹುಡುಗ, ಹುಡುಗಿಯರಾದರೂ ಅರ್ಥ ಮಾಡಿಕೊಳ್ಳಬೇಕು. ಅರ್ಥ ಮಾಡಿಕೊಂಡಾರು ಎಂಬುದು ನನ್ನ ಆಸೆ. ಏಕೆಂದರೆ ಭವಿಷ್ಯ ಅವರಿಗೆ ಸೇರಿದ್ದು. ನಾವು ತೆರೆಯ ಅಂಚಿಗೆ ಸರಿಯಲು ಸಿದ್ಧರಾಗಿ ನಿಂತಿದ್ದೇವೆ. ಪತ್ರಿಕೋದ್ಯಮದ ಭವಿಷ್ಯ ಕಾಪಾಡುವ ಹೊಣೆಯನ್ನು ದೇವರಿಗೆ ಬಿಡುವುದು ತೀರಾ ಅನ್ಯಾಯ!

■

# ರಾಜಕಾರಣಿಗಳು ಇಲ್ಲೂ ಅಷ್ಟೇ ಅಲ್ಲೂ ಅಷ್ಟೇ!

ಅಲ್ಲಿಯೂ ಗಣಿಗಾರಿಕೆಯದೇ ದೂಳು. ಕಾಂಗ್ರೆಸ್ಸಿನ ಪಾದಯಾತ್ರೆಯಿಂದ ಎದ್ದ ದೂಳು ಮತ್ತು ಅದಕ್ಕೆ ಪ್ರತಿಯಾಗಿ ರೆಡ್ಡಿ ಸೋದರರು ಶ್ರೀರಾಮುಲು ಅವರನ್ನು ಮುಂದೆ ಇಟ್ಟುಕೊಂಡು ಎಬ್ಬಿಸಿದ ಸ್ವಾಭಿಮಾನ ಯಾತ್ರೆಯ ದೂಳಿನಿಂದ ತಪ್ಪಿಸಿ ಕೊಂಡು ದಕ್ಷಿಣ ಆಫ್ರಿಕಾ ದೇಶದ ಪ್ರವಾಸೋದ್ಯಮ ಇಲಾಖೆಯ ಆಹ್ವಾನ ಇಟ್ಟುಕೊಂಡು ಆ ದೇಶಕ್ಕೆ ಹೋದರೆ ಅಲ್ಲಿಯೂ ಅದೇ ದೂಳು. ಅದೇ ವಿವಾದ. ಎಲ್ಲ ಅಧಿಕಾರಸ್ಥರೂ ಒಂದೇ ರೀತಿ ವರ್ತಿಸುತ್ತಾರೆ ಎನಿಸುತ್ತದೆ. ಇಲ್ಲಿಯೂ ಅಧಿಕಾರಸ್ಥರೇ ಗಣಿಗಾರಿಕೆಯಲ್ಲಿ ತೊಡಗಿದ್ದರೆ ಅಲ್ಲಿಯೂ ಅದೇ ಕಥೆ. ಅಲ್ಲಿನ ಅಧ್ಯಕ್ಷ ಜೇಕಬ್ ಜೂಮಾ ಅವರ ಸೋದರನ ಮಗ ಖುಲುಬುಸೆ ಜೂಮಾ ಮತ್ತು ನೆಲ್ಸನ್ ಮಂಡೇಲಾ ಅವರ ಮೊಮ್ಮಗ ಝೂಂಡ್ವಾ ಮಂಡೇಲಾ ಅವರು ತಮ್ಮ ಒಡೆತನದ ಚಿನ್ನದ ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಎಷ್ಟೋ ತಿಂಗಳಿಂದ ಸಂಬಳವನ್ನೇ ಕೊಟ್ಟಿಲ್ಲ. ಆ ಕಾರ್ಮಿಕರು ಅತ್ತ ಹೊಟ್ಟೆಗೆ ಹಿಟ್ಟಿಲ್ಲದೆ ನರಳುತ್ತಿದ್ದಾಗ ಇತ್ತ ಖುಲುಬುಸೆ ಜೂಮಾ 70,000 ರ್‍ಯಾಂಡ್ (ಒಂದು ರ್‍ಯಾಂಡ್–ಆರು ರೂಪಾಯಿ)

ಖರ್ಚು ಮಾಡಿ ಪಂಚತಾರಾ ಹೋಟೆಲ್ ಒಂದರಲ್ಲಿ ಪಾರ್ಟಿ ಕೊಟ್ಟಿದ್ದರು. 'ಅದೇ ಹಣವನ್ನು ನಮ್ಮ ವೇತನ ಪಾವತಿಗೆ ಬಳಸಿದ್ದರೆ ನಾವು ಒಂದು ಹೊತ್ತು ಊಟ ಮಾಡುತ್ತಿದ್ದೆವು' ಎಂಬ ಕಾರ್ಮಿಕರ ಅಳಲನ್ನು ಡುಮ್ಮ ಹೊಟ್ಟೆಯ ಜೂಮಾ ಅವರ ಚಿತ್ರ ಸಮೇತ ಅಲ್ಲಿನ ಪತ್ರಿಕೆಗಳು ಪ್ರಕಟಿಸಿದ್ದುವು. ಅದಕ್ಕೆ 'ಫ್ಯಾಟ್ ಕ್ಯಾಟ್ ಜೂಮಾ ಅಂಡ್ ಸ್ಟಾರ್ವಿಂಗ್ ಮೈನ್ ವರ್ಕರ್ಸ್' ಎಂಬ ಶೀರ್ಷಿಕೆಯನ್ನೂ ಕೊಟ್ಟಿದ್ದುವು.

ಗಣಿಗಾರಿಕೆ ಮಾಡುವ ಯಾವ ಅನುಭವವೂ ಇಲ್ಲದ ಈ ಇಬ್ಬರು ಕೇವಲ ತಮ್ಮ ಅಧಿಕಾರದ ಸಂಪರ್ಕದಿಂದಾಗಿ ಚಿನ್ನದ ಗಣಿಯೊಂದನ್ನು ಹರಾಜಿನಲ್ಲಿ ಕೊಂಡುಕೊಂಡಿದ್ದರು. ಅಥವಾ ಅವರ ಬಿಡ್ ಅನ್ನು ಅಂಗೀಕರಿಸಲಾಗಿತ್ತು. ಬಿಡ್ ಅಂಗೀಕಾರ ಆಗುವಾಗ ಈ ಇಬ್ಬರು ಯಾವುದೇ ಹಣಕಾಸಿನ ಗ್ಯಾರಂಟಿ ಕೊಟ್ಟಿರಲಿಲ್ಲ. ಅನುಭವ ಮತ್ತು ಗ್ಯಾರಂಟಿ ಇಲ್ಲದೆ ಹರಾಜಿನಲ್ಲಿ ಗಣಿ ಕೊಂಡುಕೊಂಡುದು ಆಗಲೂ ದೊಡ್ಡ ಸುದ್ದಿಯಾಗಿತ್ತು. 'ಅಧಿಕಾರ ಇದೆಯಲ್ಲ ಏನಾದರೂ ಮಾಡಬಹುದು' ಎಂದು ಜನ ಗೊಣಗಿಕೊಂಡು ಸುಮ್ಮನಾಗಿದ್ದರು. ಇದೆಲ್ಲ ಇಷ್ಟಕ್ಕೇ ನಿಂತಿಲ್ಲ. ದಕ್ಷಿಣ ಆಫ್ರಿಕಾದ ಮೂಲ ನಿವಾಸಿಗಳಾದ ಕಪ್ಪು ಜನರನ್ನು 'ಸಶಕ್ತ' ಗೊಳಿಸಲು ಗಣಿಗಾರಿಕೆ ಮಾಡಬೇಕಿದೆ ಎಂದು ತಮ್ಮ ಕಪ್ಪು ವ್ಯವಹಾರಗಳಿಗೆ ಬಿಳಿ ಬಣ್ಣ ಬಳಿಯುವ ಕೆಲಸವನ್ನೂ ಅಲ್ಲಿನ ಉದ್ಯಮಿಗಳು ಮಾಡುತ್ತಿದ್ದಾರೆ. ಫಲಾನುಭವಿ ಗಳು ಯಾರು ಎಂದು ಇದುವರೆಗೆ ಯಾರಿಗೂ ಗೊತ್ತಿಲ್ಲ. ಮಿತ್ತಲ್ ಅವರ ಆರ್ಸೆಲರ್ ಕಂಪೆನಿ ಜತೆಗೆ ಸೇರಿಕೊಂಡು ಕಪ್ಪು ಜನರ ಸಶಕ್ತೀಕರಣ ಉದ್ದೇಶದ ಗಣಿಗಾರಿಕೆ ಕಂಪೆನಿಯಲ್ಲಿ ಅಧ್ಯಕ್ಷ ಜೂಮಾ ಅವರ ಮಗ ಡುಡುಝಾನೆ (28) ಒಂಬತ್ತು ಶತಕೋಟಿ ಡಾಲರ್‌ನಷ್ಟು ಷೇರು ಹೊಂದಿದ್ದಾರೆ. ಇನ್ನೂ ಗುರುತಿಸ ಬೇಕಾದ ಫಲಾನುಭವಿಗಳ ಹೆಸರಿನಲ್ಲಿ ಗಣಿ ಲೂಟಿ ಮಾಡುವುದು 'ಕ್ರಿಮಿನಲ್ ಕೆಲಸ' ಎಂದು ವಿರೋಧ ಪಕ್ಷಗಳು ಬೊಬ್ಬೆ ಇಡುತ್ತಿವೆ.

ವಿರೋಧ ಪಕ್ಷಗಳ ಬೊಬ್ಬೆ ಆಡಳಿತ ಪಕ್ಷಗಳ ಕಿವಿಯ ಮೇಲೆ ಬೀಳದಷ್ಟು ಕ್ಷೀಣವಾಗಿದೆ. ಏಕೆಂದರೆ ಅವರಿಗೆ ಸಂಖ್ಯಾಬಲವೇ ಇಲ್ಲ. ಜನರು ಜೇಕಬ್ ಜೂಮಾ ಅವರ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (ಎ.ಎನ್.ಸಿ.) ಪಕ್ಷಕ್ಕೆ ಭರ್ಜರಿ ಬಹುಮತ ಕೊಟ್ಟು ಬಿಟ್ಟಿದ್ದಾರೆ. ವಿರೋಧಿ ಸ್ಥಾನದಲ್ಲಿ ಡೆಮಾಕ್ರಟಿಕ್ ಅಲಯನ್ಸ್ ಮತ್ತು ಇಂಡಿಪೆಂಡೆಂಟ್ ಡೆಮಾಕ್ರಾಟ್ಸ್ ಪಕ್ಷಗಳು ನಾವು ಅಲ್ಲಿ ಇರುವಾಗಲೇ ವಿಲೀನ ಗೊಂಡವು. ವರ್ಣಭೇದ ನೀತಿ ಕೊನೆಗೊಂಡು 1994ರಲ್ಲಿ ಚುನಾವಣಾ ಆದ ಲಾಗಾಯ್ತಿನಿಂದ ಅಲ್ಲಿ ವಿರೋಧ ಪಕ್ಷಗಳಿಗೆ ಧ್ವನಿಯೇ ಇಲ್ಲದಂತಾಗಿದೆ. ವರ್ಣಭೇದ ನೀತಿ ಕೊನೆಗೊಳಿಸಿದ ಎಎನ್‌ಸಿ ಪಕ್ಷವನ್ನು ಎದುರಿಸುವುದು ಅವುಗಳಿಗೆ ಅಷ್ಟು ಸುಲಭವಿರಲಿಲ್ಲ. ಸ್ವಾತಂತ್ರ್ಯ ಬಂದ ಅನೇಕ ವರ್ಷಗಳವರೆಗೆ ಭಾರತದಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸುವುದು ವಿರೋಧ ಪಕ್ಷಗಳಿಗೆ ಎಷ್ಟು ಕಷ್ಟವಿತ್ತೋ ಅಲ್ಲಿಯೂ ಅಷ್ಟೇ ಕಷ್ಟವಿದೆ.

ಆದರೆ, ಕೇವಲ 16 ವರ್ಷಗಳಲ್ಲಿ ಜನರಿಗೆ ಭ್ರಮನಿರಸನ ಆಗತೊಡಗಿದೆ. ಕೇಪ್‌ಟೌನ್ ಪಟ್ಟಣದಲ್ಲಿ ಮೂರು ದಿನಗಳ ಕಾಲ ನಮ್ಮನ್ನು ಪ್ರವಾಸ ಮಾಡಿಸಿದ

ವಾಹನ ಚಾಲಕ ಮ್ಯಾನಿ ಭಾರತೀಯ ಮೂಲದವರು. ಅವರು ಅಲ್ಲಿಯೇ ಹುಟ್ಟಿ ಬೆಳೆದವರು. ಅವರಿಗೆ ಈಗ 63 ವಯಸ್ಸು. ವರ್ಣಭೇದ ನೀತಿಯ ಕಷ್ಟಕಾಲವನ್ನು ಅವರೂ ಅನುಭವಿಸಿದವರು. ಆದರೆ, 'ಅವರು ಆ ಕಾಲವೇ ಒಳ್ಳೆಯದಿತ್ತು' ಎಂದು ಹೇಳಿ ಅಚ್ಚರಿ ಮೂಡಿಸಿದರು. 'ಈಗ ನೋಡಿ ಸಂಜೆ 6 ಗಂಟೆ ನಂತರ ಅಂಗಡಿ ಮುಂಗಟ್ಟು ತೆರೆದು ವ್ಯಾಪಾರ ಮಾಡುವಂತಿಲ್ಲ. ನೀವೂ ತಿರುಗಲೆಂದು ಸಂಜೆಯಾದ ಮೇಲೆ ಹೋಗಬೇಡಿ. ಭಾರತದಂತೆ ಬೇಕಾದ ಹೊತ್ತಿನಲ್ಲಿ ತಿರುಗಲು ಇಲ್ಲಿ ಆಗದು. ಕರಿಯರು ಬಂದು ನಿಮ್ಮನ್ನು ಲೂಟಿ ಮಾಡಿಕೊಂಡು ಹೋಗುತ್ತಾರೆ. ಜೀವ ಸಹಿತ ಬಿಟ್ಟರೆ ನಿಮ್ಮ ಪುಣ್ಯ' ಎಂದು ಎಚ್ಚರಿಸಿದರು. 'ಮನೆಯಲ್ಲಿ ಕುಳಿತರೂ ನಾವು ಜೀವ ಕೈಯಲ್ಲಿಯೇ ಹಿಡಿದುಕೊಂಡು ಇರಬೇಕು. ರಾತ್ರಿ ವೇಳೆಯಲ್ಲಿ ಕರಿಯ ಧಡಿಯರು ಬಂದು ಬಾಗಿಲು ತಟ್ಟುತ್ತಾರೆ. ಕಾರಿನ ಕೀಲಿಕೈ ಕೊಡು ಎನ್ನುತ್ತಾರೆ. ಕೊಡದಿದ್ದರೆ ಗುಂಡು ಹಾಕಿ ಸಾಯಿಸುತ್ತಾರೆ. ಕೊಟ್ಟರೆ ನನ್ನ ಕಾರಿನ ಜತೆಗೆ ಮಾಯವಾಗುತ್ತಾರೆ. ನಾವು ಯಾರಿಗೂ ಏನೂ ಹೇಳುವಂತಿಲ್ಲ'. ಮುಂಬೈನಿಂದ ಜೊಹಾನ್ಸ್ ಬರ್ಗ್‌ಗೆ ತೆರಳುತ್ತಿದ್ದಾಗ ವಿಮಾನದಲ್ಲಿ ನನ್ನ ಪಕ್ಕ ಕುಳಿತಿದ್ದ ಅಂಟೋನ್ ಕೂಡ ಇದೇ ಮಾತು ಹೇಳಿದ್ದರು. 'ಜೋಹಾನ್ಸ್‌ಬರ್ಗ್ ಕೆಟ್ಟ ಊರು. ಸಂಜೆ ಎಲ್ಲಿಯೂ ಅಡ್ಡಾಡಲು ಹೋಗ ಬೇಡಿ. ಲೂಟಿ ಖಂಡಿತ'. ಆದರೆ, ಅವರು 'ಜಿಂಬಾಬ್ವೆ ಮತ್ತು ನೈಜೀರಿಯಾ ದಿಂದ ವಲಸೆ ಬಂದವರು ಈ ಕೆಲಸ ಮಾಡುತ್ತಾರೆ' ಎಂದು ಹೇಳಿದ್ದರು. 'ಅವರ ಹೆಸರಿನಲ್ಲಿ ಇಲ್ಲಿನವರೂ ಅದೇ ಕೆಲಸ ಮಾಡುತ್ತಾರೆ' ಎಂದು ಮ್ಯಾನಿ ನೊಂದು ಹೇಳಿದರು.

ಕಪ್ಪು ಜನರನ್ನು ಸಶಕ್ತಗೊಳಿಸುವ ಕೆಲಸ ಸಾಕಷ್ಟು ಆಗಿದೆ. ಐದು ಹುದ್ದೆಗಳು ಖಾಲಿ ಇದ್ದರೆ ಮೂರು ಹುದ್ದೆಗಳು ಅವರಿಗೇ ಹೋಗುತ್ತವೆ. ಒಂದು ಹುದ್ದೆ ಅಲ್ಲಿನ ಭಾರತೀಯರಿಗೆ ಸಿಗುತ್ತದೆ. ಉಳಿದ ಒಂದು ಹುದ್ದೆ ಮಾತ್ರ ಬಿಳಿಯರಿಗೆ ದೊರೆಯುತ್ತದೆ. ಹೀಗಾಗಿ ಹೋಟೆಲ್‌ನಲ್ಲಿ ಎಲ್ಲ ಕಡೆ ಕರಿಯ ಕೆಲಸದವರು ಕಾಣುತ್ತಾರೆ. ವಿಮಾನದಲ್ಲಿ ಗಗನಸಖಿಯರೂ ಅವರೇ ಇದ್ದರು. ಅವರೆಲ್ಲ ಒಳ್ಳೆಯವರು ಅನಿಸುತ್ತದೆ. ತುಂಬ ವಿನಯದಿಂದ ಮಾತನಾಡುತ್ತಾರೆ. ಅವರದು ಒಳ್ಳೆಯ ಇಂಗ್ಲಿಷ್, ಈ ಮೀಸಲಾತಿಯ ಸೌಲಭ್ಯದಿಂದಾಗಿದೆಯೇ ಬರೀ ಬಿ.ಎ. ಪಾಸು ಮಾಡಿರುವ ಮಹಿಳೆಯೊಬ್ಬರು ದಕ್ಷಿಣ ಆಫ್ರಿಕಾ ವಿಮಾನಯಾನ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಾಹಕಿಯಾಗಿ ನೇಮಕವಾಗಿದ್ದಾರೆ.

ಭಾರತದಲ್ಲಿ ಮೀಸಲಾತಿ ಹುಟ್ಟಿಸಿದ ಹೊಟ್ಟೆ ಉರಿಯನ್ನು ಅಲ್ಲಿನ ಮೀಸಲಾತಿಯೂ ಹುಟ್ಟು ಹಾಕಿದೆ. 'ಅನರ್ಹರು' ಅಧಿಕಾರ ಸ್ಥಾನ ಹಿಡಿಯುತ್ತಿದ್ದಾರೆ ಎಂಬ ಕೂಗು ಕೇಳಿ ಬರುತ್ತಿದೆ. ದುರಂತ ಎಂದರೆ ಅಲ್ಲಿ ಇಡೀ ಶಿಕ್ಷಣ ವ್ಯವಸ್ಥೆಯೇ ಕುಸಿದು ಹೋಗಿದೆ. ಮ್ಯಾಟ್ರಿಕ್ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಸಂಖ್ಯೆ ದಿನದಿಂದ ದಿನಕ್ಕೆ ಕಮ್ಮಿ ಆಗುತ್ತಿದೆ. ಅಲ್ಲಿಯೂ ಎಲ್ಲರಿಗೂ ಗಣಿತ ಕಬ್ಬಿಣದ ಕಡಲೆ ಎನಿಸುತ್ತಿದೆ. ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತ 5.51 ಲಕ್ಷ ವಿದ್ಯಾರ್ಥಿಗಳಲ್ಲಿ ಗಣಿತ ಪರೀಕ್ಷೆ ಬರೆದವರು ಕೇವಲ 2.90 ಲಕ್ಷ ಮಾತ್ರ. 85,356 ವಿದ್ಯಾರ್ಥಿಗಳು ಕೇವಲ ಶೇಕಡಾ 40 ರಷ್ಟು ಅಂಕಗಳಿಸಿ ಉತ್ತೀರ್ಣರಾದರು. 12ನೇ ತರಗತಿವರೆಗೆ ಓದುವ 1.12 ಕೋಟಿ ಮಕ್ಕಳಿಗೆ

ಕಲಿಸಲು ಕೇವಲ 3.86 ಲಕ್ಷ ಶಿಕ್ಷಕರು ಇದ್ದಾರೆ. ಅವರಿಗೆ ಕೆಲಸದ ಹೊರೆಯೂ ಜಾಸ್ತಿ. ಕಲಿಸುವ ಉಪಕರಣಗಳೂ ಕಡಿಮೆ. ವೇತನವಂತೂ ಕನಿಷ್ಠ. ಒಂದು ಕಡೆ ಅಧಿಕಾರಸ್ಥರಲ್ಲಿ ಯಾವ ದುಡಿಮೆಯ ಬಲವೂ ಇಲ್ಲದೆ ಹಣದ ಕ್ರೋಡೀಕರಣ ಆಗುತ್ತಿದ್ದರೆ ಇನ್ನೊಂದು ಕಡೆ ಸರ್ಕಾರಿ ಕರ್ಮಚಾರಿಗಳು ಕನಿಷ್ಠ ಜೀವನ ನಡೆಸಲಾಗದೆ ಹೈರಾಣಾಗಿದ್ದರೆ. ಅವರ ಸಿಟ್ಟು ಸ್ಫೋಟಗೊಂಡು ಎಲ್ಲ ಶಿಕ್ಷಕರು ನಾವು ಅಲ್ಲಿ ಇದ್ದಾಗಲೇ ಅನಿರ್ದಿಷ್ಟ ಮುಷ್ಕರ ಮಾಡಿದರು. ಅಲ್ಲಿನ ಒಬ್ಬ ಸಚಿವನ ತಿಂಗಳ ಸಂಬಳ 1.43 ಲಕ್ಷ ರ್‍ಯಾಂಡ್. ಅದೇ ಒಬ್ಬ ಶಿಕ್ಷಕನ ವೇತನ 13,000 ರ್‍ಯಾಂಡ್. ಅದರಲ್ಲಿ ತೆರಿಗೆ ಅದೂ ಇದೂ ಹೋಗಿ 4,000 ರ್‍ಯಾಂಡ್ ಮಾತ್ರ ಕೈಗೆ ಬರುತ್ತದೆ. ಅದರಲ್ಲಿ ತುಟ್ಟಿ ಜೀವನ ನಡೆಸುವುದು ಹೇಗೆ ಎಂಬುದು ಅವರ ಪ್ರಶ್ನೆ. ಭಾರತಕ್ಕೆ ನಾವು ಮರಳಿ ಬಂದ ದಿನವೇ ಇಲ್ಲಿಯೂ ಸಂಸದರ ವೇತನ ಗಗನಕ್ಕೆ ಏರಿತ್ತು. 'ಅದೂ ಸಾಲದು' ಎಂದು ಸಮಾಜವಾದಿ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದರು. ಇಲ್ಲಿನ ಶಿಕ್ಷಕರ ಸಂಬಳವೂ ಅಷ್ಟಕ್ಕಷ್ಟೇ. ಬಿಹಾರ, ಉತ್ತರ ಪ್ರದೇಶದ ಶೈಕ್ಷಣಿಕ ಸಾಧನೆಗೂ ದಕ್ಷಿಣ ಆಫ್ರಿಕಾದ ಸಾಧನೆಗೂ ಹೆಚ್ಚಿನ ವ್ಯತ್ಯಾಸವೇನೂ ಇರಲಾರದು.

ರಾಜಕಾರಣಿಗಳು ಎಲ್ಲ ಕಡೆಗೂ ಅಷ್ಟೇ. ಅವರು ಒಳ್ಳೆಯ ಮಾದರಿಯನ್ನು ಹಾಕಿಕೊಡುವುದಿಲ್ಲ. ಅಲ್ಲಿನ ಅಧ್ಯಕ್ಷ ಜೇಕಬ್ ಜೂಮಾ ಅವರಿಗೆ ಕಳೆದ ಶನಿವಾರ 21ನೇ ಮಗು ಹುಟ್ಟಿತು. ಅವರಿಗೆ ಎಷ್ಟು ಜನ ಅಧಿಕೃತ ಪತ್ನಿಯರು ಇದ್ದಾರೆ ಎಂಬ ಲೆಕ್ಕ ಅಲ್ಲಿನ ಪತ್ರಿಕೆಗಳಿಗೂ ಇಲ್ಲ! ಕೇಪ್‌ಟೌನ್‌ನ ಮೊಯೊ ಹೋಟೆಲ್‌ನಲ್ಲಿ ಮಾಧ್ಯಾಹ್ನ ಊಟ ಮಾಡುತ್ತಿದ್ದಾಗ ಮುಖದ ತುಂಬ ಬಣ್ಣ ಬಳಿದುಕೊಂಡ, ಮೈತುಂಬ ಚಿಕ್ಕ ಚಿಕ್ಕ ಮುತ್ತಿನ ಸರ ಹಾಕಿಕೊಂಡ ಯುವ ಕಲಾವಿದ ಇಬ್ಬರು ಯುವತಿಯರ ಜತೆಗೆ ನಮ್ಮ ಟೇಬಲ್ ಬಳಿ ಬಂದ. 'ಇವರು ಇಬ್ಬರೂ ನನ್ನ ಹೆಂಡತಿಯರು, ನಮಗೆ ಆರು ಮಂದಿ ಮಕ್ಕಳು' ಎಂದು ಪರಿಚಯಿಸಿಕೊಂಡು ನಮ್ಮ ಮುಂದೆ ಕುಣಿಯುತ್ತ ಅದ್ಭುತವಾಗಿ ಹಾಡತೊಡಗಿದ. ಅವನ ಜತೆಗೆ ಅವರೂ ಅಷ್ಟೇ ಚೆಂದವಾಗಿ ಹಾಡಿದರು. ಹಾಡು ಮುಗಿದ ಮೇಲೆ ಕೇಳಿದೆ: 'ಏನು ನೀವು ಎಷ್ಟು ಮಂದಿಯನ್ನು ಬೇಕಾದರೂ ಮದುವೆಯಾಗ ಬಹುದೇ? ಮಕ್ಕಳನ್ನು ಹೆರಬಹುದೇ' ಎಂದು. 'ಏಕಿಲ್ಲ? ನಮ್ಮ ಅಧ್ಯಕ್ಷರನ್ನು ನೋಡಿ. ಅವರಿಗೆ 21 ಮಕ್ಕಳು. ನನಗೆ ಬರೀ ಆರು. ಅವರಿಗೆ ಎಷ್ಟು ಪತ್ನಿಯರು ಎಂಬುದು ನಿನಗೆ ಗೊತ್ತೇ? ನನಗೆ ಇಬ್ಬರೇ! ನಮ್ಮ ದೇಶದಲ್ಲಿ ಬಯಲು ಜಾಗ ಬೇಕಾದಷ್ಟು ಇದೆ. ಅಲ್ಲೆಲ್ಲ ನನ್ನ ಮಕ್ಕಳಿಂದ ತುಂಬಿಸಬೇಕು ಎಂದು ಆಸೆ. ನಿನಗೆ ಆ ಅದೃಷ್ಟ ಇಲ್ಲ' ಎಂದು ಆತ ಕಣ್ಣು ಮಿಟುಕಿಸಿದ. ■

# ಉಪ ಚುನಾವಣೆ ಕಣದಲ್ಲಿ ಏನೇನು ಲೆಕ್ಕ?

ಹೊಸ್ತಿಲಲ್ಲಿ ಇರುವ ಉಪಚುನಾವಣೆ ರಾಜ್ಯದ ಮೂರೂ ಪ್ರಮುಖ ರಾಜಕೀಯ ಪಕ್ಷಗಳಿಗೆ ಒಂದು ಸತ್ವ ಪರೀಕ್ಷೆ. ಇದು ಸಾಮಾನ್ಯ ಸಂದರ್ಭದಲ್ಲಿ ಬಂದ ಚುನಾವಣೆಯಲ್ಲ. ರಾಜ್ಯದ ರಾಜಕೀಯ ಒಂದು ವಿಶಿಷ್ಟ ಘಟ್ಟದಲ್ಲಿ ಇದೆ. ಮೊನ್ನೆ ಮೊನ್ನೆ ವಿಧಾನ ಮಂಡಲ ಅಧಿವೇಶನದಲ್ಲಿ ನಡೆದ ಗಣಿ ಗದ್ದಲ, ಅದರ ನಂತರ ನಡೆದ ಕಾಂಗ್ರೆಸ್ಸಿನ ಪಾದಯಾತ್ರೆ, ಅದಕ್ಕೆ ಪ್ರತಿಯಾಗಿ ಆಡಳಿತ ಪಕ್ಷ ಹಮ್ಮಿಕೊಂಡ ಸಾಧನಾ ಸಮಾವೇಶಗಳು, ಬಳ್ಳಾರಿಯ ರೆಡ್ಡಿ ಸೋದರರು ನಡೆಸಿದ ಸ್ವಾಭಿಮಾನ ಯಾತ್ರೆ ಎಲ್ಲವೂ ಜನರ ಮನಸ್ಸಿನಲ್ಲಿ ಇನ್ನೂ ಹಸಿರಾಗಿವೆ. ಇಂಥ ಕಾಲಘಟ್ಟದಲ್ಲಿ ಗುಲ್ಬರ್ಗ ದಕ್ಷಿಣ ಹಾಗೂ ಕಡೂರು ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯುತ್ತಿದೆ. ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ಜೆ.ಡಿ (ಎಸ್)ಗಳು ತಮ್ಮೆಲ್ಲ ಪ್ರತಿಷ್ಠೆಯನ್ನು ಪಣಕ್ಕೆ ಇಟ್ಟು ಹೋರಾಟ ನಡೆಸುತ್ತಿವೆ. ರಾಜ್ಯ ರಾಜಕೀಯ ಮುಂದೆ ತೆಗೆದುಕೊಳ್ಳುವ ತಿರುವುಗಳಿಗೆ ಇದು ಒಂದು ದಿಕ್ಸೂಚಿ ಎಂದು ಎಲ್ಲ ರಾಜಕೀಯ ಪಕ್ಷಗಳು ಚುನಾವಣಾ ಭಾಷಣ ಮಾಡುತ್ತಿವೆ. ಬಿಜೆಪಿ ಸರ್ಕಾರ

ಪತನವೇ ಆಗುತ್ತದೆ ಎಂದು ಅತ್ತ ದೇಶಪಾಂಡೆ ಇತ್ತ ದೇವೇಗೌಡ ಭವಿಷ್ಯ ನುಡಿಯುತ್ತಿದ್ದಾರೆ! ಕೇವಲ ಎರಡು ಕ್ಷೇತ್ರಗಳ ಉಪ ಚುನಾವಣೆ ಅಂಥ ಒಂದು ತಿರುವು ನೀಡೀತು ಎಂದು ಒಪ್ಪುವುದು ಕಷ್ಟವಾದರೂ ಹಣಾಹಣಿ ನಂತರ ಬರುವ ಫಲಿತಾಂಶ ಸಾಕಷ್ಟು ಕುತೂಹಲ ಹುಟ್ಟಿಸಿರುವುದಂತೂ ನಿಜ.

ತೆರವಾಗಿರುವ ಗುಲ್ಬರ್ಗ ದಕ್ಷಿಣ ಕ್ಷೇತ್ರವನ್ನು ಬಿಜೆಪಿ ಪ್ರತಿನಿಧಿಸುತ್ತಿದ್ದರೆ ಕಡೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದಿದ್ದರು. ಎರಡೂ ಕ್ಷೇತ್ರಗಳ ಪ್ರತಿನಿಧಿಗಳ ಸಾವಿನ ನಂತರ ಚುನಾವಣೆ ನಡೆಯುತ್ತಿದೆ. ಸಾವಿನ ನಂತರ ನಡೆಯುವ ಚುನಾವಣೆಯಲ್ಲಿ ಅನುಕಂಪದ ಅಲೆಯದ್ದೇ ದೊಡ್ಡ ಪಾತ್ರ. ಆ ಅಲೆಯಲ್ಲಿಯೇ ತೇಲಬೇಕು ಎಂದು ಎಲ್ಲ ರಾಜಕೀಯ ಪಕ್ಷಗಳು ಲೆಕ್ಕ ಹಾಕುತ್ತವೆ. ಆದರೆ, ಬಿಜೆಪಿ ಭಿನ್ನವಾಗಿ ಯೋಚಿಸುತ್ತಿರುವಂತಿದೆ. ಗುಲ್ಬರ್ಗ ದಕ್ಷಿಣ ಕ್ಷೇತ್ರದಿಂದ ಗೆದ್ದಿದ್ದ ಚಂದ್ರಶೇಖರ ಪಾಟೀಲ ರೇವೂರ ಅವರ ಕುಟುಂಬದ ಸದಸ್ಯರಿಗೆ ಬಿಟ್ಟು ಈಗಾಗಲೇ ವಿಧಾನ ಪರಿಷತ್ತಿನ ಸದಸ್ಯರಾಗಿರುವ ಶಶಿಲ್ ನಮೋಶಿ ಅವರಿಗೆ ಅದು ಟಿಕೆಟ್ ನೀಡಿದೆ. ರೇವೂರ ಕುಟುಂಬಕ್ಕೆ ಟಿಕೆಟ್ ಕೊಡದೇ ಇರಲು ಏನು ಕಾರಣ ಎಂಬುದನ್ನು ಬಿಜೆಪಿ ಇದುವರೆಗೆ ಸ್ಪಷ್ಟಪಡಿಸಿಲ್ಲ. ಆದರೆ, ಚಂದ್ರಶೇಖರ ಪಾಟೀಲರು ಅನಂತಕುಮಾರ್ ಅವರಿಗೆ ಬೇಕಾದವರು ಎಂಬ ಒಂದೇ ಕಾರಣದಿಂದ ಯಡಿಯೂರಪ್ಪನವರು ಅವರ ಕುಟುಂಬಕ್ಕೆ ಟಿಕೆಟ್ ನಿರಾಕರಿಸಿದರು ಎಂದು ಬಿಜೆಪಿಯವರೇ ಈಗ ಆಡಿಕೊಳ್ಳುತ್ತಿದ್ದಾರೆ. ಆ ಕ್ಷೇತ್ರದಲ್ಲಿ ಅಭ್ಯರ್ಥಿಯೇ ಇಲ್ಲದಿದ್ದ ಜೆ.ಡಿ (ಎಸ್)ಗೆ ಇದಕ್ಕಿಂತ ಹೆಚ್ಚಿನ 'ಸುಸಂಧಿ' ಮತ್ತೊಂದು ಇರಲು ಸಾಧ್ಯವಿರಲಿಲ್ಲ. ಕುಮಾರಸ್ವಾಮಿ ಹೇಳಿದ ಹಾಗೆ, ಯಡಿಯೂರಪ್ಪನವರು ರೇವೂರರ ಕುಟುಂಬವನ್ನು ತಮ್ಮ ಉಡಿಯಲ್ಲಿ ಹಾಕಿಬಿಟ್ಟರು. ಸಿಕ್ಕ ಸುಸಂಧಿಯನ್ನು ಬಿಡಬಾರದು ಎಂದು ಈಗ ಕುಮಾರಸ್ವಾಮಿಯವರು ರೇವೂರರ ಪತ್ನಿ ಅರುಣಾ ಅವರಿಗೆ ಟಿಕೆಟ್ ಕೊಟ್ಟುದಲ್ಲದೇ ಗುಲ್ಬರ್ಗ ಮಹಾನಗರಪಾಲಿಕೆಯ ಬಿಜೆಪಿ ಮೇಯರ್ ಮತ್ತು 21 ಮಂದಿ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಪಾಲಿಕೆಯ ಮೇಲೆ ತೆನೆ ಹೊತ್ತ ಮಹಿಳೆಯ ಧ್ವಜವನ್ನು ಹಾರಿಸಿದ್ದಾರೆ. ಚಂದ್ರಶೇಖರ ಪಾಟೀಲರು ನಿಧನರಾದ ದಿನ ಯಡಿಯೂರಪ್ಪ ಗುಲ್ಬರ್ಗಕ್ಕೆ ಬರುವುದಕ್ಕಿಂತ ಮುಂಚೆಯೇ ಕುಮಾರಸ್ವಾಮಿ ಯವರು ಹೆಲಿಕಾಪ್ಟರ್‌ನಲ್ಲಿ ಬಂದು ಅಂತ್ಯ ಸಂಸ್ಕಾರ ಆಗುವವರೆಗೆ ಅಲ್ಲಿಯೇ ಇದ್ದರು. ಟ್ವೆಂಟಿ-ಟ್ವೆಂಟಿ ತಿಂಗಳ ಸರ್ಕಾರದ ಅವಧಿಯಲ್ಲಿ ಪಾಟೀಲರು ತಮಗೆ ನಿಕಟವಾಗಿ ಇದ್ದುದರ ಕೃತಜ್ಞತೆ ತೀರಿಸಲು ಕುಮಾರಸ್ವಾಮಿ ಅಲ್ಲಿಗೆ ಬಂದಿದ್ದರೇ ಅಥವಾ ಸಾವಿನ ಮನೆಯಲ್ಲಿಯೇ ಮುಂದಿನ ಚುನಾವಣೆಯ ಲೆಕ್ಕವೂ ನಡೆಯುತ್ತಿತ್ತೇ ಹೇಳುವುದು ಕಷ್ಟ. ಈ ಅನುಕಂಪದ ಅಲೆಯಲ್ಲಿಯೇ ಅವರು ಮದ್ದೂರಿನಲ್ಲಿ ಕಲ್ಪನಾ ಸಿದ್ದರಾಜು ಅವರನ್ನು ಗೆಲ್ಲಿಸಿದ್ದರು.

ಈ ಕ್ಷೇತ್ರವನ್ನು ಉಳಿಸಿಕೊಳ್ಳಲು ಬಿಜೆಪಿ ಒಂದು ಕಡೆ ಹರಸಾಹಸ ಮಾಡುತ್ತಿದ್ದರೆ ಇನ್ನೊಂದು ಕಡೆ ಅದನ್ನು ಕಸಿದುಕೊಳ್ಳಲು ಜೆ.ಡಿ (ಎಸ್) ಎಲ್ಲ ಕಸರತ್ತು ಮಾಡುತ್ತಿದೆ. ಇಬ್ಬರ ಜಗಳದಲ್ಲಿ ಮೂರನೆಯವರಿಗೇ ಲಾಭ ಎಂದು ಕಾಂಗ್ರೆಸ್ ಲೆಕ್ಕ ಹಾಕುತ್ತಿದೆ.

ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಅವರ ಮಗ ಡಾ. ಅಜಯಸಿಂಗ್ ಅವರನ್ನು ಕಣಕ್ಕೆ ಇಳಿಸುವ ಮೂಲಕ ಕಾಂಗ್ರೆಸ್ ಪಕ್ಷ ಮತ್ತು ಅದರ ಎಲ್ಲ ಧುರೀಣರು ತಮ್ಮ ಪ್ರತಿಷ್ಠೆಯನ್ನು ಪಣಕ್ಕೆ ಇಟ್ಟಿದ್ದಾರೆ. 2009ರ ಲೋಕಸಭೆ ಚುನಾವಣೆಯಲ್ಲಿ ಗೆದ್ದು ತಾವು ತೆರವು ಮಾಡಿದ್ದ ಚಿತ್ತಾಪುರ ಕ್ಷೇತ್ರದಲ್ಲಿ ತಮ್ಮ ಮಗ ಸೋತರೂ ಕೇಂದ್ರ ಸಚಿವ ಮಲ್ಲಿಕಾರ್ಜುನ ಖರ್ಗೆಯವರು ಈಗ ಗೆಳೆಯನ ಮಗನ ಗೆಲುವಿಗೆ ಹೆಣಗುತ್ತಿದ್ದಾರೆ. ಕ್ಷೇತ್ರದಲ್ಲಿ ಇರುವ 30,000 ಬ್ರಾಹ್ಮಣರ ವೋಟುಗಳನ್ನು ಕಾಂಗ್ರೆಸ್ಸಿಗೆ ದೊರಕಿಸಲು ಕೆಪಿಸಿಸಿ ಅಧ್ಯಕ್ಷ ಆರ್.ವಿ. ದೇಶಪಾಂಡೆ ಪ್ರಯತ್ನಿಸುತ್ತಿದ್ದಾರೆ. ಪಾದಯಾತ್ರೆಯಲ್ಲಿ ನಾಯಕನಾಗಿ ಹೊರಹೊಮ್ಮಿದ ಸಿದ್ದರಾಮಯ್ಯ ಅವರಿಗೂ ಈ ಚುನಾವಣೆ ಒಂದು ಸವಾಲು.

ಆದರೆ, ಅವರ ನಾಯಕತ್ವದ ಪರೀಕ್ಷೆಯಾಗುವುದು ಗುಲ್ಬರ್ಗ ದಕ್ಷಿಣ ಕ್ಷೇತ್ರಕ್ಕಿಂತ ಚಿಕ್ಕಮಗಳೂರು ಜಿಲ್ಲೆ ಕಡೂರಿನಲ್ಲಿ. ಕಳೆದ ನಾಲ್ಕು ಚುನಾವಣೆಗಳಲ್ಲಿ ಕುರುಬ ಸಮುದಾಯದ ಕೆ.ಎಂ. ಕೃಷ್ಣಮೂರ್ತಿಯವರೇ ಅಲ್ಲಿ ಗೆದ್ದಿದ್ದರು. ಈಗ ಅವರ ತಮ್ಮ ಕೆಂಪರಾಜು ಅವರಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದೆ. ಸಿದ್ದರಾಮಯ್ಯ ಅವರಿಗೆ ಕಡೂರಿನಲ್ಲಿ ಕಾಂಗ್ರೆಸ್ ಗೆಲ್ಲಲೇಬೇಕು. ಆದರೆ, ಜೆ.ಡಿ.(ಎಸ್)ನ ವೈ.ಎಸ್.ವಿ. ದತ್ತ ಬಲವಾದ ಸ್ಪರ್ಧೆ ಒಡ್ಡಿದ್ದಾರೆ. ಅವರ ಹಿಂದೆ ದೇವೇಗೌಡರಿದ್ದಾರೆ. ಸಿದ್ದರಾಮಯ್ಯ ಅವರು ಒಂದು ಕಡೆ ಜೆ.ಡಿ.(ಎಸ್) ಇನ್ನೊಂದು ಕಡೆ ಬಿಜೆಪಿಯನ್ನು ಎದುರಿಸಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲುವಿನ ಸೋಪಾನದ ಮೇಲೆ ಏರಿಸಬೇಕು.

ಈ ಹಿಂದೆ 13 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಎರಡು ಹಂತದ ಚುನಾವಣೆಯಲ್ಲಿ ಬಿಜೆಪಿ ಏಳು ಕ್ಷೇತ್ರಗಳಲ್ಲಿ ಗೆದ್ದು ಯಡಿಯೂರಪ್ಪ ಮೀಸೆ ತಿರುವಿದ್ದರು. ಆ ಎರಡೂ ಹಂತದ ಚುನಾವಣೆಯಲ್ಲಿ ಬಿಜೆಪಿ ಒಗ್ಗಟ್ಟಿನಿಂದ ಇತ್ತು. ಈಗ ಅದು ಒಡೆದ ಮನೆ. ಹಗರಣಗಳು ಸಚಿವರ ಕೊರಳಿಗೆ ಕುಣಿಕೆ ಬಿಗಿಯುತ್ತಿವೆ. ಒಂದು ಕರೆ ಮುಖ್ಯಮಂತ್ರಿಯ ಕಠಿಣ ನಿರ್ಧಾರದಿಂದ ಇನ್ನೊಂದು ಕಡೆ ವಿರೋಧ ಪಕ್ಷಗಳ ದಾಳಿಯಿಂದ ತತ್ತರಿಸಿ ಹೋಗಿರುವ ರೆಡ್ಡಿ ಸೋದರರು ಒಳಗೊಳಗೇ ಕತ್ತಿ ಮಸಿಯುತ್ತಿದ್ದರೆ ಈಶ್ವರಪ್ಪ, ಅನಂತಕುಮಾರ್ ಅವರ ಮಹತ್ವಾಕಾಂಕ್ಷೆ ಹೆಡೆಯೆತ್ತ ತೊಡಗಿದೆ. ಇದ್ದಕಿದ್ದಂತೆ ಕೆಲವರಿಗೆ ಉಪಮುಖ್ಯಮಂತ್ರಿ ಹುದ್ದೆಯ ಕನಸು ಬೀಳತೊಡಗಿದೆ! ಇಂಥವೆಲ್ಲ ನಾಯಕತ್ವ ದುರ್ಬಲವಾದಾಗಲೇ ಆಗುವ ಸಂಗತಿಗಳು, ಅದಕ್ಕೆ ತಕ್ಕಂತೆ ತಮಗೆ ಬೇಕಾದ ಇಬ್ಬರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವಷ್ಟೂ ಸ್ವಾತಂತ್ರ್ಯವಿಲ್ಲದ ಯಡಿಯೂರಪ್ಪ ಚಡಪಡಿಸುತ್ತಿದ್ದಾರೆ. ಈ ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋತರೆ ಅದು ನಾಯಕತ್ವದ ಸೋಲು ಎಂಬ ಅರ್ಥ ಬರುತ್ತದೆ. ಗುಲ್ಬರ್ಗ ದಕ್ಷಿಣ ಕ್ಷೇತ್ರವನ್ನಾದರೂ ಬಿಜೆಪಿ ಉಳಿಸಿಕೊಳ್ಳಬೇಕು. ಚಂದ್ರಶೇಖರ ಪಾಟೀಲ ರೇವೂರರ ಪತ್ನಿಗೋ ಮಗನಿಗೋ ಟಿಕೆಟ್ ಕೊಟ್ಟು ಬಿಟ್ಟಿದ್ದರೆ ಬಿಜೆಪಿಗೆ ಕಷ್ಟ ಆಗುತ್ತಿರಲಿಲ್ಲವೇನೋ? ಯಡಿಯೂರಪ್ಪ ಹಟ ಮಾಡಿ ಟಿಕೆಟ್ ತಪ್ಪಿಸಿದ್ದಾರೆ. ಅಲ್ಲಿ ಬಿಜೆಪಿ ಸೋತರೆ 'ಯಡಿಯೂರಪ್ಪನವರ ಹಟದಿಂದಲೇ ಹೀಗೆ ಆಯಿತು' ಎಂದು ಅನಂತಕುಮಾರ್ ಖಾಸಗಿಯಾಗಿಯಾದರೂ ಹೇಳದೇ ಇರುತ್ತಾರೆಯೇ?

ಯಡಿಯೂರಪ್ಪನವರನ್ನು ಹಣಿಯಬೇಕು ಎಂದು ಬಯಸುವ ಪಕ್ಷದ ಒಳಗಿನ ಗುಂಪುಗಳು ಸುಮ್ಮನೆ ಇರುತ್ತವೆಯೇ? ಗೂಳಿ ಬಿದ್ದರೆ ಆಳಿಗೊಂದು ಕಲ್ಲು ಹಾಕುವವರು ಕಡಿಮೆಯೇ?

ಬಿಜೆಪಿ ಹೀಗೆ ಆಂತರಿಕವಾಗಿ ಕುದಿಯುತ್ತಿರುವಾಗಲೇ ಅತ್ತ ಕಾಂಗ್ರೆಸ್ ಮತ್ತು ಜೆ.ಡಿ (ಎಸ್) ಬೇರೆಯದೇ ಲೆಕ್ಕ ಹಾಕಿದಂತಿದೆ. ದೇವೇಗೌಡರಿಗೆ ನಿಕಟರಾಗಿರುವ ಧರ್ಮಸಿಂಗ್, 'ಗುಲ್ಬರ್ಗ ದಕ್ಷಿಣ ಕ್ಷೇತ್ರವನ್ನು ನಮಗೆ ಬಿಟ್ಟುಕೊಡಿ, ಕಡೂರು ಕ್ಷೇತ್ರವನ್ನು ನಿಮಗೆ ಬಿಟ್ಟುಕೊಡುತ್ತೇವೆ' ಎಂದು ಮಾತನಾಡಿದ್ದಾರೆ ಎಂಬ ಗಾಳಿ ಸುದ್ದಿ ಹಬ್ಬಿದೆ. ಅದು ನಿಜವೇ ಆದರೆ ಸ್ಪರ್ಧೆಯಲ್ಲಿ ಕೊಂಚ ಹಿಂದೆ ಬಿದ್ದಂತೆ ಕಾಣುತ್ತಿರುವ ಬಿಜೆಪಿಗೆ ಇನ್ನೂ ಕಷ್ಟವಾಗಬಹುದು; ಎರಡೂ ಕ್ಷೇತ್ರಗಳಲ್ಲಿ ಅನುಕಂಪದ ಅಲೆಯನ್ನು ಅವಲಂಬಿಸಿರುವ ಇಬ್ಬರು ಅಭ್ಯರ್ಥಿಗಳು ರಾಜಕಾರಣಿಗಳು ಇಷ್ಟು ಧೂರ್ತರು ಇರಬಹುದೇ ಎಂದು ಬೆಚ್ಚಿ ಬೀಳಬಹುದು! ■

# ಉಪ ಚುನಾವಣೆ ಕಲಿಸಿದ ಸೋಲಿನ ಪಾಠವೇ ದೊಡ್ಡದು

ಸೋಲು ಬಹಳ ಕೆಟ್ಟ. ಸರಣಿ ಸೋಲು ಇನ್ನೂ ಕೆಟ್ಟ. ಕಾಂಗ್ರೆಸ್ಸು ಕನಿಷ್ಠ ಪಕ್ಷ ಈ ಸಾರಿ ಸೋಲು ನಿರೀಕ್ಷಿಸಿರಲಿಲ್ಲ. ಹೀಗೆ ಅದು ಹೀನಾಯವಾಗಿ ಸೋಲುತ್ತದೆ ಎಂದು ಅದರ ಕಡುವೈರಿಗಳೂ ಊಹಿಸಿರಲಿಲ್ಲ. ಸೋಲು ಬೆಲೆ ಕೇಳುತ್ತದೆ. ಆದರೆ, ಇದುವರೆಗೆ ಆ ಬೆಲೆ ತೆರಲು ಕಾಂಗ್ರೆಸ್ ಧುರೀಣರು ಮನಸ್ಸು ಮಾಡಿರಲಿಲ್ಲ. ಈಗ ಸಿದ್ದರಾಮಯ್ಯ ರಾಜೀನಾಮೆ ನೀಡಿ ಬೆಲೆ ತೆತ್ತಿದ್ದಾರೆ. ದೇಶಪಾಂಡೆ 'ಬಿಡುಗಡೆ' ಬಯಸಿದ್ದಾರೆ. ಸಿದ್ದರಾಮಯ್ಯ ಹೀಗೆ ಸೆನ್ಸಿಟಿವ್ ಆಗಿ ಪ್ರತಿಕ್ರಿಯೆ ಮಾಡಿದ್ದಕ್ಕೆ ಬಹಳ ಅರ್ಥವಿದೆ. ಹೆಚ್ಚೂ ಕಡಿಮೆ ಕಾಂಗ್ರೆಸ್ಸಿನ ಏಕೈಕ ನಾಯಕರಾಗಿ ಅವರು ಹೊರ ಹೊಮ್ಮಿದ್ದಾರೆ ಎಂಬ ಅಭಿಪ್ರಾಯ ಜನಜನಿತವಾಗುತ್ತಿದ್ದಂತೆಯೇ ಅತ್ತ ಕಡೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಸೋಲು ಸಿದ್ದರಾಮಯ್ಯ ಅವರ ಸೋಲು ಎಂದೇ ಬಿಂಬಿತವಾಗಿದೆ. ಕೆಂಪರಾಜು ಅಲ್ಲಿ ಕಣದಲ್ಲಿ ಇದ್ದರೂ ವಾಸ್ತವವಾಗಿ ಅಲ್ಲಿ ಸಿದ್ದರಾಮಯ್ಯ ಅವರೇ 'ಸ್ಪರ್ಧಿಸಿದ್ದರು'. ಅವರು ಸೂಚಿಸಿದ ಅಭ್ಯರ್ಥಿಗೇ ಅಲ್ಲಿ ಟಿಕೆಟ್ ಸಿಕ್ಕಿತ್ತು. ಸಿದ್ದರಾಮಯ್ಯ ಇನ್ನಷ್ಟು ಜಾಣತನ ಮಾಡಿ

ಕೃಷ್ಣಮೂರ್ತಿಯವರ ಪತ್ನಿಗೆ ಟಿಕೆಟ್ ಕೊಡಿಸಿದ್ದರೆ ಅಲ್ಲಿಯೂ ಅನುಕಂಪದ ಅಲೆ ನೇರವಾಗಿಯೇ ಬೀಸುತ್ತಿತ್ತೋ ಏನೋ? ಕಳೆದ ನಾಲ್ಕು ಚುನಾವಣೆಗಳಲ್ಲಿ ಕುರುಬ ಸಮಾಜದ ಕೆ.ಎಂ. ಕೃಷ್ಣಮೂರ್ತಿ ಅವರನ್ನು ಗೆಲ್ಲಿಸಿದ್ದ ಕಡೂರು ಕ್ಷೇತ್ರ ಈಗ ಲಿಂಗಾಯತ ಅಭ್ಯರ್ಥಿಯನ್ನು ಗೆಲ್ಲಿಸಿದೆ. ಸಿದ್ದರಾಮಯ್ಯ ಅವರಿಗೆ ಹಿಂದೆಯೂ ಹೀಗೆಯೇ ಆಗಿದೆ. ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಅವರು ಸೂಚಿಸಿದ್ದ ಅಭ್ಯರ್ಥಿಗೇ ಟಿಕೆಟ್ ಕೊಡಲಾಗಿತ್ತು. ಅಲ್ಲಿಯೂ ಆ ಅಭ್ಯರ್ಥಿಯನ್ನು ಅವರು ಗೆಲ್ಲಿಸಲು ಆಗಿರಲಿಲ್ಲ. ಆದರೆ, ಕಡೂರಿನ ಸೋಲು ಶವದ ಪೆಟ್ಟಿಗೆಗೆ ಕೊನೆಯ ಮೊಳೆ ಹೊಡೆದಂತಾಯಿತು. ಬಹುಶಃ ಈ ಸೋಲು ಅವರು ಅರಗಿಸಿಕೊಳ್ಳಲಾಗದಂಥದು. ಕುರುಬ ಸಮುದಾಯದ ಪ್ರಾಬಲ್ಯ ಇದ್ದ ಕ್ಷೇತ್ರದಲ್ಲಿಯೇ ಅವರಿಗೆ ಪದ ಕುಸಿದ ಅನುಭವವಾಗಿದೆ. ಅದಕ್ಕೇ ಅವರು ರಾಜೀನಾಮೆ ಕೊಟ್ಟು 'ಪಶ್ಚಾತ್ತಾಪ' ವ್ಯಕ್ತ ಪಡಿಸಿದ್ದಾರೆ. ಹಾಗೆಂದು ಅವರ ರಾಜೀನಾಮೆಯನ್ನು ಉಳಿದ ಕಾಂಗ್ರೆಸ್ ನಾಯಕರು ಅರಗಿಸಿಕೊಂಡಿದ್ದಾರೆ ಅಥವಾ ಮನಃಪೂರ್ವಕವಾಗಿ ಸ್ವಾಗತಿಸಿದ್ದಾರೆ ಎಂದು ಅಲ್ಲ. ಅವರಿಗೆ ಇದು ಉಗುಳಲೂ ಆಗದ ನುಂಗಲೂ ಆಗದ ತುಪ್ಪವಾಗಿ ಪರಿಣಮಿಸಿದೆ. ಹಿಂದೆಯೂ ಕಾಂಗ್ರೆಸ್ ಅಭ್ಯರ್ಥಿಗಳು ಸೋತಿದ್ದರು. ಆಗ ರಾಜೀನಾಮೆ ಕೊಡದ ಅವರು ಈಗ ಕೊಟ್ಟು ಉಳಿದ ಹಿರಿಯ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸಿದ್ದಾರೆ ಎಂದೇ ಕಾಂಗ್ರೆಸ್ ವಲಯದಲ್ಲಿ ಅರ್ಥೈಸಲಾಗುತ್ತಿದೆ. ಸಿದ್ದರಾಮಯ್ಯ ಅವರ ಉದ್ದೇಶ ಏನಿತ್ತೋ ಗೊತ್ತಿಲ್ಲ ರಾಜೀನಾಮೆ ಕೊಡುವ ಮೂಲಕ ಅವರು ಸತ್ಸಂಪ್ರದಾಯವೊಂದನ್ನು ಆರಂಭಿಸಿರುವುದಂತೂ ನಿಜ. ಸೋಲಿನ ಹೊಣೆಯನ್ನು ಬೇರೆಯವರ ಹೆಗಲಿಗೆ ವರ್ಗಾಯಿಸುವವರೇ ಹೆಚ್ಚು ಇರುವ ಈ ಕಾಲದಲ್ಲಿ ಸಿದ್ದರಾಮಯ್ಯ ಅಪರೂಪದ ಜವಾಬ್ದಾರಿ ನಿಭಾಯಿಸಿದ್ದಾರೆ.

ಕಡೂರು ಕ್ಷೇತ್ರದಲ್ಲಿನ ಸೋಲಿಗೆ, ಕಾಂಗ್ರೆಸ್ಸಿಗೆ ಶಾಪವಾಗಿ ಅಂಟಿರುವ ಒಳಹೊಡೆತದ ರಾಜಕಾರಣ ಎಷ್ಟು ಕಾರಣವೋ ಒಡೆದು ಹೋಗಿದ್ದ ಲಿಂಗಾಯತ ಸಮಾಜವನ್ನು ಒಂದು ಮಾಡಿದ ವಿ. ಸೋಮಣ್ಣ, ಬಸವರಾಜ ಬೊಮ್ಮಾಯಿ ಅವರಂಥವರ ತಂತ್ರಗಾರಿಕೆಯೂ ಅಷ್ಟೇ ಕಾರಣ. ಯಡಿಯೂರಪ್ಪ ಅವರ ಸಂಪುಟದಲ್ಲಿ ಸ್ಥಾನ ಪಡೆಯಬೇಕಿರುವ ಸೋಮಣ್ಣ ಅವರಿಗೆ ತಾವು ಲಿಂಗಾಯತರ ನಾಯಕ ಎಂಬುದನ್ನು ಸಾಬೀತು ಮಾಡಬೇಕಿತ್ತು. ಅದನ್ನು ಅವರು ಮಾಡಿದ್ದಾರೆ. ಸಂಪುಟ ಸ್ಥಾನಕ್ಕಾಗಿ ಸ್ಪರ್ಧೆಯಲ್ಲಿ ಇರುವ ಚಿಕ್ಕಮಗಳೂರಿನ ಸಿ.ಟಿ. ರವಿ ಅವರಿಗೂ ಈ ಚುನಾವಣೆ ಬಹಳ ಮುಖ್ಯವಾಗಿತ್ತು. ರಾಮಚಂದ್ರಗೌಡರು ತೆರವು ಮಾಡಿರುವ (ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದವರು) ಸ್ಥಾನದ ಮೇಲೆ ಅವರು ಕಣ್ಣು ಇಟ್ಟಿದ್ದರೆ ಅದು ತೀರಾ ಸಹಜ. ಆದರೆ, ಮುಖ್ಯಮಂತ್ರಿಗಳು ಸೋಮಣ್ಣ ಅವರಿಗೆ ಕೃಪೆ ತೋರಲು ತುದಿಗಾಲ ಮೇಲೆ ನಿಂತಿದ್ದಾರೆ. ರವಿ ಅವರ ಮೇಲೂ ಅವರಿಗೆ ಅದೇ ಪ್ರೀತಿ ಇದೆಯೇ? ಹಾಗೆ ಕಾಣುವುದಿಲ್ಲ!

ಕಡೂರು ಸೋಲಿಗೆ ಸಿದ್ದರಾಮಯ್ಯ ಹೇಗೆ ಹೊಣೆಗಾರರೋ ಗುಲ್ಬರ್ಗ ದಕ್ಷಿಣ ಕ್ಷೇತ್ರದಲ್ಲಿನ ಸೋಲಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೊಣೆಗಾರರು.

ಅವರು ಹಟ ಮಾಡದೇ ಇದ್ದಿದ್ದರೆ ದಿ.ಚಂದ್ರಶೇಖರ ಪಾಟೀಲ ರೇವೂರ ಕುಟುಂಬದ ಸದಸ್ಯರೊಬ್ಬರಿಗೆ ಟಿಕೆಟ್ ಕೊಟ್ಟು ಬಿಜೆಪಿಯ ಸ್ಥಾನವನ್ನು ಉಳಿಸಿಕೊಳ್ಳಬಹುದಿತ್ತು. ಅವರು ಎಡವುವುದನ್ನೇ ಕಾಯುತ್ತಿದ್ದಂತಿದ್ದ ಕುಮಾರಸ್ವಾಮಿ ಅಕ್ಷರಶಃ ಆ ಸ್ಥಾನವನ್ನು ಬಿಜೆಪಿ ಬುಟ್ಟಿಯಿಂದ ಕಿತ್ತುಕೊಂಡಿದ್ದಾರೆ.

ಈ ಉಪ ಚುನಾವಣೆ ಬಿಜೆಪಿ ಮತ್ತು ಕಾಂಗ್ರೆಸ್ಸಿಗೆ ದೊಡ್ಡ ಪಾಠ ಕಲಿಸಿದೆ. ತಮ್ಮ ಪಕ್ಷದಿಂದ ಯಾರನ್ನಾದರೂ ನಿಲ್ಲಿಸಿ ಗೆಲ್ಲಬಹುದು ಎಂಬ ಅಹಂ ಅನ್ನು ಬಿಜೆಪಿ ತ್ಯಜಿಸಬೇಕಿದೆ. ಹಣದಿಂದ ವೋಟುಗಳನ್ನು ಗಳಿಸಬಹುದು ಎಂಬ ನಂಬಿಕೆಯೂ ಇಲ್ಲಿ ಹುಸಿಯಾಗಿದೆ. ಬಿಜೆಪಿ ಅಭ್ಯರ್ಥಿ ಪರವಾಗಿ ಏನಿಲ್ಲವೆಂದರೂ 20 ಕೋಟಿ ಹಣ ಖರ್ಚು ಮಾಡಲಾಯಿತು ಎಂದರೆ ಯಾರೂ ನಂಬಲಿಕ್ಕಿಲ್ಲ. ಆದರೆ, ಬಿಜೆಪಿ ಮುಖಂಡರೇ ಬಿಟ್ಟುಕೊಟ್ಟ ಗುಟ್ಟು ಇದು! ಉಡಿಯೂರಪ್ಪನವರ ಸಂಪುಟದ ಸದಸ್ಯರೆಲ್ಲ ಅಲ್ಲಿಯೇ ಬಿಡಾರ ಹೂಡಿದ್ದರೂ ಪ್ರಯೋಜನವಾಗಲಿಲ್ಲ. ಪ್ರಜಾಪ್ರಭುತ್ವಕ್ಕೆ, ಚುನಾವಣೆ ವ್ಯವಸ್ಥೆಗೆ ಒಂದಿಷ್ಟು ಅರ್ಥ ಬರುವುದೇ ಇಂಥ ಬೆಳವಣಿಗೆಗಳಿಂದ. ಜನರು ಬರೀ ಅನುಕಂಪದ ಅಲೆಯಲ್ಲಿ ತೇಲಿ ಹೋಗುವುದಿಲ್ಲ ಎಂಬುದನ್ನೂ ಈ ಚುನಾವಣೆ ಸಾಬೀತು ಮಾಡಿದೆ. ಕಡೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಅನುಕಂಪದ ನೆರವು ಸಿಕ್ಕಿಲ್ಲ.

ಅಧಿಕಾರಕ್ಕೆ ಬಂದಾಗಿನಿಂದ ಒಂದಲ್ಲ ಒಂದು ಚುನಾವಣೆಯಲ್ಲಿ ಅಥವಾ ಸಮಾವೇಶಗಳಲ್ಲಿ ಕಾಲ ಕಳೆದ ಮುಖ್ಯಮಂತ್ರಿಗಳಿಗೆ, ಅವರ ಸಂಪುಟದ ಸದಸ್ಯರಿಗೆ ಈಗ ಕುಳಿತು ಕೆಲಸ ಮಾಡಬೇಕಾದ ಸಮಯ. ಹೊಸ್ತಿಲಲ್ಲಿಯೇ ಇರುವ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯ್ತಿ ಚುನಾವಣೆಗಳಿಗೆ ಪ್ರಚಾರಕ್ಕೆಂದು ಮತ್ತೆ ಅವರು ತಿರುಗ ಬೇಕಾಗಿದೆ. ಆ ಚುನಾವಣೆಗಳು ಪ್ರಕಟವಾಗುವವರೆಗಾದರೂ ಮುಖ್ಯಮಂತ್ರಿಗಳು ವಿಧಾನಸೌಧದ ತಮ್ಮ ಕೊಠಡಿಯಲ್ಲಿ ಕುಳಿತುಕೊಳ್ಳಬೇಕು. ಮನಸ್ಸನ್ನು ಆಡಳಿತದ ಮೇಲೆ ಕೇಂದ್ರೀಕರಿಸಬೇಕು. ತಮ್ಮ ಜತೆಗೆ ಸಂಪುಟದ ಸದಸ್ಯರಿಗೂ ವಿಧಾನಸೌಧಕ್ಕೆ ಬರಲು ಹೇಳಬೇಕು. ಕಳೆದ ಎರಡೂವರೆ ವರ್ಷಗಳ ಆಡಳಿತದಲ್ಲಿ ಕಾಣಿಸಿಕೊಂಡಷ್ಟು ಶಿಥಿಲತೆ ಹಿಂದೆ ಯಾವತ್ತೂ ಕಾಣಿಸಿಕೊಂಡಿರಲಿಲ್ಲ. ಅದನ್ನು ಬಿಗಿ ಮಾಡುವುದು ಮುಖ್ಯಮಂತ್ರಿಗಳ ಕೈಯಲ್ಲಿಯೇ ಇದೆ. ಅವರು ತಮ್ಮ ಸುತ್ತ ಚಿಂತಕರ ಚಾವಡಿಯನ್ನು ನಿರ್ಮಿಸಿಕೊಳ್ಳಬೇಕು ಮತ್ತು ಅವರ ಮಾತುಗಳನ್ನು ಕೇಳುವ ವ್ಯವಧಾನ ತೋರಿಸಬೇಕು.

ಮುಖ್ಯಮಂತ್ರಿಗಳು ಸಂಪುಟ ಪುನರ್ ರಚನೆ ಬಗ್ಗೆ ಎಷ್ಟು ತಲೆ ಕೆಡಿಸಿ ಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಮಾತ್ರ ವಾರಕ್ಕೊಮ್ಮೆ ಮುಹೂರ್ತ ನಿಗದಿಯಾಗುತ್ತಲೇ ಇದೆ! ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಒಂದಲ್ಲ ಒಂದು ಕಾರಣದಿಂದ ಏಳು ಮಂದಿ ಸಚಿವರು ರಾಜೀನಾಮೆ ಕೊಟ್ಟಿದ್ದಾರೆ. ಖಾಲಿ ಇರುವ ಮೂರು ಸ್ಥಾನಗಳಿಗೆ ಪೈಪೋಟಿ ಜೋರಾಗಿದೆ. ಪೈಪೋಟಿ ಮಾಡುವವರು ತಾವು ರೆಡ್ಡಿಗಳ ಜತೆಗೆ ಇಲ್ಲ ಎಂದು ಸ್ಪಷ್ಟನೆ ಬೇರೆ ಕೊಡುತ್ತಿದ್ದಾರೆ! ಅಂದರೆ ರೆಡ್ಡಿಗಳು ಮುಖ್ಯಮಂತ್ರಿಗಳ ಜತೆಗೆ ಇಲ್ಲ ಎಂದು ಅರ್ಥವೇ? ಹಾಗಾದರೆ ಅವರು ಸಂಪುಟದಲ್ಲಿ


ಹೇಗೆ ಮುಂದುವರಿಯುತ್ತಿದ್ದಾರೆ? ಇದೆಲ್ಲ ಈಗ ರಹಸ್ಯವಾಗಿ ಉಳಿದಿಲ್ಲ. ರೆಡ್ಡಿ ಸೋದರರು ಮತ್ತು ಮುಖ್ಯಮಂತ್ರಿಗಳ ನಡುವೆ ದೊಡ್ಡ ಕಂದರ ನಿರ್ಮಾಣವಾಗಿದೆ. ಈ ಕಂದರ ಇನ್ನಷ್ಟು ಅಗಲವಾಗುವ ಸಾಧ್ಯತೆ ಹೆಚ್ಚೇ ಹೊರತು ಕಡಿಮೆ ಆಗುವ ಸಂಭವವಿಲ್ಲ. ಇದನ್ನು ಮುಖ್ಯಮಂತ್ರಿಗಳು ಹೇಗೆ ಸರಿಪಡಿಸುತ್ತಾರೆ ಎಂಬುದು ಸುಲಭದ ವಿಚಾರವೇನೂ ಅಲ್ಲ. ಅವರ ಸಂಪುಟದ ಒಟ್ಟಾರೆ ಕಾರ್ಯ ನಿರ್ವಹಣೆ 'ಭಲೆ' ಎನ್ನುವಂತೆ ಇಲ್ಲ ಎಂಬುದು ಮಾತ್ರ ಸ್ಫಟಿಕದಷ್ಟು ಸ್ಪಷ್ಟ. ಹೊಸ ಮುಖಗಳಿಗೆ ಅವಕಾಶ ಕೊಡುವಾಗ ನಿಷ್ಕ್ರಿಯರಾದ, ಭ್ರಷ್ಟರಾದ ಸಚಿವರನ್ನು ಕೈ ಬಿಟ್ಟು ಇಡೀ ಸಂಪುಟಕ್ಕೆ ಒಂದು ಕಾಯಕಲ್ಪ ಕೊಟ್ಟರೆ ಯಡಿಯೂರಪ್ಪ 'ಭಲೆ' ಎನ್ನುವಂಥ ಆಡಳಿತ ಕೊಡಲು ಸಾಧ್ಯವಾಗಬಹುದು. ಅದು ಅಷ್ಟು ಸುಲಭದ ಕೆಲಸವಲ್ಲ. ಏಕೆಂದರೆ ಅವರ ಎರಡೂ ಕೈಗಳನ್ನು ಆಚೆ 'ಒಬ್ಬರು', ಈಚೆ 'ಒಬ್ಬರು' ಹಿಡಿದು ಎಳೆಯುವ ಕೆಲಸ ಇನ್ನೇನು ಆರಂಭವಾಗಲಿದೆ.

ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಹೀಗೆ ಕುಸಿದು ಹೋಗಿರುವುದನ್ನು ಅದಕ್ಕಿಂತ ಹೆಚ್ಚಾಗಿ ಒಂದಾದ ನಂತರ ಒಂದರಂತೆ ಭಾರಿ ಹಗರಣಗಳಲ್ಲಿ ಸಿಕ್ಕಿ ಹಾಕಿಕೊಂಡು ಸಚಿವರು ರಾಜೀನಾಮೆ ನೀಡುತ್ತಿರುವುದನ್ನು ಉಪಯೋಗಿಸಿಕೊಂಡು ಕಾಂಗ್ರೆಸ್ಸಿಗೆ ಬೆಳೆಯಲು ಸಾಧ್ಯವಾಗದಿರುವುದು ನಿಜಕ್ಕೂ ಸೋಜಿಗ, ಚುನಾವಣೆಗಳಲ್ಲಿ ಜನರು ಕಾಂಗ್ರೆಸ್ಸಿಗೆ ಮಣೆ ಹಾಕುತ್ತಿಲ್ಲ. ಹೇಗಾದರೂ ಇರಲಿ ಬಿಜೆಪಿ ಸರ್ಕಾರ ಐದು ವರ್ಷ ಪೂರೈಸಲಿ ಎಂದು ಅವರು ಬಯಸುತ್ತಿದ್ದಾರೆಯೇ ಅಥವಾ ಸರ್ಕಾರದ ವೈಫಲ್ಯ ಗಳನ್ನು ಜನರಿಗೆ ಮನದಟ್ಟು ಮಾಡುವುದು ಕಾಂಗ್ರೆಸ್ಸಿಗೆ ಸಾಧ್ಯವಾಗುತ್ತಿಲ್ಲವೇ? ಹಾಗಾದರೆ ಬೆಂಗಳೂರಿನಿಂದ ಬಳ್ಳಾರಿಗೆ ನಡೆದ ಕಾಂಗ್ರೆಸ್ ಪಾದಯಾತ್ರೆಯ ಯಶಸ್ಸು ಅಷ್ಟು ಬೇಗ ಒಡೆದು ಹೋದ ಗುಳ್ಳೆಯೇ? ಕಾಂಗ್ರೆಸ್ಸಿನ ಹಳೆಯ ಮುಖಗಳನ್ನು ನೋಡಿ ನೋಡಿ ಜನರು ಬೇಸತ್ತು ಹೋಗಿದ್ದಾರೆಯೇ? ಅಥವಾ ಅದರ ಮತ ಬುನಾದಿಯೇ ಕುಸಿಯುತ್ತಿದೆಯೇ? ಕಾಂಗ್ರೆಸ್‌ನ ಹೈಕಮಾಂಡ್ ಕರ್ನಾಟಕವನ್ನು ಇನ್ನೂ ಕಡೆಗಣಿಸಬಾರದು. ಪಕ್ಷದ ಎಲ್ಲ ಹಳೆಯ ಪಳೆಯ ಮುಖಗಳಿಗೆ ಗಂಟು ಮೂಟೆ ಕಟ್ಟಿಕೊಂಡು ಹೋಗಿ ಎಂದು ಹೇಳಿ ಯುವಕರಿಗೆ ನಾಯಕತ್ವ ಕೊಟ್ಟು ನೋಡಬೇಕು. ಇಡೀ ರಾಜ್ಯವನ್ನೇ ಕಳೆದುಕೊಂಡಿರುವ ಕಾಂಗ್ರೆಸ್ ಪಕ್ಷಕ್ಕೆ ಕಳೆದು ಕೊಳ್ಳುವುದು ಇನ್ನೇನೂ ಉಳಿದಿಲ್ಲ. ಪ್ರಯೋಗ ಮಾಡಿ ಗೆಲ್ಲುವುದನ್ನು ನೋಡಬೇಕು. ಅನೇಕ ವರ್ಷಗಳಿಂದ ನಾಯಕತ್ವಕ್ಕಾಗಿ ಪ್ರಯತ್ನಿಸಿ, 70-80 ವರ್ಷದ ನಾಯಕರ ನಿವೃತ್ತಿಗಾಗಿ ಕಾಯುತ್ತಿರುವ ಯುವಕರ ದೊಡ್ಡ ದಂಡೇ ಪಕ್ಷದಲ್ಲಿ ಇದೆ. ಅವರಿಗೆ ನಾಯಕತ್ವದ ನೊಗ ಹೊರಿಸುವ ಸಾಹಸಕ್ಕೆ ಸೋನಿಯಾ ಕೈ ಹಾಕಿಯಾರೇ?

ಹಾಕಿದಿದ್ದರೆ ಕಾಂಗ್ರೆಸ್ಸಿನ ಜಾಗವನ್ನು ಆಕ್ರಮಿಸಿ ವಿರೋಧ ಪಕ್ಷವಾಗಿ ಬೆಳೆಯಲು ಜೆ.ಡಿ (ಎಸ್) ಸಿದ್ಧವಾದಂತೆ ಕಾಣುತ್ತದೆ. ಕಾರ್ಯಕರ್ತರು, ನಾಯಕರು, ಸಂಪನ್ಮೂಲ ಯಾವ ವಿಚಾರದಲ್ಲಿಯೂ ಬಿಜೆಪಿ/ ಕಾಂಗ್ರೆಸ್ಸಿಗೆ ಸಾಟಿಯಲ್ಲದ ಜೆ.ಡಿ(ಎಸ್) ಈಗಲೂ ದೇವೇಗೌಡ, ಕುಮಾರಸ್ವಾಮಿ ಅವರ ನಾಯಕತ್ವವನ್ನೇ ಅವಲಂಬಿಸಿದೆ. ಕಾಂಗ್ರೆಸ್ಸಿನ ಪಾದಯಾತ್ರೆ, ಬಿಜೆಪಿಯ ಸಾಧನೆ ಸಮಾವೇಶದ ನಡುವೆ ಮಂಕಾದಂತೆ ಕಂಡಿದ್ದ

ಜೆ.ಡಿ(ಎಸ್) ತನ್ನ ಶಕ್ತಿಯನ್ನು ಮತ್ತೆ ತೋರಿಸಿದೆ. ಆ ಪಕ್ಷದಲ್ಲಿಯೇ ಫೀನಿಕ್ಸ್ ಪಕ್ಷಿಯ ಒಂದು ಗುಣವಿದ್ದಂತಿದೆ! ಗುಲ್ಬರ್ಗ ದಕ್ಷಿಣ ಕ್ಷೇತ್ರದಲ್ಲಿ ಜೆ.ಡಿ (ಎಸ್)ಗೆ ಸಿಕ್ಕ ಗೆಲುವು ಮುಖ್ಯಮಂತ್ರಿ ಯಡಿಯೂರಪ್ಪ ಅವರ ವಿರುದ್ಧ ಕುಮಾರಸ್ವಾಮಿ ಅವರಿಗೆ ಸಿಕ್ಕ ಗೆಲುವು ಎಂಬುದರಲ್ಲಿ ಅನುಮಾನ ಬೇಡ. ಸ್ಪರ್ಧೆ ಅವರ ನಡುವೆಯೇ ಇತ್ತು. ಗುಲ್ಬರ್ಗ ದಕ್ಷಿಣದಲ್ಲಿ ಪ್ರತಿಷ್ಠೆಯನ್ನು ಪಣಕ್ಕೆ ಇಟ್ಟಿದ್ದ ಕುಮಾರಸ್ವಾಮಿ ಕಡೂರಿನ ಕಡೆಗೆ ಗಮನ ಗೊಡಲು ಆಗಲಿಲ್ಲ. ಅಲ್ಲಿ ದೇವೇಗೌಡರ ಪ್ರತಿಷ್ಠೆ ಪಣಕ್ಕೆ ಇತ್ತು. ಕಾರಣ ಏನೇ ಇರಲಿ ಮಗ 'ಗೆದ್ದಿದ್ದಾನೆ'. ಅಪ್ಪ 'ಸೋತಿದ್ದಾರೆ'. ಈ ಉಪ ಚುನಾವಣೆ ಬರೀ ಕಾಂಗ್ರೆಸ್ಸಿಗೆ ಮಾತ್ರ ಪಾಠ ಎಂದುಕೊಂಡರೆ ತಪ್ಪು. ಅದು ಎಲ್ಲರಿಗೂ ಒಂದೊಂದು ಪಾಠ ಕಲಿಸಿದೆ. ಕಲಿಯಲು ಸಂಬಂಧ ಪಟ್ಟವರಿಗೆ ವಿನಯ ಇರಬೇಕು ಅಷ್ಟೇ.

■



ಶ್ರೀ ಪದ್ಮರಾಜ ದಂಡಾವತಿ ಅವರ 'ನಾಲ್ಕನೇ ಆಯಾಮ' ಅಂಕಣ ಬರಹಗಳಿಗೆ ಗೌರವ ತಂದುಕೊಡುವ ಭಿನ್ನ ಆಯಾಮವೂ ಹೌದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ 'ನಾಲ್ಕನೇ ಆಧಾರ'ವಾದ ಪತ್ರಿಕೋದ್ಯಮವನ್ನು ಅಂಕಣದ ಶೀರ್ಷಿಕೆ ಸೂಚಿಸಿದರೂ, ಇಲ್ಲಿನ ಬರಹಗಳ ಭಿತ್ತಿ ವಿಶಾಲವಾದುದು. ರಾಜಕಾರಣ, ಸಾಹಿತ್ಯ, ಮೌಲ್ಯಗಳು, ಮಾನವೀಯತೆ, ತಿರುಗಾಟದ ಅನುಭವಗಳು, ವ್ಯಕ್ತಿಚಿತ್ರಗಳು- ಹೀಗೆ 'ನಾಲ್ಕನೇ ಆಯಾಮ' ತನ್ನ ವಸ್ತುವೈವಿಧ್ಯದಿಂದ ಗಮನಸೆಳೆಯುತ್ತದೆ. ದಿನವೂ ಹತ್ತಾರು ಅಂಕಣಗಳು ಕನ್ನಡದಲ್ಲಿ ಪ್ರಕಟವಾಗುತ್ತಿರುವ ಸಂದರ್ಭದಲ್ಲಿ ಪದ್ಮರಾಜ ದಂಡಾವತಿ ಅವರ ಅಂಕಣ ಭಿನ್ನವಾಗಿ ನಿಲ್ಲುವುದು ಅವರ ಅನುಭವ, ಭಾಷೆಯ ಬಗೆಗಿನ ಪ್ರೀತಿ ಮತ್ತು ಹಿಡಿತದ ಕಾರಣಗಳಿಂದಾಗಿ. ಅವರ ಭಾಷೆಯಲ್ಲಿ ಸಹಜ ಎನ್ನಿಸುವ ಮಟ್ಟಿಗೆ ಅಂತರ್ಗತವಾಗಿರುವ ಕಚಗುಳಿ ಗುಣ ಬರಹಗಳನ್ನು ಪರಿಣಾಮಕಾರಿಯಾಗಿಸಿದೆ. ಕಸರತ್ತು, ಪಾಂಡಿತ್ಯ ಪ್ರದರ್ಶನವಿಲ್ಲದ ಈ ಬರಹಗಳು ತಮ್ಮ ಸರಳತೆಯ ಕಾರಣದಿಂದಲೇ ಹೆಚ್ಚು ಪರಿಣಾಮಕಾರಿಯಾಗಿವೆ. ಎಲ್ಲವನ್ನೂ ಬಲ್ಲೆನೆನ್ನುವ ಅಹಂ ಇಲ್ಲದ, ಓದುಗರನ್ನು ಉದ್ರೇಕಿಸುವ ಉದ್ದೇಶವಿಲ್ಲದ, ಅಗ್ಗದ ರಂಜನೆಯಿಲ್ಲದ ಇಲ್ಲಿನ ಬರಹಗಳಲ್ಲಿ ಅಂಕಣ ಬರಹಗಳಲ್ಲಿ ಅಪರೂಪ ಎನ್ನಬಹುದಾದ ವಿವೇಕವಿದೆ. ಈ ಎಲ್ಲಕ್ಕೂ ಮಿಗಿಲಾಗಿ ಖಚಿತ ನಿಲುವು ಹಾಗೂ ಈಚಿನ ದಿನಗಳಲ್ಲಿ ತುಟ್ಟಿಯಾಗಿರುವ ನೈತಿಕತೆಯ ಪ್ರಭೆಯಿಂದಾಗಿ 'ನಾಲ್ಕನೇ ಆಯಾಮ'ದ ಬರಹಗಳು ವಿಶೇಷ ಹೊಳಪನ್ನು ಪಡೆದಿವೆ. ಪತ್ರಿಕೋದ್ಯಮದ ವಿದ್ಯಾರ್ಥಿಗಳೊಂದಿಗೆ ಸಾಹಿತ್ಯದ ವಿದ್ಯಾರ್ಥಿಗಳೂ ಪ್ರೀತಿಯಿಂದ ಎದುರುಗೊಳ್ಳಬೇಕಾದ ಬರಹಗಳಿವು.

-ರಘುನಾಥ ಚ.ಹ.



ಸಪ್ನ ಬುಕ್ ಹೌಸ್

3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009

ದೂರವಾಣಿ : 40114455

Shop online : www.sapnaonline.com

ISBN : 978-81-280-1385-0

ಬೆಲೆ : ₹100/-